ಮಂಗಳವಾರ, ಏಪ್ರಿಲ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 101 | ಪುಟ 16

● www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ವಯಸ್ಸಾಗುವಿಕೆ ಒಂದು ಸಹಜ ಪ್ರಕ್ರಿಯೆ. ಇದಕ್ಕೆ ಯಾರೂ ಹೊರತಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದೇ ಪರಿಹಾರದೆಡೆ ಇಡುವ ಮೊದಲ ಹೆಜ್ಜೆ



ಆಳ-ಅಗಲ ಬೆಳೆಯುತ್ತಲೇ ಇದೆ ಹಣದುಬ್ಬರದ ಭೂತ

‘ನ್ಯಾಷನಲ್ ಹೆರಾಲ್ಡ್’ ಹಗರಣ: ಇ.ಡಿ.ಯಿಂದ ಖರ್ಗೆ ವಿಚಾರಣೆ 12

ಬೆಲೆ ಏರಿಕೆ: ಕೇಂದ್ರದ ವಿರುದ್ಧ ಕಾಂಗ್ರೆಸ್ ಆಕ್ರೋಶ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,964 ▼	17,675 ▼	₹54,300 (ಬೆಂಗಳೂರು)	₹70,200 (ಬೆಂಗಳೂರು)	75.91 ▲

ಕ್ಯಾಂಟೀನ್, ಕಾರ್ ಶೆಡ್‌ನಲ್ಲಿ ಕೋರ್ಟ್ ಕಾರ್ಯ ಕಲಾಪ! 6

ಚಿನಕುರಳಿ

ಪ್ರಕಾಶ್ ಶೆಟ್ಟಿ




ಗೂಂಡಾಗಳಿಗೆ ರಾಜ್ಯ ಕೊಟ್ಟು ಮೌನಕ್ಕೆ ಶರಣಾದ ಮುಖ್ಯಮಂತ್ರಿ: ಖಾದರ್

ಹಿಂಸೆಗೆ ಇಳಿದರೆ ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಚಾರಗಳ ಪ್ರಚಾರ ಮಾಡುವ ಸಂಘಟನೆಗಳಿಗೆ ಸರ್ಕಾರ ಅಡ್ಡಿಪಡಿಸುವುದಿಲ್ಲ. ಆದರೆ, ಕಾನೂನು ಕೈಗೆತ್ತಿಕೊಂಡು ಹಿಂಸೆಗೆ ಇಳಿದರೆ ಅದನ್ನು ಸಹಿಸಲಾಗದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಸ್ಪಷ್ಟ ಎಚ್ಚರಿಕೆ ನೀಡಿದರು.



‘ಶಾಂತಿ ಕದಡುವ ಶಕ್ತಿಗಳ ಬಗ್ಗೆ ಮುಖ್ಯಮಂತ್ರಿ ಮೌನವಾಗಿದ್ದು, ಇಂತಹ ಕೃತ್ಯಗಳಿಗೆ ಅವರ ಬೆಂಬಲ ಇದೆಯೇ’ ಎಂದು ವಿರೋಧ ಪಕ್ಷದ ನಾಯಕರು ಕಟುವಾಗಿ ಪ್ರಶ್ನಿಸಿದ್ದರು. ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರು, ‘ಕೋಮುಸೌಹಾರ್ದಕ್ಕೆ ಧಕ್ಕೆಯಾಗದಂತೆ ಬಿಗಿಕ್ರಮ ಕೈಗೊಳ್ಳಬೇಕು’ ಎಂದೂ ಸಲಹೆ ನೀಡಿದ್ದರು.

ಈ ಬೆನ್ನಲ್ಲೇ, ಉಡುಪಿಯಲ್ಲಿ ಮಾತನಾಡಿದ ಬೊಮ್ಮಾಯಿ, ‘ಸಂವಿಧಾನಬದ್ಧವಾಗಿ ರಚನೆಯಾಗಿರುವ ಸರ್ಕಾರ ಕಾನೂನು, ಸುವ್ಯವಸ್ಥೆ ಹಾಗೂ ಸಮಾನತೆಯ ದೃಷ್ಟಿಯಿಂದ ಕೆಲಸ ಮಾಡುತ್ತಿದೆ’ ಎಂದು ಸ್ಪಷ್ಟಪಡಿಸಿದರು.

‘ವಿರೋಧಪಕ್ಷಗಳ ಟೀಕೆಗಳಿಗೆ ಪ್ರತಿಕ್ರಿಯಿಸುವುದಿಲ್ಲ. ನಾವು ಮಾತನಾಡಬಾರದು, ನಮ್ಮ ಕೆಲಸಗಳು ಮಾತನಾಡಬೇಕು. ಯಾವಾಗ, ಯಾವ ನಿರ್ಧಾರ ಅಥವಾ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ವಿರೋಧಪಕ್ಷಗಳಿಂದ ಕಲಿಯಬೇಕಿಲ್ಲ’ ಎಂದರು.

‘ಈ ಹಿಂದೆ ಹಲವು ಯುವಕರ ಕೊಲೆ ನಡೆದಾಗ, ನೇರವಾಗಿ ಭಾಗಿಯಾಗಿದ್ದ ಸಂಘಟನೆಗಳು ಹಾಗೂ ಮುಖಂಡರ ಮೇಲಿದ್ದ ಪ್ರಕರಣಗಳನ್ನು ಕೈಬಿಟ್ಟಾಗ ಕಾಂಗ್ರೆಸ್‌ನ ಕರ್ತವ್ಯಪ್ರಜ್ಞೆ ಎಲ್ಲಿಗೆ ಹೋಗಿತ್ತು’ ಎಂದು ಪ್ರಶ್ನಿಸಿದ ಬೊಮ್ಮಾಯಿ, ‘ಶಾಂತಿ, ಸುವ್ಯವಸ್ಥೆಯಿರುವ ಪ್ರಗತಿಪರ ರಾಜ್ಯವನ್ನು ಯಾವ ರೀತಿ ಕಾಪಾಡಿಕೊಳ್ಳಬೇಕು ಎಂಬುದು ನಮಗೆ ಗೊತ್ತಿದೆ’ ಎಂದು ತಿರುಗೇಟು ನೀಡಿದರು.

4ನೇ ಪುಟ ನೋಡಿ

ಅಹಿತಕರ ಘಟನೆಗೆ ಖಂಡನೆ: ಬಿಎಸ್‌ವೈ



‘ಹಿಂದೂ–ಮುಸ್ಲಿಮರು ಒಂದೇ ತಾಯಿ ಮಕ್ಕಳಂತಿರಬೇಕು ಎಂಬುದು ಪಕ್ಷ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಅಪೇಕ್ಷೆ. ಅಲ್ಲಲ್ಲಿ ನಡೆದ ಅಹಿತಕರ ಘಟನೆಗಳನ್ನು ಖಂಡಿಸುತ್ತೇವೆ. ಅವುಗಳಿಗೆ ಬೆಂಬಲವಿಲ್ಲ. ಹೀಗೆ ಮುಂದುವರಿದರೆ ಕ್ರಮ ಜರುಗಿಸುತ್ತೇವೆ’ ಎಂದು ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಎಚ್ಚರಿಸಿದರು.

‘ಕೋಮುಸೌಹಾರ್ದಕ್ಕೆ ಧಕ್ಕೆಯಾಗುವ ಘಟನೆಗಳು ನಡೆಯದಂತೆ ಸರ್ಕಾರ ಬಿಗಿಯಾದ ಕ್ರಮ ಕೈಗೊಳ್ಳಬೇಕು’ ಎಂದು ಅವರು ಸರ್ಕಾರಕ್ಕೆ ಸಲಹೆ ನೀಡಿದರು.

‘ಗೊಂದಲ ಉಂಟು ಮಾಡುವವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಅವರೂ ಈಗಾಗಲೇ ಹೇಳಿದ್ದಾರೆ. ಅವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ’ ಎಂದು ಅವರು ಬೆಳಗಾವಿಯಲ್ಲಿ ಪ್ರತಿಕ್ರಿಯಿಸಿದರು.

ಮಠಾಧೀಶರು ಧ್ವನಿ ಎತ್ತಬೇಕು: ಡಿಕೆಶಿ

ಬೆಂಗಳೂರು: ‘ರಾಜ್ಯದಲ್ಲಿ ಕೋಮು ಸಂಘರ್ಷ, ಗಲಭೆ, ಅಧರ್ಮ ಹೆಚ್ಚುತ್ತಿದೆ. ಸ್ವಾಮೀಜಿಗಳು, ಮಠಾಧೀಶರು ಇದನ್ನು ನೋಡಿಕೊಂಡು ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳಬಾರದು, ಧ್ವನಿ ಎತ್ತಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ಚಿತ್ರದುರ್ಗ ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರ ಜನ್ಮದಿನಾಚರಣೆಯ ಪ್ರಯುಕ್ತ ಸೋಮವಾರ ಹಮ್ಮಿಕೊಂಡಿದ್ದ ‘ಸಮಾನತಾ ದಿನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

4ನೇ ಪುಟ ನೋಡಿ

ಯುದ್ಧದ ಪರಿಣಾಮ ನಿರ್ವಹಣೆ ಭಾರತ–ಅಮೆರಿಕ ಪರಿಶೀಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಕ್ರೇನ್–ರಷ್ಯಾ ಬಿಕ್ಕಟ್ಟು ಹಿನ್ನೆಲೆಯಲ್ಲಿ ತಲೆದೋರಿರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೋಮವಾರ ಮಾತುಕತೆ ನಡೆಸಿದರು.


ಉಕ್ರೇನ್ ಮೇಲೆ ಅತಿಕ್ರಮಣ ನಡೆಸಿರುವ ರಷ್ಯಾದ ಜತೆಗೆ ವ್ಯಾಪಾರ ನಡೆಸದಂತೆ ಅಮೆರಿಕ ಎಚ್ಚರಿಕೆ ನೀಡಿತ್ತು. ಆದರೆ, ಭಾರತವು ರಷ್ಯಾದಿಂದ ಕಚ್ಚಾತೈಲ ಖರೀದಿ ಪ್ರಮಾಣವನ್ನು ಹೆಚ್ಚಿಸಿತ್ತು. ಇದರ ಮಧ್ಯೆಯೇ ಉಭಯ ನಾಯಕರ ನಡುವೆ ವರ್ಚುವಲ್ ಆಗಿ ಮಾತುಕತೆ ನಡೆದಿದೆ.

ಉಕ್ರೇನ್ –ರಷ್ಯಾ ಯುದ್ಧದ ದುಷ್ಪರಿಣಾಮಗಳನ್ನು ನಿರ್ವಹಿಸುವುದು ಹೇಗೆ ಎಂಬ ಬಗ್ಗೆ ಉಭಯ ರಾಷ್ಟ್ರಗಳು ಪರಿಶೀಲನೆ ನಡೆಸಲಿವೆ ಎಂದು ಬೈಡನ್ ಅವರು ಮಾತುಕತೆ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

‘ಬುಕಾದಲ್ಲಿ ರಷ್ಯಾ ನಡೆಸಿರುವ ಹತ್ಯಾಕಾಂಡವನ್ನು ನಾವು ಖಂಡಿಸಿದ್ದೇವೆ ಮತ್ತು ಸ್ವತಂತ್ರ ತನಿಖೆಗೆ ಆಗ್ರಹಿಸಿದ್ದೇವೆ’ ಎಂದು ಪ್ರಧಾನಿ ಮೋದಿ ತಿಳಿಸಿದರು.

3B ಪುಟ ನೋಡಿ

ಪಾಕ್: ಶಾಹಬಾಝ್ ನೂತನ ಪ್ರಧಾನಿ



ಇಸ್ಲಾಮಾಬಾದ್ (ಪಿಟಿಐ/ರಾಯಿಟರ್ಸ್): ಪಾಕಿಸ್ತಾನದ ನೂತನ ಪ್ರಧಾನಿಯಾಗಿ ಶಾಹಬಾಝ್ ಷರೀಫ್ (70) ಅವರು ಸೋಮವಾರ ಆಯ್ಕೆಯಾಗಿದ್ದಾರೆ. ಹೀಗಾಗಿ, ಒಂದು ವಾರದಿಂದ ನಡೆಯುತ್ತಿದ್ದ ರಾಜಕೀಯ ಗೊಂದಲ ಬಹುತೇಕ ಕೊನೆಗೊಂಡಿದೆ. ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಪ್ರಧಾನಿ ಅಭ್ಯರ್ಥಿ ಶಾ ಮಹಮ್ಮದ್ ಖುರೇಷಿ ಅವರು ಮತದಾನ ಬಹಿಷ್ಕರಿಸಿ ಹೊರನಡೆದಿದ್ದರಿಂದ, ಶಾಹಬಾಝ್ ಅವರ ಆಯ್ಕೆ ಸುಗಮವಾಯಿತು.

‘ಷರೀಫ್ ಅವರು 174 ಮತಗಳನ್ನು ಪಡೆದಿದ್ದು, ದೇಶದ ನೂತನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ’ ಎಂದು ಸ್ಪೀಕರ್ ಅಯಾಜ್ ಸಿದ್ದಿಕ್ ಅವರು ಪ್ರಕಟಿಸಿದರು. 342 ಸದಸ್ಯಬಲದ ಸಂಸತ್ತಿನಲ್ಲಿ ಬಹುಮತಕ್ಕೆ 172 ಸದಸ್ಯರ ಬೆಂಬಲ ಅಗತ್ಯವಿತ್ತು. ಹೊಸ ಸರ್ಕಾರ ರಚನೆ ವಿರೋಧಿಸಿ ಪಿಟಿಐ ಪಕ್ಷದ 100ಕ್ಕೂ ಹೆಚ್ಚು ಸದಸ್ಯರು ಸೋಮವಾರ ಸಾಮೂಹಿಕ ರಾಜೀನಾಮೆ ನೀಡುವ ಮೂಲಕ ಹೊಸ ತಂತ್ರ ಪ್ರಯೋಗಿಸಿದ್ದಾರೆ. ಈ ಎಲ್ಲರ ರಾಜೀನಾಮೆಯನ್ನು ಸ್ಪೀಕರ್ ಅಂಗೀಕರಿಸಿದರೆ, ತೆರವಾದ ಕ್ಷೇತ್ರಗಳಿಗೆ ಎರಡು ತಿಂಗಳೊಳಗೆ ಚುನಾವಣೆ ನಡೆಯಬೇಕಿದೆ.

ಕಾಶ್ಮೀರ ವಿಷಯ ಪ್ರಸ್ತಾಪ 10



ಮಾಪ್‌ಅಪ್ ಸುತ್ತಿನ ಪ್ರವೇಶ ಕೋರಿಕೆ: ಅರ್ಜಿ ವಜಾ

ಬೆಂಗಳೂರು: 'ವೈದ್ಯಕೀಯ ಪದವಿ ಸೀಟು ಆಯ್ಕೆಗೆ ಸಂಬಂಧಿಸಿದಂತೆ ಮಾಪ್ ಅಪ್ ಸುತ್ತಿನ ಪ್ರವೇಶಕ್ಕೆ ಅನುಮತಿ ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶನ ನೀಡಬೇಕು' ಎಂಬ ಅರ್ಜಿದಾರ ವಿದ್ಯಾರ್ಥಿಯೊಬ್ಬರ ಕೋರಿಕೆಯನ್ನು ಹೈಕೋರ್ಟ್ ತಳ್ಳಿಹಾಕಿದೆ.

ಈ ಸಂಬಂಧ ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಕಾಳಗಿ ಗ್ರಾಮದ ಕಾಶಿಂಗ್ ಪೊಲೀಸ್ ಪಾಟೀಲ ಎಂಬ ವಿದ್ಯಾರ್ಥಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ಅರ್ಜಿದಾರರ ಮನವಿ ಮಾನ್ಯ ಮಾಡಲಾಗದು ಎಂದು ಹೇಳಿದೆ.

'2006ರ ವೃತ್ತಿಪರ ಶಿಕ್ಷಣ ಸಂಸ್ಥೆಗಳ ನಿಯಮದಡಿ ಸರ್ಕಾರಿ ಸೀಟುಗಳಿಗೆ ಕರ್ನಾಟಕ ಅಭ್ಯರ್ಥಿಗಳ ಆಯ್ಕೆಯ ನಿಯಮ 10ರ ಪ್ರಕಾರ ಅಭ್ಯರ್ಥಿಗಳಿಗೆ ಮೊದಲ ಅಥವಾ ಎರಡನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಿ ಸೀಟು ಆಯ್ಕೆ ಮಾಡಿಕೊಂಡರೆ ಅಂತಹ ಅಭ್ಯರ್ಥಿ ಮಾಪ್ ಅಪ್ ಸುತ್ತಿಗೆ ಅರ್ಹರಲ್ಲ' ಎಂಬ ಅಂಶವನ್ನು ನ್ಯಾಯಪೀಠ ಎತ್ತಿಹಿಡಿದಿದೆ.

ಎ.15ರಿಂದ ಕಲಶಾರಾಧನೆ

ಬೆಂಗಳೂರು: ಕೆ.ಆರ್.ರಸ್ತೆಯ ಕೋಟೆ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಇದೇ 15ರಿಂದ 17ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಕಲಶಾರಾಧನೆ ಮತ್ತು ಪ್ರಾಯಶ್ಚಿತ್ತಹೋಮಗಳು ನೆರವೇರಲಿವೆ. 17ರಂದು ಅಷ್ಟೋತ್ತರ ಶತಕಲಶಸ್ನಾನ ನಡೆಯಲಿದೆ.

ಕೋವಿಡ್ ಕಾರಣ ಎರಡು ವರ್ಷಗಳಿಂದ ದೇವಸ್ಥಾನದಲ್ಲಿ ರಥೋತ್ಸವ ರದ್ದಾಗಿತ್ತು. ಈ ಜೂನ್‌ನಲ್ಲಿ ಎಂದಿನಂತೆಯೇ ರಥೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಬೆಂಗಳೂರು ವಿ.ವಿ: ಕುಲಪತಿ ಕಾರ್ಯವೈಖರಿಗೆ ಅಸಮಾಧಾನ

ರಾಜೀನಾಮೆಗೆ ಮುಂದಾದ ಸಿಂಡಿಕೇಟ್ ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ರಾಜ್ಯ ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಸದಸ್ಯರು ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಲು ನಿರ್ಧರಿಸಿದ್ದಾರೆ.

'ರಾಜ್ಯ ಸರ್ಕಾರ ಇತ್ತೀಚೆಗೆ ಸಿಂಡಿಕೇಟ್‌ನ ಇಬ್ಬರ ಸದಸ್ಯತ್ವ ರದ್ದುಪಡಿಸಿರುವ ಕ್ರಮವನ್ನು ಖಂಡಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ರಾಜೀನಾಮೆ ಸಲ್ಲಿಸಲಾಗುವುದು' ಎಂದು ಸದಸ್ಯರಾದ ಟಿ.ವಿ. ರಾಜು ಮತ್ತು ಗೋಪಿನಾಥ್ ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರೇಮ್ ಸೋಹನ್‌ಲಾಲ್ ಮತ್ತು ಗೋವಿಂದರಾಜು ಅವರ ನಾಮನಿರ್ದೇಶನವನ್ನು ರದ್ದುಪಡಿಸಿದ್ದ ರಾಜ್ಯ ಸರ್ಕಾರ, ಆ ಸ್ಥಾನಗಳಿಗೆ ಡಾ.ಸಿ.ಆರ್. ಮಹೇಶ್ ಮತ್ತು ಡಾ. ಅನಿಲ್ ಕುಮಾರ್ ಈಸೋ ಅವರನ್ನು ನೇಮಿಸಿತ್ತು.

'ಯಾವುದೇ ಕಾರಣಗಳನ್ನು ನೀಡದೆಯೇ ಸರ್ಕಾರ ಅವಧಿಗೆ ಮುನ್ನವೇ ಸದಸ್ಯತ್ವ ರದ್ದುಪಡಿಸಿದೆ. ಈ ಕ್ರಮವನ್ನು ಖಂಡಿಸಿ ನಾವು ಸಹ ರಾಜೀನಾಮೆ ನೀಡುತ್ತಿದ್ದೇವೆ. ಇತರ ಇಬ್ಬರು ಸದಸ್ಯರು ಸಹ ರಾಜೀನಾಮೆ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ಟಿ.ವಿ. ರಾಜು ತಿಳಿಸಿದರು.

'ವಿಶ್ವವಿದ್ಯಾಲಯದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಅಕ್ರಮಗಳ ಬಗ್ಗೆ ಮತ್ತು ಸ್ವಾಯತ್ತ ಸಂಸ್ಥೆಯಾಗಿರುವ ಯುವಿಸಿಇಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ವಿಶ್ವವಿದ್ಯಾಲಯದಿಂದ ಹಣ ಬಿಡುಗಡೆ ಮಾಡುವುದನ್ನು ಪ್ರಶ್ನಿಸಿದ್ದಕ್ಕಾಗಿ ನನ್ನ ಸದಸ್ಯತ್ವ ರದ್ದುಪಡಿಸಲಾಗಿದೆ' ಎಂದು ಪ್ರೇಮ್ ಸೋಹನ್‌ಲಾಲ್ ದೂರಿದರು.

'ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಅವರು ತಪ್ಪು ಮಾಹಿತಿ ನೀಡಿ ಸರ್ಕಾರದ ದಾರಿ ತಪ್ಪಿಸುತ್ತಿದ್ದಾರೆ. ಹಲವು ವಿಷಯಗಳಿಗೆ ಸಿಂಡಿಕೇಟ್ ಅನುಮೋದನೆಯನ್ನೇ ಪಡೆದಿಲ್ಲ. ಆದರೂ, ಸಿಂಡಿಕೇಟ್ ಅನುಮೋದನೆ ಪಡೆಯಲಾಗಿದೆ ಎಂದು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ' ಎಂದು ತಿಳಿಸಿದರು.

'ಯಾವ ಆಧಾರದ ಮೇಲೆ ಸದಸ್ಯತ್ವವನ್ನು ರದ್ದುಪಡಿಸಲಾಗಿದೆ ಎನ್ನುವುದನ್ನು ಸರ್ಕಾರ ಬಹಿರಂಪಡಿಸಬೇಕು. ನಾವು ಯಾವುದೇ ತನಿಖೆಗೂ ಸಿದ್ಧ' ಎಂದು ಗೋವಿಂದರಾಜು ತಿಳಿಸಿದರು.

ಅಕ್ರಮಗಳ ಬಗ್ಗೆ ತನಿಖೆ ನಡೆಸುವಂತೆ ಪ್ರಧಾನಿ, ಮುಖ್ಯಮಂತ್ರಿ ಮತ್ತು ರಾಜ್ಯಪಾಲರಿಗೆ ಪತ್ರ ಬರೆದಿರುವುದಾಗಿ ಸದಸ್ಯರು ತಿಳಿಸಿದ್ದಾರೆ.

'ಅಭಿವೃದ್ಧಿಗೆ ಅಡ್ಡಿಪಡಿಸಿದ್ದಕ್ಕೆ ವಜಾ'

'ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕೆಲಸ ಮಾಡದ ಕಾರಣಕ್ಕೆ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಕ್ರಿಯಿಸಿದ್ದಾರೆ.

'ನಮ್ಮ ಉದ್ದೇಶ ಒಂದು ಒಳ್ಳೆ ವಿಶ್ವವಿದ್ಯಾಲಯ ಕಟ್ಟುವುದು. ಪ್ರತಿಹಂತದಲ್ಲೂ ಅದಕ್ಕೆ ಅಡ್ಡಿಪಡಿಸುವವರನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ. ಯಾರನ್ನು ಬೇಕಾದರೂ ತೆಗೆಯುವ ಅಧಿಕಾರ ಸರ್ಕಾರಕ್ಕಿದೆ. ಆ ಪ್ರಕಾರ ಇಬ್ಬರನ್ನು ಕೈಬಿಡಲಾಗಿದೆ' ಎಂದು ತಿಳಿಸಿದ್ದಾರೆ.

'ಯುವಿಸಿಇ ಸಮಗ್ರ ಅಭಿವೃದ್ಧಿಗೆ ₹30 ಕೋಟಿ ಸಂಗ್ರಹಿಸುವ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಯತ್ತ ಸಂಸ್ಥೆಯಾಗಿರುವ ಯೂನಿವರ್ಸಿಟಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಸರ್ವತೋಮುಖ ಅಭಿವೃದ್ಧಿಗಾಗಿ ಹಳೆಯ ವಿದ್ಯಾರ್ಥಿಗಳ ಸಹಯೋಗದಲ್ಲಿ ₹30 ಕೋಟಿ ಸಂಗ್ರಹಿಸಲು ಉದ್ದೇಶಿಸಲಾಗಿದೆ' ಎಂದು ಯುವಿಸಿಇ ಪದವೀಧರರ ಸಂಘದ ಅಧ್ಯಕ್ಷ ಮೇಜರ್ ಜನರಲ್ ನೀಲಕಂಠಪ್ಪ ತಿಳಿಸಿದರು.


ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಮೊದಲ ಎಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆ ಇರುವ ಯುವಿಸಿಇಯನ್ನು ಸ್ವಾಯತ್ತ ಸಂಸ್ಥೆಯಾಗಿ ಘೋಷಿಸಿರುವುದು ಸ್ವಾಗತಾರ್ಹ. ದಶಕದ ಈ ಬೇಡಿಕೆ ಈಡೇರಿಸಿದ್ದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ಧನ್ಯವಾದ' ಎಂದರು.

'ಯುವಿಸಿಇಗೆ ಮುಂಬರುವ ವರ್ಷಗಳಲ್ಲಿ ಭದ್ರ ಬುನಾದಿ ಹಾಕಬಲ್ಲ, ಕ್ರಿಯಾಶೀಲ, ಸಮರ್ಥ ನಾಯಕತ್ವದ ಅಗತ್ಯವಿದೆ. ಹಾಗಾಗಿ ಐಐಟಿ ಅಥವಾ ಐಐಎಸ್‌ಸಿ ಹಿನ್ನೆಲೆಯಿಂದ ಬಂದಂತಹ ಶಿಕ್ಷಣ ತಜ್ಞರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಬೇಕು' ಎಂದು ಒತ್ತಾಯಿಸಿದರು.

ಯುವಿಸಿಇ ಹಳೆಯ ವಿದ್ಯಾರ್ಥಿಯೂ ಆಗಿರುವ ರಕ್ಷಣಾ ಸಚಿವಾಲಯದ ಮಾಜಿ ವೈಜ್ಞಾನಿಕ ಸಲಹೆಗಾರ ವಿ.ಕೆ.ಆತ್ರೆ, 'ನಮ್ಮ ಅವಧಿಯಲ್ಲಿ ಅತ್ಯುತ್ತಮ ಅಧ್ಯಾಪಕರನ್ನು ಹೊಂದಿದ್ದೆವು. 80ರ ದಶಕದಲ್ಲಿ ಯುವಿಸಿಇ ತನ್ನ ಹೊಳಪು ಕಳೆದುಕೊಂಡಿತು. ಸರ್ಕಾರ ಎಲ್ಲ ರೀತಿಯಲ್ಲಿ ಕಾಲೇಜಿನ ಬೆಂಬಲಕ್ಕೆ ನಿಂತರೆ, ಹಳೆಯ ವಿದ್ಯಾರ್ಥಿಗಳು ಸಹಾಯ ಹಸ್ತ ಚಾಚಲು ಮುಂದೆ ಬರುತ್ತಾರೆ' ಎಂದರು.

ಅಮೆರಿಕದಲ್ಲಿ ಉದ್ಯಮಿಯಾಗಿರುವ ಹಳೆಯ ವಿದ್ಯಾರ್ಥಿ ಗೋವಿಂದ ಲಕ್ಷ್ಮಣ್, 'ಯುವಿಸಿಇ ಮೆಕ್ಯಾನಿಕಲ್ ವಿಭಾಗಕ್ಕೆ ಲ್ಯಾಬ್ ಉಪಕರಣಗಳೊಂದಿಗೆ ಹೊಸ ಕಟ್ಟಡದ ಅಗತ್ಯವಿದೆ. ಜಗತ್ತಿನಾದ್ಯಂತದ ಇರುವ ಯುವಿಸಿಇ ಹಳೆಯ ವಿದ್ಯಾರ್ಥಿಗಳು ಕಾಲೇಜಿನ ಅಭಿವೃದ್ಧಿಗೆ ಕೊಡುಗೆ ನೀಡಲು ಆಸಕ್ತಿ ತೋರಿದ್ದಾರೆ' ಎಂದರು.

ಸಂಘದ ಸದಸ್ಯ ಶ್ರೀಕಾಂತ್, 'ಹಳೆಯ ವಿದ್ಯಾರ್ಥಿಗಳಿಗಾಗಿ ಶೀಘ್ರದಲ್ಲೇ ಪ್ರತ್ಯೇಕ ಕಾರ್ಯಕ್ರಮ ಆಯೋಜಿಸಲಿದ್ದೇವೆ. ಮುಂದಿನ 3ವರ್ಷಗಳಲ್ಲಿ ಹಳೆಯ ವಿದ್ಯಾರ್ಥಿಗಳ ಸಮುದಾಯ ಮತ್ತು ಇತರೆ ಹಿತೈಷಿಗಳಿಂದ ಸಂಸ್ಥೆಯ ಅಭಿವೃದ್ಧಿಗಾಗಿ ನಿರೀಕ್ಷಿತ ಹಣ ಸಂಗ್ರಹಿಸಲು ಉದ್ದೇಶಿಸಿದ್ದೇವೆ' ಎಂದರು. 'ಸಂಘದಲ್ಲಿ ಸುಮಾರು 1 ಸಾವಿರ ನೋಂದಾಯಿತ ಸದಸ್ಯರಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 70 ವಿದ್ಯಾರ್ಥಿಗಳಿಗೆ ಅಂದಾಜು ₹10 ಲಕ್ಷ ಮೌಲ್ಯದ ವಿದ್ಯಾರ್ಥಿವೇತನ ನೀಡಲು ಉದ್ದೇಶಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.uvcega.org ಅಥವಾ 9740111552 ಅನ್ನು ಸಂಪರ್ಕಿಸಬಹುದು' ಎಂದು ಸಂಘದ ಪ್ರಕಟಣೆ ತಿಳಿಸಿದೆ.



'ಇ–ಗ್ರೀವಿಯೆನ್ಸ್ ಪೋರ್ಟಲ್' ಅನ್ನು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರಾಜೀವ್ ಚಂದ್ರಶೇಖರ್ (ಎಡಗಡೆಯವರು) ಕೀಲಿಮಣೆ ಒತ್ತುವ ಮೂಲಕ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ನ್ಯಾಯಮೂರ್ತಿ ಅಲೋಕ್ ಅರಾಧೆ, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಇದ್ದರು —ಪ್ರಜಾವಾಣಿ ಚಿತ್ರ

'ತಂತ್ರಜ್ಞಾನ ಬಳಕೆಯಲ್ಲಿ ದಾಪುಗಾಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ಆರು ವರ್ಷಗಳಲ್ಲಿ ಕೇಂದ್ರ ಸರ್ಕಾರ ಈ ದೇಶದ ಫಲಾನುಭವಿಗಳಿಗೆ ತಲುಪಬೇಕಾದ ಸೌಲಭ್ಯಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಸಕಾಲದಲ್ಲಿ ತಲುಪಿಸುವ ಪ್ರಯತ್ನ ಮಾಡುತ್ತಿದೆ. ಅದರಲ್ಲೂ, ಭಾರತೀಯ ನ್ಯಾಯಾಂಗವು ಕಳೆದ ಎರಡು ವರ್ಷಗಳ ಕೋವಿಡ್ ಸಂಕಟದ ಸಮಯದಲ್ಲಿ ತಂತ್ರಜ್ಞಾನದ ಗರಿಷ್ಠ ಬಳಕೆ ಮಾಡಿಕೊಂಡಿದೆ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರಾಜೀವ ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಬೆಂಗಳೂರು ವಕೀಲರ ಸಂಘದ ಆಶ್ರಯದಲ್ಲಿ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ಸೋಮವಾರ ನಡೆದ 'ಇ–ಗ್ರೀವಿಯೆನ್ಸ್ ಪೋರ್ಟಲ್' ಉದ್ಘಾಟಿಸಿ ಮಾತನಾಡಿದ ಅವರು, 'ಪ್ರಜಾಪ್ರಭುತ್ವದಲ್ಲಿ ತಂತ್ರಜ್ಞಾನ ಎಷ್ಟು ಮುಖ್ಯ ಎಂಬುದಕ್ಕೆ ಕೇಂದ್ರ ಸರ್ಕಾರ ರೂಪಿಸಿರುವ ಯೋಜನೆಗಳು ಇಂದು ಜಾರ್ಖಂಡ್‌ನಿಂದ ಹಿಡಿದು ಉತ್ತರ ಕರ್ನಾಟಕದ ಪ್ರತಿಯೊಬ್ಬ ಫಲಾನುಭವಿಗೂ ಸುಲಭವಾಗಿ ತಲುಪುತ್ತಿರುವುದೇ ಸಾಕ್ಷಿ' ಎಂದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, 'ಸುಪ್ರೀಂ ಕೋರ್ಟ್ ತೀರ್ಪುಗಳು, ತಿದ್ದುಪಡಿಗಳು ವಕೀಲರಿಗೆ ತಕ್ಷಣಕ್ಕೇ ಲಭ್ಯವಾಗಬೇಕು. ಕರ್ನಾಟಕದ ನ್ಯಾಯಾಂಗ ವ್ಯವಸ್ಥೆ ಈ ನಿಟ್ಟಿನಲ್ಲಿ ಯಾವುದೇ ಸೌಕರ್ಯಗಳನ್ನು ಬಯಸಿದರೂ ಅದನ್ನು ನೀಡಲು ಸರ್ಕಾರ ಸಿದ್ಧವಿದೆ. ಕರ್ನಾಟಕ ಹೈಕೋರ್ಟ್ ದೇಶದಲ್ಲೇ ಅಗ್ರಗಣ್ಯ ಹೈಕೋರ್ಟ್ ಎನ್ನಿಸಿಕೊಳ್ಳಬೇಕು' ಎಂದು ಆಶಿಸಿದರು.

'ವಿಚಾರಣೆಗೆ ಕಾದಿರುವ ಬಾಕಿ ಪ್ರಕರಣಗಳ ಸಂಖ್ಯೆ ಬೃಹತ್ ಪ್ರಮಾಣದಲ್ಲಿದ್ದು, ಅವುಗಳ ತ್ವರಿತ ವಿಲೇವಾರಿಗೆ ತಂತ್ರಜ್ಞಾನ ಬಳಕೆಯಾಗಬೇಕು. ಇದರಿಂದ ಜನಸಾಮಾನ್ಯರಿಗೆ ನ್ಯಾಯಾಂಗದ ಬಗೆಗಿನ ಗೌರವ ಇನ್ನಷ್ಟು ಹೆಚ್ಚಾಗುತ್ತದೆ' ಎಂದು ಮಾಧುಸ್ವಾಮಿ ಹೇಳಿದರು.

ನ್ಯಾಯಮೂರ್ತಿ ಅಲೋಕ್ ಅರಾಧೆ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ, ಹಿರಿಯ–ಕಿರಿಯ ವಕೀಲರು ಇದ್ದರು.

ಸುಲ್ತಾನ್ ಗೋಲ್ಡ್‌ನಲ್ಲಿ ರಿಯಾಯಿತಿ

ಬೆಂಗಳೂರು: ಜಯನಗರದಲ್ಲಿ ಇರುವ ಸುಲ್ತಾನ್ ಡೈಮಂಡ್ಸ್ ಆ್ಯಂಡ್ ಗೋಲ್ಡ್ ಮಳಿಗೆಯಲ್ಲಿ 'ಸಂಸ್ಕೃತಿ ಹೆರಿಟೇಜ್' ಹೆಸರಿನ ಚಿನ್ನಾಭರಣ ಪ್ರದರ್ಶನ,-ಮಾರಾಟವು ಏಪ್ರಿಲ್ 30ರವರೆಗೆ ನಡೆಯಲಿದೆ.

ನಕಾಶಿ, ಗೋಕಾಕ್, ಚೆಟ್ಟಿನಾಡು, ಒಡೆಯರ್, ತನ್ಜಾನಿಯಾ, ಟೆಂಪಲ್ ಮತ್ತು ರಜಪೂತ ಆಭರಣಗಳ ವಿಸ್ತೃತ ಸಂಗ್ರಹವು ಪ್ರದರ್ಶನ ಮತ್ತು ಮಾರಾಟದ ಅವಧಿಯಲ್ಲಿ ಇರಲಿದೆ.

ಏಪ್ರಿಲ್ 30ರವರೆಗೆ ಸಂಸ್ಕೃತಿ ಬ್ರೈಡಲ್ ಚಿನ್ನಾಭರಣಗಳ ಮೇಕಿಂಗ್ ವೆಚ್ಚದ ಮೇಲೆ ಶೇ 40ರಷ್ಟು ರಿಯಾಯಿತಿ ಇರಲಿದೆ ಎಂದು ಸುಲ್ತಾನ್ ಡೈಮಂಡ್ಸ್ ಆ್ಯಂಡ್ ಗೋಲ್ಡ್‌ನ ನಿರ್ದೇಶಕ ಅಬ್ದುಲ್ ರಿಯಾಜ್ ತಿಳಿಸಿದ್ದಾರೆ.

ಚಿನ್ನದ ವಿನಿಮಯದ ಮೇಲೆ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ ₹ 50 ಸಿಗಲಿದೆ ಎಂದೂ ಅವರು ಹೇಳಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವ

ಚಿನ್ನದ ಪದಕ: ವಿದ್ಯಾರ್ಥಿನಿಯರಿಗೆ ಸಿಂಹಪಾಲು

ಪ್ರಜಾವಾಣಿ ವಾರ್ತೆ



ಘಟಿಕೋತ್ಸವದಲ್ಲಿ ಮೂರು ಚಿನ್ನದ ಪದಕ ಪಡೆದ ಪೂರ್ವಾ ಎನ್. ಗಾಂಧಿ (ಮುಂದಿನ ಸಾಲು) ಹಾಗೂ ಎರಡು ಚಿನ್ನದ ಪದಕಗಳನ್ನು ಪಡೆದ ಬಿ.ಎಸ್. ನಿವೇದಿತಾ, ಆನ್ ಮೇರಿ ಸೆಬಾಸ್ಟಿಯನ್ ಮತ್ತು ದುವ್ವುರು ಅಲೇಕ್ಯಾ. – ಪ್ರಜಾವಾಣಿ ಚಿತ್ರ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವಕ್ಕೆ ವಿದ್ಯಾರ್ಥಿನಿಯರು ತಮ್ಮ ಸಾಧನೆಯ ಮೂಲಕ ಮೆರುಗು ನೀಡಿದರು. ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಮತ್ತು ಪ್ರಮಾಣಪತ್ರ ಸ್ವೀಕರಿಸಿದವರಲ್ಲಿ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಸೋಮವಾರ ನಡೆದ ಘಟಿಕೋತ್ಸವದಲ್ಲಿ ಪದವಿ ಹಾಗೂ 2018–2020ರ ಮತ್ತು 2019–2021ರ ಶೈಕ್ಷಣಿಕ ವರ್ಷದ ಸ್ನಾತಕೋತ್ತರ ಪದವಿಯ ಒಟ್ಟು 84 ವಿದ್ಯಾರ್ಥಿಗಳು ರ್‍ಯಾಂಕ್ ಪ್ರಮಾಣಪತ್ರ ಸ್ವೀಕರಿಸಿದರು. ಇದರಲ್ಲಿ ವಿಶ್ವವಿದ್ಯಾಲಯ ನೀಡಿದ 77 ಚಿನ್ನದ ಪದಕಗಳಲ್ಲಿ 71 ಚಿನ್ನದ ಪದಕಗಳನ್ನು ವಿದ್ಯಾರ್ಥಿನಿಯರು ಪಡೆದರು.

ವಿದ್ಯಾರ್ಥಿನಿಯರ ಈ ಸಾಧನೆಯನ್ನು ಘಟಿಕೋತ್ಸವದ ತಮ್ಮ ಭಾಷಣದಲ್ಲಿ ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ. ಕಸ್ತೂರಿ ರಂಗನ್ ಅವರು ಶ್ಲಾಘಿಸಿದರು.

‘ಹೆಚ್ಚಿನ ಸಂಖ್ಯೆಯಲ್ಲಿ ಪದವಿ ಜತೆಗೆ ಚಿನ್ನದ ಪದಕಗಳನ್ನು ಪಡೆಯುತ್ತಿರುವುದು ಸಂತಸದ ವಿಷಯ. ವಿದ್ಯಾರ್ಥಿನಿಯರು ಈಗ ಹೆಚ್ಚು ಬಲಿಷ್ಠರಾಗುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆ ಮಾಡಿ ಪುರುಷರನ್ನು ಹಿಂದಕ್ಕೆ ಹಾಕುವುದರಲ್ಲಿ ಯಾವುದೇ ಸಂಶಯವಿಲ್ಲ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗುಣಮಟ್ಟದ ಶಿಕ್ಷಣ ಅಗತ್ಯ: ‘ಮುಂದಿನ ದಶಕದಲ್ಲಿ ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವ ಜನಸಂಖ್ಯೆ ಹೊಂದಲಿದೆ. ಈ ಯುವ ಸಮುದಾಯಕ್ಕೆ ಉತ್ತಮ ಗುಣಮಟ್ಟದ ಶಿಕ್ಷಣ ಕಲ್ಪಿಸಲು ಆದ್ಯತೆ ನೀಡುವ ಅಗತ್ಯವಿದೆ. ಶೇ 50ಕ್ಕಿಂತ ಹೆಚ್ಚು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ಹಾತೊರೆಯುತ್ತಿದ್ದಾರೆ. ನಿಯಮಿತವಾಗಿ ಈ ಸಮುದಾಯ ಹೊಸ ಕೌಶಲಗಳನ್ನು ಪಡೆದುಕೊಳ್ಳಬೇಕು’ ಎಂದು ಡಾ.ಕೆ. ಕಸ್ತೂರಿ ರಂಗನ್ ಪ್ರತಿಪಾದಿಸಿದರು.

‘21ನೇ ಶತಮಾನದ ಶಿಕ್ಷಣದ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಹೊಸ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಗಿದೆ. ಯುವಕರ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿಪಡಿಸುವ ವಿಶಾಲ ದೃಷ್ಟಿಕೋನವನ್ನು ರಾಷ್ಟ್ರೀಯ ಶಿಕ್ಷಣ ನೀತಿಯು ಒಳಗೊಂಡಿದೆ. ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಸಂಶೋಧನೆಗೆ ಆದ್ಯತೆ ನೀಡಬೇಕು ಎಂದು ಈ ನೀತಿಯಲ್ಲಿ ಶಿಫಾರಸು ಮಾಡಲಾಗಿದೆ. ಇದಕ್ಕಾಗಿಯೇ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ (ಎನ್‌ಆರ್‌ಎಫ್) ಸ್ಥಾಪಿಸುವಂತೆ ಶಿಫಾರಸು ಮಾಡಲಾಗಿದೆ’ ಎಂದು ವಿವರಿಸಿದರು.

‘ಬೆಂಗಳೂರು ನಗರ ವಿಶ್ವವಿದ್ಯಾಲಯವು ಸಾಂಪ್ರದಾಯಿಕ ಬಿ.ಇಡಿ. ಜತೆಗೆ ನಾಲ್ಕು ವರ್ಷದ ಬಿ.ಇಡಿ. ಕೋರ್ಸ್ ಆರಂಭಿಸಬೇಕು ಹಾಗೂ ಉತ್ತಮ ಶಿಕ್ಷಕರನ್ನು ರೂಪಿಸುವ ನಿಟ್ಟಿನಲ್ಲಿ ಎಂ.ಇಡಿ. ಕೋರ್ಸ್ ಸಹ ಆರಂಭಿಸಬೇಕು’ ಎಂದು ಸಲಹೆ ನೀಡಿದರು.

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಇದ್ದರು.

ಕನಸಿನ ವಿಶ್ವವಿದ್ಯಾಲಯವಾಗಬೇಕು: ಸಚಿವ ಅಶ್ವತ್ಥನಾರಾಯಣ

‘ಬೆಂಗಳೂರು ನಗರ ವಿಶ್ವವಿದ್ಯಾಲಯವು ಭಾರತದಲ್ಲಿಯೇ ಕನಸಿನ ವಿಶ್ವವಿದ್ಯಾಲಯವಾಗಬೇಕು’ ಎಂದು ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸದ್ಯ 800 ವಿದ್ಯಾರ್ಥಿಗಳಿದ್ದಾರೆ. ಭವಿಷ್ಯದಲ್ಲಿ ಕನಿಷ್ಠ 50 ಸಾವಿರ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುವಂತಾಗಬೇಕು. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿದ್ದು, ಉದ್ಯಮ ಮತ್ತು ಶೈಕ್ಷಣಿಕ ಕ್ಷೇತ್ರದ ನಡುವಣ ಅಂತರ ಕಡಿಮೆ ಮಾಡಲಾಗುವುದು. ಈ ಎರಡು ವಲಯವನ್ನು ಒಗ್ಗೂಡಿಸಲಾಗುವುದು. ಜತೆಗೆ, ಎಲ್ಲ ವಿಶ್ವವಿದ್ಯಾಲಯಗಳನ್ನು ಡಿಜಿಟಲೀಕರಣ ವ್ಯವಸ್ಥೆ ಅಳವಡಿಸಲಾಗುತ್ತಿದ್ದು, ಸಂಪೂರ್ಣವಾಗಿ ಕಾಗದರಹಿತವಾಗಲಿವೆ’ ಎಂದು ವಿವರಿಸಿದರು.

ಜವಾಬ್ದಾರಿ ಹೆಚ್ಚಿಸಿದೆ: ವಿ. ರವಿಚಂದ್ರ

‘ಗೌರವ ಡಾಕ್ಟರೇಟ್ ನನ್ನ ಜವಾಬ್ದಾರಿ ಹೆಚ್ಚಿಸಿದೆ. ಹೆಚ್ಚಿನ ಸಾಧನೆಗೆ ಇದು ಸ್ಫೂರ್ತಿಯಾಗಿದೆ’ ಎಂದು ನಟ, ನಿರ್ದೇಶಕ ವಿ. ರವಿಚಂದ್ರ ತಿಳಿಸಿದರು.

ಗೌರವ ಡಾಕ್ಟರೇಟ್ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ‘ಈಗಾಗಲೇ ಒಂದು ಗೌರವ ಡಾಕ್ಟರೇಟ್ ದೊರೆತಿತ್ತು. 60 ವರ್ಷದ ನಂತರ ಮತ್ತೊಂದು ಡಾಕ್ಟರೇಟ್ ದೊರೆತಿರುವುದು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಈ ಗೌರವ ಡಾಕ್ಟರೇಟ್ ನನ್ನದಲ್ಲ. ನಿಮ್ಮದು. ನನ್ನ ಸಾಧನೆಗೆ ಶಕ್ತಿ ಹಾಗೂ ಚೈತನ್ಯವಾಗಲಿದೆ’ ಎಂದರು.

ಸಮಾಜ ಸೇವಾ ಕ್ಷೇತ್ರದಲ್ಲಿ ಸೇವೆಗಾಗಿ ಬ್ರಿಗೇಡ್ ಸಮೂಹದ ಸಂಸ್ಥಾಪಕ ಎಂ.ಆರ್. ಜೈಶಂಕರ್ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆಗಾಗಿ ಶ್ವಾಸಕೋಶ ತಜ್ಞ ಡಾ. ಸತ್ಯನಾರಾಯಣ ಮೈಸೂರು ಅವರಿಗೂ ಇದೇ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಪಾರ್ಕಿನ್ಸನ್ಸ್ ಚಿಕಿತ್ಸೆಗೆ ಆಧುನಿಕ ತಂತ್ರಜ್ಞಾನ



ವಿಶ್ವ ಪಾರ್ಕಿನ್ಸನ್ಸ್ ಕಾಯಿಲೆ ದಿನದ ಪ್ರಯುಕ್ತ ಏರ್ಪಡಿಸಿದ್ದ ಸಂವಾದದಲ್ಲಿ ಮುಖ್ಯ ಅತಿಥಿ ಕಾವ್ಯಾ ಶಾ ಮತ್ತು ಕಾಯಿಲೆಯಿಂದ ವಾಸಿಯಾದವರ ಜೊತೆ ಮಣಿಪಾಲ ಆಸ್ಪತ್ರೆಗಳ ನ್ಯೂರಾಲಜಿ ಮತ್ತು ನ್ಯೂರೊಸರ್ಜರಿ ತಜ್ಞರು

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ಮಣಿಪಾಲ ಆಸ್ಪತ್ರೆಯ ನ್ಯೂರಾಲಜಿ ಮತ್ತು ನ್ಯೂರೊ ಸರ್ಜರಿ ತಜ್ಞರು ಪಾರ್ಕಿನ್ಸನ್ಸ್ ಕಾಯಿಲೆಯನ್ನು ನಿಯಂತ್ರಿಸುವ ವಿವಿಧ ಆಯಾಮಗಳ ಬಗ್ಗೆ ಬೆಳಕು ಚೆಲ್ಲಿದರು.

ವಿಶ್ವ ಪಾರ್ಕಿನ್ಸನ್ಸ್ ಕಾಯಿಲೆ ದಿನದ ಪ್ರಯುಕ್ತ ಮಣಿಪಾಲ ಆಸ್ಪತ್ರೆಗಳು ಮತ್ತು ‘ಪ್ರಜಾವಾಣಿ– ಡಿಎಚ್ ಬ್ರ್ಯಾಂಡ್ ಸ್ಪಾಟ್’ ಸಹಯೋಗದಲ್ಲಿ ಸೋಮ ವಾರ ಆಯೋಜಿಸಿದ್ದ ಸಂವಾದದಲ್ಲಿ ತಜ್ಞ ವೈದ್ಯರು ಈ ರೋಗ ಲಕ್ಷಣ ಹೇಗೆ ಕಾಣಿಸಿ ಕೊಳ್ಳುತ್ತವೆ, ಕಾಯಿಲೆ ವಾಸಿಗೊಳಿಸಲು ಆಳ ಮಿದುಳು ಪ್ರಚೋದನೆಯೂ (ಬಿಡಿಎಸ್) ಸೇರಿದಂತೆ ಲಭ್ಯ ವಿರುವ ಚಿಕಿತ್ಸೆಗಳ ಬಗ್ಗೆ ವಿಶ್ಲೇಷಿಸಿದರು.

ಈ ಕಾಯಿಲೆ ಕುರಿತು ವಿಸ್ತೃತ ವಿವರಣೆ ನೀಡಿದ ತಜ್ಞರು, ಕನಿಷ್ಠ ಚಿಕಿತ್ಸೆಯ ಮೂಲಕವೂ ಗುಣಮಟ್ಟದ ಬದುಕನ್ನು ಕಟ್ಟಿಕೊಳ್ಳುವುದನ್ನು ಖಾತರಿಪಡಿಸಬೇಕಾದರೆ ಈ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವ ಅಗತ್ಯವಿದೆ ಎಂದರು.

ಔಷಧ ಬಳಕೆಯಿಂದ ರೋಗವನ್ನು ಹೇಗೆ ವಾಸಿಗೊಳಿಸಬಹುದು ಹಾಗೂ ಈ ಕಾಯಿಲೆಗೆ ಪಂಪ್ ಚಿಕಿತ್ಸೆ, ಕರುಳಿನ ಜೆಲ್ ಬಳಕೆ ಸೇರಿದಂತೆ ಯಾವೆಲ್ಲ ಚಿಕಿತ್ಸೆಗಳಿವೆ ಎಂದೂ ವಿವರಿಸಿದರು. ಕಾಯಿಲೆ ಉಲ್ಬಣಗೊಂಡು ಔಷಧದಿಂದ ಪ್ರಯೋಜನವಾಗದು ಎಂಬ ಹಂತದಲ್ಲಿ ಡಿಬಿಎಸ್ ಶಸ್ತ್ರಚಿಕಿತ್ಸೆಯು ರೋಗಿಗೆ ನೆರವಿಗೆ ಬರಲಿದೆ ಎಂದು ಶಸ್ತ್ರಚಿಕಿತ್ಸಾ ತಜ್ಞರು ತಿಳಿಸಿದರು. ಇದಕ್ಕಾಗಿ ಏನೆಲ್ಲಾ ವಿಧಾನಗಳನ್ನು ಪಾಲಿಸಬೇಕಾಗುತ್ತದೆ ಎಂದೂ ಮಾಹಿತಿ ನೀಡಿದರು.

ಕಾಯಿಲೆ ವಾಸಿಗೊಳಿಸುವಲ್ಲಿ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಹೇಗೆ ನೆರವಾಯಿತು ಎಂಬ ಬಗ್ಗೆ ಕೆಲವರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಸಂವಾದ ಕಾರ್ಯಕ್ರಮವನ್ನು ವೀಕ್ಷಿಸಲು ಈ ಕ್ಯು.ಆರ್. ಕೋಡ್ ಸ್ಕ್ಯಾನ್ ಮಾಡಿ

ಮೇ 1ರಿಂದ ಸರಕು ಸಾಗಣೆ ವಾಹನ ಚಾಲಕರ ಮುಷ್ಕರ

ಬೆಂಗಳೂರು: ‘ಸರಕು ಸಾಗಣೆ ವಾಹನಗಳಿಗೆ ವಿಧಿಸುವ ದಂಡದ ಮೊತ್ತವನ್ನು ಕಡಿಮೆ ಮಾಡಬೇಕು. ಏ.30ರೊಳಗೆ ಸರ್ಕಾರ ಈ ಬೇಡಿಕೆ ಈಡೇರಿಸದಿದ್ದರೆ, ಮೇ 1ರಿಂದ ರಾಜ್ಯದಾದ್ಯಂತ ಸರಕು ಸಾಗಣೆ ವಾಹನಗಳ ಮಾಲೀಕರು ಮುಷ್ಕರ ನಡೆಸಲಿದ್ದೇವೆ’ ಎಂದು ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ನವೀನ್ ರೆಡ್ಡಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸರಕು ಸಾಗಿಸುವ ಹಳೆಯ ವಾಹನಗಳಿಗೆ ಸಂಬಂಧಿಸಿದ ಶುಲ್ಕಗಳನ್ನು ಸರ್ಕಾರ ಶೇ 16 ಪಟ್ಟು ಹೆಚ್ಚಳ ಮಾಡಿರುವುದು ಲಾರಿ ಮಾಲೀಕರ ಮೇಲೆ ಪ್ರಹಾರ ಮಾಡಿದಂತಾಗಿದೆ’ ಎಂದರು.

‘ನಿಯಮ ಉಲ್ಲಂಘನೆ ಮಾಡುವ ವಾಹನಗಳಿಗೆ ಈ ಹಿಂದೆ ₹100ರಿಂದ ₹500ರವರೆಗೆ ದಂಡ ವಿಧಿಸಲಾಗುತ್ತಿತ್ತು. ಕೇಂದ್ರ ಸರ್ಕಾರ ಯಾರದ್ದೋ ಒತ್ತಡಕ್ಕೆ ಮಣಿದು, ಈ ದಂಡಗಳನ್ನು ಕನಿಷ್ಠ ₹5ಸಾವಿರದಿಂದ ₹25 ಸಾವಿರದವರೆಗೆ ಏರಿಸಿರುವುದು ಖಂಡನೀಯ. ವಾಹನಗಳ ಸಾಮರ್ಥ್ಯ ದೃಢೀಕರಣ ಪತ್ರದ (ಎಫ್‌.ಸಿ) ನೆಪದಲ್ಲಿ ಹೆಚ್ಚು ಶುಲ್ಕ ನಿಗದಿಪಡಿಸಿರುವುದು ಹೊರೆಯಾಗಿದೆ’ ಎಂದು ದೂರಿದರು.

‘ಪೆಟ್ರೋಲ್ ಮತ್ತು ಡೀಸೆಲ್ ದರಗಳು ನಿರಂತರವಾಗಿ ಏರುತ್ತಿದ್ದು, ಸರಕು ಸಾಗಣೆ ವಾಹನ ಮಾಲೀಕರು ಮತ್ತು ಚಾಲಕರು ಜೀವನ ನಡೆಸುವುದೇ ಕಷ್ಟಕರವಾಗಿದೆ. ನಗರ ಪ್ರದೇಶದ ದಟ್ಟಣೆ ನಡುವೆ ಒಂದು ಟ್ರಿಪ್ ಮಾಡಲು ಸಾಧ್ಯ. ದಂಡದ ಪ್ರಮಾಣ ಹೆಚ್ಚಾಗಿರುವುದರಿಂದ ಆರ್‌ಟಿಒ ಅಧಿಕಾರಿಗಳು ಮತ್ತು ಸಂಚಾರ ಪೊಲೀಸರು ಲಾರಿ ಮಾಲೀಕರನ್ನು ಸುಲಿಗೆ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಪರಿಷ್ಕೃತ ದಂಡ ಮತ್ತು ಡೀಸೆಲ್ ದರಗಳನ್ನು ಕಡಿಮೆ ಮಾಡಬೇಕು. ಈ ಎಲ್ಲ ಬೇಡಿಕೆಗಳನ್ನು ಏಪ್ರಿಲ್ ಅಂತ್ಯದೊಳಗೆ ಈಡೇರಿಸಬೇಕು ಎಂದು ಒತ್ತಾಯಿಸಿದರು

ರಾಜಕೀಯ ಲಾಭಕ್ಕಾಗಿ ಬಿಜೆಪಿಯಿಂದ ಗಲಭೆ: ಜಮೀರ್

ಬೆಂಗಳೂರು: ‘ನಾವು ಪಾಕಿಸ್ತಾನದ ಮುಸ್ಲಿಮರಲ್ಲ, ಭಾರತೀಯ ಮುಸ್ಲಿಮರು. ಶಾಂತಿ ಸಹಬಾಳ್ವೆಗೆ ನಮ್ಮ ಮೊದಲ ಆದ್ಯತೆ. ನಾವು ಬಹಳ ಗೌರವದಿಂದ ಭಾರತದಲ್ಲಿ ಬಾಳುತ್ತಿದ್ದೇವೆ. ಮುಂದೆಯೂ ಗೌರವಯುತವಾಗಿ ಇರುತ್ತೇವೆ’ ಎಂದು ಚಾಮರಾಜಪೇಟೆ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಇತ್ತೀಚಿಗೆ ನಡೆದ ಕೆಲವು ಬೆಳವಣಿಗೆಗಳ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ‘ಸಾವಿನ ಮನೆಯಲ್ಲಿಯೂ ಬಿಜೆಪಿ ರಾಜಕೀಯ ಮಾಡುತ್ತಿದೆ’ ಎಂದು ದೂರಿದ್ದಾರೆ.

‘ನಾನು ಶಾಸಕನಾದ ಚಾಮರಾಜಪೇಟೆ ಕ್ಷೇತ್ರದಲ್ಲಿ ಶಾಂತಿ ನೆಲೆಸಿದೆ. ಇಲ್ಲಿ ಗಲಭೆ ಸೃಷ್ಟಿಸಲೇಬೇಕೆಂದು ಬಿಜೆಪಿ ಮುಖಂಡರು ಯತ್ನಿಸುತ್ತಿದ್ದಾರೆ. ಆದರೆ, ಶಾಂತಿ ಕದಡಲು ನಾನು ಅವಕಾಶ ಮಾಡಿಕೊಡುವುದಿಲ್ಲ’ ಎಂದಿರುವ ಅವರು, ‘ಜೆಜೆ ನಗರದಲ್ಲಿ ನಡೆದ ಚಂದ್ರಶೇಖರ ಹತ್ಯೆ ಪ್ರಕರಣದ ಆರೋಪಿಗಳಿಗೆ ಕೊಲೆ ಮಾಡುವ ಉದ್ದೇಶ ಇರಲಿಲ್ಲ. ಈ ಕೊಲೆಯ ಆರೋಪಿ ಚಿಕ್ಕವಯಸ್ಸಿನಿಂದಲೇ ಚಾಕು ಇಟ್ಟುಕೊಂಡು ಓಡಾಡುವುದನ್ನು ರೂಢಿಸಿಕೊಂಡಿದ್ದ’ ಎಂದರು.

‘ತೊಡೆಗೆ ಚಾಕು ಹಾಕಿದ್ದರಿಂದ ನರ ತುಂಡಾಗಿದೆ. ರಕ್ತಸ್ರಾವ ನಿಲ್ಲದ ಕಾರಣ ಆ ವ್ಯಕ್ತಿ ಸಾವನ್ನಪ್ಪಿದ್ದಾನೆ. ಆದರೆ, ಬಿಜೆಪಿಯವರು ಶವ ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಯಾವುದಾದರೂ ಗಲಾಟೆಯಲ್ಲಿ ರಾಜಕಾರಣಿ ಸತ್ತಿದ್ದಾರಾ’ ಎಂದು ಪ್ರಶ್ನಿಸಿರುವ ಜಮೀರ್, ‘ಜನರಿಂದ ಆಯ್ಕೆಯಾದ ಸರ್ಕಾರದಲ್ಲಿ ಗಲಭೆ ಇಲ್ಲ. ತಮಿಳುನಾಡಿನಲ್ಲಿ ಹಿಜಾಬ್ ಗಲಾಟೆ ಇಲ್ಲ. ಆದರೆ, ಇಲ್ಲಿ ರಾಜಕೀಯ ಲಾಭಕ್ಕಾಗಿ ಗಲಭೆ ಸೃಷ್ಟಿಸುತ್ತಿದ್ದಾರೆ’ ಎಂದು ದೂರಿದ್ದಾರೆ.

‘ತಾವೇ ನೇಮಿಸಿರುವ ಪೊಲೀಸ್ ಆಯುಕ್ತ ಕಮಲ್ ಪಂತ್ ಮೇಲೆ ಬಿಜೆಪಿಯವರು ಬೆರಳು ತೋರಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಸಾವಿನಲ್ಲೂ ರಾಜಕೀಯ ಮಾಡಲು ಹೊರಟಿರುವ ಬಿಜೆಪಿಯವರ ಕೀಳುಮಟ್ಟದ ಹೇಳಿಕೆಯಿಂದ ಸತ್ಯ ಎಂದಿಗೂ ಸುಳ್ಳಾಗದು’ ಎಂದಿದ್ದಾರೆ.

ಯಡಿಯೂರು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚು ನಿಯಮ ಉಲ್ಲಂಘನೆ

ಅಕ್ರಮ ಕಟ್ಟಡಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಯಡಿಯೂರು ವಾರ್ಡ್ ವ್ಯಾಪ್ತಿಯಲ್ಲಿ ಕಟ್ಟಡಗಳ ನಿಯಮ ಉಲ್ಲಂಘನೆ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ಈ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಬಳಿಕ ಅಧಿಕಾರಿಗಳು ಇಂತಹ ಕಟ್ಟಡಗಳ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವಂತೆ 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248ರ ಅಡಿ ನೋಟಿಸ್ ಜಾರಿಗೊಳಿಸಿದ್ದಾರೆ.

ಜಯನಗರ ಆರನೇ ಬ್ಲಾಕ್‌ನ 23ನೇ ಅಡ್ಡ ರಸ್ತೆಯ ಬಳಿ ಸ್ವತ್ತಿನ ಸಂಖ್ಯೆ 28ರಲ್ಲಿ ಮೂರು ಮಹಡಿಗಳ ಕಟ್ಟಡ (ನೆಲ ಮಹಡಿ, ಮೊದಲ ಮಹಡಿ ಹಾಗೂ ಎರಡನೇ ಮಹಡಿ) ನಿರ್ಮಿಸಲು ದಕ್ಷಿಣ ವಲಯದ ನಗರ ಯೋಜನೆ ಸಹಾಯಕ ನಿರ್ದೇಶಕರ ಕಚೇರಿಯಿಂದ 2016ರ ಮಾ.16ರಂದು ಅನುಮತಿ ನೀಡಲಾಗಿತ್ತು. ಆದರೆ, ಅಲ್ಲಿ ನಾಲ್ಕು ಮಹಡಿಯ ಕಟ್ಟಡ ನಿರ್ಮಿಸಲಾಗಿದೆ.

ಅದೇ ರೀತಿ, ಇದೇ ವಾರ್ಡ್‌ನ 5ನೇ ಬಿ ಮುಖ್ಯ ರಸ್ತೆಯಲ್ಲಿ ಸ್ವತ್ತಿನ ಸಂಖ್ಯೆ 1ರಲ್ಲಿ ವಸತಿ ಉದ್ದೇಶಕ್ಕಾಗಿ ನೆಲ ಮಹಡಿ ಸೇರಿದಂತೆ ಮೂರು ಮಹಡಿಗಳ ಕಟ್ಟಡ ನಿರ್ಮಾಣಕ್ಕೆ ಬಿಬಿಎಂಪಿ ದಕ್ಷಿಣ ವಲಯದ ನಗರ ಯೋಜನೆ ವಿಭಾಗದ ಸಹಾಯಕ ನಿರ್ದೇಶಕರು 2019ರ ಅ.31ರಂದು ನಕ್ಷೆ ಮಂಜೂರಾತಿ ನೀಡಿದ್ದರು. ಈ ಸ್ವತ್ತಿನ ಮಾಲೀಕರು ಈ ನಿವೇಶನದಲ್ಲಿ ಮಂಜೂರಾದ ನಕ್ಷೆಗಿಂತ ಎರಡು ಮಹಡಿಗಳನ್ನು ಹೆಚ್ಚುವರಿಯಾಗಿ ನಿರ್ಮಿಸಿದ್ದಾರೆ.

ಈ ಬಗ್ಗೆ ಶಶಿಕುಮಾರ್ ಎಂಬುವರು ಬಿಬಿಎಂಪಿ ದಕ್ಷಿಣ ವಲಯ ಆಯುಕ್ತರಿಗೆ, ಜಂಟಿ ಆಯುಕ್ತರಿಗೆ, ಯಡಿಯೂರು ವಾರ್ಡ್‌ನ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ದೂರು ನೀಡಿದ್ದರು.

ಜಯನಗರ ಆರನೇ ಬ್ಲಾಕ್‌ನ 23ನೇ ಅಡ್ಡ ರಸ್ತೆಯ ಬಳಿ ಸ್ವತ್ತಿನ ಸಂಖ್ಯೆ 28ರ ಕಟ್ಟಡವನ್ನು ಅಧಿಕಾರಿಗಳು ಪರಿಶೀಲನೆ ನಡೆಸಿದಾಗ ಮಂಜೂರಾತಿ ಪಡೆದ ಕಟ್ಟಡ ನಕ್ಷೆಗೆ ವ್ಯತಿರಿಕ್ತವಾಗಿ ಒಂದು ಹೆಚ್ಚುವರಿ ಮಹಡಿಯನ್ನು ಅಕ್ರಮವಾಗಿ ನಿರ್ಮಿಸಿರುವುದು ದೃಢಪಟ್ಟಿತ್ತು. ಅದಲ್ಲದೇ, ನೆಲ ಮಹಡಿಯಲ್ಲಿ ಶೇ 26.68ರಷ್ಟು, ಮೊದಲ ಮಹಡಿಯಲ್ಲಿ ಶೇ 33.73ರಷ್ಟು ಹಾಗೂ ಎರಡನೇ ಮಹಡಿಯಲ್ಲಿ ಶೇ 88.54ರಷ್ಟು ಭಾಗವು ವ್ಯತಿರಿಕ್ತವಾಗಿ ನಿರ್ಮಿಸಿರುವುದನ್ನೂ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

5ನೇ ಬಿ ಮುಖ್ಯ ರಸ್ತೆಯಲ್ಲಿ ಸ್ವತ್ತಿನ ಸಂಖ್ಯೆ 1ರಲ್ಲಿರುವ ಕಟ್ಟಡವನ್ನು ನಿರ್ಮಿಸುವಾಗ ಮಂಜೂರಾದ ನಕ್ಷೆಗಿಂತ ಒಟ್ಟು ಶೇ 127ರಷ್ಟು ಉಲ್ಲಂಘನೆ ಮಾಡಿದ್ದನ್ನು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ನೆಲ ಮಹಡಿಯಲ್ಲಿ ಶೇ 53.88, ಮೊದಲ ಮಹಡಿಯಲ್ಲಿ ಶೇ 53.88ರಷ್ಟು, ಎರಡನೇ ಮಹಡಿಯಲ್ಲಿ ಶೇ 82.72ರಷ್ಟು ಉಲ್ಲಂಘನೆ ಮಾಡಲಾಗಿದೆ. ಮೂರು ಮತ್ತು ನಾಲ್ಕನೇ ಮಹಡಿಗಳನ್ನು ಅಕ್ರಮವಾಗಿ ನಿರ್ಮಿಸಲಾಗಿದೆ ಎಂದು ಅಧಿಕಾರಿಗಳು ಗುರುತಿಸಿದ್ದಾರೆ.

ಈ ಎರಡು ಸ್ವತ್ತುಗಳ ಮಾಲೀಕರಿಗೆ ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ಏ. 8ರಂದು ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದು, ‘ಕಟ್ಟಡದ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿದ ಭಾಗಗಳನ್ನು ಹಾಗೂ ಹೆಚ್ಚುವರಿ ಮಹಡಿಯನ್ನು ಸ್ವಂತ ವೆಚ್ಚದಲ್ಲಿ ತೆರವುಗೊಳಿಸಬೇಕು. ಈ ಆದೇಶ ಪಾಲಿಸುವವರೆಗೂ ಕಟ್ಟಡ ನಿರ್ಮಾಣ ಮುಂದುವರಿಸುವಂತಿಲ್ಲ’ ಎಂದು ಸೂಚಿಸಿದ್ದಾರೆ. ‘ತೆರವುಗೊಳಿಸದಿದ್ದರೆ ಪಾಲಿಕೆಯಿಂದಲೇ ವ್ಯತಿರಿಕ್ತ ಭಾಗಗಳನ್ನು ಒಡೆದು ಹಾಕಲಾಗುತ್ತದೆ. ತೆರವಿಗೆ ತಗಲುವ ವೆಚ್ಚವನ್ನು ತಮ್ಮಿಂದಲೇ ವಸೂಲಿ ಮಾಡಲಾಗುತ್ತಿದೆ’ ಎಂದೂ ಸ್ವತ್ತುಗಳ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

‘ರಾಜಕೀಯ ವ್ಯಕ್ತಿಗಳ ಕೃಪಾಕಟಾಕ್ಷ’

‘ಅಕ್ರಮವಾಗಿ ಕಟ್ಟಡ ನಿರ್ಮಿಸುವವರಿಗೆ ಸ್ಥಳೀಯ ರಾಜಕೀಯ ವ್ಯಕ್ತಿಗಳು ಬೆಂಬಲ ನೀಡುತ್ತಿದ್ದಾರೆ. ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣವನ್ನು ತಡೆಯುವುದು ಅಧಿಕಾರಿಗಳ ಜವಾಬ್ದಾರಿ. ಆದರೆ, ಯಡಿಯೂರು ವಾರ್ಡ್‌ನಲ್ಲಿ ಕಣ್ಣೆದುರೇ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಲಾಗುತ್ತಿದ್ದರೂ, ಅದನ್ನು ತಡೆಯಲು ತಳಮಟ್ಟದ ಅಧಿಕಾರಿಗಳು ಕ್ರಮಕೈಗೊಳ್ಳುತ್ತಿಲ್ಲ. ಸ್ಥಳೀಯ ರಾಜಕೀಯ ಮುಖಂಡರಿಗೆ ಹೆದರಿ ಅಧಿಕಾರಿಗಳು ಈ ರೀತಿ ಮಾಡುತ್ತಿದ್ದಾರೆ’ ಎಂದು ದೂರುದಾರ ಶಶಿಕುಮಾರ್ ಬೇಸರ ವ್ಯಕ್ತಪಡಿಸಿದರು.

‘ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುವ ಪರಿಪಾಠಕ್ಕೆ ಕಡಿವಾಣ ಹಾಕುವಂತೆ ಹೈಕೋರ್ಟ್ ಪದೇ ಪದೇ ಬಿಬಿಎಂಪಿಗೆ ಆದೇಶ ಮಾಡಿದೆ. ಅಧಿಕಾರಿಗಳು ಹೈಕೋರ್ಟ್ ಆದೇಶಕ್ಕೂ ಗೌರವ ನೀಡುತ್ತಿಲ್ಲ. ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮುಂದುವರಿದರೆ, ನಗರವು ಲಂಗುಲಗಾಮಿಲ್ಲದೇ ಬೆಳೆಯಲಿದೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

ಹೈಪರ್ ಬ್ಯಾರಿಕ್ ಆಕ್ಸಿಜನ್ ಯೂನಿಟ್ ಇಂದು ಆರಂಭ



ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸ್ಥಾಪಿಸಿರುವ ‘ಹೈಪರ್ ಬ್ಯಾರಿಕ್ ಆಕ್ಸಿಜನ್’ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ಲಜನಕದ ಮೂಲಕ ಹಲವು ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ‘ಹೈಪರ್ ಬ್ಯಾರಿಕ್ ಆಕ್ಸಿಜನ್ ಥೆರಪಿ’ ಘಟಕವನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿದೆ.

ಮಂಗಳವಾರ ಈ ಘಟಕಕ್ಕೆ ಚಾಲನೆ ದೊರೆಯಲಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಈ ರೀತಿಯ ಘಟಕವನ್ನು ಸ್ಥಾಪಿಸಲಾಗಿದೆ. ಈ ಘಟಕಕ್ಕೆ ₹3.5 ಕೋಟಿ ವೆಚ್ಚ ಮಾಡಲಾಗಿದ್ದು, ಅಮೆರಿಕದಿಂದ ಯಂತ್ರವನ್ನು ಆಮದು ಮಾಡಲಾಗಿದೆ.

ಒಂದೂವರೆಯಿಂದ ಎರಡು ಗಂಟೆ ಒಳಗೆ ರೋಗಿಗಳಿಗೆ ಚಿಕಿತ್ಸೆ ನೀಡಬಹುದು. ಇದು ರೋಗಿಗಳ ಪರಿಸ್ಥಿತಿ ಮೇಲೆ ಅವಲಂಬನೆಯಾಗಿದೆ. ಏಕಕಾಲಕ್ಕೆ ಮೂರು ಮಂದಿಗೆ ಚಿಕಿತ್ಸೆ ನೀಡಬಹುದಾಗಿದೆ. ಹೃದಯಾಘಾತ, ಕೋವಿಡ್ ಚಿಕಿತ್ಸೆ ಸೇರಿದಂತೆ ಹಲವಾರು ಕಾಯಿಲೆಗಳಿಗೆ ಈ ಯಂತ್ರವನ್ನು ಬಳಸಬಹುದಾಗಿದೆ.

‘ರೇನ್ ಟ್ರೀ’ನಲ್ಲಿ ಆಭರಣ, ಸೀರೆ ಪ್ರದರ್ಶನ ನಾಳೆ



ಬೆಂಗಳೂರು: ನಗರದ ಸ್ಯಾಂಕಿ ರಸ್ತೆಯಲ್ಲಿರುವ ಐಟಿಸಿ ವಿಂಡ್ಸರ್ ಸಮೀಪದ ‘ರೇನ್ ಟ್ರೀ’ನಲ್ಲಿ ಏ.13ರಂದು ವೈವಿಧ್ಯ ಮತ್ತು ಆಕರ್ಷಕ ಆಭರಣಗಳು ಮತ್ತು ಸೀರೆಗಳ ಪ್ರದರ್ಶನ ನಡೆಯಲಿದೆ.

ಬೆಳಿಗ್ಗೆ 10ರಿಂದ ಸಂಜೆ 7.30ರ ವರೆಗೆ ಪ್ರದರ್ಶನ ನಡೆಯಲಿದೆ. ‘ಕೊರ್ವೈ’ ಸೀರೆ ವಿನ್ಯಾಸಗಳ ಕೌಶಲ ಮತ್ತು ಆಭರಣಗಳು ಗಮನಸೆಳೆಯಲಿವೆ.

‘ಸಿಲಿಯಾ ಪಲಥಿಂಕಲ್’ ಸೀರೆಗಳ ಬ್ರ್ಯಾಂಡ್‌ಗಳನ್ನು ಇಲ್ಲಿ ವೀಕ್ಷಿಸಬಹುದು. ಆಕರ್ಷಕ ಹೊಸ ಸಂಗ್ರಹಗಳು ಸಹ ಗ್ರಾಹಕರನ್ನು ಸೆಳೆಯಲಿವೆ. ಬನಾರಸ್ ಸೀರೆಗಳು ಮತ್ತು ಪರಿಶುದ್ಧ ರೇಷ್ಮೆಯ ಕರಕುಶಲ, ಆಧುನಿಕ ಸೌಂದರ್ಯವನ್ನು ಈ ಸೀರೆಗಳು ಹೊಂದಿವೆ.

‘ಕೊರ್ವೈ’ ಉತ್ಪನ್ನಗಳು ಭಾರತದ ಕರಕುಶಲದ ಕೌಶಲವನ್ನು ಬಿಂಬಿಸುತ್ತವೆ. ವಿಭಿನ್ನವಾಗಿರುವ ಮತ್ತು ವಿಶೇಷ ಕೌಶಲದಿಂದ ಕೂಡಿರುವ ಈ ಸೀರೆಗಳನ್ನು ಯಾವುದೇ ಋತುವಿನಲ್ಲಿ ನಡೆಯುವ ವಿಶೇಷ ಸಮಾರಂಭಗಳಲ್ಲಿ ಧರಿಸಬಹುದು.

ಆಭರಣ ಕ್ಷೇತ್ರದಲ್ಲಿ ಶತಮಾನಗಳ ಭವ್ಯ ಇತಿಹಾಸ ಹೊಂದಿರುವ ‘ಚಿರಿಯಾಂಕಂದಾಥ್’ ಷೋ ರೂಮ್‌ನ ಆಭರಣಗಳು ಇಲ್ಲಿ ದೊರೆಯಲಿವೆ. ಕೊಚ್ಚಿಯಿಂದ ಬೆಂಗಳೂರಿಗೆ ಬಂದಿರುವ ‘ಚಿರಿಯಾಂಕಂದಾಥ್’ನ ‘ಸಿಜೆ ಆರ್ಟಿಸಾನ್ ಬಟೀಕ್’ ಮತ್ತು ಕೊರ್ವೈ ಹೊಸ ಬ್ರ್ಯಾಂಡ್‌ಗಳ ಪ್ರದರ್ಶನಗಳೂ ನಡೆಯಲಿವೆ. ಅಪೂರ್ವ ಮುತ್ತು ರತ್ನಗಳು, ವಿಶೇಷ ವಿನ್ಯಾಸದ ಆಭರಣಗಳ ಪ್ರದರ್ಶನವೂ ಇರಲಿದೆ.

ಸಂಪರ್ಕ: 8086621111

‘ಜುಲೈ 1ಕ್ಕೆ ಮೈಷುಗರ್ ಕಾರ್ಖಾನೆ ಆರಂಭಿಸಿ’

ಬೆಂಗಳೂರು: ‘ಜುಲೈ 1ರಿಂದ ಮೈಷುಗರ್ ಸಕ್ಕರೆ ಕಾರ್ಖಾನೆ ಆರಂಭಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಕಾರ್ಖಾನೆ ಆರಂಭಿಸಲು ಸಿದ್ಧತೆ ಕೈಗೊಳ್ಳಬೇಕಾಗಿದೆ. ಕಾರ್ಖಾನೆ ಸ್ಥಿತಿಗತಿ, ಕಬ್ಬಿನ ದರ, ಕಬ್ಬಿನ ಬಾಬ್ತು ಹಣ ಬಟವಾಡೆಗಳ ವಿವರಗಳನ್ನು ಬಹಿರಂಗಪಡಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಮತ್ತು ಸಕ್ಕರೆ ಸಚಿವರಿಗೆ ಪತ್ರ ಬರೆದಿರುವ ಅವರು, ‘ಕಾರ್ಖಾನೆಯ ಪುನಃಶ್ಚೇತನಕ್ಕೆ ಬಜೆಟ್‌ನಲ್ಲಿ ₹50 ಕೋಟಿ ಘೋಷಿಸಲಾಗಿದೆ. ಆದರೆ, ಹಣ ಬಿಡುಗಡೆ ಬಗ್ಗೆ ಪ್ರಸ್ತಾವ ಸಲ್ಲಿಕೆಯಾಗಿಲ್ಲ. ಜುಲೈನಲ್ಲಿ ಕಾರ್ಖಾನೆ ಆರಂಭಿಸುವ ಬಗ್ಗೆ ಸರ್ಕಾರದಿಂದ ಸ್ಪಷ್ಟ ನಿರ್ಧಾರ ಪ್ರಕಟವಾಗಿಲ್ಲ’ ಎಂದು ತಿಳಿಸಿದ್ದಾರೆ.

‘ಸಕ್ಕರೆ ಜತೆಗೆ ವಿದ್ಯುತ್ ಉತ್ಪಾದಿಸಲೂ ಕ್ರಮಕೈಗೊಳ್ಳಬೇಕು. ಎಥನಾಲ್ ಘಟಕ ಆರಂಭಿಸಬೇಕು. ಮೈಷುಗರ್ ವ್ಯವಸ್ಥಾಪಕ ನಿರ್ದೇಶಕರಿಗೆ ಕನಿಷ್ಠ ಮೂರು ವರ್ಷ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು ಮತ್ತು ನುರಿತ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಕಾರ್ಖಾನೆ ಸುಸ್ಥಿತಿಗೆ ತರಬೇಕು’ ಎಂದು ಕೋರಿದ್ದಾರೆ.

ಮತ್ತಷ್ಟು ಶಾಲೆಗಳಿಗೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮತ್ತಷ್ಟು ಶಾಲೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಈ ಬಗ್ಗೆ ಆಡಳಿತ ಮಂಡಳಿಯವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ನಗರದ ಆರು ಶಾಲೆಗಳಿಗೆ ಇ–ಮೇಲ್ ಸಂದೇಶ ಕಳುಹಿಸಿದ್ದ ಅಪರಿಚಿತರು, ಬಾಂಬ್ ಬೆದರಿಕೆ ಹಾಕಿದ್ದರು. ಶಾಲೆಗಳಲ್ಲಿ ತಪಾಸಣೆ ನಡೆಸಿದ್ದ ಪೊಲೀಸರು, ಹುಸಿ ಸಂದೇಶವೆಂದು ಘೋಷಿಸಿದ್ದರು. ಆರು ಶಾಲೆಗಳ ಆಡಳಿತ ಮಂಡಳಿಯವರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡಿದ್ದರು.

ಇದೀಗ ಮತ್ತಷ್ಟು ಶಾಲೆಗಳ ಆಡಳಿತ ಮಂಡಳಿಯವರು ಪೊಲೀಸರನ್ನು ಸಂಪರ್ಕಿಸಿ ದೂರು ನೀಡುತ್ತಿದ್ದಾರೆ. ಎಲ್ಲ ದೂರುಗಳನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರ ವಿಶೇಷ ತಂಡ, ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿಸಿದೆ.

‘ಇದುವರೆಗೂ 22 ಶಾಲೆಗಳಿಗೆ ಬಾಂಬ್ ಬೆದರಿಕೆ ಬಂದಿರುವ ಮಾಹಿತಿ ಲಭ್ಯವಾಗಿದೆ. ಇದರಲ್ಲಿ, ಬಿಷಪ್ ಕಾಟನ್ ಶಾಲೆಯೂ ಇದೆ. ಎಲ್ಲ ಶಾಲೆಗಳಲ್ಲಿ ತಪಾಸಣೆ ನಡೆಸಲಾಗಿದ್ದು, ಯಾವುದೇ ಸ್ಫೋಟಕಗಳು ಪತ್ತೆಯಾಗಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಇಂಧನ ಕ್ಷಮತೆಯ ಸಾಧನೆಗಾಗಿ ಕೆಎಸ್‌ಆರ್‌ಟಿಸಿಗೆ ₹5 ಲಕ್ಷ ನಗದು ಸಹಿತ ಪ್ರಶಸ್ತಿ ಲಭಿಸಿದೆ. ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಸಂಸ್ಥೆ ಆಯೋಜಿಸಿದ್ದ ಇಂಧನ ಕ್ಷಮತಾ ಮಹೋತ್ಸವ ‘ಸಕ್ಷಮ್–2022’ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರಿಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಸಚಿವಾಲಯದ ಕಾರ್ಯದರ್ಶಿ ಪಂಕಜ್ ಜೈನ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಕೆಎಸ್‌ಆರ್‌ಟಿಸಿ ಮುಖ್ಯ ಯಾಂತ್ರಿಕ ಎಂಜಿನಿಯರ್ ಎಂ. ರಮೇಶ್ ಇದ್ದರು

ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಫಲಕ ತೆರವಿಗೆ ಆಕ್ಷೇಪ

ಫಲಕ ತೆರವು: ಬಿಎಸ್‌ಪಿ ಕಾಲ್ನಡಿಗೆ ಜಾಥಾ

ಪ್ರಜಾವಾಣಿ ವಾರ್ತೆ



ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಕಾರ್ಯಕರ್ತರು ನಗರದಲ್ಲಿ ಸೋಮವಾರ ಕಾಲ್ನಡಿಗೆ ಜಾಥಾ ನಡೆಸಿದರು

ಬೆಂಗಳೂರು: ‘ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕಾನ್ಶಿರಾಮ್ ನಗರದಲ್ಲಿ ಅಳವಡಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಕಾನ್ಶಿರಾಮ್ ಅವರ 9 ಫಲಕಗಳನ್ನು ನಿಯಮಬಾಹಿರವಾಗಿ ತೆರವು ಮಾಡಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು’ ಎಂದು ಆಗ್ರಹಿಸಿ ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಕಾರ್ಯಕರ್ತರು ನಗರದಲ್ಲಿ ಸೋಮವಾರ ಕಾಲ್ನಡಿಗೆ ಜಾಥಾ ನಡೆಸಿದರು.

ಎಂ.ಎಸ್.ಪಾಳ್ಯದಿಂದ ಲಕ್ಷ್ಮಿಪುರ ವೃತ್ತದವರೆಗೆ ಜಾಥಾ ಸಾಗಿತು. ಕಾನ್ಶಿರಾಮ್ ನಗರ, ಲಕ್ಷ್ಮಿಪುರ, ವಡೇರಹಳ್ಳಿ, ಗುಣಿ ಅಗ್ರಹಾರ, ವಿಶ್ವನಾಥ್ ನಗರ, ಬೆಸ್ಟ್ ಕೌಂಟಿ ಹಾಗೂ ಸುತ್ತಮುತ್ತ ಪ್ರದೇಶಗಳ ನಿವಾಸಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

‘ಫಲಕ ತೆರವು ಮಾಡಿದವರನ್ನು ಗಡಿಪಾರು ಮಾಡಿ’, ‘ಮೂಲ ಸೌಕರ್ಯ ಕಲ್ಪಿಸಿ’ ಸೇರಿದಂತೆ ಹಲವು ಘೋಷಣಾ ಫಲಕಗಳನ್ನು ಪ್ರತಿಭಟನಕಾರರು ಪ್ರದರ್ಶಿಸಿದರು.

‘ಕಾನ್ಶಿರಾಮ್ ನಗರ ಬಿಬಿಎಂಪಿ ವ್ಯಾಪ್ತಿಯಲ್ಲಿದೆ. ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್, ವಡೇರಹಳ್ಳಿ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯ, ಪಿಡಿಒ ಹಾಗೂ ಇತರರು ಸೇರಿಕೊಂಡು ಫಲಕ ತೆರವು ಮಾಡಿದ್ದಾರೆ. ಅದೇ ಜಾಗವನ್ನು ಅಕ್ರಮವಾಗಿ ಬೇರೆ ಫಲಕಗಳನ್ನು ನಿಲ್ಲಿಸಿದ್ದಾರೆ’ ಎಂದು ಪ್ರತಿಭಟನಕಾರರು ದೂರಿದರು.

ಮೂಲ ಸೌಕರ್ಯ ಕಲ್ಪಿಸಲು ಆಗ್ರಹ: ‘ಕಾನ್ಶಿರಾಮ್ ನಗರ, ಲಕ್ಷ್ಮಿಪುರ, ವಡೇರಹಳ್ಳಿ, ಗುಣಿ ಅಗ್ರಹಾರ, ವಿಶ್ವನಾಥ್ ನಗರ, ಬೆಸ್ಟ್ ಕೌಂಟಿ ಪ್ರದೇಶಗಳಲ್ಲಿ ಮೂಲ ಸೌಕರ್ಯ ಕಲ್ಪಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ರಸ್ತೆ ಡಾಂಬರೀಕರಣ ಹಾಗೂ ಬೀದಿ ದೀಪ ವ್ಯವಸ್ಥೆ ಮಾಡಬೇಕು. ಕಾವೇರಿ ಕುಡಿಯುವ ನೀರಿನ ಸಂಪರ್ಕ ನೀಡಬೇಕು. ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕು’ ಎಂದೂ ಆಗ್ರಹಿಸಿದರು.

ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಹಾಗೂ ಇತರರು ಪ್ರತಿಭಟನೆಯಲ್ಲಿದ್ದರು.

‘ಆಲಿಸುವ’ ಕಲೆ– ಕಾರ್ಯಾಗಾರ



ಪ್ರಯೋಗ ನಡೆಸುತ್ತಿರುವ ವಿದ್ಯಾರ್ಥಿಗಳು

ಬೆಂಗಳೂರು: ದಿ ಇಂಡಿಯನ್ ಸೋನಿಕ್ ರೀಸರ್ಚ್ ಆರ್ಗನೈಸೇಷನ್ ‘ಆಲಿಸುವ ಕಲೆ’ ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿತ್ತು.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಶನಿವಾರ ನಡೆದ ಈ ಕಾರ್ಯಾಗಾರದಲ್ಲಿ 12 ವರ್ಷಕ್ಕೆ ಮೇಲ್ಪಟ್ಟ 17 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸುತ್ತಮುತ್ತಲಿನ ಪರಿಸರದ ಧ್ವನಿಯನ್ನು ಆಲಿಸುವ ಕುರಿತು ಅರಿವನ್ನು ಹೆಚ್ಚಿಸಲು ಬಳಸಬಹುದಾದ ತಂತ್ರಗಳ ಬಗ್ಗೆ ಚರ್ಚಿಸಲಾಯಿತು. ಅದರಲ್ಲೂ ಆಳವಾದ ಅಥವಾ ಗಾಢವಾದ ಆಲಿಸುವಿಕೆ ಬಗ್ಗೆಯೂ ಮಾಹಿತಿ ನೀಡಲಾಯಿತು.

ಕಾರ್ಯಾಗಾರದಲ್ಲಿ ಪ್ರಯೋಗಗಳಿಗೆ ಹೆಚ್ಚಿನ ಒತ್ತು ನೀಡಲಾಯಿತು. ವಿಶೇಷವಾಗಿ ಕ್ಷೇತ್ರ ಧ್ವನಿಮುದ್ರಿಕೆ, ಮೈಕ್ರೊಫೋನ್, ಸೌಂಡ್ ರೆಕಾರ್ಡರ್, ಡಿಜಿಟಲ್ ಆಡಿಯೊ ವರ್ಕ್ ಸ್ಟೇಷನ್‌ಗಳ ಬಳಕೆಯನ್ನು ಪರಿಚಯಿಸಲಾಯಿತು. ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯ ಭಾಗ ಮತ್ತು ಆಡಿಯೊ ತುಣುಕುಗಳನ್ನು ಜೋಡಣೆ ಮಾಡುವುದನ್ನು ಪರಿಚಯಿಸಲಾಯಿತು.

ಇಂಡಿಯನ್ ಸೋನಿಕ್ ರೀಸರ್ಚ್ ಆರ್ಗನೈಸೇಷನ್ ಬೆಂಗಳೂರು ಮೂಲದ ಶಬ್ದ ಸಂಶೋಧನಾ ಪ್ರಯೋಗಾಲಯ. ಇದು ವಿಶೇಷವಾಗಿ ಶಬ್ದ ಮತ್ತು ಪ್ರಯೋಗಾತ್ಮಕ ಸಂಗೀತದ ಪ್ರಸಾರಕ್ಕಾಗಿಯೇ ಮೀಸಲಾದ ಸಂಸ್ಥೆ.

ರೈಲು ಡಿಕ್ಕಿ: ಐವರು ಪ್ರಯಾಣಿಕರ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಬಟುವಾ ಗ್ರಾಮದ ಬಳಿ ಕೊನಾರ್ಕ್ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದು ಐವರು ಪ್ರಯಾಣಿಕರು ಮೃತಪಟ್ಟಿರುವ ಘಟನೆ ಸೋಮವಾರ ಸಂಜೆ ನಡೆದಿದೆ.

ಸಂತ್ರಸ್ತರು ರೈಲಿನಿಂದ ಇಳಿದು ಹಳಿ ದಾಟುವಾಗ ವೇಗವಾಗಿ ಬಂದ ಭುವನೇಶ್ವರ–ಮುಂಬೈ ಕೊನಾರ್ಕ್ ರೈಲು ಡಿಕ್ಕಿ ಹೊಡೆಯಿತು ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದರು.

ವಿಶಾಖಪಟ್ಟಣ-ಪಲಾಸ ಮುಖ್ಯ ಮಾರ್ಗದ ಮಧ್ಯಭಾಗದಲ್ಲಿ ಘಟನೆ ನಡೆದಿದೆ. ಐವರು ಪ್ರಯಾಣಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯ ಗೊಂಡ ಒಬ್ಬ ವ್ಯಕ್ತಿಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರು ಮೃತರಿಗೆ ಸಂತಾಪ ಸೂಚಿಸಿದ್ದಾರೆ.

ಸಾಲು ರಜೆಗೆ 300 ವಿಶೇಷ ಬಸ್

ಬೆಂಗಳೂರು: ವಾರಾಂತ್ಯ ರಜೆ ಮತ್ತು ಹಬ್ಬಗಳ ಪ್ರಯುಕ್ತ ಬೆಂಗಳೂರಿನಿಂದ ಹೊರ ಊರಿಗೆ ಹೋಗುವ ಪ್ರಯಾಣಿಕರ ಅನುಕೂಲಕ್ಕಾಗಿ 300 ವಿಶೇಷ ಬಸ್‌ಗಳ ವ್ಯವಸ್ಥೆಯನ್ನು ಕೆಎಸ್‌ಆರ್‌ಟಿಸಿ ಮಾಡಿದೆ.

ವಿಷು ಮತ್ತು ಈಸ್ಟರ್ ಹಬ್ಬದ ಅಂಗವಾಗಿ ಏ.13ಕ್ಕೆ ರಾಜ್ಯ ಮತ್ತು ಹೊರ ರಾಜ್ಯ ಗಳಿಗೆ ವಿಶೇಷ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ. ಕೇರಳದ ಕಣ್ಣೂರು, ತಿರುವನಂತಪುರ, ಪಾಲಕ್ಕಾಡ್, ತ್ರಿಶೂರು, ಎರ್ನಾಕುಲಂ, ಕೋಯಿಕೋಡ್, ಕಾಸರಗೋಡು, ಕೊಟ್ಟಾಯಂನಿಂದ ವಿಶೇಷ ಬಸ್‌ಗಳು ಏ.17ರಂದು ಬೆಂಗಳೂರಿಗೆ ಕಾರ್ಯಾಚರಣೆ ಮಾಡಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆ: ವೈದ್ಯರ ಕೊರತೆಯಿಂದ ಬಸವಳಿದ ರೋಗಿಗಳು

ಕಾಯುವಿಕೆಯಲ್ಲೇ ಕರಗುವ ಸಮಯ

• ಸುಕೃತ ಎಸ್.

800-1000 ಕೆ.ಸಿ.ಜನರಲ್ ಆಸ್ಪತ್ರೆಗೆ ನಿತ್ಯ ಬರುವ ಹೊರರೋಗಿಗಳ ಸರಾಸರಿ ಸಂಖ್ಯೆ | **453** ಆಸ್ಪತ್ರೆಯಲ್ಲಿರುವ ಹಾಸಿಗೆಗಳು | **100** ಐಸಿಯು ಹಾಸಿಗೆ | **52** ಆಸ್ಪತ್ರೆಯಲ್ಲಿರುವ ವೈದ್ಯರು | **92** ಶುಶ್ರೂಷಕಿಯರು | **30** ಡಿ ಗುಂಪಿನ ನೌಕರರು

ಬೆಂಗಳೂರು: ತಿಂಗಳು ತುಂಬಿದ ಬಸುರಿ, ಪುಟ್ಟ ಕಂದಮ್ಮಗಳನ್ನು ಮಡಿಲಲ್ಲಿ ಹೊತ್ತ ತಾಯಂದಿರು, ಸುಡು ಮಧ್ಯಾಹ್ನದ ಹೊತ್ತು ಬಾಗಿಲು ಮುಚ್ಚಿದ ಆಸ್ಪತ್ರೆಯ ಮುಂದೆ ಕಾದು ಕುಳಿತಿದ್ದರು. ವೈದ್ಯರು ಊಟ ಮುಗಿಸಿ ಬರುವುದಕ್ಕೆ ಇನ್ನೆಷ್ಟು ಹೊತ್ತು ಕಾಯಬೇಕೇನೋ ಎನ್ನುವ ಚಿಂತೆ ಅವರನ್ನು ಆವರಿಸಿತ್ತು.

ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯ ಸ್ತ್ರೀ ರೋಗ ಮತ್ತು ಹೊರ ರೋಗಿಗಳ ವಿಭಾಗದಲ್ಲಿ ಸೋಮವಾರ ಮಧ್ಯಾಹ್ನ ಕಂಡ ದೃಶ್ಯವಿದು.

‘ಊಟದ ಸಮಯ ಅಂತ ನನ್ನನ್ನು ಹೊರಗೆ ಕಳುಹಿಸಿ ಬಾಗಿಲಿಗೆ ಬೀಗ ಹಾಕಿಬಿಟ್ಟರು. ನನ್ನ ಮಗಳು ಒಳಗೆ ಇದ್ದಾಳೆ. ಅವರಿಗೆ ಬೇಕಾದವರಿಗೆ ಬಾಗಿಲು ತೆರೆದು ಒಳಗೆ ಕರೆದುಕೊಳ್ಳುತ್ತಾರೆ ಅಷ್ಟೇ’ ಎಂದು ಈ ವಿಭಾಗದ ಮೊಗಸಾಲೆಯಲ್ಲಿ ನೆಲದ ಮೇಲೆ ಕುಳಿತಿದ್ದ 60 ವರ್ಷದ ಮಹಿಳೆ ಬೇಸರಿಸಿದರು.

‘ನನ್ನ ನಾದಿನಿ ಒಳಗೆ ಇದ್ದಾಳೆ. ಬೆಳಿಗ್ಗೆ 10 ಗಂಟೆಗೆ ಬಂದಿದ್ದು. ಮಧ್ಯಾಹ್ನ ಆಯಿತು. ಆ ಪರೀಕ್ಷೆ, ಈ ಪರೀಕ್ಷೆ ಅಂತ ಮಾಡಿಸುತ್ತಿದ್ದಾರೆ. ಬೆಳಿಗ್ಗೆ ತಿಂಡಿನೂ ಮಾಡಿಲ್ಲ. ಊಟ ಮಾಡೋಕೆ ಹತ್ತಿರದಲ್ಲಿ ಏನೂ ಇಲ್ಲ. ಈಗ ನೋಡಿ, ರಕ್ತ ಪರೀಕ್ಷೆಗೆ ಚೀಟಿ ಕೊಟ್ಟಿದ್ದಾರೆ’ ಎಂದು ಮಹಿಳೆಯೊಬ್ಬರು ಪರೀಕ್ಷೆ ಕೇಂದ್ರದ ಕಡೆ ನಡೆದರು.

ವೈದ್ಯರು ಸಿಗುವ ನಂಬಿಕೆ ಇಲ್ಲ: ‘ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಊಟದ ಸಮಯ ಅಂತ ಬೀಗ ಹಾಕಿಬಿಡುತ್ತಾರೆ. ನಂತರ 3 ಅಥವಾ 3.30 ಆಗಬಹುದು. 4.30ಕ್ಕೆ ಸರಿಯಾಗಿ ಸಮಯ ಮುಗಿಯಿತು ಅಂತ ಮತ್ತೆ ಬಾಗಿಲು ಹಾಕಿಬಿಡುತ್ತಾರೆ. ಬೆಳಿಗ್ಗೆಯೇ ಬಂದರೂ ವೈದ್ಯರು ಸಿಗುತ್ತಾರೆ ಎನ್ನುವ ನಂಬಿಕೆ ಇಲ್ಲ’ ಎಂದು ಮತ್ತೊಬ್ಬ ಮಹಿಳೆ ದೂರಿದರು.

ಹೊರರೋಗಿಗಳ ವಿಭಾಗದಲ್ಲಿ ಸುಮಾರು 70 ವರ್ಷದ ವೃದ್ಧರೊಬ್ಬರು ಸ್ಟ್ರೆಚರ್ ಮೇಲೆ ಮಲಗಿದ್ದರು. ವೈದ್ಯರಿಗಾಗಿ ಬೆಳಿಗ್ಗೆ 11 ಗಂಟೆಯಿಂದ ಕಾಯುತ್ತಿದ್ದಾರೆ ಎಂದು ಅವರ ಮಗ ಹೇಳಿದರು. ‘ಬೆಳಿಗ್ಗೆ 10 ಗಂಟೆಗೆ ಬರುವುದಕ್ಕೆ ಹೇಳಿದ್ದರು. ಸರ್ಕಾರಿ ಆಸ್ಪತ್ರೆ, ಹೇಗೂ ತಡವಾಗುತ್ತದೆ ಎಂದು 11ಕ್ಕೆ ಬಂದೆವು. ವೈದ್ಯರು ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾರೆ ಎಂದು ಹೇಳಿದರು. ಈಗ ಮಧ್ಯಾಹ್ನ 1.30 ಆಗಿದೆ. ಈವರೆಗೂ ವೈದ್ಯರ ಸುಳಿವಿಲ್ಲ. ಕೇಳಿದ್ದಕ್ಕೆ ‘ಈಗ ಊಟದ ಸಮಯ, ನಂತರ ಸಿಗುತ್ತಾರೆ’ ಎಂದರು. ಅದು 3 ಆಗುತ್ತದೋ 4 ಆಗುತ್ತದೋ ಗೊತ್ತಿಲ್ಲ’ ಎಂದರು.

ಇದೇ ವಿಭಾಗದಲ್ಲಿ ಚೀಟಿ ಕೊಡುವ ಕೊಠಡಿಯ ಮುಂದೆ ಉದ್ದದ ಸಾಲು ನಿರ್ಮಾಣವಾಗಿತ್ತು. ‘ಊಟದ ಸಮಯ ಎಂದು ಎಲ್ಲರೂ ಹೋಗಿಬಿಟ್ಟಿದ್ದಾರೆ. ಎಷ್ಟು ಹೊತ್ತಿಗೆ ಬರುತ್ತಾರೆ ಗೊತ್ತಿಲ್ಲ. ಕಚೇರಿ ಸಮಯದ ಮಾಹಿತಿ ನಿಡುವ ನಾಮಫಲಕವನ್ನೂ ಹಾಕಿಲ್ಲ’ ಎಂದು ರಮೇಶ್ ಎನ್ನುವವರು ಆಕ್ರೋಶ ವ್ಯಕ್ತಪಡಿಸಿದರು.

ಪರೀಕ್ಷೆ-ನಿರೀಕ್ಷೆ: ಉತ್ತರಹಳ್ಳಿಯಿಂದ ಕಣ್ಣಿನ ಪೊರೆ ಚಿಕಿತ್ಸೆಗಾಗಿ ದಂಪತಿ ಬಂದಿದ್ದರು. ‘2-3 ತಿಂಗಳಿಂದ ಆಸ್ಪತ್ರೆಗೆ ಬರುತ್ತಿದ್ದೇವೆ... ನಾಳೆಗೆ ಶಸ್ತ್ರಚಿಕಿತ್ಸೆಗೆ ದಿನಾಂಕ ಕೊಟ್ಟಿದ್ದಾರೆ. ಚಿಕಿತ್ಸೆಗಾಗಿ ಹಲವು ಪರೀಕ್ಷೆಗಳನ್ನು ಬರೆದುಕೊಟ್ಟಿದ್ದರು. ಒಂದೊಂದು ಪರೀಕ್ಷೆಗೆ ಒಂದೊಂದು ದಿನ. ಬೆಳಿಗ್ಗೆ ಪರೀಕ್ಷೆಗೆ ಕೊಟ್ಟರೆ ಮಧ್ಯಾಹ್ನ 3.30ರ ಹೊತ್ತಿಗೆ ವರದಿ ನೀಡುತ್ತಿದ್ದರು. ಸಂಜೆ 4.30ಕ್ಕೆ ಆಸ್ಪತ್ರೆಯ ಅವಧಿ ಮುಗಿಯುತ್ತದೆ. ವರದಿ ತೋರಿಸಲು ವೈದ್ಯರು ಸಿಗಲಿಲ್ಲ ಎಂದಾದರೆ, ಮರುದಿನ ಮತ್ತೊಮ್ಮೆ ಬರಬೇಕು. ಅಂತೂ ನಾಳೆಗೆ ದಿನಾಂಕ ಗೊತ್ತಾಗಿದೆ’ ಎಂದರು.

ವೈದ್ಯರ ಕೊರತೆ: ‘ಕೋವಿಡ್ ನಂತರ ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಕೋವಿಡ್ ಕಾಲದಲ್ಲಿ ಗುತ್ತಿಗೆ ಆಧಾರದಲ್ಲಿ ಇದ್ದ ವೈದ್ಯರನ್ನು ಕೈಬಿಡಲಾಗಿದೆ. ಸದ್ಯ ಮೆಡಿಕಲ್ ವಿಭಾಗದಲ್ಲಿ ವೈದ್ಯರ ಕೊರತೆ ಇದೆ. ಗ್ರೂಪ್ ಡಿ ನೌಕರರ ಕೊರತೆಯೂ ಇದೆ. ವೈದ್ಯರ ನೇಮಕದ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎನ್ನುತ್ತಾರೆ ಆಸ್ಪತ್ರೆಯ ಆರೋಗ್ಯ ಅಧೀಕ್ಷಕ ಡಾ. ವೆಂಕಟೇಶಯ್ಯ.

‘ನಿಯಮದ ಪ್ರಕಾರ, ಮಧ್ಯಾಹ್ನ ಊಟದ ಸಮಯವು 1ರಿಂದ 1.45 ಇದೆ. ಆ ಸಮಯವನ್ನು ಮೀರಿ ವೈದ್ಯರು ಅಲಭ್ಯರಾಗಿರುವ ಬಗ್ಗೆ ಮಾಹಿತಿ ಪಡೆಯಲಾಗುವುದು’ ಎಂದರು.



ಸ್ತ್ರೀ ರೋಗ ಮತ್ತು ಹೊರರೋಗಿಗಳ ವಿಭಾಗದ ಬೀಗ ಹಾಕಿರುವ ಬಾಗಿಲ ಮುಂದೆ ಕಾಯುತ್ತಿರುವ ರೋಗಿಗಳು



ಡಾಕ್ಟರ್‌ಗಾಗಿ ಕಾಯುತ್ತಿರುವ ರೋಗಿಗಳು —ಪ್ರಜಾವಾಣಿ ಚಿತ್ರಗಳು

ಸರ್ಕಾರಿ ಆಸ್ಪತ್ರೆ ಹೀಗಿದೆ ವ್ಯವಸ್ಥೆ 6

ಸಿಬ್ಬಂದಿ, ರೋಗಿ ಸಂಬಂಧಿ ಜಗಳ

ಹೊರರೋಗಿಗಳ ವಿಭಾಗದಲ್ಲಿ ರೋಗಿಗಳ ಸಂಬಂಧಿಕರಿಗೂ, ಆಸ್ಪತ್ರೆ ಸಿಬ್ಬಂದಿಗೂ ಜಗಳ ನಡೆಯಿತು. ‘ನಾವು ಬೆಳಿಗ್ಗೆಯೇ ಬಂದಿದ್ದೇವೆ. ಅಣ್ಣನನ್ನು ಗಾಲಿಕುರ್ಚಿಯಲ್ಲಿ ಕೂರಿಸಿದ್ದೀರಿ ಅಷ್ಟೆ. ಆಮೇಲಿಂದ ಯಾರ ಈ ಕಡೆ ಸುಳಿದೂ ಇಲ್ಲ’ ಎಂದು ರೋಗಿಯೊಬ್ಬರು ಸಂಬಂಧಿಕರು ಸಿಟ್ಟು ಹೊರಹಾಕಿದರು.

ಇದಾಗುತ್ತಿದ್ದಂತೆಯೇ ಆಸ್ಪತ್ರೆ ಸಿಬ್ಬಂದಿ ಬಂದು ರೋಗಿಯನ್ನು ಗಾಲಿಕುರ್ಚಿಯಲ್ಲಿ ತಳ್ಳಿಕೊಂಡು ಹೊರಟರು. ಆದರೆ, ಹೋಗುತ್ತಿದ್ದಂತೆಯೇ ಕುರ್ಚಿಯ ಗಾಲಿ ಮುರಿಯಿತು. ಗಾಲಿಕುರ್ಚಿಯನ್ನು ಅಲ್ಲೇ ಗೋಡೆಯ ಬದಿ ದೂಡಿದ ಸಿಬ್ಬಂದಿ ಸ್ಟ್ರೇಚರ್‌ನಲ್ಲಿ ರೋಗಿಯನ್ನು ಕರೆದೊಯ್ದರು.

ಸ್ಕ್ಯಾನಿಂಗ್ ವರದಿಗೆ ₹50 ನೀಡಬೇಕು

‘ಅಂಗವಿಕಲರೊಬ್ಬರಿಗೆ ರೈಲು ಪಾಸ್‌ಗಾಗಿ ಪ್ರಮಾಣಪತ್ರ ನೀಡಲು ಆಸ್ಪತ್ರೆಯ ಮೂಳೆ ತಜ್ಞರು ಏಳು ದಿನ ಸತಾಯಿಸಿದ್ದರು. ನಂತರದಲ್ಲಿ ಸಹಿ ಮಾಡಿಕೊಟ್ಟರೂ ರೈಲ್ವೆ ಇಲಾಖೆಯು ಪ್ರಮಾಣಪತ್ರ ಸರಿ ಇಲ್ಲ ಎಂದು ಪಾಸ್ ನೀಡಲು ನಿರಾಕರಿಸಿದರು. ಸ್ಕ್ಯಾನಿಂಗ್ ಮಾಡಿಸಿದ ವರದಿ ನೀಡಲು ಸಿಬ್ಬಂದಿ ₹50 ಕೇಳಿದರು’ ಎಂದು ನಗರದ ಚಂದನ್ ಶೆಟ್ಟಿ ಆರೋಪಿಸಿದರು.

ಆಸ್ಪತ್ರೆ ಅವ್ಯವಸ್ಥೆ

ಆಸ್ಪತ್ರೆ ಆವರಣ ಹೊಕ್ಕರೆ ರೋಗಿಗಳು, ಅವರ ಜತೆ ಬಂದವರು ನೆಲದ ಮೇಲೆಯೇ ಅಲ್ಲಲ್ಲಿ ಮಲಗಿರುವ, ಕುಳಿತಿರುವ ದೃಶ್ಯಗಳು ಸಾಮಾನ್ಯ. ಸ್ಟ್ರೆಚರ್ ಮೇಲೆ ಕುಳಿತವರು, ಮಲಗಿದವರೂ ಕಾಣ ಸಿಗುತ್ತಾರೆ. ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರ ಜತೆಗಿರುವವರು ಕುಳಿತುಕೊಳ್ಳಲು ಬೇಕಾಗುವಷ್ಟು ಆಸನಗಳೂ ಇಲ್ಲಿಲ್ಲ. ಆಸ್ಪತ್ರೆ ಸಿಬ್ಬಂದಿಗಾಗಿ ಇವರು ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಹೀಗೆ ಕಾದು ಸುಸ್ತಾದವರು ನೆಲದ ಮೇಲೆಯೇ ಕುಳಿತುಕೊಂಡದ್ದು ಅಥವಾ ಅಲ್ಲಿಯೇ ಒರಗಿಕೊಂಡದ್ದು ಎಲ್ಲೆಡೆಯೂ ಕಾಣಿಸುತ್ತದೆ.

ಕಾಲು ಮುರಿದ ವೃದ್ಧರೊಬ್ಬರನ್ನು ಸಂಬಂಧಿಕರೇ ಎತ್ತಿಕೊಂಡು ಹೋಗುತ್ತಿದ್ದ ದೃಶ್ಯ ಸೋಮವಾರ ಕಾಣಿಸಿತು. ಅಗತ್ಯ ಸೌಲಭ್ಯಗಳು ಇಲ್ಲದೆ ರೋಗಿಗಳು ಕಷ್ಟ ಅನುಭವಿಸುವ ವಿವಿಧ ದೃಶ್ಯಗಳು ಆಸ್ಪತ್ರೆಯಲ್ಲಿ ಕಾಣಿಸುತ್ತವೆ.

ವಾರ್ಡ್‌ಗಳಲ್ಲಿನ ಶೌಚಾಲಯದ ಸ್ಥಿತಿ ಚೆನ್ನಾಗಿಲ್ಲ. ಶೌಚಾಲಯದಿಂದ ಬರುವ ಕೆಟ್ಟ ವಾಸನೆ ವಾರ್ಡ್‌ಗಳ ಒಳಗೆ ಹೋಗುವ ಮೊದಲೇ ಮೂಗಿಗೆ ಬಡಿಯುತ್ತದೆ. ಹೊರರೋಗಿ ವಿಭಾಗದ ಬಳಿ ಕಟ್ಟಡವೊಂದನ್ನು ಕೆಡವಲಾಗಿದೆ. ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಈ ಜಾಗಕ್ಕೆ ಬಂದೋಬಸ್ತ್ ಇಲ್ಲ. ಹಾಗಾಗಿ, ರೋಗಿಗಳು, ಅವರ ಸಂಬಂಧಿಕರಿಗೆ ಕಾಮಗಾರಿಯಿಂದ ಅಪಾಯ ಉಂಟಾಗಬಹುದು.

‘ಆಸ್ಪತ್ರೆಯ ಆವರಣದಲ್ಲಿ ಹೆಚ್ಚು ಮರಗಳು ಇಲ್ಲ. ಬಿಸಿಲಿನಲ್ಲೇ ಕಳಿತು ಊಟ ಮಾಡುವ ಸ್ಥಿತಿ ಇದೆ. ಅಲ್ಲಲ್ಲಿ ಬೆಂಚುಗಳನ್ನು ಹಾಕಿದ್ದಾರೆ. ಸುಸ್ತಾದರೆ ಅಲ್ಲೇ ಮಲಗಬೇಕು ಅಷ್ಟೆ’ ಎಂದು ರೋಗಿಯ ಸಂಬಂಧಿಕರೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ದೇವೇಗೌಡರಿಗೆ ಜಯಮಂಗಲಿ ಪ್ರಶಸ್ತಿ

ತುಮಕೂರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ 2021ನೇ ಸಾಲಿನ ಜಯಮಂಗಲಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಜಯಮಂಗಲಿ ಪ್ರಕಾಶನದಿಂದ ಪ್ರತಿವರ್ಷ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಸೇವೆಯಲ್ಲಿ ಗುರುತಿಸಿಕೊಂಡವರಿಗೆ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಲೇಖಕ ಎಂ.ಎಚ್. ನಾಗರಾಜು, ಬಿ. ಮರುಳಯ್ಯ, ಒಕ್ಕಲಿಗರ ಸಂಘದ ನಿರ್ದೇಶಕ ಆರ್. ಹನುಮಂತರಾಯಪ್ಪ, ಕವಿ ದುಗ್ಗೇನಹಳ್ಳಿ ಸಿದ್ದೇಶ ಅವರನ್ನು ಒಳಗೊಂಡ ಆಯ್ಕೆ ಸಮಿತಿಯು ಎಚ್.ಡಿ. ದೇವೇಗೌಡ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ.



ದೇವೇಗೌಡ ಅವರ ಜೀವಮಾನದ ರಾಜಕೀಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಕಾಶನದ ಮೊದಲ ಪ್ರಶಸ್ತಿಯಾಗಿದ್ದು, ಪ್ರಶಸ್ತಿ ವಿತರಿಸುವ ಕೆಲಸ ಹೀಗೆ ಮುಂದುವರಿಯಲಿದೆ ಎಂದು ಕವಿ ದುಗ್ಗೇನಹಳ್ಳಿ ಸಿದ್ದೇಶ ತಿಳಿಸಿದ್ದಾರೆ.

ಜೋಶಿ, ಸುಧಾಕರ್ ಕನ್ನಡ ದ್ರೋಹಿಗಳು: ಕುಮಾರಸ್ವಾಮಿ

ಬೆಂಗಳೂರು: ‘ಹಿಂದಿ ಹೇರಿಕೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ರಾಜ್ಯದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕನ್ನಡ ದ್ರೋಹಿಗಳು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಅಮಿತ್ ಶಾ ಹೇಳಿಕೆ ವಿರೋಧಿಸಿ ಹೋರಾಟ ಹಮ್ಮಿಕೊಳ್ಳುವ ಕುರಿತು ಕನ್ನಡ ಪರ ಸಂಘಟನೆಗಳು ಸೋಮವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಹಿಂದಿನ 75 ವರ್ಷಗಳಲ್ಲಿ ಭಾರತದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಆಗಿರಲಿಲ್ಲ. ಈಗ ಅದನ್ನು ಹಾಳುಮಾಡುವ ಕೆಲಸ ನಡೆಯುತ್ತಿದೆ. ಆರ್‌ಎಸ್‌ಎಸ್‌ನ ಗುಪ್ತ ಕಾರ್ಯಸೂಚಿಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಯತ್ನ ಆರಂಭಿಸಿದೆ. ಹಿಂದಿ ಹೇರಿಕೆ ಕೂಡ ಅದರ ಭಾಗವೇ ಆಗಿದೆ. ಈ ನಿಲುವನ್ನು ರಾಜ್ಯದ ಬಿಜೆಪಿ ನಾಯಕರು ಮತ್ತು ಸಚಿವರು ಸಮರ್ಥಿಸಿಕೊಳ್ಳುತ್ತಿರುವುದು ಸರಿಯಲ್ಲ’ ಎಂದರು.

ಭಾಷೆ, ನದಿ ನೀರಿನ ವಿಚಾರದಲ್ಲಿ ಕರ್ನಾಟಕ ಹಾಗೂ ಕನ್ನಡಿಗರನ್ನು ಕೇಂದ್ರ ಸರ್ಕಾರ ಲಘುವಾಗಿ ಪರಿಗಣಿಸುತ್ತಿದೆ. ರಾಜ್ಯದ ಜನರು ಈಗಲೇ ಎಚ್ಚೆತ್ತುಕೊಳ್ಳಬೇಕಾಗಿದೆ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು, ಇಲ್ಲಿನ ಸಚಿವರು ಕೇಂದ್ರ ಸರ್ಕಾರದ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಕನ್ನಡ ಕುರಿತು ಅವರ ನಿಲುವೇನು? ಅವರಿಗೆ ಹಿಂದಿಯ ಮೇಲೇಕೆ ಮೋಹ? ಕನ್ನಡದ ನಿರ್ಲಕ್ಷ್ಯ ಏಕೆ? ಇಂತಹ ನಾಯಕರನ್ನು ಕನ್ನಡ ದ್ರೋಹಿಗಳೆನ್ನದೆ ಬೇರೆ ಏನೆಂದು ಕರೆಯಬೇಕು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಖಾಸಗಿ ಕ್ಷೇತ್ರದಲ್ಲಿನ ಸ್ಪರ್ಧೆ ಎದುರಿಸಲು ಇಂಗ್ಲಿಷ್ ಭಾಷೆಯ ಬಳಕೆ ಅನಿವಾರ್ಯವಾಗಿದೆ. ಕನ್ನಡದ ಜ್ಞಾನದ ಜತೆಗೆ ಇಂಗ್ಲಿಷ್ ಕೂಡ ಬೇಕಾಗಿದೆ. ಆದರೆ, ಹಿಂದಿ ಹೇರಿಕೆ ಏಕೆ ಬೇಕಿದೆ ಎಂದು ಕೇಳಿದರು.

ರಾಡ್‌ನಿಂದ ಹೊಡೆದು ಪತಿ ಕೊಲೆ: ಪತ್ನಿ ಬಂಧನ

ಪ್ರಜಾವಾಣಿ ವಾರ್ತೆ



ಉಮೇಶ್



ವರಲಕ್ಷ್ಮಿ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆಯ ವ್ಯಾಪ್ತಿಯಲ್ಲಿ ಫೈನಾನ್ಸಿಯರ್ ಉಮೇಶ್ (52) ಕೊಲೆ ನಡೆದಿದ್ದು, ಈ ಸಂಬಂಧ ಪತ್ನಿ ವರಲಕ್ಷ್ಮಿ (48) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಅಂದ್ರಹಳ್ಳಿಯ ಸಾಯಿಬಾಬಾ ನಗರದ ನಿವಾಸಿ ಉಮೇಶ್, ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ಫೈನಾನ್ಸಿಯರ್ ಆಗಿದ್ದರು. ಸೋಮವಾರ ನಸುಕಿನಲ್ಲಿ ನಡೆದಿರುವ ಅವರ ಕೊಲೆ ಬಗ್ಗೆ ತಮ್ಮ ಜೆ.ಎಂ. ಸತೀಶ್ ದೂರು ನೀಡಿದ್ದಾರೆ. ಆರೋಪಿಯಾದ ಪತ್ನಿ ವರಲಕ್ಷ್ಮಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ದಂಪತಿ ನಡುವೆ ಜಗಳ: ‘ಉಮೇಶ್ ಅವರು ಸಂಬಂಧಿಯೂ ಆಗಿದ್ದ ವರಲಕ್ಷ್ಮಿಯನ್ನು 28 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಪ್ರಕಾಶನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದ ಕುಟುಂಬ, ಕೆಲ ತಿಂಗಳ ಹಿಂದಷ್ಟೇ ಅಂದ್ರಹಳ್ಳಿಯ ಸಾಯಿಬಾಬಾ ನಗರದಲ್ಲಿ ನಿರ್ಮಿಸಿದ್ದ ಸ್ವಂತ ಮನೆಗೆ ಸ್ಥಳಾಂತರವಾಗಿತ್ತು. ಮನೆ ನಿರ್ವಹಣೆ ಹಾಗೂ ಇತರೆ ವಿಚಾರಕ್ಕಾಗಿ ದಂಪತಿ ನಡುವೆ ನಿತ್ಯವೂ ಜಗಳವಾಗುತ್ತಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ.’

‘ಭಾನುವಾರ ತಡರಾತ್ರಿಯೂ ದಂಪತಿ ನಡುವೆ ಜಗಳ ಆಗಿತ್ತು. ಉಮೇಶ್ ಅವರು ವರಲಕ್ಷ್ಮಿಗೆ ಒದ್ದಿದ್ದರು. ಮಕ್ಕಳು ಜಗಳ ಬಿಡಿಸಿದ್ದರಿಂದ ದಂಪತಿ ಪ್ರತ್ಯೇಕ ಕೊಠಡಿಯಲ್ಲಿ ಮಲಗಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ಸೋಮವಾರ ನಸುಕಿನಲ್ಲಿ ಎಚ್ಚರಗೊಂಡಿದ್ದ ವರಲಕ್ಷ್ಮಿ, ಕಬ್ಬಿಣದ ರಾಡ್‌ನಿಂದ ಉಮೇಶ್ ತಲೆಗೆ ಹೊಡೆದಿದ್ದಳು. ತಲೆಗೆ ತೀವ್ರ ಗಾಯವಾಗಿ ರಕ್ತ ಸೋರುತ್ತಿತ್ತು. ಮಕ್ಕಳು ಎಚ್ಚರವಾಗುತ್ತಿದ್ದಂತೆ ಉಮೇಶ್ ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಳು. ತಪಾಸಣೆ ನಡೆಸಿದ್ದ ವೈದ್ಯರು, ಉಮೇಶ್ ಮೃತಪಟ್ಟಿರುವುದಾಗಿ ಹೇಳಿದರು’ ಎಂದೂ ವಿವರಿಸಿದರು.

‘ಅಪರಿಚಿತರು ಕೊಲೆ ಮಾಡಿರುವ ಮಾಹಿತಿ ಇತ್ತು. ತನಿಖೆ ಕೈಗೊಂಡಾಗ ವರಲಕ್ಷ್ಮಿಯೇ ಆರೋಪಿ ಎಂಬುದು ತಿಳಿಯಿತು. ‘ನಿತ್ಯವೂ ಜಗಳ ಮಾಡುತ್ತಿದ್ದ ಪತಿ, ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ. ಹೊಡೆಯುತ್ತಿದ್ದ. ಆತನ ವರ್ತನೆ ತಡೆಯಲಾರದೇ ಕೊಲೆ ಮಾಡಿದೆ’ ಎಂಬುದಾಗಿ ವರಲಕ್ಷ್ಮಿ ಹೇಳಿಕೆ ನೀಡಿದ್ದಾಳೆ’ ಎಂದೂ ಪೊಲೀಸರು ಹೇಳಿದರು.

ಐಪಿಎಲ್ ಬೆಟ್ಟಿಂಗ್: ₹ 2 ಲಕ್ಷ ಜಪ್ತಿ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುವವರ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಿಸಿಬಿ ಪೊಲೀಸರು, ಕಾಮಾಕ್ಷಿಪಾಳ್ಯದಲ್ಲಿ ಆರೋಪಿ ಶ್ರೀಧರ್ ಅವರನ್ನು ಬಂಧಿಸಿದ್ದಾರೆ.

‘ಶ್ರೀರಾಮನಗರ ಮುಖ್ಯರಸ್ತೆಯಲ್ಲಿ ಏಪ್ರಿಲ್ 9ರಂದು ಸುತ್ತಾಡುತ್ತಿದ್ದ ಆರೋಪಿ, ಕ್ರಿಕೆಟ್ ಪಂದ್ಯಗಳ ಸೋಲು-ಗೆಲುವಿನ ಲೆಕ್ಕಾಚಾರದಲ್ಲಿ ಹಣ ಕಟ್ಟಿಸಿಕೊಳ್ಳುತ್ತಿದ್ದ. ದಾಳಿ ಮಾಡಿ ಈತನನ್ನು ಬಂಧಿಸಲಾಗಿದೆ. ಈತನಿಂದ ₹ 2 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಚಿತ್ರಾವಳಿ



ರಾಮನವಮಿ ಅಂಗವಾಗಿ ನಿಸರ್ಗ ಬಡಾವಣೆಯ ಪುರಂದರ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಗಜಾನನ ಶರ್ಮ ಅವರು ಚೆಂಡೆ ಬಾರಿಸುವ ಮೂಲಕ ‘ನಿರ್ಮಾಣ್ ಯಕ್ಷ ಬಳಗ’ವನ್ನು ಉದ್ಘಾಟಿಸಿದರು. ಇದೇ ಕಾರ್ಯಕ್ರಮದಲ್ಲಿ ರವಿ ಐತೂಮನೆ ಅವರ ‘ಆಸೆಯೆಂಬ ಬಿಸಿಲುಗುದುರೆ’ ಪುಸ್ತಕ ಬಿಡುಗಡೆ ಮಾಡಲಾಯಿತು. ಯಕ್ಷಗಾನ ಕಲಾವಿದ ಶಿವಕುಮಾರ್ ಬೇಗಾರ್, ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ.ಲಕ್ಷ್ಮೀನಾರಾಯಣ್ ಇದ್ದಾರೆ.



ವಸಂತಪುರದಲ್ಲಿ ಐಕ್ಯ ಕ್ರಿಕೆಟರ್ಸ್ ಆಯೋಜಿಸಿದ್ದ ಜಿಲ್ಲಾ ಮಟ್ಟದ ಆರ್‌ಕೆ.ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕಾಂಗ್ರೆಸ್ ಮುಖಂಡ ಆರ್‌ಕೆ.ರಮೇಶ್ ಅವರು ವಿಜೇತ ‘ಬೈಟ್ ಸ್ಟಾರ್ಸ್’ ತಂಡಕ್ಕೆ ಟ್ರೋಫಿ ಮತ್ತು ನಗದು ವಿತರಿಸಿದರು. ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಕುಮಾರ್, ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ದೇವರಾಜ್, ಕಾಂಗ್ರೆಸ್ ಮುಖಂಡರಾದ ಕೆ.ಈಶ್ವರ್ ಸಮೀವುಲ್ಲಾ, ರಂಜಿತ್ ರಾಜು ಹಾಗೂ ಇತರರು ಇದ್ದಾರೆ.



ಅಕ್ಷಯ ಕೃಷ್ಣಮೂರ್ತಿ ಆತ್ಮೀಯ ಬಳಗ ಮತ್ತು ಜಾಂಬವ ಜಾಗೃತಿ ವೇದಿಕೆ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ‘ಅಕ್ಷಯ ಕೃಷ್ಣಮೂರ್ತಿ ಗೀತ ನುಡಿನಮನ’ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಆರ್‌ಬಿ.ತಿಮ್ಮಾಪುರ, ರಾಜ್ಯಸಭಾ ಸದಸ್ಯ ಎಲ್‌ಹನುಮಂತಯ್ಯ, ಕಾಂಗ್ರೆಸ್ ಮುಖಂಡ ಎಚ್‌.ಆಂಜನೇಯ ಅವರು ಅಕ್ಷಯ ಕೃಷ್ಣಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಹೈಕೋರ್ಟ್ ಕಟಕಟೆಯಲ್ಲಿ ಮುಂದುವರಿದ ಮುನಿರಾಜು ಗೌಡ ಸಾಕ್ಷಿ

ಕುಕ್ಕರ್ ಕೊಟ್ಟು ಅಣ್ಣಂಗೇ ಮತ ನೀಡಿ ಅಂದ್ರು...!

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌ಎಂಟಿ ಲೇಔಟ್‌ನ ಸಂದೇಶ್ ಎಂಬುವರ ಮನೆಗೆ ಹೋಗಿದ್ದ ಮುನಿರತ್ನ ಅವರ ಬೆಂಬಲಿಗರು, ವೋಟು ಕೇಳಲು ಅಣ್ಣ (ಮುನಿರತ್ನ) ಬಂದಿದ್ದಾರೆ. ಈ ಕುಕ್ಕರ್ ಇಟ್ಕೊಳ್ಳಿ ಮತ್ತು ಅಣ್ಣಂಗೇ ವೋಟು ಕೊಡಿ ಎಂದರು...’

‘ಮುನಿರತ್ನ ಅವರು 15ನೇ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಗೆಲುವು ಸಾಧಿಸುವಲ್ಲಿ ಹಲವಾರು ಚುನಾವಣಾ ಅಕ್ರಮಗಳನ್ನು ಎಸಗಿರುವ ಕಾರಣ ಅವರ ಅಂದಿನ ಆಯ್ಕೆಯನ್ನು ಜನತಾ ಪ್ರತಿನಿಧಿ ಕಾಯ್ದೆ-1951ರ ಕಲಂ 123ರ ಅನುಸಾರ ಅನೂರ್ಜಿತ ಎಂದು ಸಾರಬೇಕು’ ಎಂದು ಕೋರಿ ವಿಧಾನಪರಿಷತ್‌ನ ಬಿಜೆಪಿ ಸದಸ್ಯರೂ ಆಗಿರುವ ಪಿ.ಎಂ. ಮುನಿರಾಜು ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯ ಮೂರನೇ ದಿನದ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

ಈಗಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿರುವ ಮುನಿರತ್ನ ಅವರು 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅಂದು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಯಗೊಂಡಿದ್ದ ಪಿ.ಎಂ. ಮುನಿರಾಜು ಗೌಡ, ಹೈಕೋರ್ಟ್‌ನ ಕಟಕಟೆಯಲ್ಲಿ ನಿಂತು ಸಾಕ್ಷಿ ನುಡಿದರು.

ಅರ್ಜಿದಾರರ ಪರ ವಕೀಲರೂ ಆದ ಎಂ.ಶಿವಪ್ರಕಾಶ್ ಅವರ ಪ್ರಶ್ನೆಗಳಿಗೆ ಮುನಿರಾಜು ಗೌಡ ನಿಖರ ದಿನಾಂಕಗಳನ್ನು ಉಲ್ಲೇಖಿಸಿ ಅಂದಿನ ಘಟನೆಗಳನ್ನು ವಿವರಿಸಿದರು. ‘ಮುನಿರತ್ನ (ಮುನಿರತ್ನಂ ಸುಬ್ರಮಣ್ಯ ನಾಯ್ಡು) ಅವರು ತಮ್ಮ ಬೆಂಬಲಿಗರೊಂದಿಗೆ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮತದಾರರ ಮನೆಗಳಿಗೆ ಖುದ್ದಾಗಿ ತೆರಳಿ ಕುಕ್ಕರ್, ಸೀರೆ ಮತ್ತು ವಾಟರ್ ಕ್ಯಾನ್‌ಗಳನ್ನು ಹಂಚಿದರು’ ಎಂದರು.

ಇದಕ್ಕೆ ನ್ಯಾಯಪೀಠ, ‘ನೀವು ಕೆಲವು ದಿನಾಂಕಗಳನ್ನು ಇಷ್ಟೊಂದು ಕರಾರುವಕ್ಕಾಗಿ ಹೇಗೆ ಹೇಳುತ್ತಿದ್ದೀರಿ’ ಎಂದು ಪ್ರಶ್ನಿಸಿದಾಗ, ಮುನಿರಾಜುಗೌಡ, ‘ನನ್ನ ಜ್ಞಾಪಕಶಕ್ತಿಯ ಆಧಾರದಲ್ಲಿ ಇದನ್ನೆಲ್ಲಾ ಹೇಳುತ್ತಿದ್ದೇನೆ ಮತ್ತು ಹೇಳುವುದನ್ನು ಸಾಕ್ಷ್ಯದ ಮೂಲಕ ಗುರುತಿಸಲೂ ಶಕ್ತನಿದ್ದೇನೆ’ ಎಂದರು.

ಪ್ರತಿಯಾಗಿ ನ್ಯಾಯಪೀಠ, ‘ಮುನಿರತ್ನ ಕುಕ್ಕರ್, ಸೀರೆ ಹಂಚಿದ್ದರ ಬಗ್ಗೆ ನೀವು ಸಾಕ್ಷಿ ನುಡಿಯುತ್ತಿದ್ದೀರಿ. ಆದರೆ, ಇದಕ್ಕೆ ಏನು ಸಾಕ್ಷ್ಯ ಒದಗಿಸಿದ್ದೀರಿ’ ಎಂದು ಪ್ರಶ್ನಿಸಿತು. ಇದಕ್ಕೆ ಸ್ಪಷ್ಟನೆ ನೀಡಿದ ಶಿವಪ್ರಕಾಶ್, ‘ಸಾಕ್ಷ್ಯಗಳ ಪಟ್ಟಿ ನೀಡಿಕೆಯಲ್ಲಿ ಈ ಅಂಶ ಸೇರ್ಪಡೆಯಾಗಿಲ್ಲ’ ಎಂದು ಉತ್ತರಿಸಿದರು.

ಇದನ್ನು ಒಪ್ಪದ ನ್ಯಾಯಮೂರ್ತಿಗಳು, ‘ಇದೊಂದು ಅಪರಾಧಿಕ ಅರೆ ನ್ಯಾಯಿಕ ವಿಚಾರಣೆ. ಇಂತಹ ವಿಚಾರಣೆಯಲ್ಲಿ ಸಾಕ್ಷ್ಯ ಕಾಯ್ದೆಯ ಅನ್ವಯವೇ ನೀವು ನಡೆದುಕೊಳ್ಳಬೇಕು. ಸಾಕ್ಷಿ ನುಡಿಯುತ್ತಿರುವ ಸಾಮಗ್ರಿಗಳ ಪಟ್ಟಿ ಮತ್ತು ದಾಖಲೆಗಳನ್ನು ನ್ಯಾಯಪೀಠಕ್ಕೆ ಒದಗಿಸಬೇಕು’ ಎಂದು ತಾಕೀತು ಮಾಡಿದರು.

ಬೇಕಾದ ಅಧಿಕಾರಿಗಳಿದ್ದರು: ‘ಚುನಾವಣಾ ಅಧಿಸೂಚನೆ ಹೊರಡಿಸಲಾದ 2018ರ ಮಾರ್ಚ್ 27ಕ್ಕೂ ಮುನ್ನವೇ ಮುನಿರತ್ನ ಅವರು ರಾಜರಾಜೇಶ್ವರಿ ನಗರ ಕ್ಷೇತ್ರದ ಒಂಬತ್ತು ಪೊಲೀಸ್ ಠಾಣೆ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿನ ಚುನಾವಣಾ ಸಿಬ್ಬಂದಿ ಯಾರೆಲ್ಲಾ ತಮ್ಮ ಪರವಾಗಿ ಕೆಲಸ ಮಾಡಬೇಕೊ ಅಂತಹವರನ್ನೆಲ್ಲಾ ಉಳಿಸಿಕೊಳ್ಳುವ ಪೂರ್ವಭಾವಿ ತಯಾರಿ ಮಾಡಿಕೊಂಡಿದ್ದರು’ ಎಂದು ಮುನಿರಾಜುಗೌಡ ಹೇಳಿದರು. ಸಾಕ್ಷಿ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಮಂಗಳವಾರಕ್ಕೆ (ಏ.12) ಮುಂದೂಡಿದೆ.

ಸಾರ್ವಜನಿಕರ ಸುಲಿಗೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಆನಂದ್‌ಕುಮಾರ್ ಅಲಿಯಾಸ್ ನಂದ (18), ಸಂತೋಷ್ ಕುಮಾರ್ (18), ಜಿ. ನಿತಿನ್ ಅಲಿಯಾಸ್ ಬಿಳಿ (20) ಹಾಗೂ ಎನ್. ನಿತಿನ್‌ಕುಮಾರ್ (18) ಬಂಧಿತರು. ಇನ್ನೊಬ್ಬ ಬಾಲಕ ಎಂದು ಪೊಲೀಸರು ಹೇಳಿದರು.

‘ಬಂಧಿತರ ಪೈಕಿ ಮೂವರು ಕಾಲೇಜು ವಿದ್ಯಾರ್ಥಿಗಳು. ಇಬ್ಬರು ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇವರಿಂದ ಎರಡು ದ್ವಿಚಕ್ರ ವಾಹನ, ಮೊಬೈಲ್ ಹಾಗೂ ₹ 18,600 ನಗದು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

‘ದಿಲೀಪ್‌ಕುಮಾರ್ ಹಾಗೂ ರಂಜಿತ್ ಅವರು ಏಪ್ರಿಲ್ 1ರಂದು ರಾತ್ರಿ ಕೆಲಸ ಮುಗಿಸಿಕೊಂಡು ಮನೆಗೆ ಹೊರಟಿದ್ದರು. ಬೇಗೂರು ರಸ್ತೆಯ ಮುತ್ತುಗದಹಳ್ಳಿಯ ಕಾಲೇಜೊಂದರ ರಸ್ತೆಯಲ್ಲಿ ಬೈಕ್ ಅಡ್ಡಗಟ್ಟಿದ್ದ ಆರೋಪಿಗಳು, ಮಾರಕಾಸ್ತ್ರ ತೋರಿಸಿ ಬೆದರಿಸಿದ್ದರು. ಹಲ್ಲೆ ಮಾಡಿ ಮೊಬೈಲ್ ಹಾಗೂ ನಗದು ಕಿತ್ತುಕೊಂಡು ಪರಾರಿಯಾಗಿದ್ದರು.’

‘ಸುಲಿಗೆ ಬಗ್ಗೆ ದಿಲೀಪ್‌ಕುಮಾರ್ ಅವರು ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳು ಮತ್ತಷ್ಟು ಪ್ರಕರಣಗಳಲ್ಲಿ ಭಾಗಿಯಾಗಿರುವ ಮಾಹಿತಿಯೂ ಇದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಸುಲಿಗೆಗೆ ಸಂಚು: ರೌಡಿಗಳ ಸೆರೆ

ಕೋಣನಕುಂಟೆ ಬಳಿಯ ಹರಿನಗರ ಮುಖ್ಯರಸ್ತೆಯಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಲು ಸಂಚು ರೂಪಿಸಿದ್ದ ರೌಡಿಗಳು ಸೇರಿ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ರೌಡಿಗಳಾದ ಗಂಗಾಧರ್, ಕೆಂಪೇಗೌಡ ಅಲಿಯಾಸ್ ಕಿರಣ್ ಹಾಗೂ ಅವರ ಮೂವರು ಸಹಚರರನ್ನು ಏಪ್ರಿಲ್ 9ರಂದು ಬಂಧಿಸಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ರಸ್ತೆಯಲ್ಲಿ ಒಂಟಿಯಾಗಿ ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ, ಮಾರಕಾಸ್ತ್ರ ತೋರಿಸಿ ಹಣ ಹಾಗೂ ಚಿನ್ನಾಭರಣ ಸುಲಿಗೆ ಮಾಡುವ ಉದ್ದೇಶ ಆರೋಪಿಗಳದ್ದಾಗಿತ್ತು. ಬಂಧಿತರಿಂದ ಲಾಂಗ್, ಡ್ರ್ಯಾಗರ್ ಹಾಗೂ ಚಾಕು ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

ಕದ್ದ ಆಭರಣ ಮಾರಲು ಬಂದು ಸಿಕ್ಕಿಬಿದ್ದ

ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯ ವೆಂಕಟೇಶಪುರದ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಅಕ್ರಮ್ ನಜೀರ್ ಪಾಷಾರನ್ನು (38) ಪೊಲೀಸರು ಬಂಧಿಸಿದ್ದಾರೆ.

‘ವೆಂಕಟೇಶಪುರದ ನಿವಾಸಿ ಅಕ್ರಮ್ ನಜೀರ್, ನೆರೆ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ. ಚಿನ್ನಾಭರಣ ಮಾರಲೆಂದು ಏಪ್ರಿಲ್ 10ರಂದು ಗಿರವಿ ಅಂಗಡಿಗೆ ಬಂದಿದ್ದ. ಅದೇ ಸಂದರ್ಭದಲ್ಲೇ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಪ್ಪೊಪ್ಪಿಕೊಂಡ. ಆತನಿಂದ ₹ 9 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಹುಮಹಡಿ ಕಟ್ಟಡದ ಮನೆಯಲ್ಲಿ ಆರೋಪಿ ವಾಸವಿದ್ದ. ಅದೇ ಕಟ್ಟಡದ ಒಂದನೇ ಮಹಡಿಯಲ್ಲಿ ಕುಟುಂಬವೊಂದು ವಾಸವಿತ್ತು. ಅದೇ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಒಳನುಗ್ಗಿದ್ದ ಆರೋಪಿ, ಚಿನ್ನಾಭರಣ ಕದ್ದಿದ್ದ’ ಎಂದು ತಿಳಿಸಿದರು.

ಸಿಸಿಬಿ ಪೊಲೀಸರಿಗೆ ‘ಜಾಕೆಟ್, ಕ್ಯಾಪ್’

ಬೆಂಗಳೂರು: ನಗರದಲ್ಲಿ ಅಪರಾಧ ಭೇದಿಸುವ ಸಿಸಿಬಿ ಪೊಲೀಸರಿಗೆ ಪ್ರತ್ಯೇಕ ಜಾಕೆಟ್ ಹಾಗೂ ಕ್ಯಾಪ್ ನೀಡಲಾಗಿದೆ. ಇನ್ನು ಮುಂದೆ ಈ ಜಾಕೆಟ್ ಹಾಗೂ ಕ್ಯಾಪ್ ಧರಿಸಿ ಪೊಲೀಸರು ಕೆಲಸ ಮಾಡಲಿದ್ದಾರೆ.

ಮೈಸೂರು ರಸ್ತೆಯ ಸಿಎಆರ್ ಕೇಂದ್ರ ಘಟಕದಲ್ಲಿ ಸೋಮವಾರ ಜರುಗಿದ ಸೇವಾ ಕವಾಯತ್‌ನಲ್ಲಿ ಪಾಲ್ಗೊಂಡಿದ್ದ ಕಮಿಷನರ್ ಕಮಲ್ ಪಂತ್ ಅವರು ಸಿಸಿಬಿ ಪೊಲೀಸರಿಗೆ ಜಾಕೆಟ್ ಹಾಗೂ ಕ್ಯಾಪ್ ವಿತರಿಸಿದರು.

ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರು ಈಗಾಗಲೇ ಪ್ರತ್ಯೇಕ ಜಾಕೆಟ್ ಧರಿಸಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಅದೇ ಮಾದರಿಯಲ್ಲೇ ಬೆಂಗಳೂರು ಸಿಸಿಬಿ ಪೊಲೀಸರು ಜಾಕೆಟ್ ಬಳಸಲಿದ್ದಾರೆ.

'ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಸಿಸಿಬಿ ಪೊಲೀಸರು, ಡ್ರಗ್ಸ್ ಹಾಗೂ ಇತರೆ ಅಕ್ರಮ ಚಟುವಟಿಕೆಗಳ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಾರೆ. ಈ ವೇಳೆ ಧರಿಸಲು ಜಾಕೆಟ್ ನೀಡಲಾಗಿದೆ’ ಎಂದು ಸಿಸಿಬಿ ಜಂಟಿ ಕಮಿಷನರ್ ರಮಣ್ ಗುಪ್ತ ತಿಳಿಸಿದರು.

‘ಜಾಕೆಟ್ ಹಾಗೂ ಕ್ಯಾಪ್ ಧರಿಸಿದರೆ, ಕಾರ್ಯಾಚರಣೆ ವೇಳೆ ಸಿಬ್ಬಂದಿಯನ್ನು ಗುರುತಿಸುವುದು ಸಹ ಸುಲಭವಾಗಲಿದೆ' ಎಂದೂ ಹೇಳಿದರು.



ಹೊಸ ಜಾಕೆಟ್ ಹಾಗೂ ಕ್ಯಾಪ್ ಧರಿಸಿರುವ ಸಿಸಿಬಿ ಪೊಲೀಸ್

ವರದಕ್ಷಿಣೆ ಕಿರುಕುಳ ಆರೋಪ: ಪ್ರಕರಣ ರದ್ದು

ಬೆಂಗಳೂರು: ವಿವಾಹಿತ ಮಹಿಳೆಯೊಬ್ಬರು ತನ್ನ ಗಂಡ, ಅತ್ತೆ-ಮಾವ ಹಾಗೂ ನಾದಿನಿಯರ ವಿರುದ್ಧ ವರದಕ್ಷಿಣೆ ಕಿರುಕುಳದಡಿ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಿರುವ ಹೈಕೋರ್ಟ್, ‘ಗಂಡನೊಂದಿಗಿನ ಜಗಳಕ್ಕೆ ಸಕಾರಣವಿಲ್ಲದೆ ಅವರ ಕುಟುಂಬದ ಸದಸ್ಯರ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಿಸುವುದು ತರವಲ್ಲ’ ಎಂದು ಅಭಿಪ್ರಾಯಪಟ್ಟಿದೆ.

‘ಸೊಸೆ ನಮ್ಮ ವಿರುದ್ಧ ದಾಖಲಿಸಿರುವ ವರದಕ್ಷಿಣೆ ಕಿರುಕುಳ ಆರೋಪದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಆಂಧ್ರಪ್ರದೇಶದ ಅನಂತಪುರ ನಿವಾಸಿಗಳಾದ ಚಂದ್ರಶೇಖರ್ ಗೌಡ ಮತ್ತು ವರಲಕ್ಷ್ಮಿ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

ಡಾ. ಶಿವಲಿಂಗಯ್ಯ ಕೊಲೆಗೆ ಯತ್ನ: ಎಫ್‌ಐಆರ್

ಬೆಂಗಳೂರು: ನಗರದ ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಸಂಸ್ಥಾಪಕ ಟ್ರಸ್ಟಿಯೂ ಆಗಿರುವ ವೈದ್ಯ ಡಾ. ಎಲ್. ಶಿವಲಿಂಗಯ್ಯ ಅವರ ಕೊಲೆಗೆ ಯತ್ನ ನಡೆದಿರುವ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಸದಾಶಿವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅನಾರೋಗ್ಯದಿಂದ ಬಳಲುತ್ತಿರುವ ಶಿವಲಿಂಗಯ್ಯ ಅವರು ಮಣಿಪಾಲ್ ಆಸ್ಪತ್ರೆಯಲ್ಲಿ 2 ತಿಂಗಳಿನಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಕೊಲೆಗೆ ಯತ್ನ ನಡೆದಿರುವ ಬಗ್ಗೆ ಮಗ ಡಾ. ರವಿ ಪ್ರಕಾಶ್ ಇತ್ತೀಚೆಗೆ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

‘ಆರೋಗ್ಯದಲ್ಲಿ ಸಮಸ್ಯೆ ಕಾಣಿಸಿದ್ದರಿಂದ ಶಿವಲಿಂಗಯ್ಯ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ವೈದ್ಯಕೀಯ ಪರೀಕ್ಷೆ ನಡೆಸಿದಾಗ, ದೇಹದಲ್ಲಿ ಅಲ್ಪಪ್ರಮಾಣದಲ್ಲಿ ವಿಷದ ಅಂಶವಿರುವುದು ಪತ್ತೆಯಾಗಿದೆ. ಅದೇ ಅನುಮಾನದಲ್ಲಿ ಪುತ್ರ ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆಸ್ತಿ ವಿಚಾರವಾಗಿ ಕುಟುಂಬದವರ ನಡುವೆ ವ್ಯಾಜ್ಯವಿದೆ. ಆಸ್ತಿ ಕಬಳಿಸುವ ಉದ್ದೇಶದಿಂದ ವಿಷ ಹಾಕಿರುವ ಆರೋಪವೂ ಕೇಳಿಬರುತ್ತಿದೆ. ಪ್ರಕರಣದ ಆರೋಪಿಗಳನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ತಿಳಿಸಿವೆ.

ಬಿಗಡಾಯಿಸುತ್ತಿದೆ ನೀರಿನ ಬವಣೆ



ಕುಡಿಯುವ ನೀರಿನ ಕ್ಯಾನ್‌ಗಳನ್ನು ಸ್ಕೂಟರ್‌ನಲ್ಲಿ ತುಂಬಿಕೊಂಡು ಹೋಗುತ್ತಿರುವ ಯುವಕರು —ಪ್ರಜಾವಾಣಿ ಚಿತ್ರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬೇಸಿಗೆಯಲ್ಲಿ ನಗರದ ಜನರನ್ನು ಬಿಡದೆ ಕಾಡುವ ಕುಡಿಯುವ ನೀರಿನ ಸಮಸ್ಯೆ, ಈ ಬಾರಿಯೂ ಕಾಡಲಾರಂಭಿಸಿದೆ. ಅದರಲ್ಲೂ ಹೊರವಲಯದಲ್ಲಿ ನೀರಿನ ಬವಣೆ ಹೆಚ್ಚಾಗಿದೆ.

800 ಚದರ ಕಿ.ಮೀ. ವಿಸ್ತಾರಕ್ಕೆ ವ್ಯಾಪಿಸಿರುವ ಬೆಂಗಳೂರಿಗೆ ನೀರಿನ ಸಮಸ್ಯೆ ಪ್ರತಿವರ್ಷ ಕಾಡುತ್ತಲೇ ಇದೆ. ದಿನದಿಂದ ದಿನಕ್ಕೆ ನಗರ ಬೆಳೆಯುತ್ತಿರುವುದರಿಂದ ಸಮಸ್ಯೆಯೂ ಬೆಳೆಯುತ್ತಲೇ ಇದೆ.

2007ರಲ್ಲಿ ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲು 5ನೇ ಹಂತದ ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಇನ್ನೂ ನಡೆಯುತ್ತಿದೆ. ಇದು ಪೂರ್ಣಗೊಳ್ಳಲು ಕನಿಷ್ಠ ಒಂದೂವರೆ ವರ್ಷವಾದರೂ ಬೇಕಾಗಬಹುದು. ಅಲ್ಲಿಯ ತನಕ ದಿನಕ್ಕೆ ಲಭ್ಯ ಇರುವ 140.70 ಕೋಟಿ ಲೀಟರ್ (1,470 ಎಂಎಲ್‌ಡಿ) ನೀರಿನಲ್ಲೇ ಜಲಮಂಡಳಿಯು ನಗರದ ಜನರ ನೀರಿನ ದಾಹ ತಣಿಸಬೇಕಿದೆ.

ಬೇರೆ ಜಲಾಶಯಗಳಿಂದ ನಗರಕ್ಕೆ ನೀರು ತರುವ ಯೋಜನೆಗಳು ಇನ್ನೂ ಕೈಗೂಡಿಲ್ಲ. ಆದ್ದರಿಂದ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸದ್ಯಕ್ಕೆ ಅವಕಾಶ ಇಲ್ಲ.

‘10.70 ಲಕ್ಷ ಮನೆಗಳಿಗೆ ಜಲಮಂಡಳಿ ನೀರಿನ ಸಂಪರ್ಕ ನೀಡಿದೆ. ಪ್ರತಿನಿತ್ಯ 140.70 ಕೋಟಿ ಲೀಟರ್ ನೀರನ್ನು ನಗರಕ್ಕೆ ಪೂರೈಕೆ ಮಾಡಲಾಗುತ್ತಿದೆ. ಅದರಲ್ಲಿ ಕಡಿಮೆ ಮಾಡುವ ಪ್ರಶ್ನೆ ಇಲ್ಲ, ಜಾಸ್ತಿ ಮಾಡಲು ಅವಕಾಶ ಇಲ್ಲ’ ಎನ್ನುತ್ತಾರೆ ಜಲಮಂಡಳಿ ಅಧಿಕಾರಿಗಳು.

‘ಕಾವೇರಿ ನೀರಿನ ಜತೆಗೆ ಕೊಳವೆ ಬಾವಿಗಳನ್ನೂ ಜನ ನಂಬಿಕೊಂಡಿದ್ದಾರೆ. ಬೇಸಿಗೆಯಲ್ಲಿ ಅಂತರ್ಜಲ ಮಟ್ಟ ಕುಸಿದು ನೀರು ಇಲ್ಲವಾದರೆ ಆಗ ಜಲಮಂಡಳಿ ಮೇಲೆ ಒತ್ತಡ ಹೆಚ್ಚಾಗುತ್ತದೆ. ಈ ರೀತಿಯ ಸಂದರ್ಭಗಳನ್ನು ನಿರ್ವಹಿಸಿ ಸಮರ್ಪಕವಾಗಿ ನೀರು ಪೂರೈಸಲಾಗುತ್ತಿದೆ. ನಿಭಾಯಿಸಲು ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ’ ಎಂದು ಜಲಮಂಡಳಿ ಅಧಿಕಾರಿಗಳು ಮಾಹಿತಿ ನೀಡಿದರು.

‘ಕಾವೇರಿ ನೀರನ್ನು ಪಂಪ್ ಮಾಡಿ, ಶುದ್ಧೀಕರಿಸಿಕೊಂಡು ಬೆಂಗಳೂರಿಗೆ ತರಬೇಕಿದೆ. ಬೇಸಿಗೆ ಇರಲಿ, ಮಳೆಗಾಲವೇ ಇರಲಿ ನೀರು ಪೂರೈಕೆಯನ್ನು ಜಲಮಂಡಳಿ ಕಡಿಮೆ ಮಾಡುವುದಿಲ್ಲ. ನೀರಿನ ಬಳಕೆ ಹೆಚ್ಚಾಗುವುದರಿಂದ ಮತ್ತು ಅಂತರ್ಜಲ ಕುಸಿಯುವುದರಿಂದ ಬೇಡಿಕೆ ಪ್ರಮಾಣ ಬೇಸಿಗೆ ಸಂದರ್ಭದಲ್ಲಿ ಸಾಮಾನ್ಯವಾಗಿ ಶೇ 5ರಷ್ಟು ಏರಿಕೆಯಾಗುತ್ತದೆ. ನೋಡಲ್ ಅಧಿಕಾರಿಗಳು ಅದನ್ನು ಸಮರ್ಪಕವಾಗಿ ನಿಭಾಯಿಸುತ್ತಿದ್ದಾರೆ. ಜಲಮಂಡಳಿಯಲ್ಲಿ 65 ಟ್ಯಾಂಕರ್‌ಗಳಿದ್ದು, ನೀರಿನ ಸಮಸ್ಯೆ ತಲೆದೋರಿದ ಕಡೆಗೆ ಟ್ಯಾಂಕರ್‌ನಲ್ಲಿ ನೀರು ಪೂರೈಕೆಯಾಗುತ್ತಿದೆ’ ಎಂದು ವಿವರಿಸಿದರು.

ಬನಶಂಕರಿ 6ನೇ ಹಂತಕ್ಕೆ ಕಾವೇರಿ ಶಾಪ

ಬನಶಂಕರಿ 6ನೇ ಹಂತದಲ್ಲಿ 22 ವರ್ಷದಿಂದ ಕುಡಿಯುವ ನೀರಿನ ಸಮಸ್ಯೆ ಇದೆ. ಕಾವೇರಿ ನೀರಿನ ಸಂಪರ್ಕ ಈವರೆಗೆ ಲಭ್ಯವಾಗದೆ ಪ್ರತಿ ಬೇಸಿಗೆಯಲ್ಲೂ ಜನ ತೊಂದರೆ ಅನುಭವಿಸುತ್ತಿದ್ದಾರೆ. ಕೊಳವೆ ಬಾವಿಗಳೇ ಈ ಬಡಾವಣೆಯ ಜಲಮೂಲವಾಗಿದ್ದು, ಬೇಸಿಗೆಯಲ್ಲಿ ಅವು ಬರಿದಾಗಿ ನೀರಿನ ಹಾಹಾಕಾರ ಇಡೀ ಬಡಾವಣೆಯನ್ನು ಕಾಡುತ್ತಿದೆ.

ಬಿಡಿಎ ಅಭಿವೃದ್ಧಿಪಡಿಸಿರುವ ಈ ಬಡಾವಣೆ ಈವರೆಗೆ ಬಿಬಿಎಂಪಿಗೆ ಹಸ್ತಾಂತರ ಆಗಿಲ್ಲ. ಆದ್ದರಿಂದ ಕಾವೇರಿ ನೀರಿನ ಸಂಪರ್ಕ ಪಡೆಯಲು ಸಾಧ್ಯವಾಗಿಲ್ಲ. ಶಾಪಗ್ರಸ್ತರಂತೆ ಜನ ಪ್ರತಿ ವರ್ಷ ತೊಂದರೆ ಅನುಭವಿಸುವಂತಾಗಿದೆ ಎಂದು ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ. ಸಾವಿರ ಅಡಿ ಆಳಕ್ಕೆ ಕೊಳವೆ ಬಾವಿಗಳನ್ನು ಕೊರೆದರೂ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉದ್ಭವಿಸುತ್ತಲೇ ಇದೆ. ಜನಪ್ರತಿನಿಧಿಗಳು 22 ವರ್ಷಗಳಿಂದ ಆಶ್ವಾಸನೆ ನೀಡುತ್ತಲೇ ಇದ್ದಾರೆ ಎಂದು ಇಲ್ಲಿನ ಜನ ಬೇಸರ ವ್ಯಕ್ತಪಡಿಸುತ್ತಾರೆ.

‘ನಿವೇಶನಗಳ ಬೆಲೆ ಚದರ ಅಡಿಗೆ ₹10 ಸಾವಿರಕ್ಕೆ ಏರಿಕೆಯಾಗಿದೆ. ನಿವೇಶನಗಳನ್ನು ಬಿಡಿಎ ಹರಾಜು ಹಾಕಿ ಬೊಕ್ಕಸ ತುಂಬಿಕೊಳ್ಳುತ್ತಿದೆ. ಕುಡಿಯುವ ನೀರಿನ ಸಮಸ್ಯೆ ಮತ್ತು ಇತರ ಮೂಲ ಸೌಕರ್ಯಗಳ ಬಗ್ಗೆ ಬಿಡಿಎ ಕಿಂಚಿತ್ತು ತಲೆ ಕೆಡಿಸಿಕೊಂಡಿಲ್ಲ’ ಎಂದು ಬನಶಂಕರಿ 6ನೇ ಹಂತದ 2ನೇ ಬ್ಲಾಕ್ ಹಾಗೂ ಕರಿಯನಪಾಳ್ಯ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ವಿ.ಸತೀಶ್ ತಿಳಿಸಿದರು.

‘ಟ್ಯಾಂಕರ್‌ನಲ್ಲಿ ನೀರು ಖರೀದಿಸಿ ತಂದು ಜೀವನ ನಡೆಸಬೇಕಿದೆ. ನಿರ್ವಹಣೆಯನ್ನು ಬಿಬಿಎಂಪಿಗೆ ಹಸ್ತಾಂತರಿಸಿದರೆ ಸಮಸ್ಯೆ ಇತ್ಯರ್ಥವಾಗಲಿದೆ. ಅದನ್ನೂ ಮಾಡದೆ ಜನರನ್ನು ಕಷ್ಟಕ್ಕೆ ಸಿಲುಕಿಸಲಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಹೊರವಲಯದಲ್ಲಿ ಹೆಚ್ಚಿದ ಸಮಸ್ಯೆ

ಕುಡಿಯುವ ನೀರಿನ ಸಮಸ್ಯೆ ನಗರದ ಹೊರವಲಯದ ನಿವಾಸಿಗಳನ್ನು ಹೆಚ್ಚಾಗಿ ಕಾಡುತ್ತಿದೆ. ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿ ವ್ಯಾಪ್ತಿಯ ಬಡಾವಣೆಗಳಲ್ಲೇ ಸಮಸ್ಯೆ ಹೆಚ್ಚು.

ಕಾವೇರಿ ನೀರಿನ ಸಂಪರ್ಕ ಇನ್ನೂ ಈ ಬಡಾವಣೆಗಳಿಗೆ ಲಭ್ಯವಾಗಿಲ್ಲ. ಕೊಳವೆ ಬಾವಿಗಳೇ ಈ ಬಡಾವಣೆಗಳಿಗೆ ನೀರಿನ ಮೂಲ. ಬೇಸಿಗೆಯಲ್ಲಿ ಅಂತರ್ಜಲ ಕುಸಿತ ಆಗಿರುವುದರಿಂದ ಬವಣೆ ಹೆಚ್ಚಾಗಿದೆ. ಮಹದೇವಪುರ ವಲಯ ವ್ಯಾಪ್ತಿಯಲ್ಲೇ 31 ಹಳ್ಳಿಗಳು ಬಿಬಿಎಂಪಿಗೆ ಸೇರ್ಪಡೆಯಾಗಿವೆ. ಆದ್ದರಿಂದ ಆ ವಲಯದಲ್ಲೇ ಕುಡಿಯುವ ನೀರಿನ ಸಮಸ್ಯೆ ಹೆಚ್ಚು.

ಐ.ಟಿ ಕಂಪನಿಗಳು ಹೆಚ್ಚಾಗಿರುವುದರಿಂದ ಈ ವ್ಯಾಪ್ತಿಯಲ್ಲಿ ನಗರ ಕೂಡ ವೇಗವಾಗಿ ಬೆಳೆಯುತ್ತಿದೆ. ಅಲ್ಲಿಗೆ ಕಾವೇರಿ ನೀರು ಪೂರೈಕೆ ಮಾಡುವುದು ಸರ್ಕಾರದ ಮುಂದಿರುವ ದೊಡ್ಡ ಸವಾಲು.

ವರ್ತೂರು, ಸರ್ಜಾಪುರ, ಮಾರತಹಳ್ಳಿ, ವೈಟ್‌ಫೀಲ್ಡ್ ಸುತ್ತಮುತ್ತಲ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಪೂರ್ವ ವಲಯ, ಯಲಹಂಕ ವಲಯ, ಬೊಮ್ಮನಹಳ್ಳಿ ವಲಯ, ರಾಜರಾಜೇಶ್ವರಿನಗರ, ದಾಸರಹಳ್ಳಿ ವಲಯದಲ್ಲಿ ನೀರಿನ ಸಮಸ್ಯೆ ಕಾಡುವುದು ತಪ್ಪಿಲ್ಲ.

ಖಾಸಗಿ ಟ್ಯಾಂಕರ್‌ಗಳನ್ನು ಜನ ಆಶ್ರಯಿಸಿದ್ದಾರೆ. ಡೀಸೆಲ್ ದರ ಏರಿಕೆಯಾಗಿದೆ ಎಂಬ ಕಾರಣಕ್ಕೆ ಟ್ಯಾಂಕರ್ ಮಾಲೀಕರು ನೀರಿನ ದರವನ್ನೂ ಹೆಚ್ಚಳ ಮಾಡಿದ್ದಾರೆ. ದರ ನಿಯಂತ್ರಣಕ್ಕೆ ಬಿಬಿಎಂಪಿ ಮುಂದಾಗಬೇಕು ಎಂಬುದು ನಿವಾಸಿಗಳ ಒತ್ತಾಯ.

ಶುದ್ಧ ಕುಡಿಯುವ ನೀರಿನ ಘಟಕಗಳೂ ಕೊಳವೆ ಬಾವಿಗಳನ್ನು ಆಶ್ರಯಿಸಿಯೇ ನಡೆಯುತ್ತಿವೆ. ಕೊಳವೆ ಬಾವಿಗಳಲ್ಲೇ ನೀರಿಲ್ಲದಿದ್ದರೆ ಶುದ್ಧ ಕುಡಿಯುವ ನೀರಿನ ಘಟಕ ಇದ್ದರೂ ಪ್ರಯೋಜನಕ್ಕೆ ಬರುತ್ತಿಲ್ಲ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಮೆಟ್ರೊ: ಹೆಬ್ಬಾಳ–ಸರ್ಜಾಪುರ ಮಾರ್ಗದ ಡಿಪಿಆರ್‌ಗೆ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮತ್ತು ಸರ್ಜಾಪುರ ನಡುವಿನ ಮೆಟ್ರೊ ಮಾರ್ಗಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಬಿಎಂಆರ್‌ಸಿಎಲ್ ಟೆಂಡರ್ ಆಹ್ವಾನಿಸಿದೆ.

ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿದ ಒಂದು ತಿಂಗಳ ಅವಧಿಯಲ್ಲೇ ಡಿಪಿಆರ್‌ಗೆ ಟೆಂಡರ್ ಪ್ರಕ್ರಿಯೆಯನ್ನು ಬಿಎಂಆರ್‌ಸಿಎಲ್ ಆರಂಭಿಸಿದೆ. ಬಿಡ್ಡುದಾರರು ಮೇ 17ರೊಳಗೆ ತಾಂತ್ರಿಕ ಮತ್ತು ಹಣಕಾಸು ಬಿಡ್ ಸಲ್ಲಿಸಬೇಕು. ಡಿಪಿಆರ್ ಸಿದ್ಧಪಡಿಸಲು 8 ತಿಂಗಳ ಗಡುವು ನಿಗದಿಪಡಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

₹15 ಸಾವಿರ ಕೋಟಿ ಅಂದಾಜು ವೆಚ್ಚದ 37 ಕಿಲೋ ಮೀಟರ್ ಉದ್ದದ ಈ ಮಾರ್ಗವು ಅಗರ, ಕೋರಮಂಗಲ, ಡೇರಿ ವೃತ್ತದ ಮೂಲಕ ಹಾದುಹೋಗಲಿದೆ.

ಮೆಟ್ರೊ ಜಾಲಕ್ಕೆ ಮಾಸ್ಟರ್‌ಪ್ಲ್ಯಾನ್ ರೂಪಿಸುವಾಗಲೇ ಈ ಮಾರ್ಗದ ಪ್ರಸ್ತಾವ ಇತ್ತು. ಕಾರಣಾಂತರಗಳಿಂದ ಅದರ ಅನುಷ್ಠಾನ ಸಾಧ್ಯವಾಗಿರಲಿಲ್ಲ. ಈ ಮಾರ್ಗವು ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿನ ಮೆಟ್ರೊ ಜಾಲವನ್ನು ಮತ್ತಷ್ಟು ಬಲಪಡಿಸಲಿದೆ. ಹೆಬ್ಬಾಳದಿಂದ ಕೋರಮಂಗಲ ತನಕ ಸುರಂಗ ಮಾರ್ಗ ಹಾಗೂ ಅಲ್ಲಿಂದ ಸರ್ಜಾಪುರದವರೆಗೆ ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳಲಿದೆ ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ನೈಜೀರಿಯಾ ಸೇನೆಗೆ ವೈಮಾನಿಕ ಹಾರಾಟ ತರಬೇತಿ

ಬೆಂಗಳೂರು: ನೈಜೀರಿಯಾ ಸೇನೆಯ ವೈಮಾನಿಕ ವಿಭಾಗದ ಆರು ಅಧಿಕಾರಿಗಳಿಗೆ ಎಚ್‌ಎಎಲ್ ನಿರ್ಮಿತ ಚೇತಕ್ ಹೆಲಿಕಾಪ್ಟರ್‌ನಲ್ಲಿ ಹಾರಾಟದ ಎರಡನೇ ಹಂತದ ತರಬೇತಿ ಸೋಮವಾರ ಆರಂಭವಾಗಿದೆ.

ಈ ಸಂಬಂಧ ನೈಜೀರಿಯಾ ಸೇನೆ ಮತ್ತು ಎಚ್‌ಎಎಲ್ ಒಪ್ಪಂದಕ್ಕೆ ಸಹಿ ಮಾಡಿವೆ. ಮೊದಲ ಹಂತದ ತರಬೇತಿಯನ್ನು 2021ರ ಡಿಸೆಂಬರ್‌ನಲ್ಲಿ ನೀಡಲಾಗಿತ್ತು. ಎರಡನೇ ಹಂತದ ಹಾರಾಟ ತರಬೇತಿಗೆ ಚೇತಕ್ ಹೆಲಿಕಾಪ್ಟರ್ ಅನ್ನು ನಿಗದಿ ಮಾಡಿದ್ದು, ತರಬೇತಿ ಸೋಮವಾರವೇ ಆರಂಭವಾಗಿದ್ದು, ಡಿಸೆಂಬರ್‌ಗೆ ಮುಕ್ತಾಯವಾಗಲಿದೆ. ಆರೂ ಅಧಿಕಾರಿಗಳಿಗೆ ಒಟ್ಟು 70 ಗಂಟೆಗಳ ಹಾರಾಟದ ತರಬೇತಿ ನೀಡಲಾಗುವುದು ಎಂದು ಎಚ್‌ಎಎಲ್‌ನ ಹೆಲಿಕಾಪ್ಟರ್ ವಿಭಾಗದ ಜನರಲ್ ಮ್ಯಾನೇಜರ್ ಬಿ.ಕೆ.ತ್ರಿಪಾಠಿ ತಿಳಿಸಿದರು

ಕೆಆರ್‌ಡಿಸಿಎಲ್ ಕರೆದಿರುವ ಟೆಂಡರ್ ರದ್ದುಪಡಿಸಲು ಮುಖ್ಯಮಂತ್ರಿ ಸೂಚನೆ

ಅತಿ ದಟ್ಟಣೆ ಕಾರಿಡಾರ್ ಅಭಿವೃದ್ಧಿಗಷ್ಟೇ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅತಿ ದಟ್ಟಣೆ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳ ಅನುಷ್ಠಾನಕ್ಕೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು (ಕೆಆರ್‌ಡಿಸಿಎಲ್) ಕರೆದಿರುವ ಟೆಂಡರ್ ರದ್ದುಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ. ಈ ಕಾರಿಡಾರ್‌ಗಳ ಅಭಿವೃದ್ಧಿಗೆ ಸೀಮಿತವಾಗಿ ಅಲ್ಪಾವಧಿ ಟೆಂಡರ್ ಕರೆಯುವಂತೆ ನಿಗಮಕ್ಕೆ ಸೂಚನೆ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯ ಒಟ್ಟು 191 ಕಿ.ಮೀ ಉದ್ದದ ಅತಿ ದಟ್ಟಣೆ ಕಾರಿಡಾರ್‌ಗಳ ನಿರ್ವಹಣೆಯ ಹೊಣೆಯನ್ನು ಕೆಆರ್‌ಡಿಸಿಎಲ್‌ಗೆ ಸರ್ಕಾರ ವಹಿಸಿದೆ. ಈ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕುರಿತ ನಾಲ್ಕು ಪ್ಯಾಕೇಜ್‌ಗಳೂ ಸೇರಿ ಒಟ್ಟು ₹1,120.48 ಕೋಟಿ ವೆಚ್ಚದ ಟೆಂಡರ್‌ಗಳನ್ನು ನಿಗಮ ಈ ಹಿಂದೆ ಅಂತಿಮಗೊಳಿಸಿತ್ತು. ಈ ಕಾರಿಡಾರ್‌ಗಳ ಉನ್ನತೀಕರಣಕ್ಕೆ ಒಟ್ಟು ₹ 335.17 ಕೋಟಿ, ದೈನಂದಿನ ನಿರ್ವಹಣೆಗೆ ಮೊದಲ ವರ್ಷಕ್ಕೆ ₹ 142.12 ಕೋಟಿ, ಇನ್ನುಳಿದ ನಾಲ್ಕು ವರ್ಷಗಳ ನಿರ್ವಹಣೆಗೆ ₹ 643.19 ಕೋಟಿ ವೆಚ್ಚವಾಗುತ್ತದೆ ಎಂದು ಕೆಆರ್‌ಡಿಸಿಎಲ್ ಅಂದಾಜಿಸಿತ್ತು.

ಒಟ್ಟು 191 ಕಿ.ಮೀ ಉದ್ದದ ಕಾರಿಡಾರ್‌ಗಳಲ್ಲಿ 53.42 ಕಿ.ಮೀ ರಸ್ತೆಗಳನ್ನು ವೈಟ್‌ಟಾಪಿಂಗ್ ಮಾಡಲಾಗಿದೆ. ಕಾಮಗಾರಿಯ ನಿರ್ವಹಿಸಿದ ಗುತ್ತಿಗೆದಾರರು ಕನಿಷ್ಠ ಪಕ್ಷ ಆರಂಭಿಕ ಎರಡು ವರ್ಷ ಕಾಲ (ದೋಷ ಬಾಧ್ಯತಾ ಅವಧಿ) ರಸ್ತೆಗಳ ನಿರ್ವಹಣೆ ಮಾಡುವುದು ಕಡ್ಡಾಯ. ಹಾಗಿದ್ದರೂ ಈ ಕಾರಿಡಾರ್‌ಗಳ ನಿರ್ವಹಣೆಗೆ ಅನಗತ್ಯ ವೆಚ್ಚ ಮಾಡುವುದು, ವೈಟ್‌ಟಾಪಿಂಗ್ ಮಾಡಲಾದ 53.42 ಕಿ.ಮೀ ಉದ್ದ ರಸ್ತೆಗಳ ನಿರ್ವಹಣೆಗೂ ದುಬಾರಿ ವೆಚ್ಚ ಮಾಡಲಾಗುತ್ತಿರುವು ಸೇರಿ ಈ ಟೆಂಡರ್‌ನ ಅನೇಕ ಲೋಪಗಳ ಬಗ್ಗೆ ‘ಪ್ರಜಾವಾಣಿ’ ಸರಣಿ ವರದಿಗಳ ಮೂಲಕ ಸರ್ಕಾರದ ಗಮನ ಸೆಳೆದಿತ್ತು. ರಸ್ತೆಗಳ ಅಭಿವೃದ್ಧಿಗೆ ತಗಲುವ ವೆಚ್ಚಕ್ಕಿಂತಲೂ ಅವುಗಳನ್ನು ಐದು ವರ್ಷಗಳ ನಿರ್ವಹಣೆಗೆ ಹೆಚ್ಚು ವೆಚ್ಚ ಮಾಡುವ ಬಗ್ಗೆ ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದ್ದರು. ಬಳಿಕ ಹಳೆಯ ಟೆಂಡರ್ ರದ್ದುಪಡಿಸಿ ಹೊಸ ಟೆಂಡರ್ ಕರೆಯುವಂತೆ ಸೂಚಿಸಿದ್ದರು. ಹೊಸ ಟೆಂಡರ್ ಕರೆಯುವಾಗ ಲೋಪಗಳನ್ನು ಸರಿಪಡಿಸುವಂತೆ ಸಲಹೆ ನೀಡಿದ್ದರು. ಈ ಸಲಹೆಗಳನ್ನು ನಿಗಮವು ಪಾಲಿಸಿರಲಿಲ್ಲ. ನಿಗಮವು ಕಡೆದ ಎರಡನೇ ಟೆಂಡರ್ ಅನ್ನೂ ರದ್ದುಪಡಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಕುರಿತು ಚರ್ಚಿಸಲು ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಮುಖ್ಯಮಂತ್ರಿಯವರು ಕಳೆದ ಶುಕ್ರವಾರ (ಏ.8ರಂದು) ಸಭೆ ನಡೆಸಿದ್ದರು. ಆ ಸಭೆಯ ನಡಾವಳಿಗಳ ವರದಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ. ಅತಿ ದಟ್ಟಣೆ ಕಾರಿಡಾರ್‌ಗಳ ನಿರ್ವಹಣೆಯ ಅಂಶವನ್ನೇ ಕೈಬಿಟ್ಟು ಕೇವಲ ಅಭಿವೃದ್ಧಿ ಕಾಮಗಾರಿಗಷ್ಟೇ ಟೆಂಡರ್ ಕರೆಯಬೇಕು ಎಂದು ಮುಖ್ಯಮಂತ್ರಿ ಸೂಚಿಸಿರುವ ಅಂಶವು ನಡಾವಳಿಯಲ್ಲಿದೆ.

ಪ್ರಗತಿ ಪರಿಶೀಲನೆಗೆ ಎಸಿಎಸ್ ನೇತೃತ್ವದ ಸಮಿತಿ

ನಗರದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳಲ್ಲಿ ವಾಸ್ತವದಲ್ಲಿ ಎಷ್ಟು ಪ್ರಗತಿ ಆಗಿದೆ ಎಂಬ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಮುಖ್ಯ ಎಂಜಿನಿಯರ್‌ಗಳು ಈ ಸಮಿತಿಯ ಸದಸ್ಯರಾಗಿರಲಿದ್ದಾರೆ. ಕಾಮಗಾರಿಗಳಲ್ಲಿ ಮುಂದಿನ ವಾರ ಏನೆಲ್ಲ ಪ್ರಗತಿ ಆಗಬೇಕು ಎಂಬ ಬಗ್ಗೆಯೂ ಈ ಸಮಿತಿ ಮುಂಚಿತವಾಗಿ ಮಾಹಿತಿಯನ್ನು ಒದಗಿಸಬೇಕಿದೆ.

ನಗರದ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದ ಹೊಣೆ ಹೊತ್ತ ಎಂಜಿನಿಯರ್‌ಗಳ ಕಾರ್ಯಕ್ಷಮತೆ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬ ಬಗ್ಗೆ ಮುಖ್ಯಮಂತ್ರಿಯವರು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ಕಾಮಗಾರಿಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳದಿರುವುದನ್ನು ಗಂಭೀರವಾಗಿ ಪರಿಗಣಿಸಿ ಅವರ ಕಾರ್ಯಕ್ಷಮತೆಯ ಮೌಲ್ಯಮಾಪನಕ್ಕೆ ಕ್ರಮ ಕೈಗೊಳ್ಳಬೇಕು’ ಎಂದು ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಿದ್ದಾರೆ.

‘ಬೆಂಗಳೂರಿಗೆ ಹೆಸರು ಕೆಡಿಸಲು ಯೋಜಿತ ಪ್ರಯತ್ನ’

ನಗರದ ಅಭಿವೃದ್ಧಿಗೆ ಸಂಬಂಧಿಸಿ ಇತ್ತೀಚೆಗೆ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿರುವ ಟೀಕೆ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದ್ದ ಮುಖ್ಯಮಂತ್ರಿ, ‘ಬೆಂಗಳೂರಿನ ಹೆಸರು ಕೆಡಿಸಲು ಸ್ಥಾಪಿತ ಹಿತಾಸಕ್ತಿಗಳು ಯೋಜಿತ ಪ್ರಯತ್ನ ನಡೆಸುತ್ತಿವೆ. ಇದನ್ನು ಒಪ್ಪಿಕೊಳ್ಳಲಾಗದು. ನಗರದ ಖ್ಯಾತಿಗೆ ಧಕ್ಕೆ ಆಗುವುದನ್ನು ತಡೆಯಲು ಸಾಫ್ಟ್‌ವೇರ್ ಮತ್ತು ಸೇವಾ ಕಂಪನಿಗಳ ರಾಷ್ಟ್ರೀಯ ಸಂಘ (ನ್ಯಾಸ್ಕಾಂ), ಹೊರ ವರ್ತುಲ ರಸ್ತೆಯ ಕಂಪನಿಗಳ ಸಂಘ (ಒಆರ್‌ಆರ್‌ಸಿ) ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ (ಆರ್‌ಡಬ್ಲ್ಯುಎ) ನೆರವನ್ನು ಕೋರಬೇಕು’ ಎಂದೂ ಮುಖ್ಯಮಂತ್ರಿ ಸೂಚಿಸಿದ್ದಾರೆ.

‘ಸೂಕ್ಷ್ಮ ಪ್ರದೇಶಗಳ ದುರಸ್ತಿಗೆ ₹ 472 ಕೋಟಿ’

ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗಲು ಕಾರಣವಾಗುವ ಸೂಕ್ಷ್ಮ ಪ್ರದೇಶಗಳ ಲೋಪಗಳನ್ನು ಸರಿಪಡಿಸುವ ₹ 472 ಕೋಟಿ ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆಯನ್ನು ತಕ್ಷಣವೇ ಸರ್ಕಾರಕ್ಕೆ ಸಲ್ಲಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಮಳೆಗಾಲದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಯಲು ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆಗಳ ದುರಸ್ತಿ ಮತ್ತು ಅಭಿವೃದ್ಧಿಗಾಗಿ ₹1,500 ಕೋಟಿ ಮಂಜೂರು ಮಾಡುವುದಾಗಿ ಮುಖ್ಯಮಂತ್ರಿಯವರು 2022–23ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಈ ಮೊತ್ತದಲ್ಲಿ ₹ 472 ಕೋಟಿಯನ್ನು ರಾಜಕಾಲುವೆಗಳ ಸೂಕ್ಷ್ಮ ಪ್ರದೇಶಗಳ ದುರಸ್ತಿಗೆ ಬಳಸಲಾಗುತ್ತಿದೆ.

ಯುದ್ಧದ ಪರಿಣಾಮ ನಿರ್ವಹಣೆ ಭಾರತ–ಅಮೆರಿಕ ಪರಿಶೀಲನೆ

ಒಂದನೇ ಪುಟದಿಂದ

‘ಎರಡೂ ರಾಷ್ಟ್ರಗಳು ಚರ್ಚೆ ನಡೆಸಲು ಸಲಹೆ ನೀಡಿದ್ದೇವೆ. ಉಕ್ರೇನ್‌ಗೆ ಭಾರತವು ಔಷಧ, ವೈದ್ಯಕೀಯ ನೆರವು ನೀಡಿದೆ’ ಎಂದು ಹೇಳಿದರು.

ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ನಡೆಸಿರುವ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಿರ್ಧಾರ ಕುರಿತಂತೆ ಮೋದಿ ಆಡಳಿತ ಕಠಿಣ ನಿಲುವು ತೆಗೆದುಕೊಳ್ಳಬೇಕು ಎಂಬ ಹಿನ್ನೆಲೆಯಲ್ಲಿ ಅಮೆರಿಕ ಗಮನಿಸಲಿದೆ ಎಂಬ ಇಂಗಿತವನ್ನು ಬೈಡನ್ ಇದೇ ಸಂದರ್ಭದಲ್ಲಿ ನೀಡಿದರು.

ಮೋದಿ ಮತ್ತು ಬೈಡನ್ ಭೇಟಿ ಹಿಂದೆಯೇ ಉಭಯ ದೇಶಗಳ ವಿದೇಶಾಂಗ ವ್ಯವಹಾರ ಮತ್ತು ರಕ್ಷಣಾ ಸಚಿವರ ಮಟ್ಟದಲ್ಲಿ ಚರ್ಚೆಯು ಮುಂದುವರಿಯಲಿದೆ. ಮಾತುಕತೆ ನಡೆಸಲು ಸಚಿವರಾದ ಎಸ್. ಜೈಶಂಕರ್, ರಾಜನಾಥ ಸಿಂಗ್ ಅವರು ವಾಷಿಂಗ್ಟನ್‌ಗೆ ತೆರಳಿದ್ದಾರೆ.

ಮೋದಿ ಮತ್ತು ಬೈಡನ್ ನಡುವೆ ವರ್ಚುವಲ್ ಸಭೆ ನಡೆದ ಸಂದರ್ಭದಲ್ಲಿ ಈ ಇಬ್ಬರು ಸಚಿವರು ಮತ್ತು ಬೈಡನ್ ಅವರ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲಿವಾನ್ ಅವರೂ ಶ್ವೇತಭವನದಲ್ಲಿ ಉಪಸ್ಥಿತರಿದ್ದರು.

ಮೋದಿ ಕಳವಳ: ಬೈಡನ್ ಜೊತೆಗೆ ನಡೆದ ಮಾತುಕತೆ ವೇಳೆ ಮೋದಿ ಅವರು ಪ್ರಮುಖವಾಗಿ, ರಷ್ಯಾವು ಉಕ್ರೇನ್‌ನ ಬುಕಾದಲ್ಲಿ ನಡೆಸಿದ ನರಮೇಧ ಘಟನೆ ಕುರಿತು ಕಳವಳ ವ್ಯಕ್ತಪಡಿಸಿದರು.

ಯುದ್ಧವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಪುಟಿನ್ ಮತ್ತು ಝೆಲೆನ್‌ಸ್ಕಿ ಪರಸ್ಪರ ಚರ್ಚೆ ನಡೆಸಬೇಕು, ಈ ಮೂಲಕ ಬಿಕ್ಕಟ್ಟು ಶಮನಗೊಳಿಸಲು ಮುಂದಾಗಬೇಕು ಎಂದರು.

ಉಕ್ರೇನ್ ಯುದ್ಧದ ಅವಧಿಯಲ್ಲಿ ಅಲ್ಲಿನ ಜನರಿಗೆ ಭಾರತ ಒದಗಿಸಿದ ಮಾನವೀಯ ಬೆಂಬಲವನ್ನು ಸ್ವಾಗತಿಸುತ್ತೇನೆ ಎಂದು ಬೈಡನ್ ಇದೇ ವೇಳೆ ಪ್ರತಿಕ್ರಿಯಿಸಿದರು.



ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸೋಮವಾರ ವರ್ಚುವಲ್ ಆಗಿ ಚರ್ಚಿಸಿದರು. ಚರ್ಚೆಯ ಸಂದರ್ಭದಲ್ಲಿ ಶ್ವೇತಭವನದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೂ ಇದ್ದರು –ಪಿಟಿಐ ಚಿತ್ರ

‘ಯುವ ಜನರ ನೈಜ ಸಾಮರ್ಥ್ಯ ಬಳಕೆಗೆ ನೀತಿ’

ಬೆಂಗಳೂರು: ಯುವ ಜನರ ಸಬಲೀಕರಣಕ್ಕಾಗಿ ಕೇಂದ್ರ ಯುವ ನೀತಿಯ ಮಾದರಿಯಲ್ಲೇ ಕರ್ನಾಟಕ ಸರ್ಕಾರ ಯುವಜನ ಕೇಂದ್ರಿತ ಹೊಸ ನೀತಿಯೊಂದನ್ನು ರೂಪಿಸಲು ಚಾಲನೆ ನೀಡಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಗುವಾಹಟಿಯಲ್ಲಿ 8ನೇ ಕಾಮನ್‌ವೆಲ್ತ್ ಸಂಸದೀಯ ಸಂಘ ಏರ್ಪಡಿಸಿರುವ ‘ಮುಖ್ಯವಾಹಿನಿಯ ಯುವ ಕೇಂದ್ರಿತ ನೀತಿಗಳು’ ವಿಷಯ ಕುರಿತ ಸಮ್ಮೇಳನದಲ್ಲಿ ಸೋಮವಾರ ಮಾತನಾಡಿದ ಅವರು, ಕರ್ನಾಟಕದಲ್ಲಿ 15 ರಿಂದ 29 ವರ್ಷದೊಳಗಿನ ವಯಸ್ಸಿನವರು ಶೇ 30ರಿಂದ 40ರಷ್ಟು ಇದ್ದಾರೆ ಎಂದರು.

ಯುವ ಜನರು ಎದುರಿಸುತ್ತಿರುವ ಅಡ್ಡಿ– ಆತಂಕಗಳು ಮತ್ತು ಸವಾಲುಗಳನ್ನು ಅರ್ಥ ಮಾಡಿಕೊಳ್ಳುವುದರ ಜತೆಗೆ ಅವರಿಗೆ ದೈಹಿಕ, ಮಾನಸಿಕ ಮತ್ತು ಆರ್ಥಿಕ ನೆರವು ನೀಡಬೇಕು ಹಾಗೂ ಅವರ ನೈಜ ಸಾಮರ್ಥ್ಯ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಲು ಅವಕಾಶ ನೀಡಬೇಕು. ಈ ಉದ್ದೇಶದಿಂದ ‘ಕರ್ನಾಟಕ ಯುವ ನೀತಿ 2022’ ಅನ್ನು ಆದಷ್ಟು ಶೀಘ್ರ ಬಿಡುಗಡೆಗೊಳಿಸಲಾಗುವುದು ಎಂದು ಕಾಗೇರಿ ಹೇಳಿದರು.

62 ನೌಕರರಿಗೆ ನೇಮಕ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಜಾಗೊಂಡಿದ್ದ ನೌಕರರ ಪುನರ್ ನೇಮಕ ಪ್ರಕ್ರಿಯೆಯನ್ನು ಬಿಎಂಟಿಸಿ ಆರಂಭಿಸಿದೆ. ಮೊದಲ ಹಂತದಲ್ಲಿ 62 ಸಿಬ್ಬಂದಿಗೆ ಮರು ನೇಮಕ ಪತ್ರಗಳನ್ನು ವಿತರಣೆ ಮಾಡಿತು.

ಬಿಎಂಟಿಸಿ ಅಧ್ಯಕ್ಷ ಎನ್.ಎಸ್. ನಂದೀಶ್ ರೆಡ್ಡಿ ಅವರು ನೌಕರರಿಗೆ ನೇಮಕಾತಿ ಆದೇಶ ವಿತರಣೆ ಮಾಡಿದರು. ಬಳಿಕ ಮಾತನಾಡಿದ ಅವರು, ‘ಕಾರ್ಮಿಕ ನ್ಯಾಯಾಲಯದ ಲೋಕ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥಪಡಿಸಿಕೊಂಡಿರುವ ನೌಕರರಿಗೆ ಆದೇಶ ಪತ್ರಗಳನ್ನು ನೀಡಲಾಗುತ್ತಿದೆ. ಸದ್ಯಕ್ಕೆ 62 ನೌಕರರ ಪ್ರಕರಣ ಇತ್ಯರ್ಥವಾಗಿದೆ’ ಎಂದರು.

‘ವಜಾಗೊಂಡಿರುವ ಎಲ್ಲ ಸಿಬ್ಬಂದಿಯೂ ಲೋಕ ಅದಾಲತ್ ಮೂಲಕ ಮರು ನೇಮಕಕ್ಕೆ ಅವಕಾಶ ಇದೆ. ನ್ಯಾಯಾಲಯದ ಆದೇಶದಂತೆ ಅವರಿಗೆ ನೇಮಕ ಪತ್ರಗಳನ್ನು ವಿತರಿಸಲಾಗುವುದು. ಆದ್ದರಿಂದ ಎಲ್ಲರೂ ವಕೀಲರ ಮೂಲಕ ಲೋಕ ಅದಾಲತ್ ಮುಂದೆ ಅರ್ಜಿ ಸಲ್ಲಿಸಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳಬೇಕು’ ಎಂದು ಹೇಳಿದರು.

ಎಲ್ಲವೂ ಕಾನೂನಿನ ಪ್ರಕಾರವೇ ನಡೆಯುತ್ತಿದೆ. ನ್ಯಾಯಾಲಯದ ಆದೇಶದಂತೆ ಸಂಸ್ಥೆ ನಡೆದುಕೊಳ್ಳುತ್ತಿದೆ. ನೌಕರರಿಗೆ ತೊಂದರೆ ನೀಡುವ ಉದ್ದೇಶ ಸಂಸ್ಥೆಗೆ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಮಾತನಾಡಿ, ‘ಲೋಕ ಅದಾಲತ್‌ನಲ್ಲಿ ಇನ್ನೂ 300ಕ್ಕೂ ಹೆಚ್ಚು ಅರ್ಜಿಗಳು ವಿಚಾರಣೆ ನಡೆಯುತ್ತಿವೆ. ನಿಗಮದ ವಕೀಲರು ತಪ್ಪದೆ ಹಾಜರಾಗಿ ಪ್ರಕರಣ ಇತ್ಯರ್ಥಪಡಿಸಲು ಸಹಕರಿಸುತ್ತಿದ್ದಾರೆ. ಇತ್ಯರ್ಥ ಆದವರಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿಳಂಬ ಮಾಡದೆ ನೀಡಲಾಗುವುದು’ ಎಂದು ಹೇಳಿದರು.



ವಜಾಗೊಂಡಿದ್ದ ನೌಕರರಿಗೆ ಪುನರ್ ನೇಮಕಾತಿ ಆದೇಶದ ಪತ್ರವನ್ನು ಬಿಎಂಟಿಸಿ ಅಧ್ಯಕ್ಷ ಎನ್.ಎಸ್.ನಂದೀಶ್ ರೆಡ್ಡಿ ವಿತರಿಸಿದರು. ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮತ್ತು ನಿರ್ದೇಶಕಿ (ಭದ್ರತಾ ಮತ್ತು ಜಾಗೃತಾ) ರಾಧಿಕಾ ಜಿ. ಇದ್ದರು — ಪ್ರಜಾವಾಣಿ ಚಿತ್ರ

ಲೋಕ ಅದಾಲತ್ ಬೇಡ

‘ನೌಕರರ ಮೇಲೆ ಒತ್ತಡ ಹೇರಿ ಲೋಕ ಅದಾಲತ್ ಮೂಲಕ ಷರತ್ತುಗಳಿಗೆ ಒಪ್ಪಿಸಲಾಗುತ್ತಿದೆ. ನೌಕರರ ಬದುಕನ್ನು ಬೀದಿಗೆ ತಳ್ಳಲಾಗುತ್ತಿದೆ. ಲೋಕ ಅದಾಲತ್ ಮುಂದೆ ನೌಕರರು ಅರ್ಜಿ ಸಲ್ಲಿಸಬಾರದು’ ಎಂದು ಸಾರಿಗೆ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ಹೇಳಿದರು.

ಆದೇಶ ಪತ್ರ ವಿತರಣೆ ಮಾಡುತ್ತಿರುವ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ಲೋಕ ಅದಾಲತ್‌ನಲ್ಲಿ ಷರತ್ತುಗಳಿಗೆ ಒಪ್ಪಿಕೊಂಡು ನೇಮಕ ಆಗುತ್ತಿರುವ ನೌಕರರಿಗೆ ನಿವೃತ್ತಿ ಸಂದರ್ಭದಲ್ಲಿ ₹12 ಲಕ್ಷದಿಂದ ₹17 ಲಕ್ಷದ ತನಕ ನಷ್ಟವಾಗುತ್ತದೆ. ಒಮ್ಮೆ ಒಪ್ಪಿಕೊಂಡರೆ ಮುಂದೆ ಮೇಲ್ಮನವಿ ಸಲ್ಲಿಸಲೂ ಅವಕಾಶವಿಲ್ಲ. ಆದ್ದರಿಂದ ಲೋಕ ಅದಾಲತ್ ಅವಶ್ಯಕತೆ ಇಲ್ಲ. ಯಾವುದೇ ಷರತ್ತಿಲ್ಲದೆ ಮರು ನೇಮಕಕ್ಕೆ ಸರ್ಕಾರ ಮುಂದಾಗಬೇಕು’ ಎಂದು ಒತ್ತಾಯಿಸಿದರು.

ನಗರದಲ್ಲಿ ಇಂದು

ಮುತ್ಯಾಲಮ್ಮ ದೇವಿ ರಥೋತ್ಸವ: ದೀಪಾಲಂಕಾರ, ಆಯೋಜನೆ–ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಸ್ಥಳ–ದೇವಸ್ಥಾನದ ಆವರಣ, ಸಪ್ಪಿಂಗ್ಸ್ ರಸ್ತೆ, ಶಿವಾಜಿನಗರ, ಬೆಳಿಗ್ಗೆ 5ರಿಂದ

ಹೈಪರ್ ಬ್ಯಾರಿಕ್ ಆಕ್ಸಿಜನ್ ಥೆರಪಿ ಘಟಕದ ಉದ್ಘಾಟನೆ: ಸಚಿವ ಕೆ.ಸುಧಾಕರ್, ಅಧ್ಯಕ್ಷತೆ–ಶಾಸಕ ಬಿ.ಜಡ್.ಜಮೀರ್ ಅಹಮದ್ ಖಾನ್, ಅತಿಥಿಗಳು–ಶಾಸಕ ಉದಯ್ ಬಿ.ಗರುಡಾಚಾರ್, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಆಯೋಜನೆ ಮತ್ತು ಸ್ಥಳ–ವಿಕ್ಟೋರಿಯಾ ಆಸ್ಪತ್ರೆ, ಬೆಳಿಗ್ಗೆ 9

‘ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ–ಇಂದಿನ ಸ್ಥಿತಿಗತಿ’ ಕುರಿತು ತಜ್ಞ ಎಂಜಿನಿಯರ್‌ಗಳ ಸಂವಾದ: ಆಯೋಜನೆ ಮತ್ತು ಸ್ಥಳ–ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಬಿ.ಆರ್.ಅಂಬೇಡ್ಕರ್ ವೀದಿ, ಬೆಳಿಗ್ಗೆ 11

ಭಗತ್ ಸಿಂಗ್ ನಾಟಕ ಪ್ರದರ್ಶನ: ಉದ್ಘಾಟನೆ–ಮಂಜುನಾಥ ಸಾರಥಿ, ಶಿವರುದ್ರಪ್ಪ, ಅತಿಥಿಗಳು–ಜೆ.ರಾಮಕೃಷ್ಣ, ಆಯೋಜನೆ–ಬಸವ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6.30

‘ಬೀಚಿ ರಸಾಯನ’ ನಾಟಕ ಪ್ರದರ್ಶನ: ಆಯೋಜನೆ–ಡ್ರಾಮಾಟ್ರಿಕ್ಸ್, ಸ್ಥಳ–ರಂಗಶಂಕರ, ಜೆ.ಪಿ.ನಗರ, ಸಂಜೆ 7.30

‘ವಿದಿಶಾ ಪ್ರಹಸನ’ ನಾಟಕ ಪ್ರದರ್ಶನ: ನಿರ್ದೇಶನ–ಚಿದಂಬರ ರಾವ್ ಜಂಬೆ, ಆಯೋಜನೆ–ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ, ಸ್ಥಳ–ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30ಕ್ಕೆ (ಏ.14ರವರೆಗೆ ಪ್ರದರ್ಶನ ಇರಲಿದೆ)

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ–ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್, ಎಲ್ಲಾ ವೆಂಕಟೇಶ್ವರ ರಾವ್, ಜಿ.ಗುರುಪ್ರಸನ್ನ, ಗಿರಿಧರ್ ಉಡುಪ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ



ಮೈಸೂರು ಎಂ.ನಾಗರಾಜ್, ಡಾ. ಮೈಸೂರು ಎಂ. ಮಂಜುನಾಥ್

‘ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರಾಮ ಹಾಗೂ ಗ್ರಾಮೀಣ ನಿವಾಸಿಗಳ ಅಭ್ಯುದಯದ ಉದ್ದೇಶದೊಂದಿಗೆ ಕರ್ನಾಟಕದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರತಿನಿಧಿಗಳಿಗಾಗಿ ಇಲ್ಲಿನ ವಿಜ್ಞಾನ ಭವನದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಅವರು, ‘ರಾಷ್ಟ್ರದ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ’ ವಿಷಯ ಕುರಿತು ಮಾತನಾಡಿದರು.

ರಾಜ್ಯ ಸರ್ಕಾರ ಮಕ್ಕಳ ಮತ್ತು ಮಹಿಳಾ ಸ್ನೇಹಿ ಪಂಚಾಯಿತಿಗಳಿಗೆ ಒತ್ತು ನೀಡುತ್ತಿದೆ. ಗ್ರಾಮ ಪಂಚಾಯಿತಿಗಳು ಅಭಿವೃದ್ಧಿಗೆ ಪೂರಕ ಚಟುವಟಿಕೆ ಹಮ್ಮಿಕೊಳ್ಳುತ್ತಿದ್ದು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿ ಗ್ರಾಮೀಣರಿಗೆ ಉದ್ಯೋಗ ಒದಗಿಸಲಾಗುತ್ತಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ‘ಜಲಜೀವನ್ ಮಿಷನ್’ ಅಡಿ ಮನೆ-ಮನೆಗೆ ನಲ್ಲಿ ಮೂಲಕ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ಬಹುತೇಕ ಗ್ರಾಮೀಣ ಪ್ರದೇಶಗಳು ಈಗಾಗಲೇ ಬಯಲು ಬಹಿರ್ದೆಸೆಯಿಂದ ಮುಕ್ತವಾಗಿವೆ. ಘನ ಮತ್ತು ದ್ರವ ತ್ಯಾಜ್ಯಗಳ ವಿಲೇವಾರಿ ಘಟಕಗಳನ್ನು ಪ್ರತಿ ಪಂಚಾಯಿತಿ ಮಟ್ಟದಲ್ಲಿ ಸ್ಥಾಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಪಂಚಾಯಿತಿ ಸದಸ್ಯರ ಆಯ್ಕೆಗೆ ಚುನಾವಣೆ ನಡೆಸಲು ಎಲ್ಲ ರಾಜ್ಯಗಳಲ್ಲೂ ಕ್ರಮ ಕೈಗೊಳ್ಳುವ ಮೂಲಕ, ವಿವಿಧ ಯೋಜನೆಗಳ ಪ್ರಯೋಜನ ಪಡೆಯಬೇಕು ಎಂದು ಕೇಂದ್ರದ ಪಂಚಾಯಿತಿರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಇದೇ ವೇಳೆ ಸಲಹೆ ನೀಡಿದರು.

ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಕಾರ್ಯಾಗಾರ ಉದ್ಘಾಟಿಸಿದರು. ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್, ಮತ್ತಿತರರು ಹಾಜರಿದ್ದರು.

ದೆಹಲಿ ರೇಸ್

ಅಡೋರಬಲ್ ಗೆಲ್ಲುವ ನಿರೀಕ್ಷೆ

ವ್ಯಾಲಿಡೇಟ್ ಪ್ಲೇಟ್ ಮಂಗಳವಾರದ ದೆಹಲಿ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಡೋರಬಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಶ್ವ ಟೆಂಜಿಂಗ್ 2, ಕ್ಯಾಪ್ಟನ್ ಫಾಲ್ಕನ್ 3, ಗಮಾಟ 7
2ನೇ ರೇಸ್: ನಿಚೆ ಸ್ಟಾರ್ಮ್ 7, ಆರ್ಗ್ಯಾನಿಕ್ ಮಾಂಕ್ 9, ಜ್ಯಾಕ್ ದಿ ರಿಪ್ಪರ್ 6
3ನೇ ರೇಸ್: ಅಡೋರಬಲ್ 2, ಜಂಗಲ್ ವೇವ್ 1, ಅನ್‌ಡಿಸ್ಪ್ಯೂಟೆಡ್ 5
4ನೇ ರೇಸ್: ಅಕ್ಷಯಗುಣ 2, ಮಿಸ್ ಎನೇಬಲ್ 10, ಸನ್‌ಚೇಸರ್ 5
5ನೇ ರೇಸ್: ಸರ್ಕಲ್ ಆಫ್ ಗೋಲ್ಡ್ 9, ಮಿಸ್ ಲೀ 7, ಡ್ಯಾಶಿಂಗ್ ಬ್ಲೋ 1
6ನೇ ರೇಸ್: ಅಶ್ವ ಕ್ರಿಸ್ಟಲ್ 3, ಶೈಲಿಕ 9, ಮಿಸ್ ಕೊಲಂಬಿಯಾನ 2
7ನೇ ರೇಸ್: ಅಶ್ವ ಡಂಟೊ 3, ಹರೆ ಕಾ ಸಹಾರ 6, ಫಾರ್ಗೋ 15

ಉತ್ತಮ ಬೆಟ್: ಅಶ್ವ ಡ್ರಂಟೊ

ಜಾಕ್‌ಪಾಟ್	ಟ್ರಿಬಲ್
3,4,5,6,7	5,6,7

'ಬೆಲೆ ಏರಿಕೆ ಮುಕ್ತ ಭಾರತ'ಕ್ಕೆ ಆಗ್ರಹಿಸಿ ಪ್ರತಿಭಟನೆ • ಪಂಚರಾಜ್ಯ ಚುನಾವಣೆ ಬಳಿಕ ನಿತ್ಯವೂ ಬೆಲೆ ಏರಿಕೆ ಆರೋಪ

ಕೇಂದ್ರದ ವಿರುದ್ಧ ಕಾಂಗ್ರೆಸ್ ಆಕ್ರೋಶ

ಪ್ರಜಾವಾಣಿ ವಾರ್ತೆ



ತೈಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪಕ್ಷದ ಮುಖಂಡರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ತೈಲ, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ಕೇಂದ್ರ ಸರ್ಕಾರ, ಜನಸಾಮಾನ್ಯರ ಲೂಟಿಗೆ ಇಳಿದಿದೆ' ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷದಿಂದ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು, 'ಬೆಲೆ ಏರಿಕೆ ಮುಕ್ತ ಭಾರತ'ವಾಗಲಿ ಎಂದು ಆಗ್ರಹಿಸಿದರು. 'ಕೇಂದ್ರ ಸರ್ಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ' ಎಂಬ ಬರಹವುಳ್ಳ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಅಡುಗೆ ಅನಿಲ ಸಿಲಿಂಡರ್‌ಗಳಿಗೆ ಪೂಜೆ ಮಾಡಿ, ಕಟ್ಟಿಗೆಯ ಒಲೆಯಿಂದ ಅಡುಗೆ ತಯಾರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಡುಗೆ ಎಣ್ಣೆ, ರಸಗೊಬ್ಬರ, ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದೆ. ಇದರಿಂದಾಗಿ ಸಾಮಾನ್ಯ ಜನರ ಬದುಕು ದುಸ್ತರವಾಗಿದೆ' ಎಂದರು.

'ಪಂಚರಾಜ್ಯ ಚುನಾವಣೆ ಮುಗಿದ ದಿನದಿಂದಲೇ ನಿತ್ಯವೂ ಬೆಲೆ ಏರಿಕೆ ಆಗುತ್ತಿದೆ. ಕೇಂದ್ರ ಸರ್ಕಾರ, ಬಡವರ ಲೂಟಿಗೆ ಇಳಿದಿದೆ. ದೇಶದ ಹಲವು ಉದ್ದಿಮೆದಾರರು, ಸರ್ಕಾರದ ಕಿರುಕುಳದಿಂದಾಗಿ ದೇಶ ತೊರೆಯುತ್ತಿದ್ದಾರೆ. ತೈಲ ಹಾಗೂ ದಿನಬಳಕೆ ವಸ್ತುಗಳ ದರ ಹೆಚ್ಚಳವಿಂದ ಮಧ್ಯಮ ವರ್ಗ ಹಾಗೂ ಬಡವರು ಜೀವನ ನಡೆಸುವುದೇ ಕಷ್ಟವಾಗಿದೆ' ಎಂದೂ ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಬಿಜೆಪಿ ಸರ್ಕಾರ ಎಂದರೆ ಸುಳ್ಳಿನ ಕಾರ್ಖಾನೆ. ಮೋದಿ ಅವರು ಪ್ರಧಾನಿಯಾದ ನಂತರ ನಿರಂತರವಾಗಿ ಸುಳ್ಳು ಹೇಳುತ್ತಾ ಬಂದಿದ್ದಾರೆ. ಸ್ವಾತಂತ್ರ್ಯ ಭಾರತದಲ್ಲಿ ಮೋದಿಯವರಷ್ಟು ಸುಳ್ಳು ಹೇಳಿದ ಪ್ರಧಾನಿ ಮತ್ತೊಬ್ಬರಿಲ್ಲ' ಎಂದರು.

'ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ ಡೀಸೆಲ್ ಮೇಲೆ ₹ 3.46 ಸುಂಕ ಹಾಗೂ ಪೆಟ್ರೋಲ್ ಮೇಲೆ ₹ 9.20 ಅಬಕಾರಿ ಸುಂಕ ಇತ್ತು. ಆದರೆ, ಇಂದು ₹ 31.84 ಸುಂಕ, ₹ 32.98 ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಇದು ಕೇಂದ್ರ ಸರ್ಕಾರ ಮಾಡುತ್ತಿರುವ ಲೂಟಿ' ಎಂದೂ ದೂರಿದರು.

ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, 'ಒಂದು ಅವಕಾಶ ಕೊಡಿ ಸ್ವರ್ಗ ತೋರಿಸುತ್ತೇವೆ' ಎಂದು ಹೇಳಿದ್ದ ಮೋದಿ ಅವರು ಈಗ ಮತದಾರರಿಗೆ ನರಕ ತೋರಿಸುತ್ತಿದ್ದಾರೆ ಎಂದರು.

ಎಐಸಿಸಿ ಕಾರ್ಯದರ್ಶಿ ರಮಿಂದರ್ ಸಿಂಗ್ ಅವ್ಲಾ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ ಪಾಟೀಲ, ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಆರ್. ಧ್ರುವ ನಾರಾಯಣ, ಈಶ್ವರ್ ಖಂಡ್ರೆ, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಶಾಸಕರಾದ ಕೃಷ್ಣ ಬೈರೇಗೌಡ, ಕೆ.ಜೆ.ಜಾರ್ಜ್ ಪ್ರತಿಭಟನೆಯಲ್ಲಿದ್ದರು.

'ಕಾಂಗ್ರೆಸ್‌ಗೆ ಪ್ರತಿಭಟಿಸುವ ನೈತಿಕ ಹಕ್ಕಿಲ್ಲ'

ಬೆಂಗಳೂರು: ಬೆಲೆ ಏರಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ಗೆ ಪ್ರತಿಭಟನೆ ಮಾಡುವ ನೈತಿಕ ಹಕ್ಕಿಲ್ಲ. ದೇಶದಲ್ಲಿ ಅತಿ ಹೆಚ್ಚು ಬೆಲೆ ಏರಿಕೆ ಮಾಡಿದ ಖ್ಯಾತಿ, ಕೀರ್ತಿ ಮತ್ತು ದಾಖಲೆ ಕಾಂಗ್ರೆಸ್‌ನದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಇಲ್ಲಿ ಹೇಳಿದರು.

'ಹಿಜಾಬ್ ವಿಚಾರದಲ್ಲಿ ಮಂಡ್ಯದ ವಿದ್ಯಾರ್ಥಿನಿ ಮುಸ್ಕಾನ್‌ಗೆ ಅಲ್‌ಕೈದಾ ಮುಖ್ಯಸ್ಥ ಅಲ್ ಜವಾಹಿರಿ ಬೆಂಬಲ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಅನಂತ ಕುಮಾರ್ ಹೆಗಡೆ ನನಗೆ ಪತ್ರ ಬರೆದಿದ್ದಾರೆ. ಪತ್ರದಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡು ಅವರ ಜತೆ ಚರ್ಚೆ ಮಾಡಿ, ಅವರಲ್ಲಿ ಇರುವ ಮಾಹಿತಿ ಪಡೆದು, ಅದರ ಆಧಾರದ ಮೇಲೆ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

'ತನಿಖಾ ಸಂಸ್ಥೆಗಳ ದುರ್ಬಳಕೆ: ಕಿರುಕುಳ'

'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ. ಸರ್ಕಾರಗಳು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು, ನಮಗೆಲ್ಲ ನೋಟಿಸ್ ಕೊಡಿಸುತ್ತಿದ್ದಾರೆ. ನಾವೆಲ್ಲರೂ ನ್ಯಾಯ, ನೀತಿ, ಸತ್ಯ, ಧರ್ಮದಲ್ಲಿ ಕೆಲಸ ಮಾಡುತ್ತಿದ್ದು, ನಮ್ಮ ಹೋರಾಟ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ' ಎಂದು ಡಿ.ಕೆ. ಶಿವಕುಮಾರ್ ಎಚ್ಚರಿಸಿದರು.

ಸುದ್ದಿ 2 ನಿಮಿಷ

ಅಂಜನಾದ್ರಿಯಲ್ಲಿ ಸಂತ ಸಮಾವೇಶ ಇದೇ 16ರಂದು

ಕೊಪ್ಪಳ: ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯಲ್ಲಿನ ಆಂಜನೇಯ ಸ್ವಾಮಿ ಜಯಂತಿ ಅಂಗವಾಗಿ ಏ.16ರಂದು 1,11,101 ಕುಂಕುಮಾರ್ಚನೆ, ಸಂತ ಸಮಾವೇಶ, ದೇಶದ ಪವಿತ್ರ ನದಿಗಳ ನೀರಿನಿಂದ ಜಲಾಭಿಷೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕ ವಿದ್ಯಾದಾಸಬಾಬಾ ತಿಳಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ13 ರಿಂದ 21 ರವರೆಗೆ 10 ದಿನಗಳ ಕಾಲ ಜಯಂತ್ಯುತ್ಸವ ಪ್ರಯುಕ್ತ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಹನುಮಾನ್ ಜನ್ಮಭೂಮಿ ಮಂದಿರ ಅಂಜನಿ ಪರ್ವತ, ಕಿಷ್ಕಿಂಧಾ ಪೀಠದ ಪೀಠಾಧಿಪತಿಯಾಗಿರುವ ಬಾಬಾ ಅವರು 'ದೇವಸ್ಥಾನದಲ್ಲಿ ಈಗ ಯಾವುದೇ ವಿವಾದ ಇಲ್ಲ. ಹೈಕೋರ್ಟ್ ಪೂಜೆಯ ಹಕ್ಕನ್ನು ನಮಗೆ ನೀಡಿದೆ. ಅಲ್ಲದೆ ಧಾರ್ಮಿಕ ಕಾರ್ಯ ಸೇರಿದಂತೆ ಹೋಮ, ಹವನ ನಡೆಸಲು ಅವಕಾಶವಿದೆ' ಎಂದರು.

'ಚಿತ್ರಕೂಟ, ಕಾಶಿ, ಗಂಗೋತ್ರಿ, ಹರಿದ್ವಾರ, ಹೃಷಿಕೇಶ, ಮಥುರಾ, ಉಜ್ಜಯಿನಿ ಸೇರಿದಂತೆ ವಿವಿಧ ಭಾಗಗಳಿಂದ 200ಕ್ಕೂ ಹೆಚ್ಚು ಸಾಧು, ಸಂತರು ಪಾಲ್ಗೊಳ್ಳಲಿದ್ದಾರೆ. 108 ತೆಂಗಿನಕಾಯಿ ಅಭಿಷೇಕ, ಸಿಂಧೂರ, ತುಪ್ಪದ ಅಭಿಷೇಕ, ಅಲಂಕಾರ, ಮಾರುತಿ ಮಹಾಯಾಗ, ಪೂರ್ಣಾಹುತಿ, ಮಹಾ ಪ್ರಸಾದ ಜರುಗಲಿದೆ' ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀರಾಮ ಸೇನಾ ವಿಭಾಗೀಯ ಅಧ್ಯಕ್ಷ ಸಂಜೀವ್ ಮರಡಿ ಇದ್ದರು.

ಅಪಘಾತ: ಆಂಬುಲೆನ್ಸ್‌ನಲ್ಲಿ ಬಂದು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿನಿ



ಬೆಳ್ತಂಗಡಿ: ಎಸ್ಸೆಸ್ಸೆಲ್ಸಿಯ ವಿಜ್ಞಾನ ಪರೀಕ್ಷೆ ಬರೆಯಲು ತೆರಳುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ಅಪಘಾತದಿಂದ ಗಾಯಗೊಂಡು, ಬಳಿಕ ಆಂಬುಲೆನ್ಸ್‌ನಲ್ಲಿ ಪರೀಕ್ಷಾ ಕೇಂದ್ರಕ್ಕೆ ಬಂದು, ಸ್ಟ್ರೆಚರ್‌ನಲ್ಲಿ ಮಲಗಿಯೇ ಸಹಾಯಕಿಯ ಮೂಲಕ ಪರೀಕ್ಷೆ ಬರೆದರು.


ಲಾಯಿಲ ಸೇಂಟ್ ಮೇರಿಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ತನ್ವಿ (15) ಸೋಮವಾರ ಪರೀಕ್ಷೆ ಬರೆಯಲು ತಾಯಿ ಮಮತಾ ಜತೆ ಸ್ಕೂಟರ್‌ನಲ್ಲಿ ಬರುತ್ತಿದ್ದಾಗ ಸ್ಕೂಟರ್ ಪಲ್ಟಿಯಾಗಿ ತನ್ವಿಯ ಕೈ, ಕಾಲು ಮತ್ತು ಮುಖಕ್ಕೆ ಗಾಯವಾಗಿದೆ. ತಕ್ಷಣ ಆಕೆಯನ್ನು ಉಜಿರೆಯ ಬೆನಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿತ್ತು.

ಬಾಲಕಿ ಓದುತ್ತಿದ್ದ ಶಾಲೆಯ ಆಡಳಿತ ಮಂಡಳಿಯವರು ವಿದ್ಯಾರ್ಥಿನಿಯ ಆರೋಗ್ಯ ವಿಚಾರಿಸಿ, 9ನೇ ತರಗತಿಯ ವಿದ್ಯಾರ್ಥಿನಿಯ ಸಹಾಯದಲ್ಲಿ ಪರೀಕ್ಷೆ ಬರೆಯಲು ಶಿಕ್ಷಣ ಇಲಾಖೆಯ ಮೇಲಧಿಕಾರಿಗಳಿಂದ ವಿಶೇಷ ಅನುಮತಿ ದೊರಕಿಸಿಕೊಟ್ಟರು. ಬಳಿಕ ಉಜಿರೆ ಬೆನಕ ಆಸ್ಪತ್ರೆಯ ಮುಖ್ಯಸ್ಥ ಡಾ.ಗೋಪಾಲಕೃಷ್ಣ ಅವರು ಇಬ್ಬರು ಸಿಬ್ಬಂದಿಯ ಜತೆ ಆಂಬುಲೆನ್ಸ್‌ನಲ್ಲಿ ವಿದ್ಯಾರ್ಥಿನಿಯನ್ನು ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿದರು. ಪರೀಕ್ಷೆ ನಂತರ ವಿದ್ಯಾರ್ಥಿನಿಯನ್ನು ಆಸ್ಪತ್ರೆಗೆ ಕರೆತಂದು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ .

ಮೇ ಮೊದಲನೇ ವಾರ ಎಸ್‌ಎಸ್‌ಎಲ್‌ಸಿ ಫಲಿತಾಂಶ: ಸಚಿವ ಬಿ.ಸಿ.ನಾಗೇಶ್

ಈ ವರ್ಷದಿಂದಲೇ ಪಠ್ಯದಲ್ಲಿ ಭಗವದ್ಗೀತೆ

ಪ್ರಜಾವಾಣಿ ವಾರ್ತೆ



ಬಿ.ಸಿ. ನಾಗೇಶ್

ಆಲಮಟ್ಟಿ (ವಿಜಯಪುರ ಜಿಲ್ಲೆ): 'ಶಾಲೆಗಳಲ್ಲಿ ನೈತಿಕ ಶಿಕ್ಷಣಕ್ಕೆ ಒತ್ತು ನೀಡುವ ಉದ್ದೇಶದಿಂದ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಪಠ್ಯಪುಸ್ತಕದಲ್ಲಿ ಭಗವದ್ಗೀತೆ ಅಳವಡಿಸಲಾಗುವುದು' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಆಲಮಟ್ಟಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನೈತಿಕ ಶಿಕ್ಷಣ ಈಗಿನ ಅಗತ್ಯವಿದ್ದು, ರಾಮಾಯಣ, ಮಹಾಭಾರತ ಸೇರಿದಂತೆ ನೈತಿಕ ಗುಣ ಬೆಳೆಸುವ ಕತೆಗಳನ್ನು ಅಳವಡಿಸಲಾಗುವುದು' ಎಂದು ತಿಳಿಸಿದರು.

'ಅಬ್ದುಲ್ ಕಲಾಂ ಅವರು ಭಗವದ್ಗೀತೆಯಲ್ಲಿ ಶಕ್ತಿ ಅಡಗಿದೆ ಎಂದು ಹೇಳಿದ್ದಾರೆ. ಭಗವದ್ಗೀತೆ ಧಾರ್ಮಿಕ ಆಚರಣೆಯಲ್ಲ, ಪೂಜಾ ವಿಧಾನವೂ ಅಲ್ಲ, ಅದರ ಸಾರವನ್ನು ಎಲ್ಲ ಧರ್ಮೀಯರೂ ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ, ಜೀವನಕ್ಕೆ ಬೇಕಾದ ಮಾರ್ಗದರ್ಶನ ಅದರಲ್ಲಿ ಅಡಗಿದೆ' ಎಂದರು.

'ಭಗವದ್ಗೀತೆಯ ಯಾವ ಸಾರವನ್ನು ನೈತಿಕ ವಿಷಯದ ಪಠ್ಯದಲ್ಲಿ ಅಳವಡಿಸಬೇಕೆಂಬುದನ್ನು ಶೀಘ್ರದಲ್ಲಿ ನಿರ್ಧರಿಸಲಾಗುವುದು' ಎಂದು ತಿಳಿಸಿದರು.

'ಪಠ್ಯದಲ್ಲಿ ಟಿಪ್ಪುವಿನ ಬಗ್ಗೆ ಕೊಟ್ಟಿರುವ ರೀತಿ ನೀತಿ ಸರಿಯಲ್ಲ. ಟಿಪ್ಪುವಿನ ಒಂದು ಮುಖ ಮಾತ್ರ ಪಠ್ಯದಲ್ಲಿ ತೋರಿಸಲಾಗಿದೆ. ಈ ವರ್ಷ ಪಠ್ಯದಿಂದ ಟಿಪ್ಪು ವಿಷಯ ತೆಗೆದಿಲ್ಲ, ವೋಟ್ ಬ್ಯಾಂಕಿಗಾಗಿ ಕಾಂಗ್ರೆಸ್ ನವರು ಈ ವಿಷಯದಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ' ನಾಗೇಶ್ ಅವರು ಹೇಳಿದರು.

20 ಸಾವಿರ ಶಾಲೆಗಳಲ್ಲಿ ಎನ್‌ಇಪಿ


ಆಲಮಟ್ಟಿ: ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದ 20 ಸಾವಿರ ಪ್ರಾಥಮಿಕ ಶಾಲೆಗಳಲ್ಲಿ ಹೊಸ ಶಿಕ್ಷಣ ನೀತಿಯನ್ವಯ ಬೋಧನೆ ಆರಂಭಿಸಲಾಗುವುದು ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಹೊಸ ಶಿಕ್ಷಣ ನೀತಿಯನ್ನು ಕಲ್ಯಾಣ ಕರ್ನಾಟಕ ಪ್ರದೇಶದ ಹೆಚ್ಚಿನ ಶಾಲೆಗಳಲ್ಲಿ ಜಾರಿಗೆ ತರಲಾಗುವುದು. ಶಿಥಿಲಾವಸ್ಥೆಯಲ್ಲಿರುವ ಪ್ರಾಥಮಿಕ ಕೊಠಡಿಗಳ ದುರಸ್ತಿಗೂ ಕ್ರಮ ಕೈಗೊಳ್ಳಲಾಗುವುದು ಎಂದರು.


ರಾಜ್ಯದಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರವಾಗಿ ಮುಕ್ತಾಯವಾಗಿದ್ದು, ಮೇ ಮೊದಲ ವಾರ ಫಲಿತಾಂಶ ಪ್ರಕಟಿಸಲಾಗುವುದು. ಮೊದಲ ಬಾರಿ ಪರೀಕ್ಷೆ ಬರೆಯುತ್ತಿರುವವರಲ್ಲಿ ಹಾಜರಾತಿ ಪ್ರಮಾಣ ಶೇ 98ಕ್ಕಿಂತ ಹೆಚ್ಚು ಇದೆ. ಏಪ್ರಿಲ್ ಕೊನೆಯ ವಾರದಲ್ಲಿ ಮೌಲ್ಯಮಾಪನ ಪ್ರಕ್ರಿಯೆ ಆರಂಭವಾಗುತ್ತದೆ. ಜೂನ್ 4ನೇ ವಾರದಲ್ಲಿ ಪೂರಕ ಪರೀಕ್ಷೆ ನಡೆಯಲಿದೆ ಎಂದು ತಿಳಿಸಿದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ತಿಪ್ಪಣ್ಣ, ಕಣ್ಣನ್, ಬಲ್ಡೋಟಗೆ ಗೌರವ ಡಾಕ್ಟರೇಟ್



ಎನ್. ತಿಪ್ಪಣ್ಣ



ಹಿರೇಮಗಳೂರು ಕಣ್ಣನ್



ಎನ್.ಕೆ. ಬಲ್ಡೋಟ

ಬಳ್ಳಾರಿ: ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಎನ್. ತಿಪ್ಪಣ್ಣ, ವಾಗ್ಮಿ ಹಿರೇಮಗಳೂರು ಕಣ್ಣನ್ ಹಾಗೂ ಉದ್ಯಮಿ ನರೇಂದ್ರ ಕುಮಾರ್ ಬಲ್ಡೋಟ ಅವರಿಗೆ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ (ವಿಎಸ್‌ಕೆಯು) ಗೌರವ ಡಾಕ್ಟರೇಟ್ ದೊರೆತಿದೆ.

ಮಂಗಳವಾರ ವಿಎಸ್‌ಕೆಯು 9ನೇ ಘಟಿಕೋತ್ಸವದಲ್ಲಿ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮೂವರಿಗೂ ಗೌರವ ಡಾಕ್ಟರೇಟ್ ಪ್ರದಾನ ಮಾಡುವರು ಎಂದು ಕುಲಪತಿ ಪ್ರೊ. ಸಿದ್ದು ಪಿ. ಅಲಗೂರ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗೌರವ ಡಾಕ್ಟರೇಟ್‌ಗೆ ಒಟ್ಟು ಆರು ಹೆಸರುಗಳು ಪರಿಶೀಲನೆಗೆ ಬಂದಿದ್ದು, ಮೂವರ ಹೆಸರುಗಳನ್ನು ಅಂತಿಮಗೊಳಿಸಲಾಯಿತು. ಆಯ್ಕೆ ಸಮಿತಿ ಅಂತಿಮಗೊಳಿಸಿದ ಹೆಸರುಗಳಿಗೆ ರಾಜ್ಯಪಾಲರು ಅನುಮೋದನೆ ನೀಡಿದರು ಎಂದು ಅಲಗೂರ ವಿವರಿಸಿದರು.

ಗಂಗಾ ರಥಗಳಿಗೆ ಇಂದು ಹಸಿರು ನಿಶಾನೆ

ರಾಮನಗರ: ಜೆಡಿಎಸ್ ಹಮ್ಮಿಕೊಂಡಿರುವ ಜನತಾ ಜಲಧಾರೆ ಕಾರ್ಯಕ್ರಮದ ರಥಗಳಿಗೆ ಇದೇ 12ರಂದು ಮಾಜಿ ಪ್ರಧಾನ ಮಂತ್ರಿ ಎಚ್.ಡಿ. ದೇವೇಗೌಡ ಚಾಲನೆ ನೀಡಲಿದ್ದಾರೆ.

ರಾಮನಗರದ ಗ್ರಾಮ ದೇವತೆ ಚಾಮುಂಡೇಶ್ವರಿ ದೇವಾಲಯದಲ್ಲಿ ಮಂಗಳವಾರ ಬೆಳಗ್ಗೆ 10.30ಕ್ಕೆ ಪೂಜೆ ಸಲ್ಲಿಸಿ ಗಂಗಾ ರಥಗಳಿಗೆ ಚಾಲನೆ ನೀಡಲಾಗುವುದು. ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಸಿ.ಎಂ. ಇಬ್ರಾಹಿಂ ಸೇರಿದಂತೆ ಪಕ್ಷದ ಶಾಸಕರು, ಹಿರಿಯ ಮುಖಂಡರು ಭಾಗಿ ಆಗಲಿದ್ದಾರೆ ಎಂದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'15 ಜನತಾ ಜಲಧಾರೆಗೆ ಕಳಸ ಪ್ರತಿಷ್ಠಾಪನೆ ಮಾಡಲಾಗಿದೆ. ರಾಜ್ಯದ 31 ಜಿಲ್ಲೆಯ 94 ಸ್ಥಳಗಳಲ್ಲಿರುವ ಪ್ರಮುಖ ನದಿ ಹಾಗೂ ಉಪ ನದಿಗಳಲ್ಲಿ ನೀರು ಸಂಗ್ರಹ ಮಾಡುತ್ತೇವೆ. ಎಲ್ಲಾ ರಥಗಳು ಮೇ 8ರೊಳಗೆ ಬೆಂಗಳೂರು ಸೇರಲಿವೆ. ಪಕ್ಷದ ಕಚೇರಿ ಬಳಿ ಬೃಹತ್ ಕಳಸ ಸ್ಥಾಪನೆ ಮಾಡಿ ಅಲ್ಲಿ ಎಲ್ಲಾ ಜಿಲ್ಲೆಗಳಿಂದ ಬಂದ ನೀರನ್ನು ಇಟ್ಟು ಮುಂದಿನ ಚುನಾವಣೆವರೆಗೂ ಪೂಜೆ ಸಲ್ಲಿಸಲಾಗುವುದು' ಎಂದು ಮಾಹಿತಿ ನೀಡಿದರು.

ಹಿಂಸೆಗೆ ಇಳಿದರೆ ಕ್ರಮ: ಸಿ.ಎಂ

ಒಂದನೇ ಪುಟದಿಂದ

ಮಂಗಳೂರಿನಲ್ಲಿ ಲವ್ ಜಿಹಾದ್ ತಡೆಗೆ 'ಹಿಂದೂ ಟಾಸ್ಕ್ ಫೋರ್ಸ್' ರಚನೆ ಕುರಿತಂತೆ ಅವರು 'ಎಲ್ಲದಕ್ಕೂ ಕಾನೂನುಗಳಿವೆ. ಕೆಲವನ್ನು ಹಿಂದಿನ ಸರ್ಕಾರಗಳೇ ಮಾಡಿವೆ. ಬಿಜೆಪಿ ಸರ್ಕಾರ ಹೊಸದಾಗಿ ಮಾಡಿಲ್ಲ. ಕಾನೂನು ಪ್ರಕಾರ ನಡೆಯುವುದು ಸರ್ಕಾರದ ಕರ್ತವ್ಯ' ಎಂದರು.

ಸಿ.ಎಂ ಮೌನ ಏಕೆ –ಖಾದರ್: 'ಆತ್ಮವಿಶ್ವಾಸದ ಮಾತನಾಡಿ ಜನರಿಗೆ ಧೈರ್ಯ ತುಂಬಬೇಕಿದ್ದ ಸಿ.ಎಂ ರಾಜ್ಯವನ್ನು ಗೂಂಡಾಗಳ ಕೈಗೆ ಕೊಟ್ಟು ಮೌನವಾಗಿದ್ದಾರೆ. ಸಮಾಜದಲ್ಲಿ ಶಾಂತಿ ಕದಡುವವರನ್ನು ಸರ್ಕಾರ ಮಟ್ಟ ಹಾಕಬೇಕು. ಈ ವಿಷಯದಲ್ಲಿ ಸಿಎಂ ಸುಮ್ಮನಿರುವುದು ಏಕೆ?' ಎಂದು ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ.ಖಾದರ್ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಯಾವುದೇ ಧರ್ಮದವರು ತಪ್ಪು ಮಾಡಿದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು. ಕೆಲವು ಕೋಮು ಶಕ್ತಿಗಳು ರಾಜ್ಯದಲ್ಲಿ ಸಮಸ್ಯೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿವೆ. ಸರ್ಕಾರ ಸುಮ್ಮನಿದ್ದರೆ, ಅವರಿಗೆ ತಪ್ಪು ಮಾಡಲು ಮತ್ತಷ್ಟು ಧೈರ್ಯ ಬರುವ ಸಾಧ್ಯತೆ ಇರುತ್ತದೆ' ಎಂದು ಅಭಿಪ್ರಾಯಪಟ್ಟರು.

ಮಠಾಧೀಶರು ಧ್ವನಿ ಎತ್ತಬೇಕು: ಡಿಕೆಶಿ

ಒಂದನೇ ಪುಟದಿಂದ

'ಇಂದಿನ ಧರ್ಮಸಂಸತ್‌ನಲ್ಲಿ ಹಲವು ಸ್ವಾಮೀಜಿಗಳಿದ್ದೀರಿ. ಸಮಾನತಾ ದಿನ ಎಂದು ಹೇಳುತ್ತೀರಿ. ಯಾರಿಗೆ ಸಮಾನತೆ ಇದೆ?. ಮಠಗಳು ಸಮಾನತೆಯ ತಳಹದಿ. ಯಾವುದೇ ವ್ಯಕ್ತಿ ಆತ ಯಾವುದೇ ಜಾತಿ, ಧರ್ಮದವನಾಗಿದ್ದರೂ ಮಾನವೀಯತೆಯಿಂದ ಬದುಕಲು, ನೆಮ್ಮದಿಯ ಬದುಕಿಗೆ ನೀವು ಆಶೀರ್ವದಿಸಬೇಕು. ಅವನ ಪರ ಧ್ವನಿ ಎತ್ತಬೇಕು' ಎಂದು ಕೋರಿದರು.

'ಮಹಾಭಾರತದ ಹಸ್ತಿನಾಪುರ ರಾಜಸಭೆಯಲ್ಲಿ ದ್ರೌಪದಿ ವಸ್ತ್ರಾಪಹರಣ ನಡೆಯುತ್ತಿದ್ದಾಗ ದ್ರೋಣಾಚಾರ್ಯ, ಭೀಷ್ಮರಂಥ ಅತಿರಥರು ಅಧರ್ಮ ನಡೆಯುತ್ತಿದ್ದರೂ ಮೌನವಾಗಿ ಕಣ್ಣುಮುಚ್ಚಿ ಕುಳಿತಿದ್ದರು' ಎಂದು ಉಲ್ಲೇಖಿಸಿದರು.

'ಮೇಕೆದಾಟು ಪಾದಯಾತ್ರೆ ಮಾಡಿದಾಗ, ಸರ್ಕಾರಕ್ಕೆ ಹೆದರಿ ಎಷ್ಟೋ ಸ್ವಾಮೀಜಿಗಳು ಭಾಗವಹಿಸಲಿಲ್ಲ. ಆದರೆ, ಮುರುಘಾ ಶ್ರೀಗಳು ರಾಜ್ಯದ ಹಿತಕ್ಕಾಗಿ, ನೀರಿಗಾಗಿ ಒಂದು ಡಜನ್‌ಗೂ ಹೆಚ್ಚು ಸ್ವಾಮೀಜಿಗಳನ್ನು ಕರೆದುಕೊಂಡು ಬಂದು ಆಶೀರ್ವಾದ ಮಾಡಿದರು. ಅದನ್ನು ನನ್ನ ಜೀವನದುದ್ದಕ್ಕೂ ಮರೆಯುವುದಿಲ್ಲ' ಎಂದರು.

ಧರಂಸಿಂಗ್ ಅಣ್ಣನ ಮೊಮ್ಮಗಳು ಎಎಪಿಗೆ

ಮೈಸೂರು: ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಅವರ ಅಣ್ಣನ ಮೊಮ್ಮಗಳು ಧರ್ಮಶ್ರೀ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಸೋಮವಾರ ಸೇರ್ಪಡೆಯಾದರು.

ಇಲ್ಲಿನ ಪತ್ರಕರ್ತರ ಭವನದಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಅವರು, ಧರ್ಮಶ್ರೀ ಅವರಿಗೆ ಟೋಪಿ ತೊಡಿಸಿ, ಶಾಲು ಹಾಕಿ ಪಕ್ಷಕ್ಕೆ ಬರಮಾಡಿಕೊಂಡರು. ಧರ್ಮಶ್ರೀ ಮಾತನಾಡಿ, 'ದೆಹಲಿ ಮಾದರಿಯಲ್ಲಿ ರಾಜ್ಯವೂ ಅಭಿವೃದ್ಧಿಯಾಗಬೇಕು ಎಂಬ ಕಾರಣಕ್ಕೆ ಎಎಪಿ ಸೇರಿದ್ದೇನೆ' ಎಂದರು.


ಬಜೆಟ್ ಅನುಷ್ಠಾನ: ತ್ವರಿತ ಆದೇಶಕ್ಕೆ ಸೂಚನೆ

ಬೆಂಗಳೂರು: ಪ್ರಸಕ್ತ ಬಜೆಟ್‌ನಲ್ಲಿ ಪ್ರಕಟಿಸಿರುವ ಯೋಜನೆಗಳ ಅನುಷ್ಠಾನಕ್ಕೆ ತ್ವರಿತವಾಗಿ ಆದೇಶಗಳನ್ನು ಹೊರಡಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಇತರ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು, ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ಈವರೆಗೂ ಹೊರಡಿಸಿರುವ ಆದೇಶಗಳ ಮಾಹಿತಿ ಪಡೆದರು. ಬಾಕಿ ಇರುವ ಕಾರ್ಯಕ್ರಮಗಳಲ್ಲಿ ಸಂಪುಟ ಸಭೆಯ ಅನುಮೋದನೆ ಅಗತ್ಯವಿಲ್ಲದ ಯೋಜನೆಗಳ ಅನುಷ್ಠಾನಕ್ಕೆ ತ್ವರಿತವಾಗಿ ಆದೇಶ ಹೊರಡಿಸಬೇಕು ಎಂದು ನಿರ್ದೇಶನ ನೀಡಿದರು ಎಂದು ಮೂಲಗಳು ತಿಳಿಸಿವೆ. ಹೆಚ್ಚಿನ ವೆಚ್ಚದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತ್ವರಿತವಾಗಿ ಕಾರ್ಯ ಸಾಧ್ಯತಾ ವರದಿ, ಪರಿಸರ ಹಾನಿ ಕುರಿತ ಅಧ್ಯಯನ ವರದಿಗಳನ್ನು ಪಡೆಯಲು ಪ್ರಕ್ರಿಯೆ ಆರಂಭಿಸಬೇಕು ಎಂಬ ಸೂಚನೆಯನ್ನು ನೀಡಿದ್ದಾರೆ.

ನಿಧನ ವಾರ್ತೆ

ಬಲಿಪ ಪ್ರಸಾದ ಭಾಗವತ



ಬಲಿಪ ಪ್ರಸಾದ್


ಮೂಲ್ಕಿ: ಯಕ್ಷಗಾನ ಭಾಗವತಿಕೆಯ 'ಬಲಿಪ' ಪರಂಪರೆಯ ಕೊಂಡಿ, ಬಲಿಪ ಪ್ರಸಾದ ಭಾಗವತ (46) ಸೋಮವಾರ ನಿಧನ ಹೊಂದಿದರು.

ಅವರಿಗೆ ಪತ್ನಿ ಮತ್ತು ಮೂವರು ಪುತ್ರಿಯರು ಇದ್ದಾರೆ.

ಕಟೀಲು ದುರ್ಗಾಪರಮೇಶ್ವರಿ ಯಕ್ಷಗಾನ ಎರಡನೇ ಮೇಳದ ಪ್ರಧಾನ ಭಾಗವತರಾಗಿದ್ದ ಅವರು, ಗಂಟಲು ಕ್ಯಾನ್ಸರ್ ಕಾರಣ ಪ್ರಸ್ತುತ ವರ್ಷದ ತಿರುಗಾಟದಲ್ಲಿ ಭಾಗವಹಿಸಿರಲಿಲ್ಲ. ಮೂಡುಬಿದಿರೆ ಮಾರೂರು ಸಮೀಪದ ನೂಯಿಯಲ್ಲಿ ಜನಿಸಿದ್ದ ಪ್ರಸಾದ ಅವರು ಬಲಿಪ ನಾರಾಯಣ ಭಾಗವತರ ಪುತ್ರ.

ಪ್ರಸಾದ ಅವರಿಗೆ, ತಂದೆ ನಾರಾಯಣ ಭಾಗವತರೇ ಪ್ರಧಾನ ಗುರುಗಳಾಗಿದ್ದರು. ತಮ್ಮ 15ನೇ ವಯಸ್ಸಿನಲ್ಲಿ ಭಾಗವತಿಕೆ ಆರಂಭಿಸಿದ್ದ ಪ್ರಸಾದ ಅವರು 17ನೇ ವಯಸ್ಸಿನಲ್ಲಿ ಕಟೀಲು ಮೇಳದಲ್ಲಿ ಸೇವೆ ಆರಂಭಿಸಿದ್ದರು. ಪ್ರಸಾದ ಅವರು ಬಲಿಪ ಕುಟುಂಬದ ಮೂರನೇ ತಲೆಮಾರಿನ ಭಾಗವತರಾಗಿದ್ದರು. ಈ ಕುಟುಂಬ ಸಾಂಪ್ರದಾಯಿಕ ಶೈಲಿಯ ಭಾಗವತಿಕೆಯನ್ನು ಕಾಯ್ದುಕೊಂಡು ಬಂದಿದ್ದು, ಇದನ್ನು 'ಬಲಿಪ ಪರಂಪರೆ' ಎಂದು ಗುರುತಿಸುತ್ತಾರೆ.

ಅಪಘಾತ: ಸಂಸದರ ತಮ್ಮ ಸಾವು



ಬಸವರಾಜ ಕರಡಿ

ಕೊಪ್ಪಳ: ಸಂಸದ ಸಂಗಣ್ಣ ಕರಡಿ ಅವರ ತಮ್ಮ ಬಸವರಾಜ ಕರಡಿ (60) ಸೋಮವಾರ ಅಪಘಾತದಲ್ಲಿ ಮೃತಪಟ್ಟರು.

ಟಣಕನಕಲ್ ನಿವಾಸಿಯಾಗಿರುವ ಅವರು ಸಮೀಪದ ಹನುಮನಹಳ್ಳಿ ಗ್ರಾಮಕ್ಕೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಕಾರು ಡಿಕ್ಕಿ ಹೊಡೆದಿದೆ. ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಜಾಗದ ಕೊರತೆಯಿಂದ ನಡೆಯದ ಕೌಟುಂಬಿಕ ವ್ಯಾಜ್ಯ, ಪೋಕ್ಸೊ ವಿಚಾರಣೆ, ನ್ಯಾಯದಾನ ವಿಳಂಬ, ಹೈರಾಣಾದ ಕಕ್ಷಿದಾರರು

ಕ್ಯಾಂಟೀನ್, ಕಾರ್ ಶೆಡ್‌ನಲ್ಲಿ ಕೋರ್ಟ್ ಕಾರ್ಯಕಲಾಪ!

• ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಕಲಾಪ ನಡೆಸಲು ಸ್ಥಳಾವಕಾಶದ ಕೊರತೆ ತೀವ್ರವಾಗಿದ್ದು, ಕ್ಯಾಂಟೀನ್, ಕಾರ್ ಶೆಡ್, ವರಾಂಡವನ್ನೇ ಕೋರ್ಟ್ ಕೊಠಡಿಯನ್ನಾಗಿ ಪರಿವರ್ತಿಸಿ ಕಲಾಪ ನಡೆಸಲಾಗುತ್ತಿದೆ. ಕಕ್ಷಿದಾರರು, ವಕೀಲರು, ನ್ಯಾಯಾಧೀಶರು ನಿತ್ಯ ಪರದಾಡುತ್ತಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಪಕ್ಕದಲ್ಲೇ ಇರುವ ಸಂಕೀರ್ಣದಲ್ಲಿ 15 ನ್ಯಾಯಾಲಯಗಳು ಕಲಾಪ ನಡೆಸುತ್ತಿವೆ. ವಿವಿಧ ವ್ಯಾಜ್ಯಗಳಿಗೆ ಪ್ರತ್ಯೇಕ ನ್ಯಾಯಾಲಯ ಮಂಜೂರಾಗಿ ವರ್ಷಗಳೇ ಕಳೆದಿದ್ದರೂ, ಕಟ್ಟಡಗಳಿಲ್ಲದೆ ಕಲಾಪ ನಡೆಸಲು ಸಾಧ್ಯವಾಗುತ್ತಿಲ್ಲ. ಏಳು ನ್ಯಾಯಾಲಯಗಳಿಗೆ ಕೊಠಡಿ ಕೊರತೆ ಎದುರಾಗಿದೆ. ಈ ಸಮಸ್ಯೆ ನಡುವೆ ಪ್ರಕರಣಗಳೂ ಹೆಚ್ಚುತ್ತಿವೆ.

ನಾಲ್ಕು ವರ್ಷಗಳ ಹಿಂದೆಯೇ ಪ್ರತ್ಯೇಕ ಕೌಟುಂಬಿಕ ನ್ಯಾಯಾಲಯ ಮಂಜೂರಾಗಿದ್ದರೂ, ನಿಯಮಿತವಾಗಿ ಕಲಾಪ ನಡೆಯದೆ, ವಿವಾಹ ವಿಚ್ಛೇದನ ಸೇರಿ ಕೌಟುಂಬಿಕ ಪ್ರಕರಣಗಳ ಇತ್ಯರ್ಥ ವಿಳಂಬವಾಗುತ್ತಿದೆ. ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿರುವ ಮಹಿಳೆಯರು ಚಿಕ್ಕ ಮಕ್ಕಳೊಂದಿಗೆ ದಿನವಿಡೀ ಕಾಯುವ ದೃಶ್ಯಗಳು ಸಾಮಾನ್ಯ.


ಅತ್ಯಂತ ಕಿರಿದಾದ, ಮೂಲೆಯಂತಹ ಜಾಗದಲ್ಲಿ ತ್ವರಿತಗತಿ ನ್ಯಾಯಾಲಯದ ಕಲಾಪ ನಡೆಯುತ್ತಿರುವುದು

‘ಸಮರ್ಪಕವಾಗಿ ಕಲಾಪ ನಡೆದಿದ್ದರೆ ಎರಡು ವರ್ಷಗಳ ಹಿಂದೆಯೇ ವಿಚ್ಛೇದನ ಸಿಗಬೇಕಿತ್ತು. ದಿನಾಂಕ ನಿಗದಿಯಾಗಿದ್ದರೂ ಕೋರ್ಟ್ ಕಟ್ಟಡವಿಲ್ಲದೆ ಕಲಾಪ ನಡೆಯುತ್ತಿಲ್ಲ. ಸುಮ್ಮನೇ ಕಾದು ವಾಪಸ್ ಹೋಗುತ್ತಿದ್ದೇನೆ’ ಎಂದು ಮಹಿಳೆಯೊಬ್ಬರು ನೋವು ತೋಡಿಕೊಂಡರು.

ಪೋಕ್ಸೊ ಪ್ರಕರಣಗಳ ವಿಚಾರಣೆ ಇಕ್ಕಟ್ಟಾದ ಸ್ಥಳದಲ್ಲಿ ನಡೆಯುತ್ತಿದೆ. ದಾಖಲಾತಿ ಕೊಠಡಿ, ಶೌಚಾಲಯ ತೆರವುಗೊಳಿಸಿ, ವರಾಂಡದ ಜಾಗ ಬಳಸಿ ಕೋರ್ಟ್ ರೂಪ ನೀಡಲಾಗಿದೆ. ವರಾಂಡದಲ್ಲಿ ನ್ಯಾಯಾಧೀಶರ ಪೀಠ ಹಾಕುವ ಅನಿವಾರ್ಯ ಸ್ಥಿತಿ ಎದುರಾಗಿದೆ.

ನ್ಯಾಯಾಲಯದ ಹಿಂಬದಿಯಲ್ಲಿದ್ದ ಕಾರ್ ಶೆಡ್ ಹಾಗೂ ಕ್ಯಾಂಟೀನ್ ಕೊಠಡಿಯನ್ನೇ ಕೋರ್ಟ್ ಕೊಠಡಿಯನ್ನಾಗಿಸಿ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ನಡೆಸಲಾಗುತ್ತಿದೆ. 10X10 ಅಳತೆಯ ಕೊಠಡಿಯ ಇಕ್ಕಟ್ಟಿನ ಜಾಗದಲ್ಲಿ ನ್ಯಾಯಾಧೀಶರು, ಸಹಾಯಕರು, ವಕೀಲರು, ಕಕ್ಷಿದಾರರು ಕುಳಿತುಕೊಳ್ಳುತ್ತಾರೆ.

ಕಾರ್ಮಿಕ ನ್ಯಾಯಾಲಯ ಮಂಜೂರಾಗಿ ವರ್ಷವಾಗಿದ್ದು, ಕಲಾಪ ಮಾತ್ರ ಮೈಸೂರು ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಕಕ್ಷಿದಾರರು, ವಕೀಲರು ಅಲ್ಲಿಗೇ ತೆರಳಬೇಕು. ಆರ್ಥಿಕ ಅಪರಾಧಗಳ ನ್ಯಾಯಾಲಯಕ್ಕೂ ಜಾಗ ಇಲ್ಲ. ಆಡಳಿತ ಕಚೇರಿ ಕೊಠಡಿಗಳನ್ನೂ ಕೋರ್ಟ್‌ಗಳನ್ನಾಗಿ ಪರಿವರ್ತಿಸಲಾಗಿದೆ. ಕಕ್ಷಿದಾರರಿಗೆ ಕುಳಿತುಕೊಳ್ಳಲೂ ಜಾಗವಿಲ್ಲ.

ಜಾಗ ಮಂಜೂರಾದರೂ ಹಸ್ತಾಂತರಕ್ಕೆ ತಡೆ

ಏಳು ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ವರ್ಷದ ಹಿಂದೆಯೇ ತೋಟಗಾರಿಕೆ ಇಲಾಖೆಯ 2.30 ಎಕರೆ ಭೂಮಿ ಮಂಜೂರಾಗಿದೆ. ಜಿಲ್ಲಾ ನ್ಯಾಯಾಲಯಕ್ಕೆ ಕೂಗಳತೆ ದೂರದಲ್ಲೇ ಇದ್ದು ಕಕ್ಷಿದಾರರು ಹಾಗೂ ವಕೀಲರಿಗೆ ಅನುಕೂಲವಾಗಲಿದೆ.

ಆದರೆ, ಭೂಮಿಯನ್ನು ಕೋರ್ಟ್ ನಿರ್ಮಾಣಕ್ಕೆ ನೀಡಬಾರದು ಎಂದು ಸಂಘಟನೆಗಳು ವಿರೋಧಿಸಿವೆ. ಸಂಸದೆ ಸುಮಲತಾ ಮಂಜೂರಾತಿ ಪರವಾಗಿದ್ದರೆ, ಜೆಡಿಎಸ್ ಶಾಸಕರೆಲ್ಲರೂ ವಿರುದ್ಧವಿದ್ದಾರೆ. ರಾಜಕೀಯ ರೂಪ ಪಡೆದಿರುವ ವಿವಾದದಿಂದ ಭೂಮಿ ಹಸ್ತಾಂತರ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ.

‘ತೋಟಗಾರಿಕೆ ಜಾಗಕ್ಕಾಗಿ ವಕೀಲ ಸಮೂಹ ಹಟ ಹಿಡಿದಿರುವುದು ಸರಿಯಲ್ಲ, ಪರ್ಯಾಯ ಜಾಗದಲ್ಲಿ ಕೋರ್ಟ್ ನಿರ್ಮಾಣವಾಗಲಿ. ತೋಟಗಾರಿಕೆ ಇಲಾಖೆ ಭೂಮಿ ಉಳಿಸಿಕೊಳ್ಳಲು ಹೋರಾಟ ನಡೆಸಲಾಗುವುದು’ ಎಂದು ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಹೇಳಿದರು.

‘ಕೋರ್ಟ್ ಸಮೀಪದಲ್ಲಿರುವ ಮಂಡ್ಯ ವಿಶ್ವವಿದ್ಯಾಲಯದಲ್ಲಿ ಒಂದೆರಡು ಕೊಠಡಿ ಬಿಟ್ಟುಕೊಡುವಂತೆ ಕೋರಿದ್ದೆವು. ಆರಂಭದಲ್ಲಿ ಒಪ್ಪಿದ್ದರು, ನಂತರ ನಿರಾಕರಿಸಿದರು. ಕಲಾಪ ತಡವಾಗುತ್ತಿದ್ದು ನ್ಯಾಯದಾನವೂ ವಿಳಂಬವಾಗುತ್ತಿದೆ. ಗೌರವಾನ್ವಿತ ನ್ಯಾಯಾಧೀಶರನ್ನು ಕ್ಯಾಂಟೀನ್ ಜಾಗದಲ್ಲಿ ಕೂರಿಸುತ್ತಿರುವುದಕ್ಕೆ ಜಿಲ್ಲೆಯ ವಕೀಲ ಸಮೂಹಕ್ಕೆ ನೋವಾಗಿದೆ’ ಎಂದು ಮಂಡ್ಯ ವಕೀಲರ ಸಂಘದ ಅಧ್ಯಕ್ಷ ಎಂ.ಟಿ.ರಾಜೇಂದ್ರ ಬೇಸರ ವ್ಯಕ್ತಪಡಿಸಿದರು.


ಅನುದಾನ ವಾಪಸ್: ಮಂಜೂರಾಗಿದ್ದ ಏಳು ಕೋರ್ಟ್ ಕಟ್ಟಡ ನಿರ್ಮಾಣ ಹಾಗೂ ಮೂಲಸೌಕರ್ಯಕ್ಕೆಂದು 2017ರಲ್ಲೇ ಸರ್ಕಾರ ₹ 24 ಕೋಟಿ ಹಣ ಬಿಡುಗಡೆ ಮಾಡಿದ್ದರೂ, ಜಾಗವಿಲ್ಲದೆ ವಾಪಸ್ ಹೋಗಿದೆ. ಪ್ರತಿ ವರ್ಷ ಪ್ರಸ್ತಾವ ಸಲ್ಲಿಸಲಾಗುತ್ತಿದ್ದು ನಾಲ್ಕು ವರ್ಷಗಳಿಂದ ಹಣ ಮಂಜೂರಾಗಿ ವಾಪಸ್ ಹೋಗುತ್ತಿದೆ.

‘2027ಕ್ಕೆ ಪಾಂಡವಪುರ ತಾಲ್ಲೂಕು ಇಂಗಲಗುಪ್ಪೆ ಛತ್ರ ಗ್ರಾಮದ ಬಿ.ವಿ.ನಾಗರತ್ನಾ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗುತ್ತಾರೆ. ಅವರ ತವರು ಜಿಲ್ಲೆಯಲ್ಲೇ ನ್ಯಾಯಾಲಯಕ್ಕೆ ಸೂಕ್ತ ಕಟ್ಟಡವಿಲ್ಲದಿರುವುದಕ್ಕೆ ನಾವೆಲ್ಲ ತಲೆತಗ್ಗಿಸಬೇಕಾಗಿದೆ’ ಎಂದು ವಕೀಲ ಟಿ.ಎಸ್.ಸತ್ಯಾನಂದ ಹೇಳಿದರು.

ಇಂಗ್ಲಿಷ್ ಬದಲು ಹಿಂದಿ: ಶಾ ಹೇಳಿಕೆ ಸರಿಯೇ?

ಬೆಂಗಳೂರು: ‘ರಾಜ್ಯಗಳು ಪರಸ್ಪರ ಸಂವಹನ ಭಾಷೆಯಾಗಿ ಇಂಗ್ಲಿಷ್ ಬದಲಿಗೆ ಹಿಂದಿ ಬಳಸಬೇಕು’ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ದೇಶದಾದ್ಯಂತ ಚರ್ಚೆಗೆ ಎಡೆಮಾಡಿದೆ. ದಕ್ಷಿಣದ ರಾಜ್ಯಗಳಲ್ಲಿ ಈ ಹೇಳಿಕೆ ಕುರಿತು ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಅಮಿತ್ ಶಾ ಹೇಳಿಕೆ ಸರಿಯೆ? ಎಂಬುದರ ಕುರಿತು ‘ಪ್ರಜಾವಾಣಿ’ ಸೋಮವಾರ ಹಮ್ಮಿಕೊಂಡಿದ್ದ ನೇರ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾಹಿತಿ, ಬಿಜೆಪಿ ಮುಖಂಡರು ಹಾಗೂ ಕನ್ನಡಪರ ಹೋರಾಟಗಾರರ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ...

‘ಹಿಂದಿಯ ಯಾಜಮಾನ್ಯಕ್ಕೆ ಕಡಿವಾಣ ಅಗತ್ಯ’



ಭಾರತವು ಬಹುತ್ವ ಮತ್ತು ಬಹು ಭಾಷೆಗಳನ್ನು ಒಪ್ಪಿಕೊಂಡಿರುವ ರಾಷ್ಟ್ರ. ಸಂವಿಧಾನದೊಳಗೆ ಅಂಗೀಕೃತವಾದ 22 ಭಾಷೆಗಳ ಜತೆಗೆ ಎಲ್ಲ ಪ್ರಾದೇಶಿಕ ಭಾಷೆಗಳ ಅಸ್ಮಿತೆ ಕಾಪಾಡಲು ಅವಕಾಶವಿದೆ. ರಾಷ್ಟ್ರೀಯ ಭಾಷೆ ಎಂದು ಯಾವುದೂ ಇಲ್ಲ. ಹಿಂದಿ ರಾಷ್ಟ್ರ ಭಾಷೆ ಅಲ್ಲ. ಅದು ಕೂಡ ಇತರ ರಾಷ್ಟ್ರ ಭಾಷೆಗಳಂತೆಯೇ ಪ್ರಾದೇಶಿಕ ಭಾಷೆ.

ಅಮಿತ್ ಶಾ ಹೇಳಿಕೆಯನ್ನು ತುಂಬಾ ಸೂಕ್ಷ್ಮವಾಗಿ ನೋಡಿದಾಗ ಹಿಂದಿಯೇತರ ಭಾಷೆಗಳ ಬಗ್ಗೆ ಅವರಿಗೆ ಗೌರವವಿಲ್ಲ ಎಂಬುದು ಮನದಟ್ಟಾಗುತ್ತದೆ. ದ್ವಿಭಾಷಾ ನೀತಿ ಮಾತ್ರ ನಮಗೆ ಮುಖ್ಯ, ತ್ರಿಭಾಷಾ ಸೂತ್ರ ಅಲ್ಲ. ತ್ರಿಭಾಷಾ ಸೂತ್ರವನ್ನು ಕುವೆಂಪು ತ್ರಿಶೂಲ ಎಂದಿದ್ದರು.

ಕನ್ನಡದ ಮೇಲೆ ಹಿಂದಿ, ಇಂಗ್ಲಿಷ್, ಸಂಸ್ಕೃತ ಭಾಷೆಗಳಿಂದ ದಾಳಿ ನಡೆಯುತ್ತಿದೆ. ಕನ್ನಡ ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಕಳೆದು ಹೋಗುತ್ತಿದೆ. ಶಿಕ್ಷಣದಲ್ಲಿ ಕನ್ನಡ ಕಳೆದು ಹೋಗುತ್ತಿದೆ. ಭಾಷೆಯ ಬಗ್ಗೆ ಕೀಳರಿಮೆ ಬರುವ ರೀತಿಯ ಬೆಳವಣಿಗೆಗಳೇ ಇದಕ್ಕೆ ಕಾರಣ. ಕೇಂದ್ರೀಯ ಶಾಲೆಗಳಲ್ಲಿ ಆಯಾ ಪ್ರದೇಶದ ಸ್ಥಳೀಯ ಭಾಷೆಯನ್ನು ಮೊದಲ ಭಾಷೆಯನ್ನಾಗಿ ಕಲಿಸಬೇಕು.

ಕಾಂಗ್ರೆಸ್, ಬಿಜೆಪಿ ಎಲ್ಲರ ಕಾಲದಲ್ಲೂ ಹಿಂದಿಯ ಯಾಜಮಾನ್ಯ ಮುಂದುವರಿಯುತ್ತಲೇ ಇದೆ. ಭಾಷೆಯ ಇಚ್ಛಾಶಕ್ತಿಯ ವಿಚಾರದಲ್ಲಿ ತಮಿಳರು ಮಾದರಿ ಆಗಬೇಕು. ಅವರ ರೀತಿಯಲ್ಲಿ ಹಿಂದಿಯ ವಿರುದ್ಧ ಹೋರಾಟ ಮಾಡಬೇಕು. ಹಿಂದಿ ಹೇರಿಕೆ ವಿಚಾರದಲ್ಲಿ ಸತ್ಯವನ್ನು ಮುಚ್ಚಿಟ್ಟು ಮಾತನಾಡಬಾರದು.

ಎಸ್.ಜಿ. ಸಿದ್ದರಾಮಯ್ಯ, ಸಾಹಿತಿ

‘ಹಿಂದಿಯನ್ನು ರಾಷ್ಟ್ರೀಯ ಭಾಷೆಯಾಗಿ ಒಪ್ಪಿದ್ದಾರೆ’



ಹಿಂದಿಯಿಂದ ಕನ್ನಡಕ್ಕೆ ಯಾವುದೇ ತೊಂದರೆ ಆಗಿಲ್ಲ. ಇಂಗ್ಲಿಷ್‌ನಿಂದ ನಮ್ಮ ದೇಶದ ಪ್ರಾದೇಶಿಕ ಭಾಷೆಗಳಿಗೆ ತೊಂದರೆಯಾಗಿದೆ. ಇಂಗ್ಲಿಷ್ ಪರಕೀಯ ಭಾಷೆ, ಹಿಂದಿ ನಮ್ಮ ದೇಶದ ಭಾಷೆ. ಹೆಚ್ಚು ಓದಿದ ಜನರಷ್ಟೇ ಸುಲಭವಾಗಿ ಇಂಗ್ಲಿಷ್ ಬಳಸಬಹುದು. ಆದರೆ, ಕೋಟ್ಯಂತರ ಮಂದಿ ಅನಕ್ಷರಸ್ಥರೂ ಹಿಂದಿ ಬಳಸುತ್ತಾರೆ.

ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಬಳಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಹಿಂದಿಯನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು ಎಂದು ಎಲ್ಲಿಯೂ ಹೇಳಿಲ್ಲ. ಹಿಂದಿ ಭಾಷೆಯ ಮೂಲಕ ದೇಶದ ಜೀವನ, ಧರ್ಮ, ಸಂಸ್ಕೃತಿ ಎಲ್ಲವನ್ನೂ ಸುಲಭವಾಗಿ ಅರಿಯಲು ಸಾಧ್ಯವಾಗುತ್ತದೆ. ಹಿಂದಿ ಯನ್ನು ಯಾವ ರಾಜ್ಯದ ಮೇಲೂ ಹೇರಿಕೆ ಮಾಡಿಲ್ಲ.

ಕರ್ನಾಟಕದಲ್ಲಿ ಕನ್ನಡವೇ ಮೊದಲು. ಅದನ್ನು ಬದಲಿಸಲು ಯಾರಿಂದಲೂ ಸಾಧ್ಯ ವಿಲ್ಲ. ಹೆಚ್ಚು ಜನರು ಮಾತಾಡುವ ಭಾಷೆ ಹಿಂದಿ. ಹೀಗಾಗಿ ಅದನ್ನು ರಾಷ್ಟ್ರೀಯ ಭಾಷೆ ಎಂದು ಬಹುತೇಕರು ಒಪ್ಪಿಕೊಂಡಿದ್ದಾರೆ. ಹಿಂದಿ ದೇಶದ ಎಲ್ಲ ಜನರ ಸಂಪರ್ಕ ಭಾಷೆಯಾಗಿ ಬಳಕೆಯಾಗಬೇಕು ಎಂಬುದು ನನ್ನ ನಿಲುವು.

ಪ್ರಾದೇಶಿಕ ಭಾಷೆಯಲ್ಲಿ ನ್ಯಾಯಾಲಯದ ಕಲಾಪ, ನೇಮಕಾತಿ ಪರೀಕ್ಷೆಗಳನ್ನು ನಡೆಸಲು ಬಿಜೆಪಿ ಸರ್ಕಾರ ಕ್ರಮ ಕೈಗೊಂಡಿದೆ. ಎಲ್ಲಿಯೂ ಹಿಂದಿ ಹೇರಿಕೆ ಮಾಡಿಲ್ಲ. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ವಿರುದ್ಧದ ಆರೋಪಗಳಿಗೆ ಆಧಾರಗಳಿಲ್ಲ.

ಎನ್. ರವಿಕುಮಾರ್, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ಸಂವಾದ

‘ಸಂವಿಧಾನ ತಿದ್ದುಪಡಿಯೊಂದೇ ದಾರಿ’



ಹಿಂದಿ ಭಾಷೆಯ ಬಳಕೆಯನ್ನು ಉತ್ತೇಜಿಸಲು ಮತ್ತು ಹಿಂದಿಯೇತರರ ಮೇಲೆ ಹೇರಿಕೆ ಮಾಡಲು ಸಂವಿಧಾನದಲ್ಲೇ ಅವಕಾಶಗಳಿವೆ. ಸಂವಿಧಾನದ 343ರಿಂದ 351ರವರೆಗಿನ ಅನುಚ್ಛೇದಗಳು ಇದಕ್ಕೆ ಅವಕಾಶ ಕಲ್ಪಿಸುತ್ತವೆ. ಈಗ ಹಿಂದಿಯೇತರರ ಮೇಲೆ ಹಿಂದಿ ಹೇರಿಕೆ ತಡೆಯಲು ಸಂವಿಧಾನದ ತಿದ್ದುಪಡಿಯೊಂದೇ ದಾರಿ.

ಸರ್ಕಾರ ಒಂದು ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದನ್ನೇ ಹೇರಿಕೆ ಎನ್ನಬಹುದು. ನೇಮಕಾತಿಗಳು, ಪ್ರಕಟಣೆ, ಬ್ಯಾಂಕಿಂಗ್ ಎಲ್ಲವೂ ಹಿಂದಿ ಮತ್ತು ಇಂಗ್ಲಿಷ್‌ನಲ್ಲೇ ಇವೆ. ತ್ರಿಭಾಷಾ ಸೂತ್ರ ಹಿಂದಿ ಭಾಷಿಕರ ಪರವಾಗಿದೆ. ಹಿಂದಿಯೇತರರಿಗೆ ಇದರಿಂದ ಅನ್ಯಾಯವಾಗುತ್ತಿದೆ.

ಉತ್ತರ ಪ್ರದೇಶದಲ್ಲಿ 5,000 ಹಿಂದಿ ಮಾಧ್ಯಮ ಶಾಲೆಗಳನ್ನು ಮುಚ್ಚಿ, ಅಷ್ಟೇ ಸಂಖ್ಯೆಯ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆಯಲಾಗಿದೆ. ಹಿಂದಿ ಭಾಷಿಕರು ಇಂಗ್ಲಿಷ್ ಕಲಿಕೆಗೆ ಆದ್ಯತೆ ನೀಡುತ್ತಿದ್ದಾರೆ. ಹಿಂದಿಯೇತರರ ಮೇಲೆ ಹೇರಿಕೆ ಮಾಡಲಾಗುತ್ತಿದೆ.

ಸ್ವಿಟ್ಜರ್ಲೆಂಡ್, ಸಿಂಗಪುರದಲ್ಲಿ ಐದು ಆಡಳಿತ ಭಾಷೆಗಳಿವೆ. 130 ಕೋಟಿ ಜನರಿರುವ ದೇಶಕ್ಕೆ ಹಿಂದಿ ಮಾತ್ರ ಆಡಳಿತ ಭಾಷೆ ಏಕೆ ಆಗಬೇಕು? ಇಂಗ್ಲಿಷ್ ವಿರುದ್ಧ ಹೋರಾಡಲು ಹಿಂದಿ ಒಂದರಿಂದ ಸಾಧ್ಯವಾಗುವುದಿಲ್ಲ. ಎಲ್ಲ ಭಾರತೀಯ ಭಾಷೆಗಳನ್ನೂ ಸದೃಢಗೊಳಿಸಬೇಕು.

ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಹಿಂದಿ ಬಳಕೆಗೆ ಒತ್ತಡ ಹೇರಲಾಗುತ್ತದೆ. ಭಾರತ ಸರ್ಕಾರ ಎನ್ನುವುದು ಹಿಂದಿ ಭಾಷಿಕರನ್ನು ಮಾತ್ರ ಪ್ರತಿನಿಧಿಸುವುದೆ? ಕೇಂದ್ರ ಸರ್ಕಾರ ಎಲ್ಲರನ್ನೂ ಪ್ರತಿನಿಧಿಸುತ್ತದೆ.

ಅರುಣ್ ಜಾವಗಲ್, ರಾಜ್ಯ ಸಂಘಟನಾ ಕಾರ್ಯದರ್ಶಿ, ಕರ್ನಾಟಕ ರಕ್ಷಣಾ ವೇದಿಕೆ



‘ಶರಾವತಿ ಆರತಿ’

‘ಶರಾವತಿ ಆರತಿ’ ಕಾರ್ಯಕ್ರಮದ ಅಂಗವಾಗಿ ಹೊನ್ನಾವರ ಸಮೀಪ ಶರಾವತಿ ನದಿ ದಂಡೆಯಲ್ಲಿ ಸೋಮವಾರ ರಾತ್ರಿ ನದಿಗೆ ಆರತಿ ಬೆಳಗಿದರು. ಕರ್ಕಿ ದೈವಜ್ಞ ಮಠದ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಸ್ವಾಮೀಜಿ, ಶಾಸಕರಾದ ದಿನಕರ ಶೆಟ್ಟಿ, ಸುನೀಲ ನಾಯ್ಕ ಭಾಗವಹಿಸಿದ್ದರು

‘ಮುರುಘಾಶ್ರೀ ಜನ್ಮದಿನ ಇನ್ನು ಸಮಾನತಾ ದಿನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಜನ್ಮದಿನವನ್ನು (ಏಪ್ರಿಲ್ 11) ಇನ್ನು ಮುಂದೆ ‘ಸಮಾನತಾ ದಿನ’ವೆಂದು ರಾಜ್ಯ ಸರ್ಕಾರದ ವತಿಯಿಂದ ಆಚರಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಶಿವಮೂರ್ತಿ ಮುರುಘಾ ಶರಣರ ಜನ್ಮದಿನಾಚರಣೆ ಬದಲು ‘ಪರಿವರ್ತನಪರ ಧರ್ಮಸಂಸತ್’ ವತಿಯಿಂದ ಅರಮನೆ ಮೈದಾನದಲ್ಲಿ ಸೋಮವಾರ ನಡೆದ ‘ಸಮಾನತ ದಿನ’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾತನಾಡಿದರು.


ರೊಬೋಟ್ ಯಂತ್ರದ ಗುಂಡಿ ಒತ್ತುವ ಮೂಲಕ ‘ಸಮಾನತಾ ದಿನ’ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಸಚಿವರಾದ ವಿ. ಸುನೀಲ್‌ಕುಮಾರ್, ಗೋವಿಂದ ಕಾರಜೋಳ, ಶಿವಮೂರ್ತಿ ಮುರುಘಾ ಶರಣರು, ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ ಇದ್ದರು

‘ಹಲವು ಟೀಕೆ–ಟಿಪ್ಪಣಿಗಳು ಬಂದಾಗಲೂ ಬಸವ ತತ್ವವನ್ನು ಎಂದಿಗೂ ಕೈಬಿಡುವುದಿಲ್ಲ ಎನ್ನುವ ದಿಟ್ಟ ನಿಲುವಿನಿಂದ ಎಲ್ಲ ವರ್ಗದ ಜನರಿಗೆ, ಧ್ವನಿ ಇಲ್ಲದವರಿಗೆ ಧ್ವನಿ, ಗುರುತಿಲ್ಲದವರಿಗೆ ಗುರುತು ನೀಡಲು ಹಾಗೂ ಎಲ್ಲ ಸಮಾಜದವರಿಗೆ ಗುರು ಪೀಠ ಸ್ಥಾಪಿಸುವ ಮೂಲಕ ಮುರುಘಾಶ್ರೀಗಳು ಹೊಸ ಮನ್ವಂತರ ತಂದಿದ್ದಾರೆ. ಬಸವಣ್ಣನವರ ವೈಚಾರಿಕತೆ, ತತ್ವ, ಆದರ್ಶಗಳನ್ನು ಪುನ: ಬಿತ್ತುವಂಥ ಸಾಹಸಕ್ಕೆ ಕೈ ಹಾಕಿರುವ ಶ್ರೀಗಳ ಜನ್ಮದಿನವನ್ನು ಸಮಾನತಾ ದಿನ ಎಂದು ಆಚರಿಸುತ್ತಿರುವುದು ಸೂಕ್ತವಾಗಿದೆ’ ಎಂದರು.

‘ಕಾಕತಾಳೀಯವೆಂದರೆ ಬಸವಣ್ಣನವರ ಪರಿವರ್ತನೆಯ ಕಾಲ 12ನೇ ಶತಮಾನ. ಮುರುಘಾ ಶರಣರು ಪರಿವರ್ತನೆ ಮಾಡುವ ಕಾಲ 21ನೇ ಶತಮಾನ. 12ನೇ ಶತಮಾನದಲ್ಲಿಯೂ ಸಾಕಷ್ಟು ಪ್ರತಿರೋಧದ ನಡುವೆ ಪರಿವರ್ತನೆ ಆಯಿತು. 21ನೇ ಶತಮಾನದಲ್ಲಿಯೂ ಅಷ್ಟೇ ಪ್ರತಿರೋಧ ಇದೆ. ಸರ್ವರಿಗೂ ಸಮಾನತೆ ನೀಡುವ ತತ್ವವನ್ನು ಸಮಾಜದಲ್ಲಿ ಬೇರೂರಬೇಕೆಂಬ ಸಂಕಲ್ಪವನ್ನು 21ನೇ ಶತಮಾನದಲ್ಲಿ ಮಾಡುವುದು ಬಹಳ ದೊಡ್ಡ ಸವಾಲು. ಆ ಸವಾಲು ಎದುರಿಸಿ ಅದರ ಬೀಜಾಂಕುರ ಮುರುಘಾ ಶರಣರು ಮಾಡಿದ್ದಾರೆ’ ಎಂದರು.

ಮುರುಘಾ ಶ್ರೀಗಳು ಮಾತನಾಡಿ, ‘ನಾನು ಎಂದೂ ಜನ್ಮದಿನಾಚರಣೆ ಆಚರಿಸಿಕೊಂಡವನಲ್ಲ. ಆ ವಿಚಾರವೂ ನನ್ನಲ್ಲಿ ಇಲ್ಲ. ಆದರೆ, ಅದರ ಬದಲು ಸಮಾನತಾ ದಿನವಾಗಿ ಮುನ್ನೆಲೆಗೆ ಬಂದಿದೆ. ಜನ್ಮದಿನಾಚರಣೆ ಇಲ್ಲಿ ಗೌಣ. ಸಮಾನತೆ ಪ್ರಧಾನ’ ಎಂದರು.

‘ನಮ್ಮ ಮಠದಲ್ಲಿ ನಾನು ಬಂದ ಮೇಲೆ ಲಿಂಗ ತಾರತಮ್ಯ ನಿವಾರಣೆ ಮಾಡಿದ್ದೇವೆ. ಅಸ್ಪೃಶ್ಯತೆ ನಿವಾರಿಸಿದ್ದೇವೆ. ಮಠದಲ್ಲಿ ಸವರ್ಣೀಯ, ದಲಿತ ಎಂಬ ಅಸ್ಪೃಶ್ಯತೆ ಇಲ್ಲ. ಸಹಪಂಕ್ತಿ ಭೋಜನ ಇದೆ. ಆದರೆ, ದೇಶದಲ್ಲಿ ಅಸ್ಪೃಶ್ಯತೆ ಇನ್ನೂ ಇದೆ. ಇದನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಸಮಾಜ, ಸಮಾನತೆ, ಸೇವೆಯೇ ನನ್ನ ಧ್ಯೇಯ. ಅದಕ್ಕಾಗಿ ಜೀವನದಲ್ಲಿ ನೋವು, ಕಷ್ಟಗಳನ್ನು ಕಂಡಿದ್ದೇನೆ’ ಎಂದರು.

ಶಾಸಕ ರಾಜಶೇಖರ ಪಾಟೀಲ ತೇಲ್ಕೂರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ. ವೈ. ವಿಜಯೇಂದ್ರ ಇದ್ದರು.

ದೇವಾಲಯಕ್ಕೆ ಭೇಟಿ ನೀಡಿದ ಅಂಜುಮನ್ ಪದಾಧಿಕಾರಿಗಳು

ಪ್ರಜಾವಾಣಿ ವಾರ್ತೆ

ಧಾರವಾಡ: ನುಗ್ಗಿಕೇರಿ ಆಂಜನೇಯ ದೇವಾಲಯಕ್ಕೆ ಸೋಮವಾರ ಭೇಟಿ ನೀಡಿದ ಅಂಜುಮನ್ ಇಸ್ಲಾಂ ಸಂಸ್ಥೆಯ ಪದಾಧಿಕಾರಿಗಳು ವಿಶೇಷ ಪೂಜೆ ಸಲ್ಲಿಸಿ, ಅಲ್ಲಿನ ಪರ್ಯಾಯಸ್ಥರೊಂದಿಗೆ ಚರ್ಚಿಸಿದರು.

‘ಶಾಂತಿ ಹಾಗೂ ಸೌಹಾರ್ದಕ್ಕೆ ಹೆಸರಾದ ಧಾರವಾಡದಲ್ಲಿ ಇಂಥ ಘಟನೆಗಳು ನಡೆಯಬಾರದಿತ್ತು. ಈ ದೇವಾಲಯ ತನ್ನ ಕೀರ್ತಿಗೆ ಜಗತ್‌ಪ್ರಸಿದ್ಧವಾಗಬೇಕೇ ಹೊರತು, ಇಂಥ ಅಪಕೀರ್ತಿಗಲ್ಲ. ಇಲ್ಲಿ ಸೌಹಾರ್ದ ನೆಲೆಸುವಂತೆ ಸಮಾಜದ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕಿದೆ’ ಎಂದು ಇಸ್ಮಾಯಿಲ್ ತಮಟಗಾರ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪರ್ಯಾಯಸ್ಥ ನರಸಿಂಹ ದೇಸಾಯಿ, ‘ಇಲ್ಲಿ ಎಲ್ಲಾ ಸಮುದಾಯವರಿಗೂ ಅವಕಾಶ ಮಾಡಿಕೊಡಲಾಗಿದೆ. ನಮ್ಮ ಉದ್ದೇಶವೂ ಪ್ರತಿಯೊಬ್ಬರೂ ಸೋದರರಂತೆ ಬಾಳುವುದೇ ಆಗಿದೆ. ಈ ಕುರಿತು 12 ಜನ ಪರ್ಯಾಯಸ್ಥರು ಸಭೆ ಸೇರಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದರು.

ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ನಿತೇಶ್ ಕೆ. ಪಾಟೀಲ, ‘ಖಾಸಗಿ ಟ್ರಸ್ಟ್ ಆಗಿರುವ ನುಗ್ಗಿಕೇರಿ ದೇವಾಲಯದಲ್ಲಿ ನಡೆದಿರುವುದು ಒಂದು ಆಕಸ್ಮಿಕ ಘಟನೆ. ಈಗಾಗಲೇ ಪೊಲೀಸರು ನಾಲ್ವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇಂಥ ಘಟನೆ ಮರುಕಳಿಸದಂತೆ ಕಠಿಣ ಕಾನೂನು ಕ್ರಮ ಜರುಗಿಸಲಾಗಿದೆ’ ಎಂದರು.


ಧಾರವಾಡದ ನುಗ್ಗಿಕೇರಿ ಆಂಜನೇಯ ದೇವಸ್ಥಾನಕ್ಕೆ ಸೋಮವಾರ ಭೇಟಿ ನೀಡಿದ ಮುಸ್ಲಿಂ ಸಂಘಟನೆಯ ಮುಖಂಡರಾದ ಇಸ್ಮಾಯಿಲ್ ತಮಟಗಾರ, ಎ.ಎಂ. ಹಿಂಡಸಗೇರಿ ಹಾಗೂ ಇತರರು ಪೂಜೆ ಸಲ್ಲಿಸಿ ತೀರ್ಥ, ಪ್ರಸಾದ ಪಡೆದರು

‘ದೇವಸ್ಥಾನದ ಆವರಣದಲ್ಲಿ ಟೋಪಿ, ಗಡ್ಡ ಬಿಟ್ಟರೆ ಇಂಥ ಘಟನೆ ಸಹಜ’

ಧಾರವಾಡ: ‘ಹಿಂದೂ ದೇವಾಲಯದ ಎದುರು ಮುಸ್ಲಿಂ ವ್ಯಾಪಾರಿಗಳು ತಲೆ ಮೇಲೆ ದೊಡ್ಡ ಟೋಪಿ ಧರಿಸಿ ಗಡ್ಡ ಬಿಟ್ಟು, ಮೀಸೆ ಬೋಳಿಸಿ, ಪೈಜಾಮ ಹಾಕಿಕೊಂಡು ಇದ್ದರೆ ಹಿಂದೂಗಳಿಗೆ ಏನೆನಿಸಬೇಕು’ ಎಂದು ಶಾಸಕ ಅರವಿಂದ ಬೆಲ್ಲದ ಪ್ರಶ್ನಿಸಿದರು.

ಶ್ರೀರಾಮಸೇನೆ ಕಾರ್ಯಕರ್ತರು ಶನಿವಾರ ದಾಂಧಲೆ ನಡೆಸಿ ಮುಸ್ಲಿಮರಿಗೆ ಸೇರಿದ ಅಂಗಡಿಗಳನ್ನು ಧ್ವಂಸಗೊಳಿಸಿದ ನಂತರ ಸೋಮವಾರ ಭೇಟಿ ನೀಡಿದ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು.

‘ಈಗ ಗುಡಿ ಆವರಣಕ್ಕೆ ಬಂದಿದ್ದಾರೆ. ಮುಂದೊಂದು ದಿನ ದೇವಾಲಯದ ಒಳಗೇ ಬರುತ್ತಾರೆ ಎಂಬ ಭಾವನೆ ಹಿಂದೂಗಳಲ್ಲಿ ಮೂಡಲಿದೆ. ಈಗ ನಡೆದಿರುವ ಘಟನೆ ಸೃಷ್ಟಿಸಿದವರು ಯಾರು ಎಂಬುದನ್ನು ಹಿಂದಕ್ಕೆ ಹೋಗಿ ನೋಡಬೇಕಿದೆ. ಇಂಥ ಪರಿಸ್ಥಿತಿ ಮರುಕಳಿಸಬಾರದು ಎಂದರೆ ಮೂಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು’ ಎಂದರು.

‘ಹಿಜಾಬ್ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪು ನೀಡಿದ ನಂತರ ಬಹಳಷ್ಟು ಕಡೆ ಮುಸ್ಲಿಮರು ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟಿಸಿದರು. ಅವರ ಅಂಥ ಕ್ರಿಯೆಗೆ ಸಹಜವಾಗಿ ಈಗ ಎಲ್ಲೆಡೆ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ತಲೆ ಒಡೆದಾಗ ಇಲ್ಲದ ಕಾಳಜಿ, ಕಲ್ಲಂಗಡಿ ಒಡೆದಾಗ ಏಕೆ? ಎಂಬ ಸಿ.ಟಿ.ರವಿ ಹೇಳಿಕೆ ಸೂಕ್ತವಾಗಿದೆ’ ಎಂದು ಬೆಲ್ಲದ ಸಮರ್ಥಿಸಿಕೊಂಡರು.

‘ಕಾಂಗ್ರೆಸ್ ಮುಸ್ಲಿಮರ ಓಲೈಕೆ ನಿಲ್ಲಿಸಲಿ’

ಹುಬ್ಬಳ್ಳಿ: ‘ಹಿಂದೂ, ಮುಸ್ಲಿಂ ಸೇರಿದಂತೆ ಯಾವ ಧರ್ಮದವರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಅದೇ ರೀತಿ, ಕಾಂಗ್ರೆಸ್‌ನವರೂ ಮುಸ್ಲಿಮರ ಓಲೈಕೆಯನ್ನು ನಿಲ್ಲಿಸಬೇಕು’ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಧಾರವಾಡದಲ್ಲಿ ಶ್ರೀರಾಮ ಸೇನೆ ಕಾರ್ಯಕರ್ತರು ಮುಸ್ಲಿಂ ವ್ಯಾಪಾರಿಗೆ ಸೇರಿದ ಕಲ್ಲಂಗಡಿ ಅಂಗಡಿಯನ್ನು ಧ್ವಂಸಗೊಳಿಸಿದ್ದರ ಕುರಿತು ಮಾತನಾಡುವ ಕಾಂಗ್ರೆಸ್‌ನವರು, ಶಿವಮೊಗ್ಗದಲ್ಲಿ ನಡೆದ ಹರ್ಷ ಕೊಲೆ ಬಗ್ಗೆ ಏಕೆ ದನಿ ಎತ್ತಲಿಲ್ಲ? ಆತನ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನವನ್ನೂ ಹೇಳಲಿಲ್ಲ’ ಎಂದು ಪ್ರಶ್ನಿಸಿದರು.

‘ಕೇವಲ ಒಂದು ಸಮುದಾಯದ ತಪ್ಪನ್ನೇ ಎತ್ತಿ ತೋರಿಸುವುದು ನಿಂತಾಗ ಮಾತ್ರ ಸೌಹಾರ್ದ ವಾತಾವರಣ ಸಾಧ್ಯ’ ಎಂದರು.

‘ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಟೀಕಿಸದಿದ್ದರೆ ತಿಂದ ಆಹಾರ ಜೀರ್ಣವಾಗುವುದಿಲ್ಲ. ಎಲ್ಲಾ ಘಟನೆ ಮತ್ತು ವಿವಾದಗಳಿಗೆ ಸಂಘವನ್ನು ತಳುಕು ಹಾಕಿ ವಿರೋಧಿಸುತ್ತಾರೆ. ವಿರೋಧ ಪಕ್ಷವಾಗಿ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಸಂಘದ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

ತಲವಾರ್ ಹಿಡಿಯುವ ಸಂಘಟನೆ ನಿಷೇಧಿಸಿ: ಎಚ್‌ಡಿಕೆ ಒತ್ತಾಯ

ರಾಮನಗರ: ಉತ್ತರ ಕರ್ನಾಟಕದಲ್ಲಿ ಶ್ರೀರಾಮ ಸೇನೆಯಂತಹ ಸಂಘಟನೆಗಳು ವೇದಿಕೆಗಳಲ್ಲೇ ತಲವಾರ್ ಹಂಚುತ್ತಿದ್ದು, ಲವ್ ಕೇಸರಿ ಅಭಿಯಾನ ನಡೆಸುವುದಾಗಿ ಹೇಳತೊಡಗಿವೆ. ಇಂತಹ ಸಂಘಟನೆಗಳನ್ನು ರಾಜ್ಯ ಸರ್ಕಾರ ನಿಷೇಧಿಸುತ್ತದೆಯೋ ಇಲ್ಲ ಪ್ರೋತ್ಸಾಹಿಸುತ್ತದೆಯೋ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

‘ಇದು ಕರ್ನಾಟಕ. ಇಲ್ಲಿ ಮತ್ತೊಂದು ಗೋಧ್ರಾ ಹತ್ಯಾಕಾಂಡ ನಡೆಯಲು ಬಿಡುವುದಿಲ್ಲ. ಸರ್ಕಾರ ಇಂತಹ ಸಂಘಟನೆಗಳನ್ನು ನಿಯಂತ್ರಿಸದೇ ಹೋದರೆ ಬಿಜೆಪಿಗೆ ದಕ್ಷಿಣ ಭಾರತದಲ್ಲಿ ಬಾಗಿಲು ಮುಚ್ಚುವುದು ಖಚಿತ’ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

‘ಕಲ್ಲಂಗಡಿ ಒಡೆದವರ ಮೇಲೆ ಮಾತ್ರವಲ್ಲ, ತಲೆ ಒಡೆದವರ ಮೇಲೂ ನಿಮ್ಮ ಕನಿಕರ ಇರಲಿ’ ಎಂಬ ಸಿ.ಟಿ.ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಎಚ್‌ಡಿಕೆ, ‘ಇಂತಹ ಹೇಳಿಕೆ ನೀಡಲು ನಾಚಿಕೆ ಆಗಬೇಕು. ನುಗ್ಗಿಕೇರಿ ಘಟನೆಯಲ್ಲಿ ಜೀವ ಹೋಗಿದ್ದರೆ ಯಾರು ಜವಾಬ್ದಾರಿ? ಕಳೆದ ಜನವರಿ–ಫೆಬ್ರುವರಿಯಲ್ಲಿ ರಾಜ್ಯದಲ್ಲಿ 250ಕ್ಕೂ ಕೊಲೆಗಳು ಆಗಿವೆ. ಮೊದಲು ಅವುಗಳ ಕಡೆ ಗಮನ ಕೊಡಿ’ ಎಂದರು.


ರಾಯಚೂರಿನಲ್ಲಿ ಶ್ರೀರಾಮಸೇನೆಯಿಂದ ರಾಮನವಮಿ ನಿಮಿತ್ತ ನಡೆದ ಮೆರವಣಿಗೆ ಬಳಿಕ ಭಾನುವಾರ ತಡರಾತ್ರಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರು ತಲ್ವಾರ್ ಪ್ರದರ್ಶಿಸಿದರು

‘ಲವ್ ಕೇಸರಿ’ ಸೃಷ್ಟಿಗೆ ಶ್ರೀರಾಮ ಸೇನೆ ಮುಖಂಡ ಕರೆ

ರಾಯಚೂರು: ‘ಲವ್ ಜಿಹಾದ್‌ಗೆ ವಿರುದ್ಧವಾಗಿ ಲವ್ ಕೇಸರಿ ಮಾಡಿ’ ಎಂದು ಶ್ರೀರಾಮಸೇನೆಯ ಜಿಲ್ಲಾ ಘಟಕದ ಸಂಚಾಲಕ ರಾಜಾಚಂದ್ರ ರಾಮನಗೌಡ ಕರೆ ನೀಡಿದರು.

ಶ್ರೀರಾಮಸೇನೆಯಿಂದ ಭಾನುವಾರ ರಾತ್ರಿ ಇಲ್ಲಿ ಆಯೋಜಿಸಿದ್ದ ಹಿಂದುವಿ ಸಮಾವೇಶದಲ್ಲಿ ಮಾತನಾಡಿದ ಅವರು, ‘ನಮ್ಮನೆ ಹೆಣ್ಣುಮಕ್ಕಳನ್ನು ಕರೆದೊಯ್ದು ಮಕ್ಕಳು ಹೆರುವ ಮಷಿನ್ ಮಾಡಿದ್ದಾರೆ. ಹೀಗಾಗಿ ಪ್ರತಿ ಕಾರ್ಯಕರ್ತನು ‘ಲವ್ ಕೇಸರಿ’ ಮಾಡಿ. ಮುಸ್ಲಿಂ ವ್ಯಕ್ತಿ ಹಿಂದೂ ಹೆಣ್ಣುಮಕ್ಕಳಿಗೆ ತೊಂದರೆ ಕೊಟ್ಟರೆ, ನಮಗೆ ಮಾಹಿತಿ ಕೊಡಿ. ಅಂಥವರ ಜನನಾಂಗ ಕತ್ತರಿಸಿ ಹಾಕೋಣ’ ಎಂದು ಹೇಳಿದರು.

ವೇದಿಕೆಯಲ್ಲಿ ರಾಜಾಚಂದ್ರ, ಮಂಜುನಾಥ ಬಾವಿ ಮತ್ತಿತರರು ತಲ್ವಾರ್ ಪ್ರದರ್ಶಿಸಿದ ವಿಡಿಯೊ ವೈರಲ್ ಆಗಿದೆ.

‘ಹರಜಾತ್ರೆ: ಎಲ್ಲ ಧರ್ಮೀಯರಿಗೂ ವ್ಯಾಪಾರಕ್ಕೆ ಅವಕಾಶ’

ಹರಿಹರ: ಏಪ್ರಿಲ್ 23 ಮತ್ತು 24ರಂದು ಹರಜಾತ್ರೆಯು ವಿಭಿನ್ನವಾಗಿ ನಡೆಯಲಿದ್ದು, ಎಲ್ಲ ಧರ್ಮೀಯರಿಗೂ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಪಂಚಮಸಾಲಿ ಪೀಠದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋವಿಡ್ ಕಾರಣ ಜನವರಿ 14 ಮತ್ತು 15ರ ಬದಲು ಈಗ ಜಾತ್ರೆ ಆಯೋಜಿಸಿದ್ದೇವೆ’ ಎಂದು ಹೇಳಿದರು.

ಇತ್ತೀಚಿಗೆ ಕೆಲವೆಡೆ ಹಿಂದೂಗಳ ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ವ್ಯಾಪಾರ ಮಾಡದಂತೆ ನಿರ್ಬಂಧ ವಿಧಿಸುತ್ತಿರುವ ಕುರಿತ ಪತ್ರಕರ್ತರ ಪ್ರಶ್ನೆಗೆ, ‘ಹರಜಾತ್ರೆಯಲ್ಲಿ ಯಾವ ಧರ್ಮದವರು ಬೇಕಾದವರೂ ಬಂದು ವ್ಯಾಪಾರ, ವಹಿವಾಟು ಮಾಡಬಹುದು. ವ್ಯಾಪಾರ ಮಾಡುವವರು ಭಾರತೀಯರಾಗಿದ್ದು, ಆಧಾರ್ ಕಾರ್ಡ್ ಹೊಂದಿದ್ದರೆ ಸಾಕು. ಮಠವು ಧರ್ಮ, ಜಾತಿ ಕುರಿತಂತೆ ಯಾವುದೇ ಭೇದ–ಭಾವ ಮಾಡುವುದಿಲ್ಲ’ ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

ಕೋಮು ಗಲಾಟೆ: ಕಠಿಣ ಕ್ರಮಕ್ಕೆ ಡಿಜಿಪಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮದ ವಿಚಾರದಲ್ಲಿ ಕೋಮು ಗಲಾಟೆಗಳು ನಡೆದರೆ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಿ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

‘ಹಿಂಸೆಗೆ ಇಳಿದರೆ ಕ್ರಮ ನಿಶ್ಚಿತ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದರು. ಈ ಬೆನ್ನಲ್ಲೇ, ರಾಜ್ಯದ ಕಮಿಷನರ್‌ಗಳು, ಐಜಿಪಿಗಳು ಹಾಗೂ ಎಲ್ಲ ಜಿಲ್ಲೆಗಳ ಎಸ್ಪಿ ಜೊತೆ ಸೋಮವಾರ ವಿಡಿಯೊ ಕಾನ್ಫರೆನ್ಸ್ ನಡೆಸಿದ ಪ್ರವೀಣ್ ಸೂದ್, ‘ಕೋಮು ವಿಚಾರವಾಗಿ ಗಲಾಟೆಗಳು ನಡೆದು, ಕಾನೂನು ಸುವ್ಯವಸ್ಥೆಗೆ ಧಕ್ಕೆಯಾದರೆ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು’ ಎಂದು ಎಚ್ಚರಿಸಿದ್ದಾರೆ.

‘ಧರ್ಮದ ವಿಚಾರದಲ್ಲಿ ಸಂಘರ್ಷಗಳು ಆಗದಂತೆ ನೋಡಿಕೊಳ್ಳಬೇಕು. ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡಬಾರದು’ ಎಂದೂ ಅವರು ಹೇಳಿದ್ದಾರೆ.

ಬೃಹತ್ ಮೈಸೂರು ಮಹಾನಗರ ಪಾಲಿಕೆಗೆ ನಿರ್ಧಾರ

ಮೈಸೂರು: ಇಲ್ಲಿನ ಪಾಲಿಕೆಗೆ ಶ್ರೀರಾಮಪುರ, ರಮ್ಮನಹಳ್ಳಿ, ಬೋಗಾದಿ ಪಟ್ಟಣ ಪಂಚಾಯಿತಿಗಳು ಹಾಗೂ ಹೂಟಗಳ್ಳಿ ನಗರಸಭೆಯನ್ನು ಸೇರಿಸಿ ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚಿಸುವುದಕ್ಕೆ ಇಲ್ಲಿ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನಡೆಸಿದ ಸಭೆಯಲ್ಲಿ ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಯಿತು.

ಅದರೊಂದಿಗೆ ಆಲನಹಳ್ಳಿ, ಚಾಮುಂಡಿಬೆಟ್ಟ ಹಾಗೂ ಸಿದ್ದಲಿಂಗಪುರ ಗ್ರಾಮಗಳನ್ನು ಸೇರಿಸಿಕೊಳ್ಳಲೂ ನಿರ್ಧರಿಸಲಾಯಿತು.

‘ಚುನಾವಣೆ ನಡೆಯದಿರುವ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಪಾಲಿಕೆಗೆ ಸೇರಿಸುವ ಪ್ರಸ್ತಾವವನ್ನು ಕೂಡಲೇ ಸಲ್ಲಿಸಬೇಕು’ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸೂಚಿಸಿದರು. ಇದರಿಂದ ಸುಮಾರು ಒಂದೂವರೆ ಲಕ್ಷ ನಿವೇಶನಗಳು ಪಾಲಿಕೆ ವ್ಯಾಪ್ತಿಗೆ ಸೇರುತ್ತವೆ.

ಕ್ಷೇಮ ಕುಶಲ



ಇಳಿವಯಸ್ಸಿನಲ್ಲಿ ಆರೋಗ್ಯದ ರಕ್ಷಣೆ

ಡಾ. ಶ್ರೀನಿವಾಸ ಹರಪನಹಳ್ಳಿ



ಆರೋಗ್ಯ, ಅನಾರೋಗ್ಯಗಳೆರಡೂ ನಮ್ಮ ಜೀವನದ ಅವಿಭಾಜ್ಯ ಅಂಗಗಳೇ ಆಗಿವೆ. ಹುಟ್ಟಿನಿಂದ ಹಿಡಿದು ಸಾವಿನವರೆಗೆ ಜೀವನಬಂಡಿ ಮುಂದಕ್ಕೆ ಸಾಗುತ್ತಿದ್ದಂತೆಯೇ ನಮ್ಮ ಜೀವನಶೈಲಿ, ಸಾಮಾಜಿಕ ಸ್ಥಾನ-ಮಾನ, ಸಂಬಂಧಗಳ ಗ್ರಹಿಕೆಯಲ್ಲೂ ಏರಿಳಿತಗಳು ಕಾಣಬರುತ್ತವೆ. ಕೊನೆಗೆ ಇದರ ಪರಿಣಾಮ ನಮ್ಮ ಆರೋಗ್ಯದ ಮೇಲೂ ಆಗುತ್ತದೆ. ಚಿಕ್ಕಂದಿನಲ್ಲಿ ನಮಗೆ ಕೆಲವು ರೀತಿಯ ಕಾಯಿಲೆಗಳು ಕಾಡಿದರೆ, ಇಳಿ ವಯಸ್ಸಿನಲ್ಲಿ ಇನ್ನೊಂದು ರೀತಿಯ ಕಾಯಿಲೆಗಳು ನಮ್ಮನ್ನಾವರಿಸುತ್ತವೆ. ಹದಿಹರೆಯದಲ್ಲಿ ನಮ್ಮ ದೇಹ ಹೆಚ್ಚು ಗಟ್ಟಿಮುಟ್ಟಾಗಿರುವುದರಿಂದ ಈ ಪ್ರಾಯದಲ್ಲಿ ಕಾಯಿಲೆಗಳು ಕೊಂಚ ಕಡಿಮೆ ಎಂದು ಹೇಳಬಹುದು.

ನಮ್ಮ ದೇಹ ವಯಸ್ಸಿಗೆ ಹೇಗೆ ಸ್ಪಂದಿಸುತ್ತದೆ ಎಂದು ಸ್ವಲ್ಪ ತಿಳಿದುಕೊಳ್ಳೋಣ. ಚಿಕ್ಕಮಗುವಿನಿಂದ ಹಿಡಿದು ಹದಿ-ಹರಯದವರೆಗೆ ನಮ್ಮ ಶರೀರ ಸತತವಾಗಿ ಬೆಳವಣಿಗೆಯನ್ನು ಕಾಣುತ್ತದೆ. ನಂತರ ಮಧ್ಯವಯಸ್ಕರಾಗುವವರೆಗೂ ಹೆಚ್ಚೂ ಕಡಿಮೆ ಅದೇ ಸ್ಥಿತಿಯಲ್ಲಿ ಇರುತ್ತದೆ. ನಂತರ ನಿಧಾನವಾಗಿ ಇಳಿಮುಖವಾಗುತ್ತದೆ. ಈ ಸ್ಥಿತಿಯನ್ನೇ ವಯಸ್ಸಾಗುವುದು ಎಂದು ಕರೆಯಬಹುದು. ಈ ಸಮಯದಲ್ಲಿ ಕೂದಲು ಉದುರುವುದು, ಕಣ್ಣು ಮಂಜಾಗುವುದು, ಚರ್ಮ ಸುಕ್ಕುಗಟ್ಟುವುದು ಸಾಮಾನ್ಯ. ಇದರ ಜೊತೆಗೆ ನಮ್ಮ ಪಚನಶಕ್ತಿ ಕೂಡ ಕಡಿಮೆಯಾಗುತ್ತಾ ಹೋಗುತ್ತದೆ. ನಮ್ಮ ಸ್ನಾಯು-ಕೀಲುಗಳು ಕೊಂಚ ಜಡವಾಗುತ್ತವೆ. ಮೆದುಳಿನ ಗಾತ್ರ ಕೂಡ ಕೊಂಚ ಕುಗ್ಗುವುದರಿಂದ ನೆನಪಿನ ಶಕ್ತಿ, ಯೋಚನಾಶಕ್ತಿಗಳು ಕೂಡ ಕೆಲವೊಮ್ಮೆ ಕೈಕೊಡುತ್ತವೆ. ಆದರೆ ಇವೆಲ್ಲಾ ವಯೋಸಹಜ ಬದಲಾವಣೆಗಳು, ಅನಾರೋಗ್ಯವಲ್ಲ ಎನ್ನುವುದನ್ನು ಮರೆಯಬಾರದು.

ಅದೇ ರೀತಿ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳು ಕೆಲವು ಬಾರಿ ನಮ್ಮ ದೇಹದ ಮೇಲೆ ದುಷ್ಪರಿಣಾಮಗಳನ್ನೂ ಮಾಡುತ್ತವೆ. ಅದು ಕಲುಷಿತ ವಾತಾವರಣವಿರಬಹುದು ಅಥವಾ ಹವಾಮಾನ ವೈಪರೀತ್ಯ ಆಗಿರಬಹುದು. ಹಲವಾರು ವರ್ಷಗಳ ಕಾಲ ನಮ್ಮ ದೇಹ ಈ ದುಷ್ಪರಿಣಾಮಗಳನ್ನು ಸಹಿಸುವುದರಿಂದ ನಮ್ಮ ಅಂಗಾಂಗಗಳ ಕ್ರಿಯೆಗಳು ಕೊಂಚಮಟ್ಟಿಗೆ ಕುಂಠಿತಗೊಳ್ಳುತ್ತವೆ. ಮಧ್ಯವಯಸ್ಸನ್ನು ದಾಟಿ ಇಳಿವಯಸ್ಸನ್ನು ಪ್ರವೇಶಿಸುತ್ತಿದ್ದಂತೆಯೇ ಅನೇಕರಿಗೆ ಶ್ವಾಸಕೋಶದ ತೊಂದರೆ, ಹೃದಯಸಂಬಂಧಿ ಕಾಯಿಲೆಗಳಂಥವು ಗಂಟುಬೀಳುತ್ತವೆ. ಹೊರಪರಿಸರದ ಹಾಗೆಯೇ ನಮ್ಮ ದೇಹ ಹಾಗೂ ಅಂತಃಪರಿಸರದ ಜೊತೆಯ ಸಂಬಂಧ ಕೂಡ ಅಷ್ಟೇ ಮುಖ್ಯ; ಇದು ನಮ್ಮ ಆರೋಗ್ಯದ ರಕ್ಷಣೆಯಲ್ಲಿ ಪ್ರಧಾನ ಅಂಶವಾಗಿದೆ. ನಾವು ನಮ್ಮ ದೇಹವನ್ನು ಚೆನ್ನಾಗಿ ಅರಿತುಕೊಂಡು ಅದನ್ನು ಹದವಾಗಿ ಇಟ್ಟುಕೊಳ್ಳಬೇಕಲ್ಲದೇ ಕೋಪ-ತಾಪ, ಉದ್ರೇಕ, ನಿರಾಸೆಗಳಂತಹ ಋಣಾತ್ಮಕ ಭಾವನೆಗಳಿಂದ ದೇಹವನ್ನು ದಂಡಿಸುವುದನ್ನು ಕಡಿಮೆ ಮಾಡಬೇಕು. ಯೌವನದಲ್ಲಿ ಹಾಗೂ 40-60ರ ಮಧ್ಯವಯಸ್ಸಿನಲ್ಲಿ ನಾವು ಅನೇಕ ಜವಾಬ್ದಾರಿಗಳನ್ನು ನಿಭಾಯಿಸುವುದರಿಂದ ಕೆಲವು ಬಾರಿ ಋಣಾತ್ಮಕ ಭಾವನೆಗಳು ನಮ್ಮನ್ನು ಕಾಡುವುದು ಸಹಜ. ಬಿಪಿ, ಸಕ್ಕರೆಖಾಯಿಲೆ, ಕಣ್ಣಿನ ತೊಂದರೆ, ಕೀಲುನೋವು ಇತ್ಯಾದಿಗಳು ಸೇರಿಕೊಳ್ಳುವುದು ಬಹುತೇಕ ಈ ಸಂದರ್ಭದಲ್ಲೇ. ಸಮತೋಲಿತ ಆಹಾರ, ವ್ಯಾಯಾಮದ ಜೊತೆ ನಮ್ಮ ಮಾನಸಿಕ ಆರೋಗ್ಯದ ಕಡೆಗೂ ಕೂಡ ಗಮನವನ್ನು ಕೊಡುವುದರಿಂದ ಇಂತಹ ರೋಗಗಳನ್ನು ಸ್ವಲ್ಪಮಟ್ಟಿಗಾದರೂ ತಪ್ಪಿಸಬಹುದು.

ಇವಲ್ಲದೆ ಇಳಿವಯಸ್ಸಿನಲ್ಲಿ ಇನ್ನೂ ಕೆಲವು ರೋಗಗಳು ನಮ್ಮನ್ನು ಬಾಧಿಸುತ್ತವೆ. ಉದಾಹರಣೆಗೆ, ಮೂತ್ರವಿಸರ್ಜನೆಯ ತೊಂದರೆ. ಇದು ಗಂಡಸರಲ್ಲಿ ಸಾಮಾನ್ಯವಾಗಿ ಪ್ರಾಸ್ಟೇಟ್ ಗ್ರಂಥಿಯ ಊತದಿಂದ ಕಂಡು ಬಂದರೆ, ಹೆಂಗಸರಲ್ಲಿ ಗರ್ಭಕೋಶದ ಜಾರುವಿಕೆಯಿಂದ (Prolapse) ಉಂಟಾಗಬಹುದು. ತಜ್ಞವೈದ್ಯರು ಸೂಚಿಸುವ ಮಾತ್ರೆಗಳ ಮೂಲಕ ಈ ತೊಂದರೆಯನ್ನು ಗುಣಪಡಿಸಬಹುದು. ಕೆಲಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆಯೂ ಬೇಕಾಗಬಹುದು.

ನಿದ್ರಾಹೀನತೆ ಕೂಡ ಅನೇಕ ಜನರನ್ನು ಬಾಧಿಸುತ್ತದೆ. ಹಗಲು ಹೊತ್ತಿನಲ್ಲಿ ತುಂಬಾ ನಿದ್ರಿಸದೇ ಸಾಧ್ಯವಾದಷ್ಟೂ ಸಕ್ರೀಯರಾಗಿರಬೇಕು. ರಾತ್ರಿ ಟೀ-ಕಾಫಿಯನ್ನು ಸೇವಿಸುವುದನ್ನು, ಟಿವಿ-ಮೊಬೈಲಗಳನ್ನು ತಡರಾತ್ರಿವರೆಗೂ ನೋಡುವುದನ್ನು ತಪ್ಪಿಸಬೇಕು. ರಾತ್ರಿ ಸುಮಾರು 7-8 ಗಂಟೆಗೆ ಊಟ ಮಾಡಿ ಎರಡು ತಾಸಿನ ನಂತರ ನಿದ್ರಿಸಬೇಕು. ರಾತ್ರಿ ಅತಿಯಾದ ಎಣ್ಣೆಪದಾರ್ಥ, ಖಾರವಾದ ಅಡಿಗೆಯನ್ನು ವರ್ಜಿಸಬೇಕು. ಇದರಿಂದ ಅಸಿಡಿಟಿ, ಹುಳಿತೇಗಿನಿಂದ ನಡುವೆ ಎಚ್ಚರವಾಗುವುದು ತಪ್ಪುತ್ತದೆ. ಆದರೂ ನಿದ್ರೆ ಬರದಿದ್ದಲ್ಲಿ ವೈದ್ಯರಿಂದ ನಿದ್ರೆಮಾತ್ರೆಗಳನ್ನು ಪಡೆಯಬಹುದು.

ಖಿನ್ನತೆ ಕೂಡ ಇಳಿವಯಸ್ಸಿನಲ್ಲಿ ಕಾಡುವ ಒಂದು ರೋಗ. ಇದಕ್ಕೆ ಅನೇಕ ಕಾರಣಗಳಿವೆ. ತಮ್ಮ ದೇಹ ಮೊದಲಿನಂತೆ ಸ್ಪಂದಿಸುತ್ತಿಲ್ಲ ಎಂದೋ, ಕೂದಲು ಉದುರಿತು, ಹಲ್ಲು ಬೀಳುತ್ತಿದೆ ಎಂದೋ ಚಿಂತಿಸಿ ಕೀಳರಿಮೆಯಿಂದ ಕೆಲವರು ಬಳಲುತ್ತಾರೆ. ನಿವೃತ್ತಿಹೊಂದಿರುವುದರಿಂದ ಆದಾಯ ಕೊಂಚ ಕಡಿಮೆಯಾಗಿ ಮುಂದೆ ಹೇಗೋ ಎಂಬ ಚಿಂತೆ ಕೂಡ ಇರುತ್ತೆ. ಅದಲ್ಲದೆ, ಮಕ್ಕಳೆಲ್ಲಾ ಬೆಳೆದು ದೊಡ್ಡವರಾಗಿ ಬೇರೆ ಕಡೆ ಇದ್ದಾಗ ಒಂಟಿತನ ಕಾಡುತ್ತದೆ. ಇವೆಲ್ಲಾ ವ್ಯಕ್ತಿಯನ್ನು ಖಿನ್ನತೆಗೆ ದೂಡುತ್ತವೆ.

ಹಾಗಾದರೆ ಇವಕ್ಕೆಲ್ಲ ಪರಿಹಾರವೇ ಇಲ್ಲವೇ? ಖಂಡಿತ ಇದೆ. ವಯಸ್ಸಾಗುವಿಕೆ ಒಂದು ಸಹಜವಾದ ಪ್ರಕ್ರಿಯೆ; ಇದಕ್ಕೆ ಯಾರೂ ಹೊರತಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದೇ ಪರಿಹಾರದೆಡೆ ಇಡುವ ಮೊದಲ ಹೆಜ್ಜೆ. ಸಾಧ್ಯವಾದಷ್ಟೂ ಸಕ್ರೀಯವಾಗಿ, ಲವಲವಿಕೆಯಿಂದ ಎಲ್ಲರೊಂದಿಗೆ ದಿನಗಳನ್ನು ಕಳೆಯಬೇಕು, ನಮ್ಮ ದೇಹಕ್ಕೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟೇ ಆಹಾರಸೇವನೆಯನ್ನು ಮಾಡಬೇಕು. ಒಬ್ಬಂಟಿಗರಾಗಿದ್ದಾಗ ಫೋನ್, ವಿಡಿಯೋ ಕಾಲಿಂಗ್ ಮೂಲಕ ಕುಟುಂಬಸದಸ್ಯರೊಂದಿಗೆ ಆಗಾಗ ಮಾತನಾಡುತ್ತಿರಬೇಕು. ನಿಗದಿತ ಸಮಯದಲ್ಲೇ ಮಾತ್ರೆಸೇವನೆ, ಊಟ-ತಿಂಡಿ ಮಾಡಬೇಕು. ನಿಯಮಿತವಾಗಿ ವೈದ್ಯರನ್ನು ಭೇಟಿಯಾಗಿ ತಮ್ಮ ಅರೋಗ್ಯ, ದೇಹಸ್ಥಿತಿಯ ಬಗ್ಗೆ ಸಮಾಲೋಚಿಸಬೇಕು. ಋಣಾತ್ಮಕ ಆಲೋಚನೆಗಳನ್ನು ದೂರವಿರಿಸಿ, ತಮ್ಮ ಜೀವನದ ಸುಂದರ ಘಳಿಗೆಗಳನ್ನು, ಸಾಧನೆಗಳನ್ನು ಆಗಾಗ್ಗೆ ನೆನಪಿಸಿಕೊಂಡು ಸಂತಸಪಡಬೇಕು. ನಮ್ಮ ಸುತ್ತಮುತ್ತಲು ನಡೆಯುವ ಸಮಾರಂಭಗಳಲ್ಲಿ, ಹಬ್ಬ-ಹುಣ್ಣಿಮೆಗಳಲ್ಲಿ ಕುಟುಂಬ ಸದಸ್ಯರೊಂದಿಗೆ, ಸ್ನೇಹಿತರೊಂದಿಗೆ ಬೆರೆಯುತ್ತಿರಬೇಕು. ❖

> ವಯಸ್ಸಾಗುವಿಕೆ ಒಂದು ಸಹಜವಾದ ಪ್ರಕ್ರಿಯೆ; ಇದಕ್ಕೆ ಯಾರೂ ಹೊರತಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದೇ ಪರಿಹಾರದೆಡೆ ಇಡುವ ಮೊದಲ ಹೆಜ್ಜೆ.

ಪ್ಲಾಸ್ಟಿಕ್ ಎಂಬ ಅಪಾಯ



ಡಾ. ವಿನಯ ಶ್ರೀನಿವಾಸ್

'ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಮಾರಕ' ಎಂಬುದನ್ನು ಕೇಳುತ್ತಲೇ ಬಂದಿದ್ದೇವೆ. ಆದರೆ ಅದೇ ಪ್ಲಾಸ್ಟಿಕ್ ಸದ್ದಿಲ್ಲದೆ ನಮ್ಮ ಶರೀರವನ್ನು ಹೊಕ್ಕು ನಮ್ಮ ಆರೋಗ್ಯದ ಮೇಲೆ ಬೀರಬಹುದಾದ ಅಪಾಯಗಳ ಬಗ್ಗೆ ಕೇಳಿದ್ದೀರೇನು?

ಆಹಾರ ಪದಾರ್ಥಗಳನ್ನು ಮತ್ತು ಪಾನೀಯಗಳನ್ನು ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ತುಂಬಿ ಉಪಯೋಗಿಸುವುದು ಈ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ಉಪ್ಪಿನಕಾಯಿ, ಮಸಾಲಪುಡಿಗಳು, ದೋಸೆ ಹಾಗೂ ಇಡ್ಲಿಹಿಟ್ಟು ಮೊದಲಾದ ಪದಾರ್ಥಗಳನ್ನು ಅಂಗಡಿಗಳಲ್ಲಿ ಮಾರಾಟ ಮಾಡುವುದು ದಪ್ಪನೆಯ ಪ್ಲಾಸ್ಟಿಕ್ ಪೊಟ್ಟಣಗಳಲ್ಲಿಯೇ. ಹೋಟೇಲುಗಳಿಂದ ಖಾದ್ಯ ಪದಾರ್ಥಗಳನ್ನು ಪಾರ್ಸೆಲ್ ಮಾಡಿ ಕೊಡುವುದು ಕೂಡ ಪ್ಲಾಸ್ಟಿಕ್ ಡಬ್ಬಿಗಳಲ್ಲಿಯೇ. ಒಟ್ಟಾರೆ ಹೇಳುವುದಾದರೆ, ಆಹಾರ ಪದಾರ್ಥ ತಯಾರಿಕಾ ವಿಭಾಗದಲ್ಲಿ ಪ್ಲಾಸ್ಟಿಕ್‌ನ ಬಳಕೆ ಕಣ್ಣರಳಿಸಿ ನೋಡುವಂತಿದೆ. ಒಂದು ಅಂಕಿ-ಅಂಶದ ಪ್ರಕಾರ ವಿಶ್ವದಾದ್ಯಂತ ತಯಾರಾಗುವ ಶೇ. ಅರವತ್ತರಷ್ಟು ಪ್ಲಾಸ್ಟಿಕ್, ಆಹಾರ ಮತ್ತು ಪಾನೀಯಗಳ ಪೊಟ್ಟಣಗಳಾಗಿಯೇ ಬಳಸಲ್ಪಡುತ್ತದಂತೆ.

ನಮಗೆ ತಿಳಿದಂತೆ ಪ್ಲಾಸ್ಟಿಕ್ ಅನೇಕ ಬಗೆಯ ರಾಸಾಯನಿಕಗಳಿಂದ ಮಾಡಲ್ಪಟ್ಟಿದೆ. ಈ ರಾಸಾಯನಿಕಗಳು ಕಾಲ ಕ್ರಮೇಣ ಒಂದಿಷ್ಟು ಕ್ರಿಯೆಗಳಿಗೆ ಒಳಗಾಗಿ ಅಲ್ಲಿ ಉಪ ಉತ್ಪನ್ನಗಳು ಉತ್ಪತ್ತಿಯಾಗುತ್ತವೆ. ಅಂದರೆ, ಮುಖ್ಯ ರಾಸಾಯನಿಕಗಳು ವಿಭಜನೆಗೊಂಡು ಸೂಕ್ಷ್ಮಾತಿಸೂಕ್ಷ್ಮ ಕಣಗಳಾಗಿ ಮಾರ್ಪಾಡಾಗುತ್ತವೆ. ಅದರಲ್ಲಿಯೂ ಈ ಪ್ಲಾಸ್ಟಿಕ್ ಪೊಟ್ಟಣಗಳು ಬಿಸಿಲು ಅಥವಾ ಶಾಖಕ್ಕೆ ತೆರೆದುಕೊಂಡಾಗ ಅಲ್ಲಿ ರಾಸಾಯನಿಕ ಕ್ರಿಯೆಗಳಾಗಿ ಸೂಕ್ಷ್ಮಕಣಗಳು ಉತ್ಪತ್ತಿಯಾಗುವ ಸಂಭವ ಹೆಚ್ಚು. ಈ ಸೂಕ್ಷ್ಮಕಣಗಳು ಆಹಾರದೊಡನೆ ಬೆರೆತು ನಮ್ಮ ಶರೀರವನ್ನು ಯಾವುದೇ ಮುನ್ಸೂಚನೆಯಿಲ್ಲದೆ ಸೇರಿ ನಮ್ಮ ಅಂಗಾಂಗ ವ್ಯವಸ್ಥೆಗಳ ಮೇಲೆ ಅಪಾಯಕರ ಪರಿಣಾಮವನ್ನು ಬೀರುತ್ತವೆ. ಅಷ್ಟೇ ಅಲ್ಲದೆ, ಆಹಾರ ಪದಾರ್ಥಗಳನ್ನು ಪ್ಲಾಸ್ಟಿಕ್ ಸಲಕರಣೆಗಳಲ್ಲಿ ಬಿಸಿ ಮಾಡಿದಾಗ (ಉದಾಹರಣೆಗೆ ಓವನ್‌ನಲ್ಲಿ) ಅಥವಾ ಪದಾರ್ಥಗಳನ್ನು ಬಿಸಿಯಾಗಿದ್ದಾಗಲೇ ಪ್ಲಾಸ್ಟಿಕ್ ಭರಣಿಗಳಿಗೆ ತುಂಬಿದಾಗ ಅಥವಾ ದೀರ್ಘಾವಧಿಯವರೆಗೆ ಆ ಸಲಕರಣೆಗಳಲ್ಲಿ ಪದಾರ್ಥಗಳನ್ನು ತುಂಬಿಟ್ಟಾಗ ಅಲ್ಲಿಯೂ ರಾಸಾಯನಿಕ ಕ್ರಿಯೆಗಳಾಗಬಹುದು.

ಪ್ಲಾಸ್ಟಿಕ್ ಸಲಕರಣೆಗಳ ಪಾರದರ್ಶಕತೆ, ನಮ್ಯತೆ ಮತ್ತು ಬಾಳಿಕೆಯನ್ನು ಹೆಚ್ಚಿಸುವ ಸಲುವಾಗಿ ವಿಶೇಷ ರಾಸಾಯನಿಕಗಳನ್ನು ತಯಾರಿಯ ವೇಳೆಯಲ್ಲಿ ಸೇರಿಸಲಾಗುತ್ತದೆ. ಇವು ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕ ಮತ್ತು ವಿಷಕಾರಕ. ಬಿಸ್‌ಫಿನಾಲ್-ಎ, ಡಿಯೋಕ್ಸಿನ್, ಥ್ಯಾಲೇಟ್ಸ್, ಪಾಲಿ-ಈಥಲಿನ್ ಮತ್ತು ಪಾಲಿಪ್ರೊಪೈಲಿನ್ ಮೊದಲಾದುವು ಕೆಲವು ಮುಖ್ಯ ವಿಶೇಷ ರಾಸಾಯನಿಕಗಳು.



ಹೇಗೆ ಅಪಾಯ?

ವಿಜ್ಞಾನಿಗಳು ಕಂಡಂತೆ, ಪ್ಲಾಸ್ಟಿಕ್ ತಯಾರಿಕೆಯಲ್ಲಿ ಬಳಸುವ ಕನಿಷ್ಠ ಹದಿನೈದು ಬಗೆಯ ರಾಸಾಯನಿಕಗಳು ಮಾನವ ಶರೀರದ ಅಂತಃಸ್ರವಗ್ರಂಥಿಗಳ ಕಾರ್ಯಕ್ಷಮತೆಯಲ್ಲಿ ಅಡೆತಡೆಯನ್ನುಂಟುಮಾಡುತ್ತವೆ. ಹೆಚ್ಚಿನ ರಾಸಯನಿಕ ಕಣಗಳು ಶರೀರದಲ್ಲಿ ಸಾಮಾನ್ಯವಾಗಿ ಸ್ರವಿಸುವ ರಸದೂತಗಳ (ಹಾರ್ಮೋನ್) ಪರಮಾಣು ರಚನೆಯನ್ನು ಹೋಲುವುದೇ ಎಲ್ಲ ಸಮಸ್ಯೆಗಳಿಗೆ ಮುಖ್ಯ ಕಾರಣ.

ಈಸ್ಟ್ರೋಜನ್, ಟೆಸ್ಟೋಸ್ಟಿರಾನ್, ಇನ್‌ಸುಲಿನ್ ಮೊದಲಾದ ರಸದೂತಗಳನ್ನು ಹೋಲುವ ಕಣಗಳು ನಮ್ಮ ಶರೀರವನ್ನು ಆಹಾರದೊಂದಿಗೆ ಸೇರಿದಾಗ ಸಮಸ್ಯೆ ಶುರುವಾಗುತ್ತದೆ. ಈ ಕಣಗಳು ಜೀವಕೋಶಗಳ ಗ್ರಾಹಕಗಳ ಮೇಲೆ ಕುಳಿತು ರಸದೂತಗಳಂತೆಯೇ ಕ್ರಿಯಾಶೀಲವಾಗಬಹುದು ಅಥವಾ ಅವುಗಳೊಡನೆ ಸ್ಪರ್ಧೆಗಿಳಿದು ಅವುಗಳ ಕಾರ್ಯಕ್ಷಮತೆಗೆ ತಡೆಯೊಡ್ಡಬಹುದು. ಇವೆರಡೂ ನಮ್ಮ ಶರೀರಕ್ಕೆ ಅಪಾಯ.

ಜಠರ ಮತ್ತು ಕರುಳುಗಳಲ್ಲಿ ಸೇರುವ ಈ ಕಣಗಳು ಜೀರ್ಣಾಂಗವ್ಯೂಹದಲ್ಲಿರುವ ಸ್ನೇಹಪರ ಸೂಕ್ಷ್ಮಾಣುಗಳಿಗೆ ಮಾರಕವಾಗುತ್ತವೆ. ಇದರಿಂದ ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆ ದುರ್ಬಲಗೊಳ್ಳುತ್ತದೆ.

ಜೀರ್ಣಾಂಗವ್ಯೂಹದ ಸ್ನೇಹಪರ ಸೂಕ್ಷ್ಮಾಣುಗಳ ಸಂಖ್ಯೆ ಕ್ಷೀಣಿಸುವುದು ಮುಂದಿನ ದಿನಗಳಲ್ಲಿ ಪಾರ್ಕಿನ್ಸನ್ ಕಾಯಿಲೆಯಂತಹ ಮೆದುಳಿಗೆ ಸಂಬಂಧಿಸಿದ ದೀರ್ಘಕಾಲಿಕ ಕಾಯಿಲೆಗಳಿಗೆ ಕಾರಣವಾಗಬಹುದು. ಈ ಕಣಗಳು ತಮ್ಮ ಮೇಲ್ಮೈಯಲ್ಲಿ ಹಾನಿಕಾರಕ ಸೂಕ್ಷ್ಮಾಣುಗಳನ್ನು ಹೊತ್ತು ತರುವುದರಿಂದ ವ್ಯಕ್ತಿ ಇತರ ಬಗೆಯ ಉರಿಯೂತಕ್ಕೆ ಒಳಗಾಗಬಹುದು.

ಯಾವ ಆರೋಗ್ಯ ಸಮಸ್ಯೆ?

ಈ ರಾಸಾಯನಿಕಗಳು ನಿರಂತರವಾಗಿ ವ್ಯಕ್ತಿಯ ಶರೀರವನ್ನು ಸೇರುವುದರಿಂದ ಪುರುಷ ಮತ್ತು ಮಹಿಳೆಯರಲ್ಲಿ ಬಂಜೆತನ ಮತ್ತು ಸಂತಾನೋತ್ಪತ್ತಿ ಪ್ರಕ್ರಿಯೆಯಲ್ಲಿ ತೊಡಕು, ಅಂಡಾಶಯಗಳಲ್ಲಿ ನೀರುಗುಳ್ಳೆಗಳು (ಪಾಲಿಸಿಸ್ಟಿಕ್ ಓವೇರಿಯನ್ ಡಿಸೀಸ್), ಮಧುಮೇಹ, ಬೊಜ್ಜು ಮತ್ತು ಸ್ಥೂಲಕಾಯ ಹಾಗೂ ಹೃದ್ರೋಗಗಳ ಸಂಭವ ಹೆಚ್ಚಾಗುತ್ತದೆ.

ನಿಯಂತ್ರಣ ಹೇಗೆ?

- ಸಂಸ್ಕರಿಸಿದ ಆಹಾರ ಪದಾರ್ಥಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡುವುದು.
- ಪ್ಲಾಸ್ಟಿಕ್ ಸೀಸೆಗಳಲ್ಲಿನ ನೀರು, ಐಸ್ ಕ್ರೀಮ್, ಇಂಗಾಲಯುಕ್ತ ಪಾನೀಯಗಳನ್ನು ಆದಷ್ಟು ಕಡಿಮೆ ಬಳಸುವುದು. ಇದರ ಹೆಚ್ಚಾದ ಬಳಕೆ ಪರೋಕ್ಷವಾಗಿ ಪೋಷಕಾಂಶಗಳ ಕೊರತೆಗೂ ಕಾರಣವಾಗಬಹುದು.
- ಪ್ಲಾಸ್ಟಿಕ್ ಪರಿಕರಗಳಲ್ಲಿ ಆಹಾರವನ್ನು ಬಿಸಿ ಮಾಡಬಾರದು.
- ಆಹಾರ ಅಥವಾ ನೀರು ಬಿಸಿಯಾಗಿದ್ದಾಗಲೇ ಪ್ಲಾಸ್ಟಿಕ್ ಭರಣಿಗೆ ಹಾಕಬಾರದು.
- ಪರಿಸರ ಸ್ನೇಹಿ ವಸ್ತುಗಳಿಂದ ತಯಾರಾದ ಆಹಾರ ಪೊಟ್ಟಣಗಳನ್ನು ಬಳಸುವುದು.
- ಗಾಜಿನ ಅಥವಾ ಉಕ್ಕಿನ (ಸ್ಟೀಲ್) ಪರಿಕರಗಳಲ್ಲಿ ಆಹಾರ ಪದಾರ್ಥಗಳನ್ನು ತಯಾರಿಸುವುದು ಮತ್ತು ಶೇಖರಿಸಿಡುವುದು.
  ಆದಷ್ಟು ತಾಜಾ ಆಹಾರ ಪದಾರ್ಥಗಳ ಸೇವನೆಗೆ ಒತ್ತು ಕೊಡುವುದು.

ಪ್ಲಾಸ್ಟಿಕ್ ಸೂಕ್ಷ್ಮ ಕಣಗಳು ಈಗಾಗಲೇ ಮನುಷ್ಯರ ಮಲ ತಪಾಸಣೆಯಲ್ಲಿ ಕಂಡು ಬಂದಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ. ❖

ಪಥ್ಯ ಕೆಲವು ಸತ್ಯ

ಡಾ. ಎ. ಪಿ. ಭಟ್



ಜನರಲ್ಲಿ ರೋಗ ಮತ್ತು ಪಥ್ಯದ ಬಗ್ಗೆ ತಲೆ ತಲಾಂತರಗಳಿಂದ ಬಂದ ಕೆಲವು ನಂಬಿಕೆಗಳು ಆಳವಾಗಿ ಬೇರೂರಿವೆ. ಅವುಗಳಲ್ಲಿ ಕೆಲವು ಸರಿಯಾಗಿ ಇದ್ದರೂ ಉಳಿದವು ವೈಜ್ಞಾನಿಕ ನೆಲೆಗಟ್ಟು ಇಲ್ಲದವು. ಹೆಚ್ಚಿನ ಸಂದರ್ಭಗಳಲ್ಲಿ ರೋಗಕ್ಕಿಂತ ಹೆಚ್ಚು ತಮ್ಮ ಮೇಲೆ ಅನಾವಶ್ಯಕ ಆಹಾರ ನಿರ್ಭಂಧ ಹೇರಿ ಕೊಂಡು ಬಳಲುವರು. ವೈದ್ಯರ ಸಲಹೆ ಇಲ್ಲದೆ ತಾವೇ ತಮ್ಮ ನಂಬಿಕೆಗಳನ್ನು ಹೇರಿಕೊಳ್ಳದಿರುವುದು ಒಳ್ಳೆಯದು.

ಮಕ್ಕಳಲ್ಲಿ (ಮತ್ತು ಹಿರಿಯರಲ್ಲಿ) ಸೋಂಕುರೋಗಗಳಾದ ಧಡಾರ, ಕೋಟಲೆ ಇತ್ಯಾದಿ ಬಂದಾಗ, ಹಳ್ಳಿಗಳಲ್ಲಿ ರೋಗಿಗಳಿಗೆ ಮಾಮೂಲಿನ ಆಹಾರವನ್ನು ನಿಲ್ಲಿಸಿ ಬರೀ ಗಂಜಿ ಹಾಲು ಕೊಡುವರು. ಇದು ಅನಾವಶ್ಯಕ. ಮಾಮೂಲಿಯ ಆಹಾರವನ್ನೇ ಮುಂದುವರಿಸಬಹುದು. ಮೊಟ್ಟೆ, ಮಾಂಸ, ದ್ವಿದಳಧಾನ್ಯಗಳು ಮತ್ತು ತರಕಾರಿ-ಹಣ್ಣುಗಳು ಸೇರಿದ ಪೌಷ್ಟಿಕಾಂಶ ಇರುವ ಆಹಾರ ಬಹುತೇಕ ಸೋಂಕುರೋಗಗಳ ನಿವಾರಣೆಗೆ ಸಹಾಯಕಾರಿ. ಹಲವು ಬಾರಿ ರೋಗಿಯ ಬಂಧುಗಳಲ್ಲಿ ಏನೇನು ಆಹಾರ ಕೊಡುತ್ತಿದ್ದೀರಿ ಎಂದು ಕೇಳಿದಾಗ 'ಡಾಕ್ಟ್ರೇ ನಾವು ನಂಜುಪದಾರ್ಥಗಳನ್ನು ಏನೂ ಕೊಡುವುದಿಲ್ಲ' ಎನ್ನುತ್ತಾರೆ. ನಂಜು ಯಾವುದು – ಎಂದು ಪ್ರಶ್ನೆ ಹಾಕಿದರೆ ಬದನೆ, ಬಸಳೆಸೊಪ್ಪಿನಂತಹ ತರಕಾರಿಗಳು, ಕಡಲೆ, ಮೊಟ್ಟೆ, ಮಾಂಸ ಮುಂತಾದವನ್ನು ವಿನಾಕಾರಣ ಕಪ್ಪು ಪಟ್ಟಿಗೆ ಸೇರಿಸಿಲ್ಪಟ್ಟ ವಸ್ತುಗಳ ಹೆಸರು ಹೊರ ಬರುವುದು.

ಇನ್ನು ಕೆಲವು ಸಂದರ್ಭ ರೋಗಗಳ ಬಗ್ಗೆಯೇ ಆಳವಾದ ತಪ್ಪು ಕಲ್ಪನೆ ಅನಾವಶ್ಯಕ ಪಥ್ಯಪಾಲನೆಗೆ ಕಾರಣ ಆಗುವುದು. ಉದಾಹರಣೆಗೆ, ಜಾಂಡಿಸ್ ಅಥವಾ ಹಳದಿಕಾಮಾಲೆಯನ್ನು ಒಂದು ಕಾಯಿಲೆ ಎಂದೇ ಇಂದಿಗೂ ವಿದ್ಯಾವಂತರು ಕೂಡ ಭಾವಿಸಿರುವುದು. ನಮ್ಮ ಶರೀರದಲ್ಲಿ ಸಹಜವಾಗಿ ಅಥವಾ ಕಾಯಿಲೆಯಿಂದ ಸತ್ತ ಕೆಂಪು ರಕ್ತಕಣಗಳ ವಿಲೇವಾರಿಯ ವ್ಯತ್ಯಯ ಉಂಟುಮಾಡುವ ಅನೇಕ ಕಾಯಿಲೆಗಳು ಇದ್ದು ಅವುಗಳ ಸಾಮಾನ್ಯ ಲಕ್ಷಣ ಜಾಂಡಿಸ್. ಅಕಾಲದಲ್ಲಿ ಕೆಂಪುಕಣಗಳು ನಾಶವಾಗುವ (Haemolytic jaundice) ರೋಗಗಳ ಜೊತೆ ಅವುಗಳ ಅವಶೇಷಗಳನ್ನು ಲಿವರ್‌ನಲ್ಲಿ ನೀರಿನಲ್ಲಿ ಕರಗಿಸಿ ವಿಸರ್ಜಿಸುವ ಕ್ರಿಯೆ ನಿಧಾನವಾಗುವ, ಲಿವರ್‌ನ ವೈರಸ್ ಸೋಂಕು, ಮಲೇರಿಯಾ ಮತ್ತು ಇಲಿಜ್ವರಗಳಂಥ ಕಾಯಿಲೆಗಳಿವೆ. ಕೆಂಪು ರಕ್ತಕಣದ ಪೂರಣಕ್ಕೆ, ಲಿವರ್‌ನ ಸೋಂಕು ಇದ್ದರೆ ಅದನ್ನು ಎದುರಿಸಲು ಪೌಷ್ಟಿಕ ಆಹಾರ ಅವಶ್ಯಕ. ಲಿವರ್‌ನ ಸೋಂಕು ಇದ್ದರೆ ಎಲ್ಲಾ ಸೋಂಕು ಕಾಯಿಲೆಗಳಲ್ಲಿ ಇರುವಂತೆ ಹಸಿವು ಕಡಿಮೆ ಮತ್ತು ವಾಕರಿಕೆ ಇರುವುದು. ಲಿವರ್‌ಗೆ ಪಿತ್ತಜನಕಾಂಗ ಎಂಬ ಹೆಸರಿದೆ. ಇದರಿಂದ ಅದರ ಸೋಂಕಿನ ಒಂದು ಹಂತದಲ್ಲಿ ಪಿತ್ತರಸದ ಸಾಗಣೆ ವ್ಯತ್ಯಯ ಆಗಿ ಎಣ್ಣೆಪದಾರ್ಥವನ್ನು ಸೇವಿಸಿದಾಗ ಜೀರ್ಣಕ್ರಿಯೆ ನಿಧಾನವಾಗಿ ಹೊಟ್ಟೆ ಉಬ್ಬರಿಸಿದಂತೆ ಆಗಬಹುದೇ ವಿನಾ ಶರೀರಕ್ಕೆ ತೊಂದರೆ ಏನೂ ಇಲ್ಲ. ಅತಿಯಾದ ಪಥ್ಯದಿಂದ ಕಾಯಿಲೆ ವಾಸಿಯಾಗುವುದು ನಿಧಾನವಾಗುವುದು.

ಶ್ವಾಸನಾಳ ಮತ್ತು ಕೋಶಸಂಬಂಧಿ ಕಾಯಿಲೆಗಳಲ್ಲಿ ಕಫ ಉಂಟಾಗುತ್ತದೆ. ಬಹಳ ಮಂದಿ ಹಾಲು ಕುಡಿದರೆ ಕಫ ಆಗುವುದು ಎಂದು ತಿಳಿದಿರುತ್ತಾರೆ. ಹಾಲು ಬಿಳಿ, ಕಫ ಕೂಡ ಬಿಳಿ ಇರುವುದು ಈ ನಂಬಿಕೆಗೆ ಕಾರಣ. ಆದರೆ ಇದು ಸರಿಯಲ್ಲ. ಆಸ್ತಮಾ ಕಾಯಿಲೆ ಅಲರ್ಜಿಯಿಂದ ಶ್ವಾಸನಾಳಗಳಲ್ಲಿ ನೀರು ತುಂಬಿ ಉಸಿರು ಹೊರಹೋಗಲು ಸರಿಯಾದ ಎಡೆಯಿಲ್ಲದೆ ಉಸಿರಾಟ ಕಷ್ಟವಾಗುವುದಲ್ಲದೆ 'ಸುಯಿನ್ ಸುಯಿನ್' ಎಂಬ ಶಬ್ದ ಬರುವುದು. ಇಲ್ಲಿ ಗಾಳಿಯಲ್ಲಿ ಬರುವ ವಸ್ತುಗಳೇ ಅಲರ್ಜಿಕಾರಕಳಾಗಿ ಇರುತ್ತವೆಯಾದರೂ ರೋಗಿಗಳು ತಾವೇ ಆಹಾರ ಪಥ್ಯವನ್ನು ಹೇರಿಕೊಳ್ಳುವುದನ್ನು ಕಾಣುತ್ತೇವೆ.

ವಾಂತಿ-ಭೇದಿಗಳು ಸಾಮಾನ್ಯವಾಗಿ ಬರುವ ಕಾಯಿಲೆಗಳಾಗಿದ್ದು, ಹೆಚ್ಚಾಗಿ ವೈರಸ್‌ಗಳು ಉಂಟು ಮಾಡುವಂತಹವು. ಇಲ್ಲಿ ಜಲ ಮತ್ತು ಲವಣಪೂರಣ ಬಹಳ ಮುಖ್ಯ. ಆದರೆ ವಾಂತಿ ಆಗುವುದು – ಎಂದು ನೀರೇ ಕುಡಿಸರು. ಇದು ತಪ್ಪು. ವಾಂತಿ ಸ್ವಲ್ಪ ಸಮಯದಲ್ಲಿ ನಿಲ್ಲುವುದು ಮತ್ತು ಕುಡಿದದ್ದು ಎಲ್ಲ ವಾಂತಿ ಆಗದು. ಜಲಲವಣ ಪುಡಿಗಳ ದರ ಅಗ್ಗವಾಗಿದ್ದು, ಎಲ್ಲ ಔಷಧ ಅಂಗಡಿಗಳಲ್ಲಿ ಲಭ್ಯ. ಇಲ್ಲದಿದ್ದರೆ ನಾವೇ ಮನೆಯಲ್ಲಿ ತಯಾರಿಸಿಕೊಳ್ಳಬಹುದು.

ಅಧಿಕ ರಕ್ತದ ಒತ್ತಡ ಇರುವವರು ಅಡುಗೆಗೆ ಹಾಕಿದ ಉಪ್ಪನ್ನು ಬಿಟ್ಟು ಹೆಚ್ಚು ಸೇರಿಸಿಕೊಳ್ಳದೆ ಇದ್ದರೆ ಸಾಕು; ಅಂದರೆ ಉಪ್ಪಿನಕಾಯಿ, ಉಪ್ಪಿನಲ್ಲಿ ಹಾಕಿದ ಮೀನು, ಹಲಸು, ಮಾವು, ಸೆಂಡಿಗೆ ಮುಂತಾದವುಗಳಿಂದ ದೂರ ಇರಬೇಕು.

ಬಳಕೆಯಲ್ಲಿ ಇರುವ ಎಲ್ಲಾ ಏಕದಳ ಧಾನ್ಯಗಳಲ್ಲಿಯೂ ಸಕ್ಕರೆಯ ಅಂಶ ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿ ಇರುವ ಕಾರಣ ಡಯಾಬಿಟಿಸ್ ಕಷ್ಟ ಪಟ್ಟು ಹೊಸತಕ್ಕೆ ಹೊಂದಿಕೊಳ್ಳುವ ಅವಶ್ಯಕತೆ ಇಲ್ಲ. ಅಲ್ಲದೆ ಮನೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರತ್ಯೇಕ ಅಡುಗೆಯನ್ನು ತಯಾರಿಸುವುದು ಪ್ರಾಯೋಗಿಕವೂ ಅಲ್ಲ. ಸೇವನೆ ಹಿತಮಿತವಾಗಿ ಇರಬೇಕಾದುದು ಮುಖ್ಯ. ಇಲ್ಲಿಯೂ ಕಹಿಯಾದ ಮತ್ತು ಖಾರದ ವಸ್ತುಗಳನ್ನು ಸೇವಿಸಿದರೆ ಬಾಯಲ್ಲಿ ಸಿಹಿ ಕಡಿಮೆಯಾದೀತೇ ಹೊರತು ರಕ್ತದಲ್ಲಿ ಅಲ್ಲ.

ಗರ್ಭಿಣಿ ಮತ್ತು ಬಾಣಂತಿಯರಿಗೆ ಸಮತೂಕದ ಪೌಷ್ಟಿಕ ಆಹಾರ ಬಹಳ ಮುಖ್ಯವಾಗಿದ್ದು, ತರಕಾರಿ, ಮೀನು, ಮಾಂಸ, ಹಣ್ಣು, ದ್ವಿದಳಧಾನ್ಯಗಳು ಎಲ್ಲವೂ ಒಳ್ಳೆಯದು. ಅವರಿಗೆ 'ಅದು ನಂಜು ಇದು ನಂಜು' ಎಂದು ಅನ್ನ, ಹೈನು ಉತ್ಪನ್ನಗಳು ಮತ್ತು ಸಿಹಿತಿಂಡಿಗಳನ್ನು ಮಾತ್ರ ಕೊಡುವುದು ಒಳ್ಳೆಯದಲ್ಲ. ನಾವು ಹಸುಗಳಿಗೆ ಪೌಷ್ಟಿಕ ಆಹಾರ ಕೊಡುತ್ತೇವೆ; ಮನುಷ್ಯರಿಗೆ ಮಾತ್ರ ಕೊಡಲು ಹಿಂಜರಿಯುತ್ತೇವೆ.

ಪಥ್ಯಪಕ್ಷದವರು ಕೆಲವು ವಸ್ತುಗಳನ್ನು ಉಷ್ಣವೆನ್ನುವರು, ಇನ್ನು ಕೆಲವನ್ನು ಶೀತವೆನ್ನುವರು. ಇದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲು ಹೋದರೆ ತಲೆ ಬಿಸಿಯಾಗುವುದು. ಸೌತೆಕಾಯಿ, ಬಸಳೆಗಳು ಶೀತಕಾರಕವಾದರೆ, ಐಸ್ ಕ್ರೀಮ್ ಉಷ್ಣ, ಬಡವರ ಬಾದಾಮಿ ನೆಲಗಡಲೆ ಪಿತ್ತ. ಈ ವರ್ಗೀಕರಣಕ್ಕೆ ವೈಜ್ಞಾನಿಕ ಆಧಾರ ಇದ್ದಂತಿಲ್ಲ.

ಬಾಲಂಗೋಚಿ: ವೈದ್ಯರ ಸಲಹೆ ಹೊರತಾಗಿ ಮಾಡುವ ಪಥ್ಯಕ್ಕೆ 'ಪಥ್ಯೇತರ ಚಟುವಟಿಕೆ' ಎನ್ನಬಹುದು. ❖

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಕಾರ್ಬಾಕ್ಸಿಲಿಕ್ ಆಮ್ಲ

ರಸಾಯನಶಾಸ್ತ್ರ


65) ಕಾರ್ಬೊನಿಲ್ ಗುಂಪಿನ ನಾಮಕರಣ ಕುರಿತು ಬರೆಯಿರಿ

ಉತ್ತರ: ಆಲ್ಡಿಹೈಡ್ ಮತ್ತು ಕೀಟೋನ್‌ಗಳು ಸರಳ ಮತ್ತು ಅತ್ಯಂತ ಪ್ರಮುಖ ಕಾರ್ಬೊನಿಲ್ ಸಂಯುಕ್ತಗಳಾಗಿವೆ. ಅವುಗಳಿಗೆ ಎರಡು ರೀತಿಯ ನಾಮಕರಣ ಪದ್ಧತಿಗಳಿವೆ.

(a) ಸಾಮಾನ್ಯ ಹೆಸರುಗಳು: ಆಲ್ಡಿಹೈಡ್ ಮತ್ತು ಕೀಟೋನ್‌ಗಳನ್ನು IUPAC ಹೆಸರುಗಳ ಬದಲಿಗೆ ಆಗಾಗ್ಗೆ ಅವುಗಳ ಸಾಮಾನ್ಯ ಹೆಸರುಗಳಿಂದ ಕರೆಯಲಾಗುತ್ತದೆ. ಬಹುತೇಕ ಆಲ್ಡಿಹೈಡ್‌ಗಳ ಸಾಮಾನ್ಯ ಹೆಸರುಗಳನ್ನು ಅವುಗಳ ಅನುರೂಪ ಕಾರ್ಬಾಕ್ಸಿಲಿಕ್ ಆಮ್ಲಗಳ ಸಾಮಾನ್ಯ ಹೆಸರುಗಳಲ್ಲಿನ ಅಂತ್ಯಭಾಗ -ಇಕ್‌ಆಮ್ಲವನ್ನು ಆಲ್ಡಿಹೈಡ್ ಪದದಿಂದ ಬದಲಾಯಿಸುವ ಮೂಲಕ ಪಡೆಯಲಾಗಿದೆ. ಹಾಗೆಯೆ, ಅಮ್ಲ ಅಥವಾ ಆಲ್ಡಿಹೈಡ್‌ಗಳ ಹೆಸರುಗಳು ಅವುಗಳ ಮೂಲ ಆಕರದ ಲ್ಯಾಟಿನ್ ಅಥವಾ ಗ್ರೀಕ್ ಪದಗಳನ್ನು ಪ್ರತಿಫಲಿಸುತ್ತವೆ. ಕಾರ್ಬನ್ ಸರಪಳಿಯಲ್ಲಿ ಆದೇಶಿತದ ಸ್ಥಾನವನ್ನು ಗ್ರೀಕ್ ಅಕ್ಷರಗಳಾದ α, β, γ, δ ಮುಂತಾದುವುಗಳಿಂದ ಸೂಚಿಸಲಾಗುವುದು.

ಕಾರ್ಬೊನಿಲ್ ಗುಂಪಿಗೆ ಬಂಧಿತವಾಗಿರುವ ಎರಡು ಆಲ್ಕೈಲ್ ಅಥವಾ ಅರೈಲ್ ಗುಂಪುಗಳನ್ನು ಹೆಸರಿಸುವ ಮೂಲಕ ಕೀಟೋನ್‌ಗಳ ಸಾಮಾನ್ಯ ಹೆಸರುಗಳನ್ನು ಪಡೆಯಲಾಗಿದೆ. ಕಾರ್ಬೊನಿಲ್ ಗುಂಪಿನ ನಂತರದ ಕಾರ್ಬನ್ ಪರಮಾಣುಗಳನ್ನು α α' ಎಂಬುದಾಗಿ ಸೂಚಿಸುವುದರೊಂದಿಗೆ ಪ್ರಾರಂಭಿಸಿ, ಆದೇಶಿತ ಸ್ಥಾನಗಳನ್ನು $\alpha\ \alpha'$, $\beta\ \beta'$ ಮುಂತಾದ ಗ್ರೀಕ್ ಪದಗಳಿಂದ ಸೂಚಿಸಲಾಗುತ್ತದೆ. ಕೆಲವು ಕೀಟೋನ್‌ಗಳು ಐತಿಹಾಸಿಕ ಸಾಮಾನ್ಯ ಹೆಸರುಗಳನ್ನು ಹೊಂದಿದ್ದು ಅತ್ಯಂತ ಸರಳವಾಗಿ ಡೈಮೀಥೈಲ್ ಕೀಟೋನನ್ನು ಅಸಿಟೊನ್ ಎಂದು ಕರೆಯುತ್ತಾರೆ. ಆಲ್ಕೈಲ್ ಫೀನೈಲ್ ಕೀಟೋನ್‌ಗಳನ್ನು ಸಾಮಾನ್ಯವಾಗಿ ಫೀನೋನ್‌ಗೆ ಅಸೈಲ್ ಗುಂಪಿನ ಹೆಸರನ್ನು ಪೂರ್ವಪ್ರತ್ಯಯವಾಗಿ ಸೇರಿಸುವ ಮೂಲಕ ಹೆಸರಿಸಲಾಗಿದೆ. ಉದಾಹರಣೆಗೆ ಅಸಿಟೊಫಿನೋನ್ ಪ್ರೊಪಿಯೊಫಿನೋನ್ ಬೆಂಝೋಫಿನೋನ್.

(b) IUPAC ಹೆಸರುಗಳು: ತೆರೆದ ಸರಪಳಿಯ ಆಲಿಫ್ಯಾಟಿಕ್ ಆಲ್ಡಿಹೈಡ್‌ಗಳ ಮತ್ತು ಕೀಟೋನ್‌ಗಳ



IUPAC ಹೆಸರುಗಳನ್ನು, ಅನುಗುಣವಾಗಿ ಅವುಗಳ ಆಲ್ಕೇನ್‌ಗಳ ಆಂಗ್ಲ ಹೆಸರಿನ ಕೊನೆಯಕ್ಷರ -e ಯನ್ನು ಅನುಕ್ರಮವಾಗಿ -ಆಲ್ ಮತ್ತು -ಓನ್ ಗಳಿಂದ ಬದಲಿಸುವುದರೊಂದಿಗೆ ಪಡೆಯಲಾಗಿವೆ. ಆಲ್ಡಿಹೈಡ್‌ಗಳಲ್ಲಿ ಅತೀ ಉದ್ದನೆಯ ಕಾರ್ಬನ್ ಸರಪಳಿಗೆ ಸಂಖ್ಯೆ ನೀಡುವಾಗ ಆಲ್ಡಿಹೈಡ್ ಗುಂಪಿನ ಕಾರ್ಬನ್‌ನಿಂದ ಪ್ರಾರಂಭಿಸಬೇಕು ಹಾಗೆಯೇ ಕೀಟೋನ್‌ಗಳ ಸಂದರ್ಭದಲ್ಲಿ ಕಾರ್ಬೊನಿಲ್ ಗುಂಪು ಹತ್ತಿರವಿರುವ ತುದಿಯಿಂದ ಸಂಖ್ಯೆ ನೀಡುವಿಕೆಯನ್ನು ಪ್ರಾರಂಭಿಸಬೇಕು. ಆದೇಶಿತಗಳನ್ನು ಕಾರ್ಬನ್ ಸರಪಳಿಯಲ್ಲಿನ ಅವುಗಳ ಸ್ಥಾನವನ್ನು ಸೂಚಿಸುವ ಸಂಖ್ಯೆಗಳೊಂದಿಗೆ ಆಂಗ್ಲ ವರ್ಣಮಾಲೆಯ ಕ್ರಮನುಸಾರ ಪೂರ್ವಪ್ರತ್ಯಯವಾಗಿ ಸಬೇಕು. ರಿಂಗ್ ಕೀಟೋನ್‌ಗಳಿಗಳಲ್ಲಿ ಇದನ್ನೇ ಅನ್ವಯಿಸಿ, ಕಾರ್ಬೊನಿಲ್ ಕಾರ್ಬನ್‌ಗೆ ಸಂಖ್ಯೆ ಒಂದನ್ನು ನೀಡಲಾಗುತ್ತದೆ. ಆಲ್ಡಿಹೈಡ್ ಗುಂಪು ರಿಂಗಿಗೆ ಅಂಟಿಕೊಂಡಿದ್ದಾಗ, ರಿಂಗ್ ಆಲ್ಕೇನ್‌ನ ಪೂರ್ಣ ಹೆಸರಿನ ಕೊನೆಯಲ್ಲಿ ಕಾರ್ಬಾಲ್ಡಿಹೈಡ್ ಎಂಬ ಅಂತ್ಯಪ್ರತ್ಯಯವನ್ನು ಸೇರಿಸಬೇಕು. ಉಂಗುರದಲ್ಲಿನ ಕಾರ್ಬನ್ ಪರಮಾಣುಗಳಿಗೆ ಸಂಖ್ಯೆ ನೀಡುವಿಕೆಯು ಆಲ್ಡಿಹೈಡ್ ಗುಂಪು ಅಂಟಿಕೊಂಡಿರುವ ಕಾರ್ಬನ್ ಪರಮಾಣುವಿನಿಂದ ಪ್ರಾರಂಭವಾಗುತ್ತದೆ. ಬೆಂಜಿನ್ ಉಂಗುರದ ಮೇಲೆ ಆಲ್ಡಿಹೈಡ್ ಗುಂಪನ್ನು ಹೊಂದಿರುವ ಅತ್ಯಂತ ಸರಳ ಆರೊಮ್ಯಾಟಿಕ್ ಆಲ್ಡಿಹೈಡ್‌ನ ಹೆಸರು ಬೆಂಜಿನ್‌ಕಾರ್ಬಾಲ್ಡಿಹೈಡ್ ಆಗಿದೆ. ಆದಾಗ್ಯೂ, ಸಾಮಾನ್ಯ ಹೆಸರಾದ ಬೆಂಝಾಲ್ಡಿಹೈಡ್ ಸಹ IUPAC ಯಿಂದ ಅಂಗೀಕರಿಸಲ್ಪಟ್ಟಿದೆ. ಆದುದರಿಂದ ಇತರೆ ಆರೊಮ್ಯಾಟಿಕ್ ಆಲ್ಡಿಹೈಡ್‌ಗಳನ್ನು ಆದೇಶಿತ ಬೆಂಝಾಲ್ಡಿಹೈಡ್‌ಗಳಾಗಿ ಹೆಸರಿಸಲಾಗುವುದು.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು



ಸುಭಾಷಿತ

ಪ್ರತಿಯೊಂದು ಧರ್ಮವೂ ಭಗವಂತನ ಸಾಕ್ಷಾತ್ಕಾರಕ್ಕೆ ಒಂದೊಂದು ಮಾರ್ಗ. ವಿವಿಧ ದಿಕ್ಕುಗಳಿಂದ ಹರಿದುಬಂದ ನದಿಗಳೆಲ್ಲವೂ ಸಾಗರದಲ್ಲಿ ಐಕ್ಯವಾಗುವ ಹಾಗೆ ಇದು ಕೂಡಾ.

-ರಾಮಕೃಷ್ಣ ಪರಮಹಂಸ

ಮಾಂಸ ಮಾರಾಟಕ್ಕೆ ನಿರ್ಬಂಧ ಪ್ರಭುತ್ವದ ಅವಿವೇಕದ ನಡೆ

ನವರಾತ್ರಿಯ ಸಮಯದಲ್ಲಿ ಮಾಂಸದ ಅಂಗಡಿಗಳನ್ನು ಮುಚ್ಚಬೇಕು ಎಂದು ದೆಹಲಿ ಮಹಾನಗರ ಪಾಲಿಕೆಗಳ ಮೇಯರ್‌ಗಳು ನೀಡಿರುವ ನಿರ್ದೇಶನ ಯಾವ ದೃಷ್ಟಿಯಿಂದ ನೋಡಿದರೂ ಸಮರ್ಥನೀಯವಲ್ಲ. ಇಂತಹ ನಿರ್ದೇಶನವು ನಾಗರಿಕರ ಸ್ವಾತಂತ್ರ್ಯ ಹಾಗೂ ಮೂಲಭೂತ ಹಕ್ಕಿನ ಹರಣಕ್ಕೆ ಸಮ. ತಾವು ಏನನ್ನು ಸೇವಿಸಬೇಕು ಎಂಬುದನ್ನು ತೀರ್ಮಾನಿಸುವ ಹಕ್ಕು, ಕಾನೂನುಬದ್ಧವಾದ ಯಾವ ವೃತ್ತಿಯನ್ನು ನಡೆಸಿ ಜೀವನೋಪಾಯ ಕಂಡುಕೊಳ್ಳಬೇಕು ಎಂಬುದನ್ನು ನಿರ್ಧರಿಸುವ ಹಕ್ಕು ಜನರಿಗೆ ಇದೆ. ಈ ಹಕ್ಕುಗಳನ್ನು ಮನಸೋಇಚ್ಛೆ ನಿರಾಕರಿಸುವಂತಿಲ್ಲ. ನಿರ್ದಿಷ್ಟ ಸಂದರ್ಭದಲ್ಲಿ ಸಮಾಜದ ಒಂದು ವರ್ಗ ಮಾಂಸ ಸೇವನೆ ಮಾಡುವುದಿಲ್ಲ ಎಂಬ ಕಾರಣ ನೀಡಿ ಪ್ರಭುತ್ವವು ಇತರರೂ ಆ ಸಂದರ್ಭದಲ್ಲಿ ಮಾಂಸ ಸೇವಿಸುವಂತಿಲ್ಲ ಎಂದು ಹೇಳಲು ಅವಕಾಶವಿಲ್ಲ. ಅಷ್ಟೇ ಅಲ್ಲ, ಆ ಸಂದರ್ಭದಲ್ಲಿ ಮಾಂಸ ಮಾರಾಟ ಮಾಡಬೇಡಿ, ಮಾಂಸ ಖರೀದಿ ಮಾಡಬೇಡಿ ಎಂದು ಕೂಡ ನಿರ್ದೇಶನ ನೀಡುವಂತಿಲ್ಲ. ಮಾಂಸವು ದೇಶದ ಬಹುಜನರ ಆಹಾರ. ಈ ವಿಚಾರದಲ್ಲಿ ಪೊಲೀಸ್‌ಗಿರಿ ನಡೆಸುವುದಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಮಾಂಸದ ಅಂಗಡಿ ತೆರೆಯಬೇಕೆ ಎಂದು ಹೇಳುವುದು ಕೂಡ ಹಿಂದುತ್ವ ಸಂಘಟನೆಗಳ ಪಾಲಿಗೆ ಮುಸ್ಲಿಮರನ್ನು ಗುರಿಯಾಗಿಸಿಕೊಳ್ಳಲು ಒಂದು ಅಸ್ತ್ರವೂ ಹೌದು. ಜಾತ್ರೆಯ ಸಂದರ್ಭಗಳಲ್ಲಿ, ಜಾತ್ರೆ ನಡೆಯುವಲ್ಲಿ ಮುಸ್ಲಿಮರು ಅಂಗಡಿ ತೆರೆಯಬಾರದು ಎನ್ನುವ ನಿಲುವಿನ ಮತ್ತೊಂದು ರೂಪ ಇದು.



ಆಹಾರದ ವಿಚಾರದಲ್ಲಿ ಶ್ರೇಷ್ಠ, ಕನಿಷ್ಠ ಎಂಬ ಭಾವನೆಯು ಸರ್ವಥಾ ಸರಿಯಲ್ಲ

ಜನರಿಗೆ ತಮ್ಮ ಆಹಾರ ಯಾವುದಿರಬೇಕು ಎಂಬುದನ್ನು ತೀರ್ಮಾನಿಸುವ ಹಕ್ಕು ಇದೆ ಎಂಬ ಮಾತನ್ನು ದೇಶದ ನ್ಯಾಯಾಲಯಗಳು ಹಲವು ಆದೇಶಗಳಲ್ಲಿ ಸ್ಪಷ್ಟವಾಗಿ ಹೇಳಿವೆ. 2017ರ ಪುಟ್ಟಸ್ವಾಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಆಹಾರ ಪದ್ಧತಿ ಏನಿರಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವುದು ಖಾಸಗಿತನದ ಹಕ್ಕಿನ ಒಂದು ಭಾಗ, ಅದನ್ನು ರಕ್ಷಿಸಬೇಕು ಎಂದು ಹೇಳಿದೆ. ಇನ್ನೊಂದು ತೀರ್ಪಿನಲ್ಲಿ ಕೋರ್ಟ್, 'ವ್ಯಕ್ತಿಯೊಬ್ಬ ಆಹಾರವಾಗಿ ಏನನ್ನು ಸೇವಿಸಬೇಕು ಎಂಬುದು ಆತನ ವೈಯಕ್ತಿಕ ವಿಚಾರ. ಅದು ಸಂವಿಧಾನದ 21ನೆಯ ವಿಧಿಯಲ್ಲಿ ಹೇಳಿರುವ ಖಾಸಗಿತನದ ಸ್ವಾತಂತ್ರ್ಯದ ಭಾಗ' ಎಂದು ಹೇಳಿದೆ. ಮಾಂಸದ ವ್ಯಾಪಾರದಲ್ಲಿ ತೊಡಗಿರುವವರಿಗೆ ಅವರ ವೃತ್ತಿಯನ್ನು ನಡೆಸಿಕೊಂಡು ಹೋಗುವ ಹಕ್ಕು ಇದೆ. ಈ ಹಕ್ಕನ್ನು ಒಂದಿಷ್ಟು ಅವಧಿಗೆ ನಿರ್ಬಂಧಿಸಲು ಅವಕಾಶ ಇಲ್ಲ ಎಂದು ಕೂಡ ಕೋರ್ಟ್‌ಗಳು ಸ್ಪಷ್ಟಪಡಿಸಿವೆ. 2017ರಲ್ಲಿ ಬಾಂಬೆ ಹೈಕೋರ್ಟ್ ನೀಡಿರುವ ಒಂದು ಆದೇಶವು, 'ನಿರ್ದಿಷ್ಟ ಆಹಾರ ಸೇವನೆ ಮಾಡಬೇಡಿ ಎಂದು ಪ್ರಭುತ್ವವು ಪ್ರಜೆಗಳಿಗೆ ಹೇಳುವುದು, ನಿರ್ದಿಷ್ಟ ಆಹಾರವನ್ನು ಜನ ಇಟ್ಟುಕೊಳ್ಳುವುದನ್ನು ತಡೆಯುವುದು ಖಾಸಗಿತನದ ಹಕ್ಕಿನ ಉಲ್ಲಂಘನೆ' ಎಂದು ಹೇಳಿದೆ. ನ್ಯಾಯಾಲಯಗಳು ಹೇಳಿರುವ ಈ ಮಾತುಗಳನ್ನು ಈಗ ಆಳ್ವಿಕೆ ನಡೆಸುವವರು ಉಲ್ಲಂಘಿಸುತ್ತಿದ್ದಾರೆ. ಉತ್ತರಪ್ರದೇಶದ ಕೆಲವು ಪಟ್ಟಣಗಳಲ್ಲಿ ಕೂಡ ಇದೇ ಬಗೆಯ ನಿರ್ಬಂಧಗಳನ್ನು ಹೇರಲಾಗಿದೆ ಎಂಬ ವರದಿಗಳು ಇವೆ.

ಕೆಲವು ಹಬ್ಬಗಳ ಸಂದರ್ಭದಲ್ಲಿ ಮಾಂಸ ಮಾರಾಟವನ್ನು ನಿಷೇಧಿಸುವ ಪ್ರವೃತ್ತಿಯು ಈಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಇದು ಕಾನೂನುಬದ್ಧ ಅಲ್ಲ. ಇಂತಹ ನಿರ್ಬಂಧಗಳ ಹಿಂದೆ ಇರುವುದು ಶ್ರೇಷ್ಠತೆಯ ಭಾವನೆಯೇ ವಿನಾ ಬೇರೆ ಯಾವ ತರ್ಕವೂ ಇಲ್ಲ. ಆಹಾರದ ವಿಚಾರದಲ್ಲಿ ಶ್ರೇಷ್ಠ, ಕನಿಷ್ಠ ಎಂಬ ಭಾವನೆಯು ಸರ್ವಥಾ ಸರಿಯಲ್ಲ. ದೇಶದ ಸಂಕೀರ್ಣ ಸಾಮಾಜಿಕ ವಾಸ್ತವಗಳನ್ನು ಅರ್ಥ ಮಾಡಿಕೊಂಡಿರುವ ಯಾರೇ ಆದರೂ ಮಾಂಸಾಹಾರ ಸೇವನೆಯನ್ನು ನಿರ್ಬಂಧಿಸುವ ಮಾತುಗಳನ್ನು ಆಡುವುದಿಲ್ಲ. ಭಾರತವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದವರು ಮಾತ್ರ, ಯಾರು ಏನನ್ನು ತಿನ್ನಬೇಕು, ಏನನ್ನು ತಿನ್ನಬಾರದು ಎಂಬ ವಿವೇಕಹೀನ ಮಾತುಗಳನ್ನು ಆಡಬಲ್ಲರು. ವಾಸ್ತವದಲ್ಲಿ ಇಲ್ಲಿ ಆಹಾರ ಎಂಬುದು ನೆಪ ಮಾತ್ರ. ಇಲ್ಲಿನ ನಿಜವಾದ ಉದ್ದೇಶ ಇರುವುದು ಸಮಾಜದ ಮುಖ್ಯವಾಹಿನಿಯಿಂದ ಮುಸ್ಲಿಮರನ್ನು ಪ್ರತ್ಯೇಕಗೊಳಿಸುವುದು ಹಾಗೂ ಅವರ ಮೇಲೆ ನಿಯಂತ್ರಣ ಸಾಧಿಸುವುದು. ಇದು ಕೆಟ್ಟದ್ದು ಹಾಗೂ ವಿಭಜನಕಾರಿ ರಾಜಕಾರಣ. ಇಂತಹ ನಡೆಗಳನ್ನು ಈಗ ಪ್ರಭುತ್ವ ಬೆಂಬಲಿಸುತ್ತಿದೆ, ಕಾನೂನು ಕೈಗೆತ್ತಿಕೊಳ್ಳುವ ಕೆಲವು ಸಂಘಟನೆಗಳು ಇಂತಹ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿವೆ. 'ಎಲ್ಲ ಜೊತೆಗೂಡಿ, ಎಲ್ಲರ ವಿಕಾಸ' ಎಂಬ ಘೋಷವಾಕ್ಯವು ಈ ಬಗೆಯ ರಾಜಕಾರಣಕ್ಕೆ ಸರಿಹೊಂದುತ್ತದೆಯೇ?

ದಿನದ ಟ್ವೀಟ್

ಶ್ರೇಯಸ್ಸು ಸಿಗದವರು...



ಸಮಸ್ಯೆಗಳನ್ನು ಪರಿಹರಿಸುವವರಿಗೆ, ಅದರ ಶ್ರೇಯಸ್ಸು ಸಿಗುತ್ತದೆ. ಆದರೆ, ಸಮಸ್ಯೆಗಳೇ ಬಾರದಂತೆ ನೋಡಿಕೊಂಡವರಿಗೆ ಅಂತಹ ಶ್ರೇಯಸ್ಸು ಸಿಗುವುದಿಲ್ಲ!

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ಬೆಂಗಳೂರಿನ ಪೊಲೀಸ್ ಆಯುಕ್ತರದು ಒಂದೂವರೆ ಕೋಟಿ ನಾಗರಿಕರನ್ನು ರಕ್ಷಿಸುವ ಜವಾಬ್ದಾರಿಯುತ ಹುದ್ದೆ. ಆಡಳಿತಾರೂಢ ಪಕ್ಷದ ರಾಜಕಾರಣಿಯೊಬ್ಬರು ಆಯುಕ್ತರನ್ನು ಮಾಧ್ಯಮಗಳ ಮೂಲಕ 'ಸುಳ್ಳುಗಾರ' ಎಂದು ಕರೆಯುವುದು ಮುಖ್ಯಮಂತ್ರಿ ಮತ್ತು ಸರ್ಕಾರವನ್ನು ಅವಮಾನಿಸಿದಂತೆ. ಉತ್ತಮ ಆಡಳಿತವು ಮೇಲುಗೈ ಸಾಧಿಸುತ್ತದೆ ಎಂಬ ಭರವಸೆಯಿದೆ.

ಭಾಸ್ಕರ್ ರಾವ್, ಎಎಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 12-4-1997

• ವಿಶ್ವಾಸಮತಕ್ಕೆ ಸೋಲು: ಸಂಯುಕ್ತ ರಂಗ ಸರ್ಕಾರ ಪತನ

ನವದೆಹಲಿ, ಏ. 11- ಪ್ರಧಾನಿ ಎಚ್.ಡಿ. ದೇವೇಗೌಡ ಅವರ ನೇತೃತ್ವದ ಸರ್ಕಾರವು ಲೋಕಸಭೆಯಲ್ಲಿ ಇಂದು ಮಂಡಿಸಿದ ವಿಶ್ವಾಸಮತ ನಿರ್ಣಯಕ್ಕೆ 158- 292 ಮತಗಳಿಂದ ಸೋಲಾಯಿತು. ತಕ್ಷಣ ರಾಷ್ಟ್ರಪತಿ ಭವನಕ್ಕೆ ತೆರಳಿದ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ದೇವೇಗೌಡರ ರಾಜೀನಾಮೆಯನ್ನು ಅಂಗೀಕರಿಸಿರುವ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರು, ಮುಂದಿನ ವ್ಯವಸ್ಥೆ ಮಾಡುವವರೆಗೆ ಅಧಿಕಾರದಲ್ಲಿ ಮುಂದುವರಿಯುವಂತೆ ಸೂಚಿಸಿದ್ದಾರೆ. ಈ ನಡುವೆ, ಲೋಕಸಭೆ ವಿಸರ್ಜನೆಗೆ ಶಿಫಾರಸು ಮಾಡುವುದಿಲ್ಲ ಎಂದು ಪ್ರಧಾನಿ ಸ್ಪಷ್ಟಪಡಿಸಿದ್ದಾರೆ.

ಇಂದು ಬೆಳಿಗ್ಗೆಯೇ ಲೋಕಸಭೆ ಅಧಿವೇಶನಕ್ಕೆ ಹೋಗುವ ಮುನ್ನ ಸಂಯುಕ್ತ ರಂಗದ ಕೆಲವು ನಾಯಕರು, ರಾಜೀನಾಮೆ ನೀಡಿ ಸರ್ಕಾರ ಉಳಿಸುವಂತೆ ದೇವೇಗೌಡರಿಗೆ ಅರಿಕೆ ಮಾಡಿಕೊಂಡರು. ಆದರೆ, ಅದನ್ನು ಒಪ್ಪದ ದೇವೇಗೌಡರು ವಿಶ್ವಾಸಮತ ಯಾಚಿಸುವುದಾಗಿ ಲೋಕಸಭೆಗೆ ತೆರಳಿದರು.

ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರನ್ನು ತೀವ್ರವಾಗಿ ಟೀಕಿಸಿದ ದೇವೇಗೌಡರು, ಕೆಲ ಬಾರಿ ರೋಷದಿಂದ ಕೆಲವೊಮ್ಮೆ ಗದ್ಗದ ಕಂಠದಿಂದ ಮತ್ತೊಮ್ಮೆ ವಿಷಾದದಿಂದ ಮಾತನಾಡಿ ವಿಶ್ವಾಸಮತ ಯಾಚಿಸಿದರು.

ಮಧ್ಯರಾತ್ರಿವರೆಗೆ ಲೋಕಸಭೆಯಲ್ಲಿ ನಡೆದ ಸುದೀರ್ಘ ವಾದ- ವಿವಾದಗಳ ಬಳಿಕ ಸ್ಪೀಕರ್ ಪಿ.ಎ. ಸಂಗ್ಮಾ ಅವರು ನಿರ್ಣಯವನ್ನು ಮತಕ್ಕೆ ಹಾಕಿದರು. ಮತದಾನದ ಬಳಿಕ ನಿರ್ಣಯ ತಿರಸ್ಕೃತವಾಗಿದೆ ಎಂದು ಪ್ರಕಟಿಸಿದರು. ಇದರೊಂದಿಗೆ ಕೇಂದ್ರದಲ್ಲಿ 10 ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದಿದ್ದ ಸಂಯುಕ್ತ ರಂಗ ಸರ್ಕಾರ ಇಂದು ಮಧ್ಯರಾತ್ರಿ ಪತನವಾಯಿತು.

ಈ ಮಧ್ಯೆ, ಹೊಸ ನಾಯಕನ ನೇತೃತ್ವದಲ್ಲಿ ಮತ್ತೆ ಸಂಯುಕ್ತ ರಂಗ ಹಾಗೂ ಕಾಂಗ್ರೆಸ್‌ನ ಸರ್ಕಾರವೊಂದನ್ನು ರಚಿಸುವ ಗಂಭೀರ ಯತ್ನಗಳೂ ರಾಜಧಾನಿಯಲ್ಲಿ ಆರಂಭವಾಗಿವೆ.

50 ವರ್ಷಗಳ ಹಿಂದೆ

ಬುಧವಾರ, 12-4-1972

• ಪ್ರಸ್ತುತ ವಿಧಾನಸಭೆ ಅಧಿವೇಶನದಲ್ಲೇ ತೀವ್ರ ಭೂಸುಧಾರಣೆ ಶಾಸನ

ನವದೆಹಲಿ, ಏ. 11- ಪ್ರಸ್ತುತ ವಿಧಾನ ಮಂಡಲ ಅಧಿವೇಶನದಲ್ಲೇ ತೀವ್ರ ಭೂಸುಧಾರಣೆ ಶಾಸನವನ್ನು ಮಂಡಿಸುವಂತೆ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೂ ಆದೇಶ ನೀಡಿದೆ.

ಭೂಸುಧಾರಣೆ ಶಾಸನವನ್ನು ಸೆಲೆಕ್ಟ್ ಸಮಿತಿಗೆ ವಹಿಸಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರ 'ಪ್ರಸ್ತುತ ಅಧಿವೇಶನದೊಳಗೇ ಸೆಲೆಕ್ಟ್ ಸಮಿತಿ ವರದಿ ಪಡೆದು ಶಾಸನಕ್ಕೆ ವಿಧಾನಮಂಡಲದ ಒಪ್ಪಿಗೆ ಪಡೆಯಿರಿ' ಎಂದೂ ತಿಳಿಸಿದೆ.

ಕೇಂದ್ರ ಕೃಷಿ ಶಾಖೆ ಸಚಿವ ಎ.ಪಿ. ಶಿಂಧೆಯವರು ಇಂದು ಕಾಂಗ್ರೆಸ್ ಸಂಸತ್ ಪಕ್ಷದ ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಇದನ್ನು ತಿಳಿಸಿದರು.

• 'ರಾಜ್ಯದಲ್ಲಿ ಇಂದಿರಾ ಕೈಗೊಂಬೆ ಸರ್ಕಾರ'

ಬೆಂಗಳೂರು, ಏ. 11- 'ರಾಜ್ಯದಲ್ಲಿ ಶ್ರೀಮತಿ ಇಂದಿರಾ ಗಾಂಧಿ ಅವರ ಕೈಗೊಂಬೆ ಸರ್ಕಾರ ಸ್ಥಾಪನೆಯಾಗಿದೆ' ಎಂದು ಸೋಷಲಿಸ್ಟ್ ಪಕ್ಷದ ಸದಸ್ಯ ಶ್ರೀ ಎಸ್. ಬಂಗಾರಪ್ಪ ಅವರು ಇಂದು ವಿಧಾನಸಭೆಯಲ್ಲಿ ಆಪಾದಿಸಿ, 'ರಾಜ್ಯವು ಹೆಚ್ಚಿನ ಸ್ವಾಯತ್ತತೆ ಪಡೆಯಲು' ಕರೆಯಿತ್ತರು.

ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸಬೇಕೆಂಬ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮನಸ್ಸಿನ ಕಾಠಿಣ್ಯ ಮತ್ತು ಧಾರ್ಮಿಕ ಅಸಹನೆಗೆ 'ಹ್ಯೂಮನ್ ಲೈಬ್ರರಿ'ಗಳ ಮದ್ದು

ಹಬ್ಬಲಿ 'ಮಾನವ ಗ್ರಂಥಾಲಯ' ರಸಬಳ್ಳಿ



ಪಡಸಾಲೆ

ರಘುನಾಥ ಚ.ಹ.

ಸಾರ್ವಜನಿಕ ಸ್ಥಳಗಳಲ್ಲಿ ಪಾನಕ ಪನಿವಾರ ನೀಡಿ ಜನರ ಹೊಟ್ಟೆ ತಣಿಸುವ 'ರಾಮನವಮಿ' ಬೆನ್ನಿಗಿಟ್ಟು-ಕೊಂಡು, ರಾಮನ ಹೆಸರಿನಲ್ಲಿ ಮುಸ್ಲಿಂ ವ್ಯಾಪಾರಿಗಳ ಹೊಟ್ಟೆಗೆ ಕಿಚ್ಚಿಡುವ ಕೆಲವರ ಪ್ರಯತ್ನ ಧಾರವಾಡದಿಂದ ವರದಿಯಾದ ಸಂದರ್ಭದಲ್ಲೇ ಮನುಷ್ಯರನ್ನು ಪುಸ್ತಕಗಳಂತೆ ಓದಲು ಅವಕಾಶ ಕಲ್ಪಿಸುವ ಡೆನ್ಮಾರ್ಕ್‌ನಲ್ಲಿನ 'ಹ್ಯೂಮನ್ ಲೈಬ್ರರಿ'ಗಳ ಕುರಿತ ವಿಡಿಯೊ ಕಣ್ಣಿಗೆ ಬಿತ್ತು.


'ಹ್ಯೂಮನ್ ಲೈಬ್ರರಿ'ಗಳ ಪರಿಕಲ್ಪನೆ ಹೊಸತೇನಲ್ಲ. ಮೊದಲ 'ಮಾನವ ಗ್ರಂಥಾಲಯ' ಶುರುವಾದುದು ಡೆನ್ಮಾರ್ಕ್‌ನಲ್ಲಿ, 2000ನೆಯ ಇಸವಿಯಲ್ಲಿ. ಎರಡು ದಶಕಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಸುಮಾರು ಎಂಬತ್ತು ದೇಶಗಳಿಗೆ ಹಬ್ಬಿರುವ 'ಹ್ಯೂಮನ್ ಲೈಬ್ರರಿ' ಪರಿಕಲ್ಪನೆ ಆಂದೋಲನದ ರೂಪ ಪಡೆದುಕೊಂಡಿದೆ. ಭಿನ್ನ ವರ್ಗದ ವ್ಯಕ್ತಿಗಳೊಂದಿಗೆ ಮಾತುಕತೆಗೆ ಅವಕಾಶ ಕಲ್ಪಿಸುವ ಈ ಲೈಬ್ರರಿಗಳು– ಜನ ತಮ್ಮ ಕೀಳರಿಮೆ ಮತ್ತು ಪೂರ್ವಗ್ರಹಗಳನ್ನು ಕಳೆದುಕೊಳ್ಳಲು ನೆರವಾಗುವ ಉದ್ದೇಶ ಹೊಂದಿವೆ. ದೆಹಲಿ, ಮುಂಬೈ, ಹೈದರಾಬಾದ್, ಇಂದೋರ್ ಮತ್ತು ಚೆನ್ನೈಗಳಲ್ಲಿ 'ಮಾನವ ಗ್ರಂಥಾಲಯ'ಗಳಿದ್ದರೂ, ಭಾರತದಲ್ಲಿನ್ನೂ ಈ ಪರಿಕಲ್ಪನೆ ಅಷ್ಟಾಗಿ ಜನಪ್ರಿಯಗೊಂಡಿಲ್ಲ.

ಡೆನ್ಮಾರ್ಕ್‌ನ ಮೊದಲ 'ಹ್ಯೂಮನ್ ಲೈಬ್ರರಿ'ಯ ರೂವಾರಿಗಳು, ಡ್ಯಾನಿಶ್ ಯುವಜನ ಹಿಂಸಾಕೃತ್ಯಗಳಲ್ಲಿ ತೊಡಗುವುದನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದ ಸಂಘಟನೆಯೊಂದರಲ್ಲಿ ಕೆಲಸ ಮಾಡುತ್ತಿದ್ದವರು. ಅಂದರೆ, ಈ ವಿಶಿಷ್ಟ ಲೈಬ್ರರಿಗಳಿಗೆ ಮನುಷ್ಯ-ನೊಳಗಿನ ಹಿಂಸೆಯನ್ನು ಶಮನಗೊಳಿಸುವ ಆಶಯವಿದೆ. ಕರ್ನಾಟಕಕ್ಕೆ ತುರ್ತಾಗಿ ಬೇಕಿರುವುದು ಇಂಥ ಲೈಬ್ರರಿಗಳೇ. ಪುಸ್ತಕಾಲಯಗಳಂತೆಯೇ 'ಮಾನವ ಗ್ರಂಥಾಲಯ'ಗಳ ಚಳವಳಿ ಆರಂಭಗೊಳ್ಳಬೇಕಿದೆ. ಪುಸ್ತಕಗಳನ್ನು ಓದುವುದೆಂದರೆ ಮನುಷ್ಯರನ್ನು ಓದಿದಂತೆಯೇ ಎನ್ನುವ ಮಾತು ತಾತ್ವಿಕವಾಗಿ ಸರಿ. ಆದರೆ, ಇಬ್ಬರು ವ್ಯಕ್ತಿಗಳು ಎದುರಾಬದುರಾಗಿ ಕೂತು ಮನಸ್ಸು ಬಿಚ್ಚಿ ಮಾತನಾಡುವುದಿದೆಯಲ್ಲ– ಆ ಓದಿನಷ್ಟು ಪರಿಣಾಮ-ಕಾರಿಯಾದುದು ಮತ್ತೊಂದಿಲ್ಲ. ಹೀಗೆ ಮನುಷ್ಯರನ್ನು ಓದುವ ಅವಕಾಶಗಳು ಸೀಮಿತವಾಗಿರುವುದಕ್ಕೂ ಧಾರವಾಡದಲ್ಲಿ ಕಲ್ಲಂಗಡಿಗಳನ್ನು ಚೆಂಡಾಡಿದಂಥ ಘಟನೆಗಳು ಹೆಚ್ಚುವುದಕ್ಕೂ ಸಂಬಂಧ ಇರುವಂತಿದೆ.

ಮನುಷ್ಯರನ್ನು ಓದುವುದು ಭಾರತೀಯ ಸಮಾಜಕ್ಕೆ ಹೊಸತೇನಲ್ಲ. ಸಮಾಜದೊಂದಿಗೆ ಒಡನಾಡುವುದು ಮನುಷ್ಯರನ್ನು ಓದುವ ಕ್ರಿಯೆಯೇ. 'ದೇಶ ಸುತ್ತು ಕೋಶ ಓದು' ಎನ್ನುವ ಮಾತಿನಲ್ಲಿನ ಸುತ್ತಾಟ ಸೂಚಿಸುವುದು ಮನುಷ್ಯರನ್ನು ಓದುವ, ಅರ್ಥಾತ್ ಅರಿಯುವ ಕ್ರಿಯೆಯನ್ನೇ. ಸಮೂಹ-ಸಮಾಜವನ್ನು ನಿಕಟವಾಗಿ ಅರಿಯುವ ಉದ್ದೇಶದಿಂದಲೇ ರಾಜರುಗಳು ಆಗಾಗ ತಂತಮ್ಮ ದಂತಗೋಪುರಗಳಿಂದ ಹೊರಬಂದು, ವೇಷ ಮರೆಸಿಕೊಂಡು ಊರು ಸುತ್ತುತ್ತಿದ್ದರು. ರಾಜನಾಗಿದ್ದಾಗ ಅರಿವಿಗೆ ಬಾರದ ಜನರ ಮನಸ್ಸು, ಅವರೊಳಗೆ ಒಬ್ಬನಾದಾಗಷ್ಟೇ ತೆರೆದುಕೊಳ್ಳುವುದೆನ್ನುವ ಸತ್ಯ ಅರಿತ ರಾಜರಷ್ಟೇ ಜನಪರ ಆಡಳಿತ ನಡೆಸಲು ಸಾಧ್ಯವಾಗಿದೆ. ಇಂದಿನ ರಾಜಕಾರಣಿಗಳು ಜನಸಾಮಾನ್ಯರಿಂದ ದೂರ-ವಾಗಿರುವುದಕ್ಕೂ ಆಡಳಿತ ಭ್ರಷ್ಟವಾಗಿರುವುದಕ್ಕೂ ಸಂಬಂಧವಿದೆ. ಅಧಿಕಾರಿಗಳು ಹಾಗೂ ಹಿಂಬಾಲಕರಿಲ್ಲದ ಜನಪ್ರತಿನಿಧಿಯನ್ನು ಪ್ರಸಕ್ತ ಸಂದರ್ಭದಲ್ಲಿ ಊಹಿಸಿಕೊಳ್ಳಲು ಸಾಧ್ಯವಿದೆಯೇ?

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಗಾಂಧೀಜಿ, ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗಿಯಾಗುವ ಮುನ್ನ ಒಂದು ವರ್ಷ ಕಾಲ ದೇಶ ಸಂಚಾರ ಕೈಗೊಂಡಿದ್ದರು. ಆ ಪರ್ಯಟನೆಯ ಮೂಲಕ ಜನರ ಮನಸ್ಸನ್ನು ಗಾಂಧಿ ಓದಲಿ ಹಾಗೂ ದೇಶದ ವೈವಿಧ್ಯವನ್ನು ಅರ್ಥಮಾಡಿಕೊಳ್ಳಲಿ ಎಂದು ಅವರ ಗುರು ಗೋಪಾಲಕೃಷ್ಣ ಗೋಖಲೆ ಬಯಸಿದ್ದರು. ವಿವಿಧ ಹಿನ್ನೆಲೆಯ ಭಾರತೀಯರನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧಿ ಸಂಘಟಿಸಿದ್ದರ ಹಿನ್ನೆಲೆಯಲ್ಲಿ, ದೇಶಸಂಚಾರದ ಮೂಲಕ ಅವರು ಕಲಿತಿದ್ದ ಪಾಠಗಳ ಪಾತ್ರವೂ ಇದ್ದಿರಬಹುದು. ಅದು ಮಹಾತ್ಮರ ಮಾತಾಯಿತು. ಜನಸಾಮಾನ್ಯರಿಗೆ ಕೂಡ ಪರಸ್ಪರರನ್ನು ಓದುವ ಅವಕಾಶಗಳು ಭಾರತೀಯ ದೈನಿಕದಲ್ಲಿದ್ದವು. ಪಡಿತರಕ್ಕಾಗಿ ಹಚ್ಚುತ್ತಿದ್ದ ಪಾಳಿ, ಕೊಡ ನೀರಿಗಾಗಿ ಬಾವಿಕಟ್ಟೆಯೋ ಕೊಳವೆಬಾವಿಯೋ ಕೊಳಾಯಿಯ ಎದುರೋ ಕಾಯುತ್ತಿದ್ದ ಬೆಳಗು ಬೈಗುಗಳು, ಸಾರ್ವಜನಿಕ ಸಾರಿಗೆಯ ನೂಕುನುಗ್ಗಾಟ– ಇಂಥ ಸಂದರ್ಭಗಳೆಲ್ಲ ಮನುಷ್ಯ ಮನುಷ್ಯನನ್ನು ಓದುವ ಅವಕಾಶಗಳಾಗಿದ್ದವು.

ಈಗ ಮನುಷ್ಯರನ್ನು ಓದಲಿಕ್ಕೆ ಇರುವ ಅಡೆತಡೆಗಳೇನು? ಈಗಲೂ ಜನ ಒಟ್ಟುಗೂಡುವ ಅವಕಾಶ-ಗಳನ್ನು ದೈನಿಕ ಕಲ್ಪಿಸುತ್ತಿದೆ. ಆದರೆ, ಅಂಥ ಅವಕಾಶಗಳನ್ನು ನಮ್ಮ ಹಿರಿಯರಂತೆ ನಾವು ಬಳಸಿಕೊಳ್ಳುತ್ತಿರುವಂತೆ ಕಾಣಿಸುತ್ತಿಲ್ಲ. ಹತ್ತು ಜನ ಒಂದೆಡೆ ಸೇರಿದ್ದರೂ ಅವರ ನಡುವೆ ಮೊಬೈಲ್ ಫೋನಿನ ಗೋಡೆಯಿರುವ ಸನ್ನಿವೇಶ ಇಂದಿನದು. ಬಸ್ಸು, ರೈಲು, ವಿಮಾನ, ಆಸ್ಪತ್ರೆ– ಎಲ್ಲೆಡೆಯೂ ಜನ ಮೊಬೈಲ್‌ಗಳಲ್ಲಿ ಕಣ್ಣು ನೆಟ್ಟಿರುತ್ತಾರೆಯೇ ವಿನಾ, ಪಕ್ಕದ ವ್ಯಕ್ತಿಯ ಬಗ್ಗೆ ಆಸಕ್ತಿ ವಹಿಸುವುದಿಲ್ಲ. ಕುಟುಂಬದಲ್ಲಿ ಕೂಡ, 'ಮನೆಯೊಂದು ಮೂರು ಬಾಗಿಲು' ಎನ್ನುವ ಮಾತು ನಿಜವಾಗಿರುವುದು ಮೊಬೈಲ್‌ಗಳ ದೆಸೆಯಿಂದಾಗಿಯೇ. ಖಾಸಗಿ ಎನ್ನುವುದರ ತುತ್ತತುದಿಯಲ್ಲಿ ಮನುಷ್ಯನನ್ನು ನಿಲ್ಲಿಸಿರುವ ಮೊಬೈಲ್‌ಗಳು, ಒಬ್ಬೊಬ್ಬರನ್ನೂ ದ್ವೀಪಗಳನ್ನಾಗಿಸುತ್ತಿವೆ. ಮನೆಯಲ್ಲಿದ್ದಾಗ ಮಾತಿನಲ್ಲಿ ಹೇಳಲಾಗದ ಸಂಗತಿಯೊಂದನ್ನು ವಾಟ್ಸ್‌ಆ್ಯಪ್ ಮೂಲಕ ದಾಟಿಸುವುದು ಅನೇಕರಿಗೆ ಸುಲಭವಾಗುತ್ತಿದೆ ಹಾಗೂ ಅಂಥ ಸಂವಹನ ಅಸಹಜವೆನ್ನಿಸುತ್ತಿಲ್ಲ.




ಇಲ್ಲೊಂದು ಸಂಗತಿಯನ್ನು ಗಮನಿಸಬೇಕು. ಬೆರಳ ತುದಿಯಲ್ಲಿ ತೆರೆದುಕೊಳ್ಳುವ ವಾಟ್ಸ್‌ಆ್ಯಪ್ ಹಾಗೂ ಸಾಮಾಜಿಕ ಜಾಲತಾಣಗಳು ಮಾಡುತ್ತಿರುವುದು ಕೂಡ ಜನರನ್ನು ಕಲೆಹಾಕುವ ಕೆಲಸವನ್ನೇ. ಆದರೆ, ಈ ಡಿಜಿಟಲ್ ಹರಟೆಕಟ್ಟೆಗಳ ಮೂಲಕ ಮನಸ್ಸುಗಳನ್ನು ಓದುವುದು ಸಾಧ್ಯವಾಗುತ್ತಿಲ್ಲ. ಹೊಸಗಾಲದ ಈ ಹರಟೆಕಟ್ಟೆಗಳು ಮನಸ್ಸುಗಳನ್ನು ಸ್ಪರ್ಶಿಸುವ ಬದಲು ಗಾಸಿಗೊಳಿಸುವ ಕೆಲಸಕ್ಕೇ ಹೆಚ್ಚು ಬಳಕೆಯಾಗುತ್ತಿವೆ. ಮನುಷ್ಯ ಮನುಷ್ಯನ ನಡುವಣ ಹೃದಯಸಂವಾದ ಪ್ರಕೃತಿಯ ಸಹಜ ಬೆಳಕಿನಲ್ಲಿ ಸಾಧ್ಯವಾದಂತೆ, ಡಿಜಿಟಲ್‌ನ ಕೃತಕ ಪ್ರಭೆಯಲ್ಲಿ ಸಾಧ್ಯವಾಗದು. ಮೊಬೈಲ್ ಹಾಗೂ ಟಿ.ವಿ.ಗಳಿಂದಾಗಿ ಮನೆಯ ಚೌಕಟ್ಟಿನಲ್ಲಿಯೂ ಒಟ್ಟಿಗೆ ಕೂತು ಉಣ್ಣುವುದು ಹಾಗೂ ಪಡಸಾಲೆಯಲ್ಲಿ ಹರಟೆ ಕೊಚ್ಚುವುದು ಕಡಿಮೆಯಾಗುತ್ತಿದೆ. ಈ ಅಂತರವು ಅಂತರಂಗದ ಆರ್ದ್ರತೆ ತೆಳುವಾಗಲು ಕಾರಣಗಳಲ್ಲೊಂದಾಗಿ, ಅದರ ಪರಿಣಾಮದಿಂದಾಗಿ ವ್ಯಕ್ತಿ ವ್ಯಕ್ತಿಯ ನಡುವಣ ಸಂಬಂಧ ವಿಷಮಿಸಬಹುದು; ಸಾಮಾಜಿಕ ಅಸಹನೆ ರೂಪುಗೊಳ್ಳಬಹುದು.

ನಾಡಿನ ವಿವಿಧ ಭಾಗಗಳಲ್ಲಿ ಧರ್ಮದ ಹೆಸರಿನಲ್ಲಿ ಕೆಲವರು ಎಸಗುತ್ತಿರುವ ಅಧರ್ಮದ ಕೆಲಸಗಳ ಹಿಂದೆಯೂ 'ಮನುಷ್ಯರ ಓದುವಿಕೆ'ಯ ಕೊರತೆ ಇರುವಂತಿದೆ. ಧಾರ್ಮಿಕ ಅಸಹನೆಯನ್ನು ಬಿತ್ತುತ್ತಿರುವ ವ್ಯಕ್ತಿಗಳನ್ನು ಗಮನಿಸಿದರೆ, ಅವರಿಗೆ ಭಾರತೀಯ ಸಮಾಜದ ಸಂರಚನೆಯ ಪರಿಚಯವೇ ಸರಿಯಾಗಿ ಇರುವಂತಿಲ್ಲ. ಕಲ್ಲಂಗಡಿ ಹಣ್ಣುಗಳನ್ನು ಮಣ್ಣುಪಾಲು ಮಾಡಿದ ಪುಂಡರಿಗೆ ಅವರ ಕೆಲಸ, ಮೊಬೈಲ್ ಫೋನ್‌ನಲ್ಲಿ ಯಾವುದೋ 'ಹೊಡಿ ಬಡಿ' ಗೇಮ್ ಆಡಿದಂತೆ ಭಾಸವಾಗಿದ್ದರೆ ಆಶ್ಚರ್ಯವೇನೂ ಇಲ್ಲ. ಕಾಲಾಳುಗಳ ಮಾತು ಬಿಡಿ, ಅವರನ್ನು ಮಾತಿನ ತುದಿಯಲ್ಲಿ ಕುಣಿಸುತ್ತಿರುವ ಧರ್ಮ ಹಾಗೂ ರಾಜಕೀಯ ನಾಯಕರಿದ್ದಾರಲ್ಲ– ಸಮಾಜಕ್ಕೆ ನಿಜವಾದ ಆತಂಕ ಇರುವುದು ಅವರಿಂದಲೇ. ಅಧಿಕಾರ ಸಾಧನೆಗಾಗಿ ಏನನ್ನು ಮಾಡಲೂ ಹಿಂಜರಿಯದ ಈ ಮು'ಖಂಡ'ರನ್ನು ಓದುವುದು ಜನಸಾಮಾನ್ಯರಿಗೆ ಎಲ್ಲಿಯವರೆಗೆ ಸಾಧ್ಯ-ವಾಗುವುದಿಲ್ಲವೋ ಅಲ್ಲಿಯವರೆಗೂ ಮನುಷ್ಯ ಮನುಷ್ಯನನ್ನು ಕೊಂದುಕೊಳ್ಳುವ ಪ್ರಯತ್ನಗಳಿಗೆ ಕೊನೆಯಿಲ್ಲ.

ನಾವೀಗ ಬದುಕುತ್ತಿರುವುದು ರಿಯಾಲಿಟಿ ಷೋಗಳ ಕಾಲಘಟ್ಟ. ವಿಭಿನ್ನ ಹಿನ್ನೆಲೆಯ ವ್ಯಕ್ತಿಗಳನ್ನು ಸುಮಾರು ಮೂರು ತಿಂಗಳ ಕಾಲ ಮನೆಯೊಂದರಲ್ಲಿ ಕೂಡುವ 'ಬಿಗ್ ಬಾಸ್' ರಿಯಾಲಿಟಿ ಷೋ ಕೂಡ 'ಹ್ಯೂಮನ್ ಲೈಬ್ರರಿ'ಯೇ. ಬಾಯಿ ತೆರೆದರೆ ಧರ್ಮದ ಹೆಸರಿನಲ್ಲಿ ವಿಷವನ್ನೇ ಕಾರುವ ಶಾಸಕರು, ಸಂಸದರು, ಸಚಿವರು, ಮಠಾಧೀಶರು ಹಾಗೂ ಧಾರ್ಮಿಕ ಸಂಘಟನೆಗಳ ವೀರರೊಂದಿಗೆ ಹಿಜಾಬ್ ಸೋದರಿಯರನ್ನೂ ಹಲಾಲ್ ಸಹೋದರರನ್ನೂ ಬಡ ಮುಸ್ಲಿಂ ವ್ಯಾಪಾರಿಗಳನ್ನೂ ಒಂದಷ್ಟು ಕಾಲ ಮನೆಯೊಂದರಲ್ಲಿ ಕೂಡಿ 'ಬಿಗ್ ಬಾಸ್' ನಡೆಸುವಂತಾದರೆ ಹೇಗೆ? ಮನೆಯಿಂದ ಹೊರಬಂದಾಗ, ಈ ನಾಯಕರ ಮಾತು– ಕೃತಿಯಲ್ಲಿ ಏನಾದರೂ ಬದಲಾವಣೆ ಕಾಣಬಹುದೇ?

ಚುರುಮುರಿ



ಎಲೆಲೆ ರಸ್ತೆ...!

• ಲಿಂಗರಾಜು ಡಿ.ಎಸ್.

'ಸಾ, ಮೋಹನದಾಸ್ ಪೈ ಅಣ್ಣೋರು ಸರ್ಕಾರದ ಮ್ಯಾಲೆ ಸಿಟ್ಟಂದವ್ರೆ?' ಅಂತಂದೆ.

'ಅದ್ಯಾಕಂತೋ? ಅಣ್ಣೋರು ಹಂಗೆ ಸಿಟ್ಟಾಗ ಕುಲ್ವಲ್ಲಾ' ತುರೇಮಣೆ ಇಚಾರಿಸಿದರು.

'ಅದೀಯೆ ಸಾ, ಸರ್ಕಾರಕ್ಕೆ ನಾವು ವರ್ಸಕ್ಕೆ ಕೋಟ್ಯಂತರ ರೂಪಾಯಿ ಟ್ಯಾಕ್ಸು ಕೊಡ್ತುದವಿ, ಆದ್ರೂ ಬೆಂಗಳೂರು ರಸ್ತೆ ರಿಪೇರಿ ಮಾಡಕ್ಕಾಗ-ಕಿಲ್ವಾ? ಹರತೆ ಹೊಡೆದಂಗಿರೋ ಬೆಂಗಳೂರು ರೋಡಿನಾಗೆ ಹೋಯ್ತಿದ್ರೆ ಹೊಟ್ಟೆ ಸಾಮಾನೆಲ್ಲಾ ಬಾಯಿಗೆ ಬತ್ತವೆ' ಅನ್ನೋ ಅರ್ಥದೇಲಿ ಅಂದವುರೆ ಅಂತ ವಿವರಿಸಿದೆ.

'ಬಸಣ್ಣ ಏನಂದದೆ?' ತುರೇಮಣೆ ಕೇಳಿದರು.

'ಇನ್ನೇನಂದದು ಸಾ, 'ಹೋರ್ದೊರ್ಸ ತಾರಾಮಾರ ಮಳೆಯಾಗಿದ್ಕೆ ರೋಡೆಲ್ಲಾ ಕಿತ್ತು ಲಪ್ಪಾಟಾಗ್ಯವೆ. ರಿಪೇರಿಯಾಯ್ತವೆ ಬುಡಿ' ಅಂದು ತಿಪ್ಪೆ ಸಾರಿಸ್ಯದೆ' ಅಂದೆ.

'ಅಲ್ಲಾ ಮನ್ನೆ ಬಿಜೆಪಿಯೋರು ಎಲೆಕ್ಸನ್ನಿಗೆ ಮೊದಲೇ ರೋಡ್‌ಮ್ಯಾಪ್ ಮಾಡ್ತೀವಿ ಅಂದಿದ್ರಲ್ಲೋ. ಈ ರೋಡುಗಳನ್ನೂ ಬೆಕ್ಕಟ್ಟೆ ಬೆಳ್ಳಗೆ ವೈಟ್ ಟಾಪಿಂಗ್ ಮಾಡ್ತರೇನೋ ಬುಡು' ಅಂತು ಯಂಟಪ್ಪಣ್ಣ.

'ಅಣೈ ಇದು ಮಂತ್ರಿ, ಬಿಬಿಎಂಪಿ, ಜಲ ಮಂಡಲಿ, ಕೆಐಬಿ ಶಾಮೀಲಾತಿಗಳ ಪ್ರಸಾದ! ಕಂತ್ರಾಟುಗಾರರು ನಲವತ್ತು ಪರ್ಸೆಂಟು ಕೊಟ್ಟು ಇನ್ನೇನು ಕೆಲಸ ಮಾಡ್ಯಾರು?' ತುರೇಮಣೆಗೆ ಮತ್ತೆ ಬೇಜಾರಾಯ್ತು.

'ಜನ ರೋಡುಗುಂಡಿಗೆ ಬಿದ್ದು ಹುಳ ಸತ್ತಂಗೆ ಸಾಯ್ತಾವ್ರೆ, ಕೋರ್ಟು ಉಗಿತಾದೆ. ಇಕ್ಕಡೆ ರಾಜಕಾರಣಿಗಳು ರೋಡಿನ ಇಚಾರವೇ ಮಾತಾಡ್ದೆ ಹಿಜಾಬು- ಶಾಲು, ಮಾಂಸ- ಮಡ್ಡಿ, ಮೈಕು- ಕರಗ ಅಂತ ಸೊಟ್ಟಗ ಆಡ್ತದ್ರಲ್ಲೇ ಬಿಜಿಯಾಗವ್ರೆ. ರೋಡು ಯವಸ್ಥೆ ಯಾವಾಗ ಸರೋದದೋ ಕಾಣೆ' ಅಂತ ನಾನೂ ಒಟ್ಟು ತೀರ್ಥ ಹಾಕಿದೆ.

'ನಮ್ಮ ರಾಜರತ್ನಂ ಆವತ್ತೆ ಅಂದುದ್ರಲ್ಲೋ 'ಎಲೆಲೆ ರಸ್ತೆ ಏನೀ ಅವ್ವೆವಸ್ತೆ! ಮೈಯ್ಯೆಲ್ಲಾ ಮುದುರಿ ಯಾಕ ಕುಣೀತಿ ಕುದುರಿ! ಕೊಟ್ಯಲ್ಲಾ ಗಸ್ತು ಕುಡ್ದಿದ್ದೀಯಾ ರಸ್ತೆ!' ಅಂತ. ಇವತ್ತು ಕುಡಿದೋರಿಗೆ ಮಾತ್ರ ರಸ್ತೆ ಅವ್ವೆವಸ್ತೆ ಯಾಗಿಲ್ಲ, ನಡೆಯೋರಿಗೂ ಅವ್ವೆವಸ್ತೇನೆ!' ಅನ್ನದಾ ಯಂಟಪ್ಪಣ್ಣ!

ಸಂಗತ

'ಆಯ್ಕೆ' ಅವಕಾಶ: ಹೆಚ್ಚಿಸಲಿ ಆತ್ಮವಿಶ್ವಾಸ

ದ್ವಿತೀಯ ಪಿಯು ವಿದ್ಯಾರ್ಥಿಗಳಲ್ಲಿ ಪರೀಕ್ಷೆಯ ಭಯ ಹೋಗಲಾಡಿಸಲು ಪ್ರಶ್ನೆಗಳ 'ಆಯ್ಕೆ'ಗೆ ಹೆಚ್ಚು ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ ಕ್ರಮ

• ಗುರುರಾಜ್ ಎಸ್. ದಾವಣಗೆರೆ

ಬೀಳ್ಕೊಡುಗೆ ಸಮಾರಂಭ ಮುಗಿದ ನಂತರ ಭೇಟಿಯಾದ ದ್ವಿತೀಯ ಪಿಯು ವಿದ್ಯಾರ್ಥಿಯೊಬ್ಬ ತುಂಬಾ ಖುಷಿಯಾಗಿದ್ದ. 'ಏನಪ್ಪಾ ಸಮಾಚಾರ?' ಎಂದಿದ್ದಕ್ಕೆ, 'ಸರ್, ಈ ಸಲ ನಿಮ್ಮ ಸಬ್ಜೆಕ್ಟ್ ಗಣಿತದಲ್ಲಿ ಸೆಂಟ್‌ಪರ್ಸೆಂಟ್ ಮಾರ್ಕ್ಸ್ ತೆಗಿತೀನಿ' ಅಂದ. 'ಈ ಸಲದ ಪ್ರಶ್ನೆಪತ್ರಿಕೆಯಲ್ಲಿ ಕಂಪಲ್ಸರಿ ಪಾರ್ಟೇ ಇಲ್ಲವಲ್ಲ ಸರ್. ಹಾಗಾಗಿ ನಾವು ಫ್ರೆಂಡ್ಸೆಲ್ಲ ತುಂಬಾ ಕಾನ್ಫಿಡೆಂಟ್ ಆಗಿದ್ದೀವಿ. ಕ್ವಶ್ಚನ್ ಪೇಪರ್ ಪ್ಯಾಟರ್ನ್ ಬದಲಾಯಿಸಿದವರಿಗೆ ದೊಡ್ಡ ಥ್ಯಾಂಕ್ಸ್' ಎಂದು ಹೇಳಿದ.

ಇನ್ನು ಹತ್ತು ದಿನಗಳಲ್ಲಿ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ (ಥಿಯರಿ) ಶುರುವಾಗುತ್ತದೆ. ವಾರ್ಷಿಕ ಪರೀಕ್ಷೆ ಎದುರಿಸದೇ ಅಸೈನ್‌ಮೆಂಟ್ ಬರೆದು ಪ್ರಥಮ ಪಿಯು ಮುಗಿಸಿದ ವಿದ್ಯಾರ್ಥಿಗಳೀಗ ಪ್ರಥಮ ಬಾರಿಗೆ ನಿರ್ಣಾಯಕ ಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಕಳೆದ ವರ್ಷವಿಡೀ ಆನ್‌ಲೈನ್‌ನಲ್ಲೇ ಪಾಠ ಕೇಳಿದ್ದ ವಿದ್ಯಾರ್ಥಿಗಳು ಪರೀಕ್ಷೆ ಬರೆದಿರಲಿಲ್ಲ. ಈಗ ಮೂರು ತಾಸು ಕುಳಿತು ಬರೆಯುವ ಪರೀಕ್ಷೆ ಬಂದಿದೆ. ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಏನನ್ನೂ ಕಲಿತಿಲ್ಲ ಎಂಬುದು ಈವರೆಗೆ ನಡೆದ ಪರೀಕ್ಷೆಗಳಲ್ಲಿ ಗೊತ್ತಾಗಿದೆ.


ಪ್ರಥಮ ಪಿಯುವಿನಲ್ಲಿ ಆನ್‌ಲೈನ್ ತರಗತಿಗಳನ್ನು ಗಂಭೀರವಾಗಿ ತೆಗೆದುಕೊಳ್ಳದ ವಿದ್ಯಾರ್ಥಿಗಳು ಲಕ್ಷ ಸಂಖ್ಯೆಯಲ್ಲಿದ್ದಾರೆ. ಈಗಿನ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ (ಪ್ರಿಪರೇಟರಿ) ಅವರ ಸಾಧನೆ ಏನೇನೂ ಇಲ್ಲ, ಈಗ ವಾರ್ಷಿಕ ಪರೀಕ್ಷೆ ಹೇಗೆ ಬರೆಯುತ್ತಾರೋ ಎಂಬ ಆತಂಕ ಬೋಧಕರದ್ದು.

ಈ ಶೈಕ್ಷಣಿಕ ಸಾಲಿನಲ್ಲಿ ಏಳೆಂಟು ತಿಂಗಳು ತರಗತಿಗಳು ನಡೆದಿವೆ. ಪಾಠ-ಪ್ರಯೋಗಗಳು ಆಗಿವೆ. ವಿದ್ಯಾರ್ಥಿಗಳು ಉಪನ್ಯಾಸಕರ ನೇರ ಸಂಪರ್ಕದಲ್ಲಿ ಇದ್ದುಕೊಂಡು ಪಾಠ ಕೇಳಿ ಕಲಿತಿದ್ದಾರೆ. ಕೈಮುಟ್ಟಿ ಪ್ರಯೋಗ ಮಾಡಿದ್ದಾರೆ. ಈ ಅವಧಿಯಲ್ಲಿ ಮಾಡಿದ್ದ ಪ್ರಯೋಗಗಳನ್ನೇ ಪ್ರಾಯೋಗಿಕ ಪರೀಕ್ಷೆಯಲ್ಲಿ ಕೇಳಿದ್ದರಿಂದ, ವಿದ್ಯಾರ್ಥಿಗಳು ಸುಲಭವಾಗಿಯೇ ಪರೀಕ್ಷೆ ಎದುರಿಸಿ ಈಗ ಲಿಖಿತ ಪರೀಕ್ಷೆಗೆ ಸಿದ್ಧರಾಗುತ್ತಿದ್ದಾರೆ. ಪರೀಕ್ಷೆ ಹೇಗಿರುತ್ತದೋ ಎಂದು ಸುಮಾರು 7 ಲಕ್ಷ ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ.

ಪರೀಕ್ಷೆ ಮತ್ತು ಪ್ರಶ್ನೆಪತ್ರಿಕೆ ವಿಚಾರದಲ್ಲಿ ವಿದ್ಯಾರ್ಥಿಗಳ ಭಯ ತೊಲಗಿಸಿ, ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ವಿಚಾರದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಮಹತ್ವದ ಹೆಜ್ಜೆಯೊಂದನ್ನು ಇರಿಸಿದೆ.

ಪ್ರಶ್ನೆಪತ್ರಿಕೆಯಲ್ಲಿ 'ಕಡ್ಡಾಯ' (ಕಂಪಲ್ಸರಿ) ವಿಭಾಗವನ್ನು ತೆಗೆದುಹಾಕಿ, ಪ್ರಶ್ನೆಗಳ ಸಂಖ್ಯೆಗಳನ್ನು ಹೆಚ್ಚಿಸಿ, ಪ್ರತೀ ವಿಭಾಗದಲ್ಲಿ ಹೆಚ್ಚಿನ 'ಆಯ್ಕೆ' (ಚಾಯ್ಸ್) ನೀಡಿದೆ. ಈ ಬಾರಿಯ ಪ್ರಶ್ನೆಪತ್ರಿಕೆಗಳಲ್ಲಿ 'ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆಯಿರಿ' (ಆನ್ಸರ್ ಆಲ್) ಎಂಬ ಹೆಡ್ಡಿಂಗ್ ಇರುವುದಿಲ್ಲ. ಎಲ್ಲ ಕಡೆ 'ಆನ್ಸರ್ ಎನಿ' ಎಂಬ ಒಕ್ಕಣೆಯೇ ಇರುತ್ತದೆ. ಇದು ಪರೀಕ್ಷೆಯ ಎಲ್ಲ 38 ವಿಷಯಗಳಿಗೂ ಅನ್ವಯಿಸುತ್ತದೆ. ಈಗಾಗಲೇ ಇಂಥ ಮಾದರಿ ಪ್ರಶ್ನೆಪತ್ರಿಕೆಗಳನ್ನು ಬಿಡುಗಡೆ ಮಾಡಿ, ಈ ಪ್ರಶ್ನೆಪತ್ರಿಕೆಗಳೊಂದಿಗೆ ಪೂರ್ವಸಿದ್ಧತಾ ಪರೀಕ್ಷೆ ನಡೆಸಿ 'ವಾರ್ಷಿಕ ಪರೀಕ್ಷೆಯ ಪತ್ರಿಕೆಗಳೂ ಹೀಗೇ ಇರಲಿವೆ' ಎಂಬ ಸಂದೇಶವನ್ನು ಇಲಾಖೆ ರವಾನಿಸಿದೆ.

ಹಿಂದಿನ ವರ್ಷಗಳಲ್ಲೆಲ್ಲಾ ಪ್ರಶ್ನೆಪತ್ರಿಕೆಯ ಪ್ರಾರಂಭದ ಮೊದಲ ಭಾಗದಲ್ಲಿ 'ಆನ್ಸರ್ ಆಲ್' ಎಂಬ ಹತ್ತೋ ಹನ್ನೆರಡೋ ಪ್ರಶ್ನೆಗಳಿರುತ್ತಿದ್ದವು. ಅಲ್ಲಿ ಒಂದೆರಡು ಪ್ರಶ್ನೆಗಳು ಕಷ್ಟಕರವಾಗಿರುತ್ತಿದ್ದವು, ಇಲ್ಲವೇ ಸ್ವಲ್ಪಮಟ್ಟಿಗೆ ಟ್ವಿಸ್ಟ್ ಆಗಿರುತ್ತಿದ್ದವು. ಒಂದೇ ಒಂದು ಪ್ರಶ್ನೆಯ ಉತ್ತರ ತಪ್ಪಾದರೂ ನೂರಕ್ಕೆ ನೂರು ಅಂಕ ಪಡೆಯುವ ವಿದ್ಯಾರ್ಥಿಯ ಆಸೆ-ಕನಸು ಕಮರುತ್ತಿತ್ತು. ಉಳಿದೆಲ್ಲ ವಿಭಾಗಗಳಲ್ಲೂ ಪೂರ್ಣ ಅಂಕ ಪಡೆದರೂ ಇಲ್ಲಿ ಅಂಕ ಕಳೆದುಕೊಳ್ಳಬೇಕಾಗುತ್ತಿತ್ತು. ಉದಾಹರಣೆಗೆ, ಗಣಿತ ವಿಷಯದ 'ಎ' ವಿಭಾಗದಲ್ಲಿ ಹತ್ತು ಪ್ರಶ್ನೆಗಳಿದ್ದು ಎಲ್ಲವನ್ನೂ ಉತ್ತರಿಸಬೇಕಾಗುತ್ತಿತ್ತು. ಈಗ 15 ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಹತ್ತಕ್ಕೆ ಮಾತ್ರ ಉತ್ತರ ಬರೆಯಬೇಕು. ಎರಡು ಮೂರು ಪ್ರಶ್ನೆಗಳು ಕ್ಲಿಷ್ಟವಾಗಿದ್ದರೂ ಉಳಿದ ಪ್ರಶ್ನೆಗಳಲ್ಲಿ ಹತ್ತಕ್ಕೆ ಸರಿಯಾಗಿ ಉತ್ತರಿಸಿದರೆ ನೂರಕ್ಕೆ ನೂರು ಅಂಕ ಗ್ಯಾರಂಟಿ.



ಇದು ಇಲ್ಲಿಗೇ ಮುಗಿಯುವುದಿಲ್ಲ. ಉಳಿದ ಭಾಗಗಳಲ್ಲೂ ಹೆಚ್ಚುವರಿ ಪ್ರಶ್ನೆಗಳನ್ನು ನೀಡಿ ವಿದ್ಯಾರ್ಥಿಗಳ ಆಯ್ಕೆಗೆ ಸುಲಭ ಅವಕಾಶ ಕಲ್ಪಿಸಲಾಗಿದೆ. ಗಣಿತ ಪತ್ರಿಕೆಯಲ್ಲಿ ಹಿಂದೆ 50 ಪ್ರಶ್ನೆಗಳಿರುತ್ತಿದ್ದವು. ಈಗ ಅದು 66 ಆಗಿದೆ. ಬರೋಬ್ಬರಿ 16 ಹೆಚ್ಚುವರಿ ಪ್ರಶ್ನೆಗಳಿರುತ್ತವೆ. ಭೌತವಿಜ್ಞಾನ ಪತ್ರಿಕೆಯಲ್ಲಿ 13 ಹೆಚ್ಚುವರಿ ಪ್ರಶ್ನೆಗಳು ಸೇರ್ಪಡೆಯಾಗಿವೆ. ಇದು ವಿಜ್ಞಾನ, ಕಲೆ-ವಾಣಿಜ್ಯ ಸಂಯೋಜನೆಯ ವಿಷಯಗಳಿಗೂ ಅನ್ವಯಿಸುತ್ತದೆ.

ಆಯ್ಕೆಗಳು ಹೆಚ್ಚಿರುವುದರಿಂದ ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆಯಲು ಪ್ರಯತ್ನಿಸುವ ವಿದ್ಯಾರ್ಥಿಗಳು ಬಹಳಷ್ಟು ಹೆಚ್ಚುವರಿ ಪುಟಗಳನ್ನು ತುಂಬಿಸುತ್ತಿರುವುದು ಈಗಾಗಲೇ ನಡೆದ ಪೂರ್ವಸಿದ್ಧತಾ ಪರಿಕ್ಷೆಯಲ್ಲಿ ಅನುಭವಕ್ಕೆ ಬಂದಿದೆ. ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯವೂ ದೀರ್ಘ ಸಮಯ ಬೇಡುತ್ತಿದೆ. ಏನೇ ಆಗಲಿ, ಇಲಾಖೆಯ ಈ ಕ್ರಮ ಸ್ವಾಗತಾರ್ಹ. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಇದರ ಉಪಯೋಗ ಪಡೆದುಕೊಳ್ಳಬೇಕು.

ವಾಚಕರ ವಾಣಿ

ಗೊಂದಲರಹಿತ ವಿಜ್ಞಾನ ಪ್ರಶ್ನೆಪತ್ರಿಕೆ

ಎಸ್‌ಎಸ್‌ಎಲ್‌ಸಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿ ಸೋಮವಾರ (ಏ. 11) ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆ ನಿಜಕ್ಕೂ ವಿದ್ಯಾರ್ಥಿಗಳ ದೃಷ್ಟಿಯಿಂದ ಅತ್ಯಂತ ಸುಲಭ ಹಾಗೂ ಸರಳ ಎನಿಸುವಂತಿತ್ತು. ಹಿಂದಿನ ವರ್ಷದ ಪರೀಕ್ಷೆಗಳಲ್ಲಿ, ಬೇರೆ ವಿಷಯಗಳ ಪ್ರಶ್ನೆಪತ್ರಿಕೆಗಳಿಗೂ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆಗೂ ಅಜಗಜಾಂತರ ಇರುತ್ತಿತ್ತು. ವಿಜ್ಞಾನ ವಿಷಯದಲ್ಲಿ ಕೆಲವು ಪ್ರಶ್ನೆಗಳು ಗೊಂದಲಮಯವಾಗಿ ಇರುತ್ತಿದ್ದುದರಿಂದ, ಉತ್ತರಿಸಲಾರದೆ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾದ ನಿದರ್ಶನಗಳಿದ್ದವು. ಇದರಿಂದ ಹೆಚ್ಚು ಅಂಕಗಳನ್ನು ಪಡೆಯಲು ಅವರಿಗೆ ಕಷ್ಟವಾಗು-ತ್ತಿತ್ತು. ಆದರೆ, ಈ ವರ್ಷದ ಪ್ರಶ್ನೆಪತ್ರಿಕೆಯು ಗೊಂದಲರಹಿತವಾಗಿದ್ದು, ಭೌತ, ರಸಾಯನ ಹಾಗೂ ಜೀವಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಸಮತೋಲಿತವಾಗಿತ್ತು. ಪ್ರಶ್ನೆಪತ್ರಿಕೆ ಈ ರೀತಿ ಇದ್ದರೆ, ವಿಜ್ಞಾನ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಹೆಚ್ಚು ಆಸಕ್ತಿ ಮೂಡುವುದರಲ್ಲಿ ಸಂಶಯವೇ ಇಲ್ಲ.

ಎಚ್.ಎಸ್.ಟಿ.ಸ್ವಾಮಿ, ಚಿತ್ರದುರ್ಗ

ದಾಂಪತ್ಯದಲ್ಲಿ ಕಾಲ 'ಮಿಂಚಿ ಹೋಗದಿರಲಿ'

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 375ರ ಅಡಿಯಲ್ಲಿ, ವೈವಾಹಿಕ ಅತ್ಯಾಚಾರವನ್ನು ಶಿಕ್ಷಾರ್ಹಗೊಳಿಸಬೇಕೆಂಬ ನ್ಯಾಯಾಲಯದ ಆದೇಶದ ಬಗ್ಗೆ ವಕೀಲರಾದ ಸಿ.ಎಚ್.ಹನುಮಂತರಾಯ ಹಾಗೂ ಜೈನಾ ಕೊಠಾರಿ ಅವರ ಅಭಿಪ್ರಾಯಗಳು (ಚರ್ಚೆ, ಏ. 9) ಚಿಂತನಾರ್ಹ. ಆಧುನಿಕ ಭಾರತೀಯ ನಾಗರಿಕ ಸಮಾಜ ಇತ್ತೀಚಿನ ದಿನಗಳಲ್ಲಿ ತುಸು ಸ್ಥಿತ್ಯಂತರದ ದಾರಿಯಲ್ಲಿ ಇರುವುದೇನೋ ನಿಜ. ಹೀಗಾಗಿ, ದಾಂಪತ್ಯ ಬದುಕಿನ ಮೇಲೂ ಅದರ ಪ್ರಭಾವ ಆಗಿರುತ್ತದೆ. ಆದರೂ ಭಾರತೀಯ ಕೌಟುಂಬಿಕ ವ್ಯವಸ್ಥೆಗೆ ಅದರದೇ ಆದ ನೆಲೆಗಟ್ಟಿದೆ. ಅದರಲ್ಲೂ ಪ್ರೇಮ- ಕಾಮದಂಥ ಅನುಭವಗಳೇ ಪರಸ್ಪರ ಖಾಸಗಿಯಾಗಿ ಕೊಟ್ಟು ಪಡೆಯುವ ಕ್ರಿಯೆ, ಕ್ರಮಗಳಾಗಿವೆ. ದಾಂಪತ್ಯ ಎಂದರೇನೆ ಸೂಕ್ಷ್ಮಾತಿಸೂಕ್ಷ್ಮ, ನವಿರಾದ-ನಾಜೂಕಾದ ನಡವಳಿಕೆಯಾಗಿರುವಾಗ, ಯಾರೋ ಒಬ್ಬಿಬ್ಬರ ಉದ್ಧಟತನದ ಕಾರಣದಿಂದ ಅದು ಬೀದಿಗೆ ಬಂದುದನ್ನೇ ಮಹಿಳಾ ಹಕ್ಕಿನ ಸಮಸ್ಯೆಯೆಂದು ಪರಿಗಣಿಸಲಾಗಿದೆಯೇನೊ ಎನಿಸುತ್ತದೆ.

ದಾಂಪತ್ಯ ಎಂಬುದು ಒಂದು ಬಗೆಯ ರಾಜಿ. ಇಬ್ಬರಲ್ಲಿ ಒಬ್ಬರಾದರೂ ಬಾಗಿದರಷ್ಟೇ ಸಂಸಾರ ನಡೆಯುವುದು. 'ನಾವಿಬ್ಬರೇ ಸಾಕು' ಎನ್ನುವ ಮನೋಭಾವದ ಪುಟ್ಟ ಕುಟುಂಬಗಳಲ್ಲಿ ಬುದ್ಧಿ ಹೇಳುವ ಅನುಭವಿ ಹಿರಿಯರ್‍ಯಾರೂ ಇರುವುದಿಲ್ಲ. 'ನಾವು ಯಾರಿಗೇನು ಕಡಿಮೆ' ಎನ್ನುವ ಅಹಮಿಕೆಯಲ್ಲಿ ಅಡ್ಡಾದಿಡ್ಡಿ ಗಾಡಿ ಓಡಿಸುವಾಗ ಅಪಘಾತಗಳಾಗುವುದು ಸಾಮಾನ್ಯ. ದುಡ್ಡೇ ಎಲ್ಲದಕ್ಕೂ ಪರಿಹಾರವಲ್ಲ ಎಂಬ ಭೀಕರ ಸತ್ಯ ಮನವರಿಕೆಯಾಗುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ. ದಾಂಪತ್ಯದ ವಿಚಾರದಲ್ಲಿ ಹಾಗಾಗಬಾರದು.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಸ್ವಾಮೀಜಿಯಿಂದ ಸಣ್ಣತನದ ಹೇಳಿಕೆ

'ಹಿಂದೂ ಯುವತಿಯರಿಗೆ ಚುಡಾಯಿಸುವುದನ್ನು ಮುಂದುವರಿಸಿದರೆ ನಾನು ಮುಸ್ಲಿಂ ಮಹಿಳೆಯನ್ನು ಅಪಹರಿಸಿ ಅತ್ಯಾಚಾರ ಎಸಗುತ್ತೇನೆ' ಎಂದು ಹೇಳುವ ಮೂಲಕ, ಉತ್ತರಪ್ರದೇಶದ ಮಹಾಂತ ಬಜರಂಗ ಮುನ್ನಿ ದಾಸ್ ಸ್ವಾಮೀಜಿ ತಮ್ಮ ಸಣ್ಣತನವನ್ನು ತೋರಿದ್ದಾರೆ. ಇಂಥವರಿಂದ ಸಮಾಜ ಏನನ್ನು ನಿರೀಕ್ಷಿಸಬಹುದು? ಸನ್ನಡತೆಯಿಂದ ಸಮಾಜಕ್ಕೆ ಮಾದರಿಯಾಗಬೇಕಾದ ವ್ಯಕ್ತಿಗಳಿಂದ ಇಂತಹ ಹೇಳಿಕೆಗಳು ತರವೇ? ತಮ್ಮ ಸ್ಥಾನಕ್ಕೆ ಚ್ಯುತಿ ಬರದಂತೆ ಗಂಭೀರವಾಗಿರುವ ಇತರ ಸ್ವಾಮೀಜಿಗಳ ಬಗ್ಗೆ ಸಾರ್ವಜನಿಕರು ಏನೆಂದು ತಿಳಿಯಬಹುದು? ನಮ್ಮ ಮಾತು ನಮ್ಮ ವ್ಯಕ್ತಿತ್ವವನ್ನು ತಿಳಿಸುತ್ತದೆ. ಇಂತಹ ಸ್ವಾಮೀಜಿಗಳು ಸಮಾಜಕ್ಕೆ ಘಾತುಕರಾಗುತ್ತಾರೆ. ಮಾತನಾಡುವಾಗ ನಾಲಗೆ ಮೇಲೆ ಹಿಡಿತವಿರಬೇಕು. ಮೊದಲು ಎಲ್ಲಾ ಜಾತಿ, ಜನಾಂಗ, ಧರ್ಮಗಳ ಬಗ್ಗೆ ಗೌರವ ಹೊಂದುವುದನ್ನು ಕಲಿಯಬೇಕು.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಪಾಕ್ ಹೊಸ ಪ್ರಧಾನಿ ಭಿನ್ನ ನಿಲುವು ತಳೆಯುವರೇ?

ಪಾಕಿಸ್ತಾನದಲ್ಲಿ ಪ್ರಧಾನಿ ಸ್ಥಾನ ಪಲ್ಲಟವಾಗಿದೆ. ಐದು ವಿಕೆಟ್ ತೆಗೆದುಕೊಂಡು ಪ್ರತಿಸ್ಪರ್ಧಿ ಕ್ರಿಕೆಟ್ ತಂಡಗಳಿಗೆ ಸಿಂಹಸ್ವಪ್ನರಾಗಿದ್ದ ಇಮ್ರಾನ್ ಖಾನ್, ಸದನದಲ್ಲಿ ಅವಿಶ್ವಾಸ ಮತ ಪಾಸ್ ಆಗುವಾಗ ಗೈರುಹಾಜರಾಗಿದ್ದರು. ಅವರ ರಾಜಕೀಯ ವೃತ್ತಿಜೀವನವು ಕ್ರಿಕೆಟ್ ಕೆರಿಯರ್‌ಗಿಂತ ದೀರ್ಘವಾಗಿದ್ದರೂ ಸಕ್ಸಸ್ ರೇಟ್ ಕಡಿಮೆ. ಪಾಕಿಸ್ತಾನದ ಆಡಳಿತವು ವಿದೇಶಿ ಆರ್ಥಿಕ, ಮಿಲಿಟರಿ ಸಹಾಯದ ಮೇಲೆ ನಿಂತಿರುವುದು ಗೊತ್ತಿರುವ ಸಂಗತಿಯೇ. ಇಮ್ರಾನ್ ಅವರನ್ನು ಭಾರತ ಏತಕ್ಕಾಗಿ ನೆನಪಿಡಬೇಕು– ಕರ್ತಾರ್‌ಪುರ ಕಾರಿಡಾರ್ ತೆರೆದಿದ್ದಕ್ಕೋ ಅಥವಾ ಬಾಲಾಕೋಟ್ ಹಿಂದಿನ ವಿದ್ಯಮಾನಕ್ಕೋ?

ಕೊನೆಗೆ ಭಾರತದ ವಿದೇಶಾಂಗ ನೀತಿಯನ್ನು ಅವರು ಪ್ರಶಂಸಿಸಿದ್ದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಿಲ್ಲ. ಏಕೆಂದರೆ ವಿಶ್ವಸಂಸ್ಥೆಯಲ್ಲಿ ಉಕ್ರೇನ್ ಸಂಬಂಧಿತ ಮತದಾನಗಳಲ್ಲಿ ಭಾರತ ಭಾಗವಹಿಸುತ್ತಿಲ್ಲ. ಪಾಕಿಸ್ತಾನದ ಹೊಸ ಪ್ರಧಾನಿಯು ಕಾಶ್ಮೀರ ವಿವಾದದ ಬಗ್ಗೆ ಭಿನ್ನ ನಿಲುವು ತಳೆಯುವರೇ ಎಂಬುದಷ್ಟೇ ಕುತೂಹಲಕರ ಸಂಗತಿ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬದಲಾಗಲಿ ಕಾಂಗ್ರೆಸ್ ನಾಯಕರ ಚಿಂತನೆ

'ಕೈ'ಚಳಕಕ್ಕಾಗಿ ಕಾದಿದೆ ಹಡಗು' ಎಂಬ ಲೇಖನದಲ್ಲಿ (ಪ್ರ.ವಾ., ಏ. 8) ಅರುಣ್ ಸಿನ್ಹಾ ಅವರು ಕಾಂಗ್ರೆಸ್ಸಿಗೆ ಆಗಬೇಕಾದ ಸರ್ಜರಿಯ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಕಾಂಗ್ರೆಸ್ಸಿನಲ್ಲಿ ನಾಯಕರ ಪಡೆ, ಹೋರಾಟಕ್ಕೆ ಬೇಕಾದ ಅಸ್ತ್ರಗಳು ಎಲ್ಲವೂ ಇವೆ. ಆದರೆ ಅವುಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ಬಿಜೆಪಿ ನಾಯಕರ ಮಾತಿನ ವರಸೆಗೆ ಪಟ್ಟು ಹಾಕುವ ಪಳಗಿದ ನಾಯಕರನ್ನು ಅಖಾಡಕ್ಕೆ ತಂದರೆ, ಕಾಂಗ್ರೆಸ್ ಬಗ್ಗೆ ಜನರಿಗೆ ನಂಬಿಕೆ ಉಂಟಾಗಿ, ಸಮಸ್ಯೆಗಳಿಗೆ ಪರಿಹಾರ ಸಿಗಬಹುದು. ಕಾಂಗ್ರೆಸ್ಸಿನ ಸ್ಥಿತಿ ನೋಡಿ ಉಳಿದ ವಿರೋಧ ಪಕ್ಷಗಳೂ ಕಾಂಗ್ರೆಸ್‌ಮುಕ್ತ ವಿರೋಧಿ ಒಕ್ಕೂಟಕ್ಕೆ ಸಿದ್ಧ-ವಾಗುತ್ತಿವೆ. ಅವಶ್ಯಕ ವಸ್ತುಗಳ ಬೆಲೆ ಏರಿಕೆ ಸೇರಿದಂತೆ ಜನರ ಅನೇಕ ಸಮಸ್ಯೆಗಳಿಗೆ ಪರಿಹಾರ ಕೊಡಿಸುವ ಬದಲು ಅನವಶ್ಯಕ, ಅಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಕಾಲಹರಣ ಮಾಡುವುದೇ ತಪ್ಪು. ಪ್ರಜಾಪ್ರಭುತ್ವದ ಉಳಿವಿಗೆ ಪ್ರಭಾವಿ ವಿರೋಧ ಪಕ್ಷ ಅವಶ್ಯಕ. ಕಾಂಗ್ರೆಸ್ ಉಳಿಯಬೇಕಾದರೆ, ಈಗಿನ ನಾಯಕರ ಚಿಂತನೆ ಬದಲಾಗಬೇಕು.

ಕೆ.ಎನ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೆಳೆಯುತ್ತಲೇ ಇದೆ ಹಣದುಬ್ಬರದ ಭೂತ

• ವಿಜಯ್ ಜೋಷಿ



‘ಕೋವಿಡ್ ಆವರಿಸುವ ಮೊದಲು ಮನೆ ಬಾಡಿಗೆ ಪಾವತಿಸಿದ ನಂತರದಲ್ಲಿ ತಿಂಗಳಿಗೆ ₹15 ಸಾವಿರ ಇದ್ದರೆ ಮನೆಯ ದಿನನಿತ್ಯದ ಖರ್ಚು ನಿಭಾಯಿಸಲು ಆಗುತ್ತಿತ್ತು. ಆದರೆ, ಈಗ ₹15 ಸಾವಿರದಲ್ಲಿ ಆ ಖರ್ಚುಗಳನ್ನು ನಿಭಾಯಿಸಲು ಆಗುತ್ತಲೇ ಇಲ್ಲ. ಜೀವನ ಮಟ್ಟದಲ್ಲಿ ಯಾವುದೇ ಸುಧಾರಣೆ ಮಾಡಿಕೊಂಡಿಲ್ಲ, ಮಾರುಕಟ್ಟೆಗೆ ಹೋಗಿ ಹೆಚ್ಚು ಖರೀದಿ ಮಾಡುತ್ತಿಲ್ಲ, ಹೆಚ್ಚು ಸುತ್ತಾಟ ಇಲ್ಲ, ಹೋಟೆಲ್‌ಗೆ ಹೋಗಿ ಕುಟುಂಬದವರೆಲ್ಲ ಸೇರಿ ಊಟ ಮಾಡುವುದು ಹೆಚ್ಚಾಗಿಲ್ಲ. ಹೀಗಿದ್ದರೂ, ತಿಂಗಳಿಗೆ ಕನಿಷ್ಠ ₹21 ಸಾವಿರ ಬೇಕಾಗುತ್ತಿದೆ. ಎರಡು ವರ್ಷಗಳ ಅವಧಿಯಲ್ಲಿ ಮನೆ ಖರ್ಚು ₹6 ಸಾವಿರದಷ್ಟು ಹೆಚ್ಚಾಗಿದೆ.’

ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮಧ್ಯ ವಯಸ್ಸಿನ, ಮಧ್ಯಮ ವರ್ಗದ ವ್ಯಕ್ತಿಯೊಬ್ಬರು ‘ಪ್ರಜಾವಾಣಿ’ಗೆ ನೀಡಿದ ವಿವರ ಇದು.

‘ಕೋವಿಡ್ ಆವರಿಸುವ ಮೊದಲು ವರ್ಷಕ್ಕೊಮ್ಮೆ ವೇತನ ಹೆಚ್ಚಳ ಆಗುತ್ತಿತ್ತು. ಎರಡು ವರ್ಷಗಳಿಂದ ವೇತನ ಏರಿಕೆ ಆಗಿಲ್ಲ. ವೇತನ ಹೆಚ್ಚಾದಾಗಲೆಲ್ಲ ಉಳಿತಾಯದ ಮೊತ್ತವನ್ನೂ ಹೆಚ್ಚು ಮಾಡುತ್ತಿದ್ದೆ. ಆದರೆ, ಈಗ ಅದು ಸಾಧ್ಯವೇ ಇಲ್ಲ. ಹೆಚ್ಚಾಗುತ್ತಿರುವ ಖರ್ಚು ನಿಭಾಯಿಸಿಕೊಂಡರೆ ಸಾಕು ಎಂಬಂತೆ ಆಗಿದೆ. ಉಳಿತಾಯ ಹೆಚ್ಚುತ್ತಿಲ್ಲದ ಕಾರಣ ಮುಂದಿನ ದಿನಗಳು ಹೇಗಪ್ಪಾ ಎಂಬ ಚಿಂತೆಯೂ ಒಂದೆಡೆ ಇದೆ. ನನ್ನ ಉಳಿತಾಯದಲ್ಲಿ ದೊಡ್ಡ ಪಾಲು ಇರುವುದು ನೌಕರರ ಭವಿಷ್ಯ ನಿಧಿಯಲ್ಲಿ (ಪಿ.ಎಫ್). ಈಗ ಅದರ ಬಡ್ಡಿಯನ್ನೂ ತಗ್ಗಿಸಲಾಗಿದೆ’ ಎಂದು ಅವರು ಆತಂಕ ತೋಡಿಕೊಂಡರು.

ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ಲಾಕ್‌ಡೌನ್ ಜಾರಿಗೆ ತಂದಾಗಿನಿಂದ ದಿನಬಳಕೆ ವಸ್ತುಗಳ ಬೆಲೆಯು ಒಂದಲ್ಲ ಒಂದು ಕಾರಣಕ್ಕೆ ಏರಿಕೆ ಕಂಡಿದೆ. ಪೂರೈಕೆ ವ್ಯವಸ್ಥೆಯ ಮೇಲೆ ಬಿದ್ದ ಏಟಿನ ಕಾರಣದಿಂದಾಗಿ, ಕಾರ್ಮಿಕರ ಕೊರತೆಯಿಂದ, ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಿಂದ, ರಷ್ಯಾ–ಉಕ್ರೇನ್ ಯುದ್ಧದ ಕಾರಣದಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆ ಕಂಡಿದೆ. ಈಗ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪ್ರತಿನಿತ್ಯ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸುತ್ತಿವೆ (ಶುಕ್ರವಾರದಿಂದ ಸೋಮವಾರದವರೆಗೆ ಹೆಚ್ಚಳ ಆಗಿಲ್ಲ).

‘ಹಣದುಬ್ಬರ ಪ್ರಮಾಣವು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಳ ಕಾಣಲಿದೆ. ಅದರಲ್ಲಿ ಅನುಮಾನ ಬೇಡ. ಆದರೆ ಎಷ್ಟು ಹೆಚ್ಚಾಗಲಿದೆ ಎಂಬುದಷ್ಟೇ ಈಗಿರುವ ಪ್ರಶ್ನೆ. ಹಣದುಬ್ಬರ ಪ್ರಮಾಣವು ಅಲ್ಪಾವಧಿಯಲ್ಲಿ ಶೇಕಡ 0.7ರಿಂದ ಶೇ 1ರಷ್ಟು ಹೆಚ್ಚಾಗಬಹುದು. ಮೊದಲಿಗೆ ಸಗಟು ಹಣದುಬ್ಬರ ದರದಲ್ಲಿ ಹೆಚ್ಚಳ ಕಂಡುಬರುತ್ತದೆ. ನಂತರದಲ್ಲಿ, ಚಿಲ್ಲರೆ ಹಣದುಬ್ಬರ ದರವು ಹೆಚ್ಚಳ ಆಗುತ್ತದೆ’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ಅಧ್ಯಕ್ಷ ಡಿ. ಮುರಳೀಧರ ‘ಪ್ರಜಾವಾಣಿ’ ಜೊತೆ ಅನಿಸಿಕೆ ಹಂಚಿಕೊಂಡರು.

ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯು 137 ದಿನ ಏರಿಕೆ ಆಗಿರಲಿಲ್ಲ. ನಂತರ ಡೀಸೆಲ್ ಸಗಟು ಮಾರಾಟ ಬೆಲೆಯನ್ನು ಲೀಟರಿಗೆ ₹ 25ರಷ್ಟು ಒಂದೇ ಬಾರಿಗೆ ಹೆಚ್ಚಿಸಲಾಯಿತು. ಈಗ ಡೀಸೆಲ್ ಬೆಲೆಯನ್ನು ಸ್ವಲ್ಪಸ್ವಲ್ಪವಾಗಿ ಹೆಚ್ಚಿಸಲಾಗುತ್ತಿದೆ. ‘ಒಟ್ಟು ಹೆಚ್ಚಳವು ಲೀಟರಿಗೆ ₹25ರಷ್ಟು ಆದರೆ, ಹಣದುಬ್ಬರ ಹೆಚ್ಚಳವು ಭಾರಿ ಪ್ರಮಾಣದಲ್ಲಿ ಇರಲಿದೆ’ ಎಂದು ಮುರಳೀಧರ ಆತಂಕ ವ್ಯಕ್ತಪಡಿಸಿದರು. ಆದರೆ ಅಷ್ಟೊಂದು ಹೆಚ್ಚಳ ಆಗಲಿಕ್ಕಿಲ್ಲ ಎನ್ನುವ ಆಶಾಭಾವನೆಯನ್ನೂ ವ್ಯಕ್ತಪಡಿಸಿದರು.

ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆ ಅಡಿಯಲ್ಲಿ ಸಂಗ್ರಹ ಆಗುವ ವರಮಾನದ ಮೊತ್ತವು ₹1 ಲಕ್ಷ ಕೋಟಿಯನ್ನು ಮೀರಿ ನಿಂತಿದೆ. ‘ಜಿಎಸ್‌ಟಿ ಸಂಗ್ರಹವು ಈಗ ಉತ್ತಮವಾಗಿರುವ ಕಾರಣ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಮತ್ತು ಮೌಲ್ಯವರ್ಧಿತ ತೆರಿಗೆ ಕಡಿಮೆ ಮಾಡಬಹುದು’ ಎಂದು ಅವರು ಸಲಹೆ ನೀಡಿದರು.

ಬೆಂಗಳೂರು ಮತ್ತು ನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಈಚೆಗೆ ಅನಿಯಮಿತ ವಿದ್ಯುತ್ ಕಡಿತ ಕೂಡ ಶುರುವಾಗಿರುವ ಮಾಹಿತಿ ಇದೆ ಎಂದು ಅವರು ಹೇಳಿದರು. ಬೇರೆ ಪ್ರದೇಶಗಳಲ್ಲಿ ವಿದ್ಯುತ್ ಕಡಿತದ ಅವಧಿಯು ಬೆಂಗಳೂರಿಗಿಂತ ಹೆಚ್ಚಿರಲಿಕ್ಕೂ ಸಾಕು. ಹೀಗಾಗಿ, ಕೈಗಾರಿಕೆಗಳು ಡೀಸೆಲ್ ಆಧಾರಿತ ವಿದ್ಯುತ್ ಜನರೇಟರ್‌ಗಳನ್ನು ಹೆಚ್ಚೆಚ್ಚು ಬಳಸಬೇಕಾಗಿದೆ. ಡೀಸೆಲ್ ಬೆಲೆ ಏರಿಕೆಯ ಕಾರಣದಿಂದಾಗಿ, ಜನರೇಟರ್‌ಗೆ ಮಾಡಬೇಕಿರುವ ವೆಚ್ಚ ಹೆಚ್ಚಾಗುತ್ತದೆ. ಹಾಗಾಗಿ, ಉತ್ಪಾದನಾ ವೆಚ್ಚ ಕೂಡ ಇನ್ನಷ್ಟು ಜಾಸ್ತಿ ಆಗಬಹುದು ಅವರು ಅಂದಾಜು ಮಾಡಿದ್ದಾರೆ.

ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧವು ಯಾವಾಗ ಕೊನೆಗೊಳ್ಳಬಹುದು ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಯುದ್ಧ ಶುರುವಾದ ನಂತರದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿ ದಾಟಿದೆ. ‘ರಷ್ಯಾ–ಉಕ್ರೇನ್ ಯುದ್ಧ ನಿಲ್ಲುವ ಲಕ್ಷಣಗಳು ಕಾಣಿಸುತ್ತಿಲ್ಲ. ಹೀಗಾಗಿ, ತೈಲ ಬೆಲೆ ಇಳಿಕೆಯಾಗುವ ಸಾಧ್ಯತೆಗಳೂ ಕಾಣಿಸುತ್ತಿಲ್ಲ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈಗ ಎಕ್ಸೈಸ್ ಸುಂಕವು ಕಡಿಮೆ ಪ್ರಮಾಣದಲ್ಲಿ ಇದೆ. ಇದು ಕಚ್ಚಾ ತೈಲದ ಬೆಲೆಯಲ್ಲಿನ ಹೆಚ್ಚಳವನ್ನು ದೇಶಿ ಮಾರುಕಟ್ಟೆಯಲ್ಲಿ ತುಸು ನಿಭಾಯಿಸಲು ನೆರವಾಗುತ್ತದೆ. ಆದರೂ, ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 90 ಡಾಲರ್‌ಗೂ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಇಂಧನ ಬೆಲೆಯಲ್ಲಿ ಆಗುವ ಏರಿಕೆಯನ್ನು ತಗ್ಗಿಸಲು ಇದು ಸಾಕಾಗದು. ಹೀಗಾಗಿ ಗ್ರಾಹಕರ ಮೇಲಿನ ಹೊರೆ ತಗ್ಗಿಸಲು ಸರ್ಕಾರಗಳು ಸುಂಕವನ್ನು ಇನ್ನಷ್ಟು ಕಡಿಮೆ ಮಾಡಬೇಕಾಗುತ್ತದೆ’ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್‌ನ ಪ್ರಧಾನ ಅರ್ಥಶಾಸ್ತ್ರಜ್ಞೆ ದೀಪ್ತಿ ದೇಶಪಾಂಡೆ ಹೇಳಿದರು.

2021ರ ಸೆಪ್ಟೆಂಬರ್‌ನಿಂದ ದೇಶದ ಚಿಲ್ಲರೆ ಹಣದುಬ್ಬರ ಪ್ರಮಾಣವು ಏರಿಕೆ ಆಗುತ್ತಲೇ ಇದೆ. ಆ ತಿಂಗಳಿನಲ್ಲಿ ಶೇಕಡ 4.35ರಷ್ಟು ಇದ್ದ ಚಿಲ್ಲರೆ ಹಣದುಬ್ಬರ ದರವು ಈ ವರ್ಷದ ಫೆಬ್ರುವರಿಯಲ್ಲಿ ಶೇ 6.07ಕ್ಕೆ ಏರಿಕೆ ಆಗಿದೆ. ಅಂದರೆ, ಐದು ತಿಂಗಳಲ್ಲಿ ಶೇ 1.72ರಷ್ಟು ಏರಿಕೆ ಆಗಿದೆ. ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ಕ್ಕೆ ಮಿತಿಗೊಳಿಸುವ ಗುರಿ ನೀಡಿದೆ. ಈ ಪ್ರಮಾಣವು ಶೇ 2ರಷ್ಟು ಹೆಚ್ಚು ಅಥವಾ ಅಷ್ಟೇ ಪ್ರಮಾಣದಲ್ಲಿ ಕಡಿಮೆ ಆಗಲು ಅವಕಾಶ ಇದೆ. ಆದರೆ, ಈ ವರ್ಷದ ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 6ರ ಗಡಿಯನ್ನೂ ದಾಟಿ ಹೋಗಿದೆ.

‘ಈಗ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7ರ ಗಡಿಯನ್ನೂ ದಾಟಿರಬಹುದು’ ಎಂದು ಅಂದಾಜು ಮಾಡುತ್ತಾರೆ ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಕೇಂದ್ರದ (ಐಸೆಕ್) ಅರ್ಥಶಾಸ್ತ್ರದ ಉಪನ್ಯಾಸಕ ಪ್ರೊ. ಕೃಷ್ಣ ರಾಜ್. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪರಿಷ್ಕರಣೆಯು ಪುನರಾರಂಭ ಆದ ನಂತರದಲ್ಲಿ ಸಗಟು ಹಣದುಬ್ಬರ ದರವು ಶೇ 13.5ರ ಮಟ್ಟವನ್ನೂ ಮೀರಿರುವ ಸಾಧ್ಯತೆ ಇದೆ. ಇಂಧನ ಬೆಲೆ ಏರಿಕೆಯಿಂದಾಗಿ ಕೆಲವು ಉತ್ಪನ್ನಗಳ ಬೆಲೆಯು ಶೇ 2ರಿಂದ ಶೇ 5ರವರೆಗೆ ಹೆಚ್ಚಳ ಆಗಿರಬಹುದು. ಕೆಲವು ಪ್ರದೇಶಗಳಲ್ಲಿ ಈ ಹೆಚ್ಚಳವು ಶೇ 10ರಷ್ಟು ಕೂಡ ಆಗಿರಬಹುದು’ ಎಂದು ಅವರು ಅಂದಾಜಿಸಿದರು.

ಹಣದುಬ್ಬರದ ನಿರಂತರ ಏರಿಕೆಯು ಮಾರುಕಟ್ಟೆಯಲ್ಲಿ ಉತ್ಪನ್ನಗಳ ಬೇಡಿಕೆ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ. ‘ಜನರ ವೇತನ, ಆದಾಯ ಪ್ರತಿದಿನ ಬದಲಾಗುವುದಿಲ್ಲ. ಆದರೆ ಹಣದುಬ್ಬರದ ಕಾರಣದಿಂದಾಗಿ ಜೀವನ ವೆಚ್ಚ ಜಾಸ್ತಿ ಆಗುತ್ತದೆ. ಇದರಿಂದಾಗಿ, ಜನ ಖರೀದಿ ಮಾಡುವುದು ಕಡಿಮೆ ಆಗುತ್ತದೆ. ಜನ ತೀರಾ ಅಗತ್ಯವಲ್ಲದ ವಸ್ತುಗಳ ಖರೀದಿಯನ್ನು ಮುಂದಕ್ಕೆ ಹಾಕುತ್ತಾರೆ. ಹಣದುಬ್ಬರ ಪ್ರಮಾಣವು ಶೇ 10ಕ್ಕಿಂತ ಹೆಚ್ಚಿನ ಮಟ್ಟ ತಲುಪಿದರೆ, ಜೀವನಾವಶ್ಯಕ ಅಲ್ಲದ ಉತ್ಪನ್ನಗಳ ಒಟ್ಟು ಬೇಡಿಕೆಯು ಶೇ 20ರಷ್ಟು ಕಡಿಮೆ ಆಗುತ್ತದೆ’ ಎಂದು ರಾಜ್ ಹೇಳಿದರು.

ಮುಂದಿನ ಮೂರು ತಿಂಗಳಿನಿಂದ ಒಂದು ವರ್ಷದವರೆಗೆ ಚಿಲ್ಲರೆ ಹಣದುಬ್ಬರ ಪ್ರಮಾಣವು ಎರಡಂಕಿ ಮಟ್ಟದಲ್ಲಿ ಇರಲಿದೆ ಎನ್ನುವ ಅಭಿಪ್ರಾಯವು ಕಳೆದ ತಿಂಗಳು ಆರ್‌ಬಿಐ ನಡೆಸಿರುವ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.


ಹಣದುಬ್ಬರವು ಶೇ 10ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಳಿದರೆ, ದೇಶದ ಜಿಡಿಪಿ ಬೆಳವಣಿಗೆ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಉತ್ಪಾದನೆ ಕಡಿಮೆ ಆಗುತ್ತದೆ. ಉದ್ಯೋಗ ಅವಕಾಶಗಳು ತಗ್ಗಬಹುದು. ನಿರುದ್ಯೋಗ ಜಾಸ್ತಿ ಆಗಿ ಬೇಡಿಕೆಯು ಇನ್ನಷ್ಟು ಕಡಿಮೆ ಆಗಬಹುದು. ಹಣದುಬ್ಬರವನ್ನು ನಿಯಂತ್ರಣ ದಲ್ಲಿ ಇರಿಸಲು ಸರ್ಕಾರಗಳು ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ಕೃಷ್ಣ ರಾಜ್ ಅಭಿಪ್ರಾಯಪಟ್ಟರು.

ಉಳಿತಾಯಕ್ಕೆ ಹೊಡೆತ

ಹಣದುಬ್ಬರ ಮಿತಿ ಮೀರಿದ ಪ್ರಮಾಣದಲ್ಲಿ ಇರುವುದು ಜನರಲ್ಲಿನ ಉಳಿತಾಯ ಪ್ರವೃತ್ತಿಗೆ ಏಟು ಕೊಡುತ್ತಿದೆ. ಉಳಿತಾಯದ ಹಣಕ್ಕೆ ಬ್ಯಾಂಕ್‌ಗಳು ನೀಡುವ ವಾರ್ಷಿಕ ಬಡ್ಡಿಯ ಪ್ರಮಾಣ ಶೇ 5.75ರಷ್ಟು ಇದೆ. ಆದರೆ, ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ರ ಮಟ್ಟ ಮೀರಿ ನಿಂತಿದೆ. ಅಂದರೆ, ಉಳಿತಾಯ ಮಾಡಿದವರಿಗೆ ಲಾಭ ಆಗುತ್ತಿಲ್ಲ.

‘ಹೆಚ್ಚಿನ ಹಣದುಬ್ಬರ ಹಾಗೂ ಉಳಿತಾಯದ ಹಣಕ್ಕೆ ಕಡಿಮೆ ಬಡ್ಡಿದರದ ಪರಿಸ್ಥಿತಿಯು ಉಳಿತಾಯ ಮಾಡುವವರಿಗೆ ದುಃಸ್ವಪ್ನ ಇದ್ದಂತೆ. ನಿಶ್ಚಿತ ಠೇವಣಿ ರೂಪದಲ್ಲಿ ಇರಿಸಿರುವ ಹಣಕ್ಕೆ ಸಿಗುವ ಬಡ್ಡಿಯನ್ನು ಹಣದುಬ್ಬರ ಜೊತೆ ಸರಿಹೊಂದಿಸಿ, ಆದಾಯ ತೆರಿಗೆಯನ್ನು ಪಾವತಿಸಿದ ನಂತರದಲ್ಲಿ ಸಿಗುವ ಲಾಭವು ಶೂನ್ಯಕ್ಕಿಂತಲೂ ಕಡಿಮೆ ಆಗಬಹುದು. ಅಂದರೆ, ಉಳಿತಾಯ ಮಾಡಿದ ವ್ಯಕ್ತಿಯ ಅಸಲು ಬಂಡವಾಳದ ಮೌಲ್ಯವೇ ಕಡಿಮೆ ಆಗಬಹುದು’ ಎಂದು ಹೂಡಿಕೆ ಮತ್ತು ಉಳಿತಾಯ ಸಲಹಾ ಸಂಸ್ಥೆ ಪ್ರೈಮ್‌ಇನ್ವೆಸ್ಟರ್.ಇನ್‌ನ ಸಹ ಸಂಸ್ಥಾಪಕಿ ವಿದ್ಯಾ ಬಾಲಾ ಅನಿಸಿಕೆ ಹಂಚಿಕೊಂಡರು.

‘ಪರಿಸ್ಥಿತಿ ಹೀಗಿರುವಾಗ ದೀರ್ಘಾವಧಿಗೆ ಹೂಡಿಕೆ ಮಾಡುವ ಶಕ್ತಿ ಇರುವವರು ಈಕ್ವಿಟಿಗಳಲ್ಲಿ ಹಣ ತೊಡಗಿಸಬಹುದು. ಆದರೆ, ನಿವೃತ್ತಿ ಜೀವನ ನಡೆಸುತ್ತಿರುವವರು ಹಾಗೂ ಬಡ್ಡಿಯಿಂದ ಬರುವ ಹಣವನ್ನು ನೆಚ್ಚಿಕೊಂಡವರು ಕಷ್ಟ ಅನುಭವಿಸಬೇಕಾಗುತ್ತದೆ’ ಎಂದು ಅವರು ಹೇಳಿದರು.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 92

ತ್ರಿಮೂರ್ತಿಗಳ ಆಯುಷ್ಯ ವಿವರ

ಈಗ ಪರಮಶಿವತತ್ವವನ್ನು ಬ್ರಹ್ಮನು ನಾರದನಿಗೆ ತ್ರಿಮೂರ್ತಿಗಳ ಕಾರ್ಯಭಾರಗಳನ್ನೂ ಆಯುಷ್ಯವನ್ನೂ ಮಹಾಶಿವ ವಿವರಿಸಿದ್ದನ್ನು ಹೀಗೆ ತಿಳಿಸುತ್ತಾನೆ:

‘ಎಲೈ ವಿಷ್ಣುವೇ, ನೀನು ಸರ್ವಲೋಕಗಳಲ್ಲಿಯೂ ಸದಾ ಕಾಲದಲ್ಲಿಯೂ, ಮಾನನೀಯನೂ ಪೂಜ್ಯನೂ ಆಗುವೆ. ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಲೋಕದಲ್ಲಿ ಯಾವಾಗ ದುಃಖವುಂಟಾಗುವುದೋ, ಆಗ ನೀನು ಆ ದುಃಖಗಳೆಲ್ಲವನ್ನೂ ಪರಿಹರಿಸಲು ಕಂಕಣ ಬದ್ಧನಾಗು. ಇಂಥ ದುಸ್ಸಾಧ್ಯವಾದ ಕೆಲಸಗಳೆಲ್ಲದರಲ್ಲೂ ನಾನು ನಿನಗೆ ಸಹಾಯ ಮಾಡುವೆ. ಮಹಾದುಷ್ಟರಾದ ನಿನ್ನ ವೈರಿಗಳನ್ನೂ ಸದೆಬಡಿಯುವೆ.

‘ಓ ಹರಿ, ಜನರನ್ನು ದುಃಖದಿಂದ ಪಾರುಗಾಣಿಸಲು ಪ್ರಯತ್ನಶೀಲನಾಗು. ಬಹುವಿಧವಾದ ಅವತಾರಗಳನ್ನೆತ್ತಿ ಪ್ರಪಂಚದಲ್ಲಿ ಉತ್ತಮವಾದ ಕೀರ್ತಿಯನ್ನು ಗಳಿಸು. ಸಗುಣನಾದ ನಾನು ರುದ್ರನೆನಿಸಿ, ಇದೇ ಶರೀರದಿಂದಲೇ, ಲೋಕಹಿತಾರ್ಥವಾಗಿ ನಿನಗೆ ಅಸಾಧ್ಯವಾದ ಕೆಲಸಗಳನ್ನು ನಿಸ್ಸಂಶಯನಾಗಿ ಸರ್ವದಾ ನೆರವೇರಿಸುವೆನು. ನೀನು ರುದ್ರನಿಗೂ ಧ್ಯೇಯನಾಗಿರುವೆ. ಲಯಕರ್ತನಾದ ಆ ಹರನೂ ನಿನ್ನಿಂದ ಧ್ಯೇಯನಾದವನೇ. ನಿನಗೂ ಆ ರುದ್ರನಿಗೂ ಮಾಡುವ ಕೆಲಸದಲ್ಲಿ ಸ್ವಲ್ಪವೂ ಭೇದವಿಲ್ಲ; ನೀವಿಬ್ಬರೂ ಒಂದೇ.

‘ಎಲೈ ಮಹಾವಿಷ್ಣು, ಬ್ರಹ್ಮ, ನಿಮ್ಮಿಬ್ಬರಿಗೆ ಕೊಟ್ಟಿರುವ ವರಗಳಿಂದ, ನಿಮ್ಮಿಬ್ಬರ ಲೀಲೆಗಳಿಂದಲೂ ನೀವು ಒಂದೇ ಎನ್ನುವುದರಲ್ಲಿ ಸಂಶಯವಿಲ್ಲ. ಹರನಲ್ಲಿ ಭಕ್ತಿಯುಳ್ಳವನು, ಯಾರಾದರೂ ನಿನ್ನನ್ನು ನಿಂದಿಸಿದರೆ, ಅವನು ಗಳಿಸಿದ್ದ ಪುಣ್ಯವೆಲ್ಲವೂ ತಕ್ಷಣ ಬೂದಿಯಾಗಿ ಹೋಗುವುದು. ಓ ಪುರುಷಶ್ರೇಷ್ಠ ವಿಷ್ಣು, ನಿನ್ನಲ್ಲಿ ದ್ವೇಷವನ್ನು ಬೆಳಸಿದವನು ಎಂದೆಂದಿಗೂ ನರಕದಲ್ಲಿ ಬಿದ್ದು ಕೊಳೆಯುವನು. ಈ ಲೋಕದಲ್ಲಿ ಮನುಷ್ಯರಿಗೆ ಮುಕ್ತಿಯನ್ನೂ, ವಿಶೇಷವಾಗಿ ಭೋಗಭಾಗ್ಯಗಳನ್ನೂ ನೀಡುತ್ತಲಿರು. ಭಕ್ತರು ನಿನ್ನನ್ನು ಸದಾ ಸ್ತುತಿಸಲಿ. ಅವರಿಂದ ಪೂಜೆಯನ್ನು ಕೈಗೊಳ್ಳುವವನಾಗು. ಅಲ್ಲದೆ ದುಷ್ಟರನ್ನು ಶಿಕ್ಷಿಸುತ್ತಾ, ಶಿಷ್ಟರನ್ನು ರಕ್ಷಿಸುತ್ತಲೂ ಇರು.’

ಹೀಗೆಂದು ಹೇಳಿದ ಶಿವನು ಧಾತೃವಾದ ನನ್ನ ಮತ್ತು ಹರಿಯ ಕೈಗಳನ್ನು ಹಿಡಿದುಕೊಂಡು ‘ಯಾವಾಗಲೂ ಈತನಿಗೆ ಸಂಕಟ ಸಮಯಗಳಲ್ಲಿ ನೆರವನ್ನು ನೀಡುತ್ತಿರು’ ಎಂದು ವಿಷ್ಣುವಿಗೆ ಸೂಚಿಸಿದ. ‘ನೀನು ಎಲ್ಲರಿಗೂ ಸಾಕ್ಷಿಭೂತನಾಗಿ, ಭುಕ್ತಿಮುಕ್ತಿಗಳನ್ನು ಕೊಡುವವನಾಗಿ ಇರುವುದಲ್ಲದೆ, ಸದಾ ಸಕಲರ ಇಷ್ಟಾರ್ಥಗಳನ್ನೂ ನೆರವೇರಿಸುತ್ತಾ ಎಲ್ಲರಿಗೂ ಮಾನ್ಯನಾಗಿರು.

‘ಓ ಹರಿ, ನೀನು ನನ್ನ ಅಪ್ಪಣೆಯಂತೆ ಎಲ್ಲರಿಗೂ ಪ್ರಾಣಸ್ವರೂಪನಾಗಿರು. ನಿನಗೆ ತೊಂದರೆ ಒದಗಿದಾಗ, ನನ್ನ ಶರೀರಭೂತನಾದ ಆ ಹರನನ್ನು ಸ್ಮರಿಸು. ಆ ಹರನು ನಿನ್ನ ನೆರವಿಗೆ ಬರುತ್ತಾನೆ. ನಿನ್ನನ್ನು ಯಾರು ಅನನ್ಯ ಭಕ್ತಿಯಿಂದ ಆರಾಧಿಸುವರೋ, ಅವರು ನನ್ನನ್ನೇ ಆರಾಧಿಸಿದರೆಂದು ತಿಳಿ. ನಮ್ಮೀರ್ವರಿಗೂ ಭೇದವನ್ನೆಣಿಸುವವನು ಖಂಡಿತವಾಗಿ ನರಕದಲ್ಲಿ ಬೀಳುವನು’ ಎಂದ ಶಿವ, ನಂತರ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳ ಆಯುಷ್ಯ ಪ್ರಮಾಣವನ್ನು ತಿಳಿಸುತ್ತಾನೆ.

‘ನಾಲ್ಕು ಸಹಸ್ರ ಯುಗಗಳು ಬ್ರಹ್ಮನಿಗೆ ಒಂದು ಹಗಲೆನಿಸುವುದು. ಅಷ್ಟೇ ಕಾಲವು ಆತನ ಒಂದು ರಾತ್ರಿಗೂ ಹಿಡಿಸುವುದು. ಇದೇ ರೀತಿ ಮುಂದೆಯೂ ಕ್ರಮವಾಗಿ ಪ್ರಮಾಣವನ್ನರಿಯಬೇಕು. ಹೀಗೆ ರಾತ್ರಿ ಹಗಲು ಸೇರಿದ ಮೂವತ್ತು ದಿನಗಳು ಒಂದು ತಿಂಗಳೆಂತಲೂ, ಆ ಹನ್ನೆರಡು ತಿಂಗಳು ಒಂದು ವರ್ಷವೆಂತಲೂ ಎನಿಸಲ್ಪಡುವುದು. ಹೀಗೆ ನೂರು ಬ್ರಹ್ಮ ವರ್ಷಗಳವರೆಗೆ ಬ್ರಹ್ಮನಿಗೆ ಆಯುಷ್ಯ ಇರುತ್ತೆ.

‘ಬ್ರಹ್ಮನ ಒಂದು ವರ್ಷವು ವಿಷ್ಣುವಿಗೆ ಒಂದು ಹಗಲೆನಿಸುವುದು. ಬ್ರಹ್ಮನ ಮತ್ತೊಂದು ವರ್ಷವು ವಿಷ್ಣುವಿಗೆ ಒಂದು ರಾತ್ರಿಯೆನಿಸುವುದು. ಈ ರೀತಿ ಹಗಲುರಾತ್ರಿಗಳು ಸೇರಿದ ದಿವಸಗಳು ಮುನ್ನೂರ ಅರವತ್ತು ಆದರೆ ವರ್ಷವೆನಿಸುವುದು. ಆ ವೈಷ್ಣವವರ್ಷಗಳು ನೂರಾಗಲು ವಿಷ್ಣುವಿನ ಆಯುಷ್ಯದ ಪರಿಮಾಣವಾಗುವುದು. ವಿಷ್ಣುವಿನ ಒಂದು ವರ್ಷವು ರುದ್ರನಿಗೆ ಹಗಲೂ, ಅದೇ ವಿಷ್ಣುವಿನ ಒಂದು ವರ್ಷವು ರಾತ್ರಿ ಎನಿಸುವುದು. ಈ ರೀತಿ ಹಗಲು ರಾತ್ರಿಗಳು ಸೇರಿದ ಮುನ್ನೂರ ಅರವತ್ತು ದಿವಸಗಳು ರುದ್ರನಿಗೆ ಒಂದು ವರ್ಷವೆನಿಸುವುದು. ಹೀಗೆ ರುದ್ರ ವರ್ಷಗಳು ನೂರು ಕಳೆಯಲು ಆಯುಷ್ಯ ಪೂರ್ಣವಾಗುವುದು’ ಎಂದು ವಿವರಿಸುತ್ತಾನೆ ಪರಮೇಶ್ವರ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪುರುಷರ ಗುಂಪೊಂದು ಮಹಿಳೆಯರನ್ನು ಮನಬಂದಂತೆ ಥಳಿಸುತ್ತಿರುವ ವಿಡಿಯೊವೊಂದು ವೈರಲ್ ಆಗಿದೆ. 30 ಸೆಕೆಂಡ್‌ಗಳ ಈ ವಿಡಿಯೊದಲ್ಲಿ ಪುರುಷರ ಗುಂಪು ಮೊದಲಿಗೆ ಸರಳು, ಸುತ್ತಿಗೆ ಬಳಸಿ ಮಹಿಳೆಯರ ಮೇಲೆ ದಾಳಿ ನಡೆಸುತ್ತದೆ. ಬಳಿಕ ಘಟನೆಯ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಪುರುಷರ ಮೇಲೂ ದಾಳಿ ನಡೆಸುತ್ತದೆ. ಇದು ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ನಡೆದಿದೆ. ಕಸವನ್ನು ಹೊರಗಡೆ ಬಿಸಾಡಲು ಹೇಳಿದ ಕಾರಣಕ್ಕೆ ಹಿಂದೂ ಕುಟುಂಬದ ಮೇಲೆ ಮುಸ್ಲಿಮರು ಮಾರಣಾಂತಿಕ ದಾಳಿ ನಡೆಸಿದರು ಎಂಬ ಮಾಹಿತಿಯನ್ನು ಈ ವಿಡಿಯೊ ಜೊತೆ ಹಂಚಲಾಗಿದೆ.



ಈ ವಿಡಿಯೊ ಜೊತೆ ಹಂಚಲಾಗಿರುವ ಮಾಹಿತಿ ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. ದಾಳಿ ಮಾಡಿದವರು ಮತ್ತು ದಾಳಿಗೊಳಗಾದವರು ಮುಸ್ಲಿಂ ಸಮುದಾಯದವರು. ಈ ಘಟನೆ ಈ ಜನವರಿಯಲ್ಲಿಯೇ ವರದಿ ಆಗಿದೆ. ಸಂತ್ರಸ್ತೆ ನಸೀರಾ ಬೇಗಂ ಮತ್ತು ಅವರ ಮಕ್ಕಳು ಮದರಸಾದಲ್ಲಿ ಆಶ್ರಯ ಪಡೆದಿದ್ದರು. ಮೆಟ್ಟಿಲು ಇಳಿದು ಕೆಳಗೆ ಬರುವಾಗ ಮೆಟ್ಟಿಲ ಮೇಲೆ ಕುಳಿತಿದ್ದ ಮಹಿಳೆಗೆ ದಾರಿ ಬಿಡುವಂತೆ ನಸೀರಾ ಕೇಳಿದಾಗ ಜಗಳ ಶುರುವಾಗಿದೆ. ಅಲ್ಲಿಯೇ ಇದ್ದ ಪುರುಷರ ಗುಂಪು ನಸೀರಾ ಮತ್ತು ಮಕ್ಕಳ ಮೇಲೆ ದಾಳಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅನುಭವದ ಪರಿಪಾಕ

ಹೊಸಹೊಸಬನಾಗುವವನುಕ್ಷಣಂ ಮಾನವನು|
ವಸುಧೆಯಾ ಮೂಸೆಯಲಿ ಪುಟಪಾಕವಾಂತು ||
ರಸಮೂರ್ತಿಯಾಗುವನು ಜಗದಾತ್ಮಮತಿ ಬೆಳೆಯೆ |
ಕಸವೆಲ್ಲ ಕಳೆದವನು – ಮಂಕುತಿಮ್ಮ || 604 ||

ಪದ-ಅರ್ಥ: ಹೊಸಹೊಸಬನಾಗುವವನುಕ್ಷಣ = ಹೊಸಹೊಸಬನು + ಆಗುವನು + ಅನುಕ್ಷಣಂ (ಪ್ರತಿಕ್ಷಣ), ವಸುಧೆ = ಜಗತ್ತು, ಲೋಕ, ಪುಟಪಾಕವಾಂತು = ಪುಟಪಾಕ (ಶುದ್ಧಿಗೊಳಿಸಲು ಕುದಿಸುವುದು/ಕಾಯಿಸುವುದು)

ವಾಚ್ಯಾರ್ಥ: ಮನುಷ್ಯ ಜಗತ್ತು ಎನ್ನುವ ಮೂಸೆಯಲ್ಲಿ ಬೆಂದು, ಕರಗಿ ಪ್ರತಿಕ್ಷಣವೂ ಹೊಸಮನುಷ್ಯನಾಗುತ್ತಾನೆ. ಮನದ ಕಸವನ್ನು ಕಳೆದುಕೊಂಡು, ಜಗದ ಆತ್ಮದ ಬುದ್ಧಿ ಬಲಿತಂತೆ ಆತ ರಸಮೂರ್ತಿಯಾಗುತ್ತಾನೆ.

ವಿವರಣೆ: ಮಗು ಭೂಮಿಗೆ ಬಂದ ಕ್ಷಣದಿಂದ, ಪ್ರತಿಕ್ಷಣಕ್ಕೂ ಅದು ಬದಲಾಗುತ್ತದೆ. ಅದಕ್ಕೆ ಮುಖ್ಯ ಕಾರಣ ಅದಕ್ಕೆ ದೊರಕುವ ಅನುಭವ. ತಾಯಿಯ ಗರ್ಭದಲ್ಲಿದ್ದಾಗ ಆದ ಅನುಭವವೇ ಬೇರೆ, ಹೊರಗಡೆ ಬಂದ ಮೇಲೆ ಅದು ಅನುಭವಿಸುವುದೇ ಬೇರೆ. ಆ ಅನುಭವಗಳಿಗೆ ಪ್ರತಿಕ್ರಿಯಿಸುತ್ತ, ಹೊಂದಿಕೊಳ್ಳುತ್ತ ಮಗು ಬೆಳೆಯುತ್ತದೆ. ದೊಡ್ಡವರಾಗುತ್ತಿದ್ದಂತೆ, ನಮಗೂ ಒಂದಲ್ಲ ಒಂದು ಅನುಭವವಾಗುತ್ತಲೇ ಇರುತ್ತದೆ. ಪ್ರತ್ಯಕ್ಷ, ಪರೋಕ್ಷ, ದೈಹಿಕ, ಮಾನಸಿಕ, ಲೌಕಿಕ, ಆಧ್ಯಾತ್ಮಿಕ ಅನುಭವಗಳ ಸ್ವರೂಪ ಬೇರೆ ಬೇರೆ ಮತ್ತು ಅವು ಉಂಟು ಮಾಡುವ ಪರಿಣಾಮಗಳೂ ಬೇರೆ. ತಾನು ವಿಮಾನ ಅಪಘಾತದಲ್ಲಿ ಸತ್ತು ಹೋದೆ ಎಂಬುದನ್ನು ಪತ್ರಿಕೆಯಲ್ಲಿ ಓದಿದ, ಡೈನಾಮೈಟ್ ಮಾಡಿ ಮಾರುತ್ತಿದ್ದ, ಅಲ್‌ಫ್ರೆಡ್ ನೋಬೆಲ್, ಬದಲಾಗಿ ನೋಬೆಲ್ ಪಾರಿತೋಷಕ ಸ್ಥಾಪಿಸಿದ ವ್ಯಕ್ತಿಯಾದ. ಕೊಲೆಗಡುಕನಾಗಿದ್ದ ಅಂಗುಲಿಮಾಲ, ಬುದ್ಧನ ಕ್ಷಣಕಾಲದ ದರ್ಶನದಿಂದ ಬೌದ್ಧಯತಿಯೇ ಆದ. ತಂದೆಯ ಸಾವನ್ನು ಬಾಲ್ಯದಲ್ಲೇ ಕಂಡ ಶಂಕರರು ಅಧ್ಯಾತ್ಮ ಗುರುವಾದರು, ವಿವೇಕಾನಂದರ ಒಂದು ಪುಸ್ತಕವನ್ನು ರೈಲ್ವೆ ನಿಲ್ದಾಣದಲ್ಲಿ ಓದಿ ಪ್ರಭಾವಿತರಾದ ವ್ಯಕ್ತಿ ತಮ್ಮ ಜೀವನದ ದಿಶೆಯನ್ನು ಬದಲಿಸಿಕೊಂಡು ಅಣ್ಣಾ ಹಜಾರೆಯಾದರು. ಹೀಗೆ ಪ್ರತಿ ಅನುಭವಕ್ಕೆ ತನ್ನನ್ನು ತೆರೆದುಕೊಂಡ ಮನುಷ್ಯ ಬದಲಾಗುತ್ತ ಹೋಗುತ್ತಾನೆ. ಈ ಪ್ರಪಂಚವೇ ಮೂಸೆಯಾಗಿ ಮನುಷ್ಯನನ್ನು ಅನುಭವದಲ್ಲಿ ಬೇಯಿಸಿ, ಕಾಯಿಸಿ ಬದಲಾಯಿಸುತ್ತದೆ. ಈ ಪ್ರಕ್ರಿಯೆಯನ್ನು ಒಂದು ವಚನ ಬಹಳ ಮನನೀಯವಾಗಿ ತಿಳಿಸುತ್ತದೆ.

ತನು ಸೋಂಕಿ ತನು ನಷ್ಟವಾಯಿತ್ತು.
ಮನ ಸೋಂಕಿ ಮನ ನಷ್ಟವಾಯಿತ್ತು,
ಭಾವ ಸೋಂಕಿ ಭಾವ ನಷ್ಟವಾಯಿತ್ತು.
ಇದು ಕಾರಣ ಕೂಡಲಚೆನ್ನಸಂಗಯ್ಯ ಲಿಂಗ
ಸೋಂಕಿ ಶರಣನ ಸಂದು ನಷ್ಟವಾಯಿತ್ತು.

ಇಷ್ಟಲಿಂಗ ತನುವನ್ನು ಸ್ಪರ್ಶಿಸಿದಾಗ ತನು ಪ್ರಸಾದವಾಯಿತು. ಪ್ರಾಣಲಿಂಗದ ನೆನಪು ಮನಸ್ಸನ್ನು ಆವರಿಸಿದಾಗ ಮನದ ಪ್ರಾಕೃತಿಕತೆ ಮರೆಯಾಗಿ ಅದೂ ಪ್ರಸಾದವೇ ಆಯಿತು. ಅಂತರಂಗದಲ್ಲಿ ಮಾತ್ರವಿದ್ದ ಭಾವಲಿಂಗವು ಈ ಜೀವಭಾವವನ್ನು ತಲುಪಿದಾಗ ಜೀವಭಾವ ಕರಗಿಹೋಗಿ ಆತ್ಮದ ಅನುಭೂತಿಯಾಗಿತ್ತು. ನಂತರ ಶರಣನನ್ನು ಮಹಾಲಿಂಗವು ಸೋಕಿದಾಗ ನಾನು ಶರಣ, ನಾನು ಬೇರೆ ಎಂಬ ಭೇದ ನಷ್ಟವಾಯಿತು. ಹೀಗೆ ತನು, ಮನ, ಭಾವಗಳನ್ನು ಅನುಭವದ ಮೂಸೆಯಲ್ಲಿ ಪಕ್ವಗೊಳಿಸಿದ ವ್ಯಕ್ತಿ ಮುಕ್ತಾತ್ಮನಾಗುತ್ತಾನೆ. ಅದನ್ನೇ ಕಗ್ಗ ಹೇಳುತ್ತದೆ, ಪ್ರಪಂಚದ ಮೂಸೆಯಲ್ಲಿ ಪ್ರತಿಕ್ಷಣ ಅನುಭವದ ಅಗ್ನಿಯಲ್ಲಿ ಹಾಯ್ದುಬಂದ ಮನುಷ್ಯ ಜಗದಾತ್ಮದ ಬುದ್ಧಿಯನ್ನು ಬೆಳೆಸಿಕೊಂಡು ಬ್ರಹ್ಮನೇ (ರಸಮೂರ್ತಿಯೇ) ಆಗುತ್ತಾನೆ. ಯಾಕೆಂದರೆ ಅವನು ತನ್ನ ಕಲ್ಮಷಗಳನ್ನೆಲ್ಲ ಕಳೆದುಕೊಂಡವನು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 12, 2022

ಶ್ರೀಶುಭಕೃತ್ ನಾಮ ಸಂವತ್ಸರ ಉತ್ತರಾಯಣ- ವಸಂತ ಋತು - ಮೀನ ಮಾಸದ 29ನೇ ದಿನ ತಿಥಿ: (ಚೈತ್ರ ಶುದ್ಧ) ಏಕಾದಶಿ ಗಂ. 29-03 **ನಕ್ಷತ್ರ:** ಆಶ್ಲೇಷ ಗಂ. 08- 35
ಯೋಗ: ಶೂಲ ಗಂ. 12-03, **ಕರಣ:** ವಣಿಜ ಗಂ. 16-52.
ರಾಹುಕಾಲ: ಮಧ್ಯಾಹ್ನ 03:00– 04:30
ಸೂರ್ಯೋದಯ: 06-23 **ಸೂರ್ಯಾಸ್ತ:** 06-40
ಮುಸ್ಲಿಂ ದಿನಾಂಕ: 10 ರಂಜಾನ್
ಅದೃಷ್ಟ ಸಂಖ್ಯೆ: 1, 7

ಮೇಷ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆಯೇ ನಡೆಯಲು ಒಪ್ಪುವಿರಿ. ನೂತನವಾದ ತಾತ್ಕಾಲಿಕ ಉದ್ಯೋಗ ದೊರೆತು ಸಮಾಧಾನವಾಗುವುದು.

ವೃಷಭ: ನಿಮ್ಮ ಸಾಧನೆಗಳಿಗಾಗಿ ಪ್ರಶಂಸೆಯ ನುಡಿ, ಸನ್ಮಾನಗಳನ್ನು ಪಡೆಯುವಿರಿ. ಸುದ್ದಿ ಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶವನ್ನು ಪಡೆಯುವಿರಿ.

ಮಿಥುನ: ನಿಮ್ಮ ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ಕರ್ಕಾಟಕ: ವಿದೇಶಿ ವಸ್ತುಗಳ ಖರೀದಿಗಾಗಿ ಅಧಿಕಮಟ್ಟದಲ್ಲಿ ಧನ ವ್ಯಯಿಸುವಿರಿ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ.

ಸಿಂಹ: ಈ ದಿನ ನಿಮ್ಮೆಲ್ಲ ನಿಸ್ವಾರ್ಥ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯಲ್ಲಿರುವುದು. ಆತ್ಮವಿಶ್ವಾಸ, ಕಠಿಣ ಪರಿಶ್ರಮದ ಫಲವನ್ನು ಅನುಭವಿಸುವಿರಿ. ಹಣದ ಪರಿಸ್ಥಿತಿ ಸುಧಾರಿಸಿ ಮನಸ್ಸಿಗೆ ನೆಮ್ಮದಿ ದೊರೆಯಲಿದೆ.

ಕನ್ಯಾ: ಹಾಸ್ಯಪ್ರಜ್ಞೆ ಹೆಚ್ಚುವುದು. ಆದರೆ. ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳಿ. ವಾದ- ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ತುಲಾ: ವೃತ್ತಿಯ ಕಡೆ ಗಮನಹರಿಸಿ. ಮದುವೆಯ ವಿಷಯಕ್ಕೆ ಸಂಬಂಧಪಟ್ಟಂತೆ ತಾಯಿ ಮತ್ತು ಅಣ್ಣಂದಿರ ಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗುವಿರಿ. ದುರ್ಗಾಸ್ತೋತ್ರ ಪಠಿಸಿದರೆ ಯಶಸ್ಸು.

ವೃಶ್ಚಿಕ: ವಾಹನ ವಹಿವಾಟುದಾರರಿಗೆ ಲಾಭ. ಶುಭ ಕಾರ್ಯಗಳಿಗೆ ಹಣ ವಿನಿಯೋಗ. ರಾಜಕೀಯ ಸೇರ್ಪಡೆಗೆ ಆಹ್ವಾನ ಬರಲಿದೆ. ಆದರೆ ದೂರ ಉಳಿಯುವುದು ಕ್ಷೇಮ.

ಧನು: ನಿಮ್ಮ ಆಲಸ್ಯತನಕ್ಕೋಸ್ಕರ ಕೆಲಸಗಳನ್ನು ಮುಂದೂಡುವುದು ಸರಿಯಲ್ಲ. ಹರಿತಾದ ವಸ್ತುಗಳ, ಯಂತ್ರಗಳ ಜೊತೆ ಕೆಲಸ ಮಾಡುವವರು ಈ ದಿನ ಜಾಗ್ರತರಾಗಿರಿ. ಷೇರು ವ್ಯವಹಾರಗಳಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಿ.

ಮಕರ: ಸಂಬಂಧಿಕರ ಅತಿ ವಿಶ್ವಾಸ, ಪ್ರೀತಿಯನ್ನು ಕಂಡು ಮರುಳಾಗಬೇಡಿ. ಪಾಲುದಾರರಿಂದ ಮೋಸ ಹೋಗುವ ಸಾಧ್ಯತೆ. ನಿಮ್ಮ ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದರಿಂದ ನಿಮ್ಮ ಅಭಿವೃದ್ಧಿಗೆ ಅನುಕೂಲ.

ಕುಂಭ: ರಾಜಕೀಯ ವ್ಯಕ್ತಿಗಳು ಜನರಲ್ಲಿ ತಾಳ್ಮೆಯಿಂದ ವರ್ತಿಸಿ. ಭೋಗ ವಸ್ತುವಿನ ಖರೀದಿಯ ಅವಕಾಶವಿದೆ. ನಿಮ್ಮ ಒಳ್ಳೆಯ ನಿರ್ಧಾರಗಳಿಗೆ ಕೆಲವು ಪ್ರಭಾವಿ ವ್ಯಕ್ತಿಗಳ ಹಸ್ತಕ್ಷೇಪ ಇರಬಹುದು.


ಮೀನ: ಸೂಕ್ತ ಪರಿಶೀಲನೆ ಇಲ್ಲದೆ ಯಾವ ಕೆಲಸದಲ್ಲೂ ಹೂಡಿಕೆ ಮಾಡುವುದು ಸಲ್ಲ. ಜೀವನದಲ್ಲಿನ ಪ್ರಮುಖ ಬದಲಾವಣೆಯನ್ನು ನೀವು ಈ ಸಮಯದಲ್ಲಿ ಕಾಣಲಿದ್ದೀರಿ.

ಪದಬಂಧ 4925

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಳ್ಳುವುದು (5)
4.ಕೆಚ್ಚು ಇಲ್ಲಿ ಕಾಣುತ್ತಿದೆ (3)
5.ಮಾತು ಕೇಳಿಸಿಕೊಂಡು ಬಂದಿರುವ ಸೋದರಮಾವ (3)
6.ಪ್ರವೇಶಿಸಲು ಕಷ್ಟವಾದುದು (3)
8.ಮದುವೆ ಗಂಡು (2)
9.ಎಲ್ಲೆ ಮೀರದ್ದು ಮಿಡಿತದಲ್ಲಿದೆ (2)
11.ಸೈನ್ಯದ ಒಂದು ಭಾಗ (3)
14.ಕಾಲದಲ್ಲಿರುವ ನಲ್ಲ! (3)
15.ಧಾನ್ಯಗಳನ್ನು ಸಂಗ್ರಹಿಸುವ ಕಣಜ (3)
16.ವ್ಯಾಯಾಮ ಶಾಲೆ(5)

ಮೇಲಿಂದ ಕೆಳಕ್ಕೆ
1.ಸಿಹಿಮೂತ್ರ ರೋಗ (4)
2.ಪಿತ್ರಾರ್ಜಿತ ಆಸ್ತಿಯ ಹಕ್ಕುದಾರ (5)
3.ಮುಸಲ್ಮಾನರ ದೇವತಾ ಪ್ರಾರ್ಥನೆ (3)
4.ರಾಜನ ದರ್ಬಾರಿದು (3)
7.ಹಸುರು ಬಣ್ಣ (3)
8.ತರ್ಕ ಮಾಡುತ್ತಿರುವ ವ್ಯಾಪಾರಿ! (3)
9.ಮಿಡಿಯೊಳಗಿರುವ ಒಯ್ಯಾರಿ! (5)
10.ಪಕ್ಕದ ಗೃಹವಿದು (4)
12.ಕೊನೆಗೆ ಕಾವು ಇದ್ದರೆ ಹೊರಗಿನ ಅಂದ ಕಾಣುವುದೇ? (3)
13.ಆನೆಗಳ ರಾಜ (3)



4924 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಟ್ಟಿಕುಳ 3.ಮಧುಚಂದ್ರ
5.ರದನ 6.ಕವಾಡಿಗ
8.ವಿನಯ 10.ಯವನ
12.ಹಗರಣ 15.ಗಹ್ವರ
16.ತರದೂದು 17.ವಿಶೃಂಖಲ

ಮೇಲಿಂದ ಕೆಳಕ್ಕೆ:
1.ಗಮಕ 2.ಟರಗ
3.ಮನವಿ 4.ದ್ರವ
7.ವಾಚನಾಲಯ 9.ಯಮಕಿಂಕರ
11.ನಗದು 12.ಹರವಿ
13.ಣವಲ 14.ಪ್ಲುತ

ಸುಡೊಕು 5311

3		2	1		4		6	7
				8				
7	9		6		2	5		4
2					3			5
		6		4		2	9	
			9					1
	4	1	2				8	
9				7	8			
	6			5		4		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5310 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ದೇಶದ ಪೂರ್ವ ಭಾಗದಲ್ಲಿ ರಷ್ಯಾದ ಕಾರ್ಯತಂತ್ರ– ಉಕ್ರೇನ್ ಜನತೆಗೆ ಅಧ್ಯಕ್ಷ ಝೆಲೆನ್‌ಸ್ಕಿ ಎಚ್ಚರಿಕೆ

ಮುಂದಿನ ದಿನಗಳ ಯುದ್ಧ ನಿರ್ಣಾಯಕ

ಕೀವ್/ಲಿವಿವ್ (ಎಪಿ): ದೇಶದ ಮೇಲೆ ದಾಳಿ ನಡೆಸುತ್ತಿರುವ ರಷ್ಯಾದ ಪಡೆಗಳು ನಮ್ಮ ದೇಶದ ಪೂರ್ವ ಭಾಗದಲ್ಲಿ ತನ್ನ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ. ಹೀಗಾಗಿ ಮುಂದಿನ ಕೆಲ ದಿನಗಳು ಬಹು ಮಹತ್ವದ್ದಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಅಲ್ಲದೆ ಯುದ್ಧದ ಅಪರಾಧಗಳ ಜವಾಬ್ದಾರಿಯಿಂದ ನುಣುಚಿಕೊಳ್ಳಲು ರಷ್ಯಾ ಯತ್ನಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಭಾನುವಾರ ತಡರಾತ್ರಿ ದೇಶವನ್ನುದ್ದೇಶಿಸಿ ಸುಮಾರು ಒಂದು ಗಂಟೆ ಮಾತನಾಡಿದ ಅವರು, 'ಜನರು ತಾವು ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳದೆ, ಕ್ಷಮಾಪಣೆ ಕೇಳುವ ಧೈರ್ಯ ತೋರದೆ ಇದ್ದಾಗ ಹಾಗೂ ನಿಜ ಸ್ಥಿತಿಯನ್ನು ಒಪ್ಪಿ ಕೊಳ್ಳದೆ ಇದ್ದಗ ರಾಕ್ಷಸರಾಗುತ್ತಾರೆ. ಜಗತ್ತು ಇದನ್ನು ನಿರ್ಲಕ್ಷಿಸಿದಾಗ, ಇದೇ ಜಗತ್ತು ಎಂದು ರಾಕ್ಷಸರು ಭಾವಿಸುತ್ತಾರೆ. ಆದರೆ ಈ ಎಲ್ಲಾ ತಪ್ಪುಗಳನ್ನು ತಾವಾಗಿಯೇ ಒಪ್ಪಿಕೊಳ್ಳುವ ದಿನ ಬರಲಿದ್ದು, ಸತ್ಯವನ್ನು ಒಪ್ಪಿಕೊಳ್ಳಲಿದ್ದಾರೆ' ಎಂದು ಹೇಳಿದರು.


ರಷ್ಯಾ ವಿರುದ್ಧದ ಹೋರಾಟಕ್ಕೆ ಉಕ್ರೇನ್‌ಗೆ ಬೇಕಿರುವ ಯುದ್ಧ ಸಲಕರಣೆಗಳು ಸೇರಿದಂತೆ ಇನ್ನಿತರ ನೆರವುಗಳನ್ನು ನೀಡಬೇಕು ಎಂದು ಜರ್ಮನಿ ಸೇರಿದಂತೆ ಇನ್ನಿತರ ದೇಶಗಳಿಗೆ ಮನವಿ ಮಾಡಿದರು.

ಪೂರ್ತಿ ನೆರವು ಅನುಮಾನ: 'ಹಿಂದೆಂದಿಗಿಂತಲೂ ಹೆಚ್ಚು ಪರಾಕ್ರಮವಾಗಿ ದಾಳಿ ನಡೆಸುತ್ತಿರುವ ರಷ್ಯಾದ ಪಡೆಗಳನ್ನು ಹಿಮ್ಮೆಟ್ಟಿಸಲು ಪಾಶ್ಚಿಮಾತ್ಯ ದೇಶಗಳಿಂದ ಹೆಚ್ಚಿನ ನೆರವಿನ ಅಗತ್ಯವಿದೆ. ನಾವು ಅಪೇಕ್ಷಿಸಿದ ನೆರವು ಸಿಗಲಿದೆಯೇ ಇಲ್ಲವೊ ಎಂಬುದು ಗೊತ್ತಿಲ್ಲ. ಈ ಬಗ್ಗೆ ನನಗೆ ವಿಶ್ವಾಸವೇ ಇಲ್ಲ' ಎಂದು ವೊಲೊಡಿಮಿರ್ ಝೆಲನ್‌ಸ್ಕಿ ಹೇಳಿದ್ದಾರೆ.

ರಕ್ಷಣಾ ವ್ಯವಸ್ಥೆ ಧ್ವಂಸ: ಉಕ್ರೇನ್‌ನ ಡಿನಿಪ್ರೊ ಕೇಂದ್ರ ನಗರದ ದಕ್ಷಿಣ ಹೊರ ವಲಯದಲ್ಲಿದ್ದ ನಾಲ್ಕು ಎಸ್-300 ವಾಯು ರಕ್ಷಣಾ ಕ್ಷಿಪಣಿ ಲಾಂಚರ್‌ಗಳನ್ನು ಕ್ರೂಸ್ ಕ್ಷಿಪಣಿಗಳ ಮೂಲಕ ಹೊಡೆದುರುಳಿಸಿದ್ದಾಗಿ ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗರ್ ಕೊಣಶೇನ್‌ಕೋವ್ ಹೇಳಿದ್ದಾರೆ.

ಅವುಗಳನ್ನು ಇತ್ತೀಚೆಗೆ ಯುರೋಪ್ ದೇಶವೊಂದು ಉಕ್ರೇನ್‌ಗೆ ಪೂರೈಸಿತ್ತು ಎಂದಿದ್ದಾರೆ. ಅಲ್ಲದೆ, ಭಾನುವಾರದ ದಾಳಿಯಲ್ಲಿ ಉಕ್ರೇನ್‌ನ 25 ಪಡೆಗಳನ್ನು ಹೊಡೆದುರುಳಿಸಿರುವುದಾಗಿ ಅವರು ಇದೇ ವೇಳೆ ತಿಳಿಸಿದ್ದಾರೆ.

ಆದರೆ ಈ ಬೆಳವಣಿಗೆಗಳ ಬಗ್ಗೆ ಪ್ರತಿಕ್ರಿಯಿಸಿದ ಸ್ಲೊವೇಕಿಯಾ, ತಾನು ಉಕ್ರೇನ್‌ಗೆ ನೀಡಿದ್ದ ಕ್ಷಿಪಣಿ ವ್ಯವಸ್ಥೆಯನ್ನು ರಷ್ಯಾ ಧ್ವಂಸಗೊಳಿಸಿದ್ದಕ್ಕೆ ಸಾಕ್ಷಿ ಇಲ್ಲ ಎಂದು ತಿಳಿಸಿದೆ. ಪೂರ್ವದ ಡೊನ್‌ಬಾಸ್ ಪ್ರಾಂತ್ಯದಲ್ಲಿ ಉಕ್ರೇನ್ ವಿರೋಧಿ ನಿಲುವು ಹೊಂದಿದ ಉಕ್ರೇನ್‌ನ ಪ್ರತ್ಯೇಕತಾವಾದಿಗಳನ್ನು ಒಟ್ಟುಗೂಡಿಸಿಕೊಂಡು, ಉಕ್ರೇನ್ ವಿರುದ್ಧದ ದಾಳಿಯನ್ನು ರಷ್ಯಾ ಮತ್ತೆ ತೀವ್ರಗೊಳಿಸಿದೆ. ಅಲ್ಲದೆ ಈ ಭಾಗದಲ್ಲಿ ಸೈನ್ಯವನ್ನು ಮುನ್ನಡೆಸಲು ರಷ್ಯಾ ಯುದ್ಧದಲ್ಲಿ ನುರಿತ ಚೆಚನ್ ಬಂಡುಕೋರರನ್ನು ಹಾಗೂ ಅಧಿಕಾರಿ ಯೊಬ್ಬರನ್ನು ನೇಮಿಸಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಉಕ್ರೇನ್ ರಾಜಧಾನಿ ಕೀವ್‌ನ ರಸ್ತೆ ಬದಿ ಧ್ವಂಸಗೊಂಡಿದ್ದ ರಷ್ಯಾ ಟಾಂಕ್‌ಅನ್ನು ಸಿಬ್ಬಂದಿ ಪರಿಶೀಲಿಸಿದರು ಎಪಿ/ಪಿಟಿಐ ಚಿತ್ರ

ಉಗ್ರ ಪ್ರತಿರೋಧ

ಪೂರ್ವ ಭಾಗದ ಡೊನೆಟ್‌ಸ್ಕ್ ಮತ್ತು ಲುಹಾನ್‌ಸ್ಕ್ ಪ್ರದೇಶಗಳಲ್ಲಿ ಉಕ್ರೇನ್ ಕೆಚ್ಚೆದೆಯಿಂದ ಹೋರಾಡುತ್ತಿದೆ, ಇದರಿಂದ ರಷ್ಯಾದ ಹಲವು ಟ್ಯಾಂಕ್‌ಗಳು, ವಾಹನಗಳು ಮತ್ತು ಫಿರಂಗಿಗಳು ಧ್ವಂಸಗೊಂಡಿವೆ ಎಂದು ಬ್ರಿಟನ್‌ನ ರಕ್ಷಣಾ ಸಚಿವಾಲಯ ತಿಳಿಸಿದೆ.

ಮುಂದುವರಿದ ಸಂಕಷ್ಟ

ರಷ್ಯಾದಿಂದ ಹಾರ್ಕಿವ್‌ನಲ್ಲಿ ಶೆಲ್ ದಾಳಿ ಮುಂದುವರಿದಿದ್ದು, ಕನಿಷ್ಠ 11 ಮಂದಿ ಮೃತಪಟ್ಟಿದ್ದಾರೆ. ಮರಿಯುಪೋಲ್ ಮತ್ತು ಡಾನ್‌ಬಾಸ್ ಬಂದರಿನ ಮೇಲಿನ ತನ್ನ ಹಿಡಿತವನ್ನು ಬಿಗಿಗೊಳಿಸಿದೆ. ಮರಿಯುಪೋಲ್‌ನಲ್ಲಿ ಸಾವಿರಾರು ಮಂದಿ ಅನ್ನ, ನೀರಿಗಾಗಿ ಪರದಾಡುತ್ತಿದ್ದಾರೆ.

47ನೇ ದಿನದ ಬೆಳವಣಿಗೆಗಳು

- ಮುಂದಿನ ಸುತ್ತಿನ ಮಾತುಕತೆಗೂ ಮುಂಚಿತವಾಗಿ ಯಾವುದೇ ಕಾರಣಕ್ಕೂ ಉಕ್ರೇನ್ ಮೇಲಿನ ದಾಳಿಯನ್ನು ನಾವು ನಿಲ್ಲಿಸುವುದಿಲ್ಲ: ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್
- ಉಕ್ರೇನ್‌ನ ಪೂರ್ವ ಭಾಗದಲ್ಲಿ ರಷ್ಯಾ ನಡೆಸಲು ಉದ್ದೇಶಿಸಿದ ಭಾರಿ ದಾಳಿಯ ಪ್ರತಿರೋಧಕ್ಕೆ ಅಗತ್ಯವಿರುವ ಶಸ್ತ್ರಾಸ್ತ್ರಗಳನ್ನು ಜರ್ಮನಿ ತ್ವರಿತವಾಗಿ ಪೂರೈಸಬೇಕಿದೆ: ಜರ್ಮನಿ ಹಣಕಾಸು ಸಚಿವ ರಾಬರ್ಟ್ ಹಬೆಕ್
- ರಷ್ಯಾ ವಿರುದ್ಧದ ಹೋರಾಟಕ್ಕೆ ಅಗತ್ಯವಿರುವಷ್ಟು ಶಸ್ತ್ರಾಸ್ತ್ರಗಳನ್ನು ತ್ವರಿತವಾಗಿ ಪೂರೈಸಿ: ದಕ್ಷಿಣ ಕೊರಿಯಾ ಸಂಸದರನ್ನುದ್ದೇಶಿಸಿದ ವಿಡಿಯೊ ಸಂದೇಶದಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮನವಿ
- ರಷ್ಯಾದ ದಾಳಿಯಿಂದಾಗಿ ಉಕ್ರೇನ್‌ನ ಅರ್ಧ ಉದ್ಯಮಗಳು ಸ್ಥಗಿತಗೊಂಡಿವೆ. ಆಮದು ಮತ್ತು ರಫ್ತು ಬಂದ್ ಆಗಿದೆ. ವ್ಯಾಪಾರೋದ್ಯಮಕ್ಕೆ ಪೂರಕವಾಗಿದ್ದ ಮುಖ್ಯವಾದ ಮೂಲಭೂತ ಸೌಕರ್ಯಗಳು ಹಾನಿಗೀಡಾಗಿವೆ. ಇದರಿಂದ ಈ ವರ್ಷ ಉಕ್ರೇನ್ ಆರ್ಥಿಕತೆ ಶೇ 45.1ರಷ್ಟು ಕುಸಿತವಾಗಲಿದೆ: ವಿಶ್ವಬ್ಯಾಂಕ್ ಅಂದಾಜು
- ಉಕ್ರೇನ್‌ಗೆ ನೆರವಾಗುವುದಕ್ಕಾಗಿ ನ್ಯೂಜಿಲೆಂಡ್ ಒಂದು ಸೇನಾ ಸರಕು ಸಾಗಣೆ ವಿಮಾನ, 50 ಮಂದಿ ಸಿಬ್ಬಂದಿಯನ್ನು ಬ್ರಿಟನ್‌ಗೆ ಕಳುಹಿಸಲು ನಿರ್ಧರಿಸಿದೆ ಹಾಗೂ ಶಸ್ತ್ರಾಸ್ತ್ರ ಖರೀದಿಗಾಗಿ ಹಣಕಾಸಿನ ನೆರವನ್ನು ನೀಡಲು ಮುಂದಾಗಿದೆ. ಸದ್ಯ ಉಕ್ರೇನ್‌ಗೆ ರಸ್ತೆ ಮೂಲಕವೇ ವಿದೇಶಿ ನೆರವು ತಲುಪಬೇಕಿದ್ದು, ಹೀಗಾಗಿ ನ್ಯೂಜಿಲೆಂಡ್‌ನ ಸಹಾಯ ಬ್ರಿಟನ್ ಮೂಲಕ ಉಕ್ರೇನ್ ತಲುಪಲಿದೆ.
- ಪಶ್ಚಿಮ ಉಕ್ರೇನ್‌ನ ಹಾಶಿವ್ ಗ್ರಾಮದ ಕ್ರೈಸ್ತ ಸನ್ಯಾಸಿನಿಯರು ತಮ್ಮ ವಿಹಾರವನ್ನ ನಿರಾಶ್ರಿತರಿಗಾಗಿ ಮುಕ್ತಗೊಳಿಸಿದ್ದಾರೆ. ರಷ್ಯಾ-ಉಕ್ರೇನ್ ನಡುವಿನ ಯುದ್ಧದಿಂದಾಗಿ ಕುಟುಂಬಗಳಿಂದ ಬೇರ್ಪಟ್ಟ ಹತ್ತಾರು ಮಕ್ಕಳಿಗಾಗಿ ದೊಡ್ಡ ಉದ್ಯಾನವನ ಹಾಗೂ ನಿರಾಶ್ರಿತರಿಗೆ ಆಶ್ರಯ ನೀಡುವ ತಾಣವಾಗಿ ಮಾರ್ಪಟ್ಟಿದೆ.
- ಇಂಧನ ದಾಸ್ತಾನು ಸೇರಿದಂತೆ ನಮ್ಮ ಇನ್ನಿತರ ಗಡಿಗಳನ್ನು ಉಕ್ರೇನ್ ಗುರಿಯಾಗಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಉಕ್ರೇನ್ ನೊಂದಿಗೆ ಗಡಿ ಹಂಚಿಕೊಂಡ ಭಾಗಗಳಲ್ಲಿ ಹೆಚ್ಚಿನ ಭದ್ರತೆ ನಿಯೋಜನೆ: ರಷ್ಯಾ

ತಾಳ್ಮೆಯಿಂದಿರಿ: ಜನತೆಗೆ ಮಹಿಂದಾ ರಾಜಪಕ್ಸ ಸಲಹೆ

ಕೊಲಂಬೊ (ಎಎಫ್‌ಪಿ): ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಪ್ರತಿಭಟನೆಗಳು ತೀವ್ರಗೊಂಡಿದ್ದು, ಜನರು 'ತಾಳ್ಮೆ'ಯಿಂದ ಇರಬೇಕು ಎಂದು ಜನತೆಗೆ ಪ್ರಧಾನಿ ಮಹಿಂದಾ ರಾಜಪಕ್ಸ ಕರೆ ನೀಡಿದ್ದಾರೆ. ಈ ಮೂಲಕ ತಾವು ಅಧಿಕಾರದಿಂದ ಕೆಳಗೆ ಇಳಿಯುವುದಿಲ್ಲ ಎಂಬುದನ್ನು ಪರೋಕ್ಷವಾಗಿ ತಿಳಿಸಿದ್ದಾರೆ.

ಸೋಮವಾರ ಸಂಜೆ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಅವರು, ದೇಶವನ್ನು ತೀವ್ರ ಬಿಕ್ಕಟ್ಟಿನಿಂದ ಪಾರು ಮಾಡುವುದಕ್ಕೆ ಇನ್ನಷ್ಟು ಸಮಯ ಬೇಕಾಗಿದೆ, ಈ ಬಿಕ್ಕಟ್ಟನ್ನು ಎರಡು, ಮೂರು ದಿನಗಳಲ್ಲಿ ನಿಭಾಯಿಸಲು ಸಾಧ್ಯವಿಲ್ಲ, ಸಾಧ್ಯವಾದಷ್ಟು ಬೇಗ ಇದಕ್ಕೆ ಪರಿಹಾರ ಕಂಡುಕೊಳ್ಳುತ್ತೇವೆ' ಎಂದು ಹೇಳಿದ್ದಾರೆ.

ಪ್ರಧಾನಿ ಬದಲಿಸಿ: ಈ ಮಧ್ಯೆ, ಮಧ್ಯಂತರ ಸರ್ಕಾರವೊಂದನ್ನು ರಚಿಸುವ ಸಂಬಂಧ ಮೈತ್ರಿಕೂಟದ ಮೂವರು ಸದಸ್ಯರು ಪ್ರಸ್ತಾವ ಮುಂದಿಟ್ಟಿದ್ದು, ಪ್ರಧಾನಿಯನ್ನೂ ಬದಲಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಪ್ರಧಾನಿ ಮಹಿಂದಾ ರಾಜಪಕ್ಸ ಅವರನ್ನು ಬದಲಿಸಿ ನೂತನ ಪ್ರಧಾನಿಯನ್ನು ಆಯ್ಕೆ ಮಾಡಬೇಕು, ಪ್ರಮುಖ ನಿರ್ಧಾರ ಕೈಗೊಳ್ಳುವುದಕ್ಕಾಗಿ ಎಲ್ಲ ಪಕ್ಷಗಳನ್ನು ಒಳಗೊಂಡ ಸಮಿತಿಯನ್ನು ರಚಿಸಬೇಕು, ಕನಿಷ್ಠ ಸಂಖ್ಯೆಯಲ್ಲಿ ಸಂಪುಟ ಸಚಿವರು ಇರಬೇಕು' ಎಂಬ ಪ್ರಸ್ತಾವವನ್ನು ಮುಂದಿಡಲಾಗಿದೆ ಎಂದು ಜಾತಿಕಾ ಹೆಳ ಉರುಮಾಯ ಪಕ್ಷದ ಅಧ್ಯಕ್ಷ ಉದಯ ಗಮನ್‌ಪಿಲ ಹೇಳಿದ್ದಾರೆ.

'ಚುನಾವಣೆ ನಡೆಯುವುದಕ್ಕೆ ಮೊದಲಾಗಿ ಈ ಬದಲಾವಣೆ ಆಗಬೇಕು, ಆರ್ಥಿಕತೆಯನ್ನು ಮತ್ತೆ ಪುನಶ್ಚೇತನಗೊಳಿಸಲು ಇದು ಅಗತ್ಯ' ಎಂದು ಅವರು ಪ್ರತಿಪಾದಿಸಿದ್ದಾರೆ.

ಈ ಮಧ್ಯೆ, ಬಿಕ್ಕಟ್ಟು ಬಗೆಹರಿಸುವ ನಿಟ್ಟಿನಲ್ಲಿ ಮಧ್ಯಂತರ ಸರ್ಕಾರ ರಚಿಸುವ ಸಂಬಂಧ ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಪಕ್ಷೇತರ ಸಂಸದರ ನಡುವೆ ನಡೆದ ಮಾತುಕತೆ ಅಪೂರ್ಣಗೊಂಡಿದೆ.

ರಾಮನ ಅಸ್ತಿತ್ವ ಪ್ರಶ್ನಿಸಿದ ರಾಹುಲ್ ವಿರುದ್ಧ ಬಿಜೆಪಿ ವಾಗ್ದಾಳಿ

ನವದೆಹಲಿ(ಪಿಟಿಐ): ಶ್ರೀರಾಮನ ಅಸ್ತಿತ್ವದ ಬಗ್ಗೆ ಪ್ರಶ್ನೆ ಮಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಸೋಮವಾರ ತೀವ್ರ ವಾಗ್ದಾಳಿ ನಡೆಸಿದೆ. ಅಲ್ಲದೆ ರಾಜಕೀಯಕ್ಕಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ರಾಹುಲ್ ಗಾಂಧಿ ಅವರ ಹೇಳಿಕೆಗಳಿಂದಾಗಿ ದೇಶದಾದ್ಯಂತ ಶ್ರೀರಾಮ ನವಮಿಯ ಮೆರವಣಿಗೆಗಳ ಮೇಲೆ ಪರಿಣಾಮ ಬೀರಿದೆ ಎಂದು ಬಿಜೆಪಿ ದೂರಿದೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರು, 'ರಾಹುಲ್ ಗಾಂಧಿ ಅವರು ಚುನಾವಣೆ ಸಂದರ್ಭದ ಹಿಂದೂ ಆಗಿದ್ದಾರೆ' ಎಂದು ವ್ಯಂಗ್ಯವಾಡಿದರು. ಇತ್ತೀಚೆಗೆ ದಲಿತ ಯುವಕರ ಜೊತೆಗಿನ ಸಂವಾದದ ವೇಳೆ ರಾಹುಲ್ ಪುನರ್ ಜನ್ಮದ ಬಗ್ಗೆ ಪ್ರಶ್ನೆಯೆತ್ತಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಂಬಿತ್ ಅವರು, 'ರಾಮನ ಇರುವಿಕೆಯ ಪ್ರಶ್ನೆಗಳನ್ನು ಎತ್ತುವ ಮೂಲಕ ಕೆಲವು ನಾಯಕರು ಜನರನ್ನು ಕೆರಳಿಸುತ್ತಿದ್ದಾರೆ' ಎಂದರು.

ಆಹಾರದ ವಿಚಾರದಲ್ಲಿ ಎರಡು ಗುಂಪುಗಳ ನಡುವೆ ಸಂಘರ್ಷ: ಎಬಿವಿಪಿ ವಿರುದ್ಧ ಪ್ರಕರಣ ದಾಖಲು

ಹಿಂಸೆ ಸಹಿಸುವುದಿಲ್ಲ: ಜೆಎನ್‌ಯು ಎಚ್ಚರಿಕೆ

ನವದೆಹಲಿ (ಪಿಟಿಐ): ಸಂಸ್ಥೆಯ ಆವರಣದಲ್ಲಿ ಯಾವುದೇ ರೀತಿಯ ಹಿಂಸೆಯನ್ನು ಸಹಿಸಿಕೊಳ್ಳುವುದಿಲ್ಲ ಎಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಆಡಳಿತವು ಸೋಮವಾರ ಹೇಳಿದೆ. ವಿ.ವಿಯ ಶಾಂತಿ ಮತ್ತು ಸಾಮರಸ್ಯವನ್ನು ಹಾಳು ಮಾಡುವ ಘಟನೆಯಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದೆ.

ವಿಶ್ವವಿದ್ಯಾಲಯದ ಕಾವೇರಿ ಹಾಸ್ಟೆಲ್‌ನಲ್ಲಿ ಭಾನುವಾರ ರಾತ್ರಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಸಂಘರ್ಷ ನಡೆದಿತ್ತು. ಹಾಸ್ಟೆಲ್‌ನಲ್ಲಿ ರಾಮನವಮಿ ದಿನ ಮಾಂಸಾಹಾರ ಪೂರೈಕೆಗೆ ಸಂಬಂಧಿಸಿ ಈ ಸಂಘರ್ಷ ಏರ್ಪಟ್ಟಿತ್ತು.

ಪ್ರಕರಣ ದಾಖಲು: ಎಬಿವಿಪಿಯ ಸದಸ್ಯರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ), ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಫೆಡರೇಷನ್ (ಡಿಎಸ್‌ಎಫ್) ಮತ್ತು ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (ಎಐಎಸ್‌ಎ) ಸದಸ್ಯರು ಎಬಿವಿಪಿ ವಿರುದ್ಧ ದೂರು ನೀಡಿದ್ದಾರೆ ಎಂದು ಪೊಲೀಸ್ ಉಪ ಆಯುಕ್ತ ಮನೋಜ್ ಸಿ. ತಿಳಿಸಿದ್ದಾರೆ. ದೂರು ನೀಡುವುದಾಗಿ ಎಬಿವಿಪಿ ಸದಸ್ಯರೂ ಹೇಳಿದ್ದಾರೆ. ಆ ದೂರಿನ ಬಳಿಕ ಅಗತ್ಯ ಕಾನೂನು ಕ್ರಮ ಕೈಗೊಳ್ಳುವುದಾಗಿ ಅವರು ಹೇಳಿದ್ದಾರೆ.

ಆಹಾರದ ಹೇರಿಕೆ: ಎಐಎಸ್‌ಎ ಆರೋಪ

ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್‌ಗೆ (ಎಐಎಸ್‌ಎ) ಸೇರಿದ ಜೆಎನ್‌ಯುನ ಹಲವು ವಿದ್ಯಾರ್ಥಿಗಳು ದೆಹಲಿ ಪೊಲೀಸ್ ಕೇಂದ್ರ ಕಚೇರಿ ಸಮೀಪ ಸೋಮವಾರ ಪ್ರತಿಭಟನೆ ನಡೆಸಿದ್ದಾರೆ. ಎಬಿವಿಪಿ ಕಾರ್ಯಕರ್ತರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಎಬಿವಿಪಿಯ ಸದಸ್ಯರು ಹಿಂಸಾಚಾರಕ್ಕೆ ಇಳಿದಿದ್ದಾರೆ ಮತ್ತು ಅವರ ಆಹಾರದ ಆಯ್ಕೆಯನ್ನು ಇತರರ ಮೇಲೆ ಹೇರುತ್ತಿದ್ದಾರೆ ಎಂದು ಎಐಎಸ್‌ಎ ಆರೋಪಿಸಿದೆ.

ಪ್ರತಿಭಟನೆ ನಡೆಸಿದ ಕೆಲವು ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಎಐಎಸ್‌ಎ ಹೇಳಿದೆ. ಆದರೆ, ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

'ಪ್ರತಿಭಟನೆಗೆ ಜತೆಗೂಡಿದ್ದ ವಿದ್ಯಾರ್ಥಿನಿಯರನ್ನು ಎಳೆದಾಡಲಾಗಿದೆ. ಪುರುಷ ಸಿಬ್ಬಂದಿಯು ವಿದ್ಯಾರ್ಥಿನಿಯರ ಬಟ್ಟೆ ಎಳೆದಿದ್ದಾರೆ. ಪ್ರತಿಭಟನಕಾರರಲ್ಲಿ ಹಲವರು ಗಾಯಗೊಂಡಿದ್ದಾರೆ. ತುಘಲಕ್ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರತಿಭಟನಕಾರರನ್ನು ಇರಿಸಲಾಗಿದೆ' ಎಂದು ಎಐಎಸ್‌ಎ ಕಾರ್ಯಕರ್ತೆ ನೇಹಾ ಹೇಳಿದ್ದಾರೆ.

'ಎಬಿವಿಪಿ ಮತ್ತು ಆರ್‌ಎಸ್‌ಎಸ್ ಸೇರಿಕೊಂಡು ಗದ್ದಲ ಸೃಷ್ಟಿಸಿವೆ. ಆಹಾರದ ಹೆಸರಿನಲ್ಲಿ ಹಿಂಸೆಗೆ ಇಳಿದಿವೆ. ವಿಶ್ವವಿದ್ಯಾಲಯದ ಎಲ್ಲ 16 ಹಾಸ್ಟೆಲ್‌ಗಳಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿ ಆಹಾರ ಪೂರೈಸಲಾಗುತ್ತಿದೆ' ಎಂದು ವಿದ್ಯಾರ್ಥಿ ಸಂಘದ ಕೌನ್ಸಿಲರ್ ಅನಘಾ ಪ್ರದೀಪ್ ಹೇಳಿದ್ದಾರೆ.

ಮಾಂಸಾಹಾರ ತಯಾರಿಸಬಾರದು ಎಂದು ಎಬಿವಿಪಿ ಕಾರ್ಯಕರ್ತರು ತಾಕೀತು ಮಾಡಿದ ಕಾರಣಕ್ಕೆ ಭಾನುವಾರ ಸಸ್ಯಾಹಾರ ಮಾತ್ರ ಸಿದ್ಧಪಡಿಸಲಾಗಿತ್ತು. ಅದು 100 ಜನರಿಗೆ ಸಾಲುವಷ್ಟೇ ಇತ್ತು. ಹಾಸ್ಟೆಲ್‌ನಲ್ಲಿ ಒಟ್ಟು 400 ವಿದ್ಯಾರ್ಥಿಗಳಿದ್ದಾರೆ. ಈ ಬಗ್ಗೆ ಮಾತನಾಡಲು ವಾರ್ಡನ್ ಬಳಿಗೆ ವಿದ್ಯಾರ್ಥಿಗಳು ಹೋಗಿದ್ದರು. ಆಗ, ಎಬಿವಿಪಿ ಕಾರ್ಯಕರ್ತರು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾರೆ. ಹಲ್ಲೆಯ ವಿಡಿಯೊ ಚಿತ್ರೀಕರಣ ಮಾಡಿದ ವಿದ್ಯಾರ್ಥಿಗಳ ಮೊಬೈಲ್ ಕಿತ್ತುಕೊಂಡಿದ್ದಾರೆ. ಆದರೆ, ಭದ್ರತಾ ಸಿಬ್ಬಂದಿ ಅಥವಾ ವಾರ್ಡನ್ ಅದನ್ನು ನೋಡುತ್ತಾ ನಿಂತಿದ್ದರು ಎಂದು ಅನಘಾ ವಿವರಿಸಿದ್ದಾರೆ.



ಎಐಎಸ್‌ಎ ಕಾರ್ಯಕರ್ತೆಯೊಬ್ಬರನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆಯಲು ಭಾನುವಾರ ಯತ್ನಿಸಿದರು ಪಿಟಿಐ ಚಿತ್ರ

ರಾಮನವಮಿಗೆ ಅಡ್ಡಿ: ಎಬಿವಿಪಿ ಆಕ್ರೋಶ

ರಾಮನವಮಿ ಪೂಜೆಗೆ ಅಡ್ಡಿ ಮಾಡಲು ಎಡಪಂಥೀಯ ಒಲವಿನ ವಿದ್ಯಾರ್ಥಿಗಳು ಬಯಸಿದ್ದರು. ಮಾಂಸಾಹಾರದ ಬಗ್ಗೆ ವಿವಾದ ಸೃಷ್ಟಿಸಿ ವಿಭಜನಕಾರಿ ತಂತ್ರ ಅನುಸರಿಸಿದರು ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸೋಮವಾರ ಆರೋಪಿಸಿದೆ.

ಮಾಂಸಾಹಾರದ ವಿಚಾರದಲ್ಲಿ ಎಬಿವಿಪಿಗೆ ಯಾವುದೇ ಆಕ್ಷೇಪ ಇಲ್ಲ ಎಂದು ಎಬಿವಿಪಿಯ ಜೆಎನ್‌ಯು ಘಟಕದ ಅಧ್ಯಕ್ಷ ರೋಹಿತ್ ಕುಮಾರ್ ಹೇಳಿದ್ದಾರೆ.

ಕಾವೇರಿ ಹಾಸ್ಟೆಲ್ ಸಮಿತಿಯ ಸಭೆಯು ಏಳು ದಿನಗಳ ಹಿಂದೆ ನಡೆದಿತ್ತು. ರಾಮನವಮಿಯ ದಿನವಾದ ಭಾನುವಾರ ಹಾಸ್ಟೆಲ್‌ನಲ್ಲಿ ಮಾಂಸಾಹಾರ ಮಾಡುವುದು ಬೇಡ ಎಂದು ಆ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಗಿತ್ತು. ಮುಸ್ಲಿಂ ವಿದ್ಯಾರ್ಥಿಗಳು ಕೂಡ ಈ ನಿರ್ಧಾರವನ್ನು ಒಪ್ಪಿಕೊಂಡಿದ್ದರು ಎಂದು ಅವರು ಪ್ರತಿಪಾದಿಸಿದ್ದಾರೆ.

ಆದರೆ, ಇಂತಹ ಸಭೆ ನಡೆದೇ ಇಲ್ಲ ಎಂದು ಹಾಸ್ಟೆಲ್‌ನ ಕಾರ್ಯದರ್ಶಿ ರಾಖಿಬ್ ಹೇಳಿದ್ದಾರೆ.

'ವಾರ್ಡನ್ ಅವರಿಂದ ನನಗೆ ಶನಿವಾರ ಒಂದು ಸಂದೇಶ ಬಂತು. ಭಾನುವಾರ ಹಾಸ್ಟೆಲ್‌ನಲ್ಲಿ ಮಾಂಸಾಹಾರ ಪೂರೈಸಬಾರದು ಎಂದು ಅವರು ಹೇಳಿದರು. ಆದರೆ, ಅದನ್ನು ಲಿಖಿತವಾಗಿ ಕೊಡುವಂತೆ ನಾನು ಕೇಳಿದೆ. ಅವರು ಲಿಖಿತವಾಗಿ ಕೊಟ್ಟಿಲ್ಲ' ಎಂದು ರಾಖಿಬ್ ತಿಳಿಸಿದ್ದಾರೆ.

ಮೂರು ದಿನಗಳ ಹಿಂದೆ ರಾಮನವಮಿಯ ಪೋಸ್ಟರ್‌ಗಳನ್ನು ಹಂಚಿಕೊಳ್ಳಲಾಯಿತು. ಆಗ, ಪೂಜೆ ನಡೆಯುವ ಸ್ಥಳಕ್ಕೆ ಎಲುಬುಗಳನ್ನು ಎಸೆದು ಪೂಜೆಗೆ ಅಡ್ಡಿ ಮಾಡುವುದಾಗಿ ಎಡಪಂಥೀಯ ವಿದ್ಯಾರ್ಥಿಗಳು ಬೆದರಿಕೆ ಹಾಕಿದ್ದರು ಎಂದು ರೋಹಿತ್ ಹೇಳಿದ್ದಾರೆ.

'ಭಾನುವಾರ ಅಪರಾಹ್ನ 3.30ಕ್ಕೆ ಪೂಜೆ ಆರಂಭ ಆಗಬೇಕಿತ್ತು. ಈ ವಿದ್ಯಾರ್ಥಿಗಳ ಗುಂಪು ಪೂಜೆಗೆ ಅಡ್ಡಿಪಡಿಸಲು ಪ್ರಯತ್ನಿಸಿತು. ಆದರೆ, ಭಾರಿ ಸಂಖ್ಯೆಯಲ್ಲಿ ಇದ್ದ ಭಕ್ತರನ್ನು ನೋಡಿ ಹಿಂದಿರುಗಿತು. ರಾತ್ರಿ 8.30ಕ್ಕೆ ಕಲ್ಲು, ಬೆತ್ತ, ಲಾಠಿ ಹಿಡಿದುಕೊಂಡು ಬಂದರು ಎಂದು ರೋಹಿತ್ ಆರೋಪಿಸಿದ್ದಾರೆ.

ದ್ವೇಷ, ಹಿಂಸೆ ಮತ್ತು ಬಹಿಷ್ಕಾರವು ನಮ್ಮ ಪ್ರೀತಿಯ ದೇಶವನ್ನು ದುರ್ಬಲಗೊಳಿಸುತ್ತಿದೆ. ಭ್ರಾತೃತ್ವ, ಶಾಂತಿ ಮತ್ತು ಸಾಮರಸ್ಯದ ಇಟ್ಟಿಗೆಗಳ ಮೂಲಕ ಪ್ರಗತಿಯ ಹಾದಿಯನ್ನು ಕಟ್ಟಬೇಕಿದೆ
ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ

ಎಬಿವಿಪಿಯನ್ನು ಬಳಸಿಕೊಂಡು ಬಿಜೆಪಿ ಶೈಕ್ಷಣಿಕ ಸಂಸ್ಥೆಗಳನ್ನು ಕೋಮುವಾದಿಯಾಗಿಸುತ್ತಿದೆ. ವಿದ್ಯಾರ್ಥಿಗಳ ಮೇಲೆ ಬಲಪಂಥೀಯ ಸಿದ್ಧಾಂತ ಹೇರಲು ಎಬಿವಿಪಿ ಪ್ರಯತ್ನಿಸುತ್ತಿದೆ
ಮಹೇಶ್ ತಪಾಸೆ, ಎನ್‌ಸಿಪಿ ವಕ್ತಾರ

ಜೆಎನ್‌ಯು ಬಗ್ಗೆ ಆರ್‌ಎಸ್‌ಎಸ್ ರೂಪಿಸಿರುವ ಕಾರ್ಯತಂತ್ರವನ್ನು ಕೈಬಿಡಬೇಕು. ಜೆಎನ್‌ಯುನ ವಿಶಿಷ್ಟ ಲಕ್ಷಣವನ್ನು ಹಾಳು ಮಾಡುವುದೇ ಭಾನುವಾರದ ದಾಂದಲೆಯ ಉದ್ದೇಶ
ಬಿನೋಯ್ ವಿಶ್ವಂ, ಸಿಪಿಐ ಸಂಸದ

ರಾಮನವಮಿಯ ಪವಿತ್ರ ದಿನದಂದು ದೇಶದ ವಿವಿಧ ಭಾಗಗಳಲ್ಲಿ ದಾಳಿ ನಡೆದಿರುವುದು ದುರದೃಷ್ಟಕರ. ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇರುವಲ್ಲಿ ಅವರು ದಾಳಿ ನಡೆಸಿದ್ದಾರೆ
ಸುರೇಂದ್ರ ಜೈನ್, ವಿಶ್ವ ಹಿಂದೂ ಪರಿಷತ್‌ನ ಜಂಟಿ ಕಾರ್ಯದರ್ಶಿ

ವಿದ್ಯಾರ್ಥಿಗಳ ಮೇಲೆ ಹಲ್ಲೆ; ಇಬ್ಬರಿಗೆ ಗಾಯ

ಕೇಂದ್ರೀಯ ವಿ.ವಿ: ರಾಮನವಮಿ ಸಂಘರ್ಷ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಭಾನುವಾರ ಸಂಜೆ ವಿದ್ಯಾರ್ಥಿಗಳ ಮಧ್ಯೆ ಗಲಾಟೆ ನಡೆದಿದ್ದು, ಜೇವರ್ಗಿ ತಾಲ್ಲೂಕು ಶಖಾಪುರ ಗ್ರಾಮದ ವಿಶ್ವನಾಥ ದಿವಾಣ ಮತ್ತು ರಾಜಸ್ಥಾನದ ನರೇಂದ್ರಕುಮಾರ್ ಧರಿಯಾ ಎಂಬ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

'ವಿಶ್ವವಿದ್ಯಾಲಯದ ಆವರಣದಲ್ಲಿರುವ ಲಕ್ಷ್ಮಿ ಮಂದಿರದಲ್ಲಿ ನಾವು ರಾಮನವಮಿ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿದೆವು. ಈ ಕಾರಣಕ್ಕಾಗಿಯೇ ಎಡಪಂಥೀಯ ವಿಚಾರಧಾರೆಯ ವಿದ್ಯಾರ್ಥಿಗಳು ನಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಗಾಯಗೊಂಡಿರುವ ವಿಶ್ವನಾಥ ಆರೋಪಿಸಿದ್ದಾರೆ.

'ಗೂಂಡಾಗಿರಿ ಪ್ರದರ್ಶಿಸಿದ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ವಿ.ವಿ ಯಲ್ಲಿ ಹೆಚ್ಚಿರುವ ಎಡಪಂಥೀಯ ಚಟುವಟಿಕೆಗೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನವರು ವಿ.ವಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು. 'ದಲಿತ ವಿದ್ಯಾರ್ಥಿಯ ಮೇಲೆ ದಾಖಲಿಸಿರುವ ಸುಳ್ಳು ಪ್ರಕರಣ ಕೈಬಿಡಬೇಕು' ಎಂದು ಆಗ್ರಹಿಸಿ ದಲಿತ ಸಂಘಟನೆಯವರು ಪ್ರತಿಯಾಗಿ ಪ್ರತಿಭಟನೆ ನಡೆಸಿದರು. ಇದರಿಂದಾಗಿ ವಿಶ್ವವಿದ್ಯಾಲಯ ಆವರಣದಲ್ಲಿ ಇಡೀ ದಿನ ತ್ವೇಷಮಯ ವಾತಾವರಣ ನಿರ್ಮಾಣವಾಗಿತ್ತು.

'ವಿದ್ಯಾರ್ಥಿಗಳ ಮಧ್ಯೆ ಗಲಾಟೆ ನಡೆದಿದೆ. ಸಾದಿಕ್, ರಾಹುಲ್, ರಾಹುಲ್ ಆರ್ಯ ಹಾಗೂ ಇನ್ನಿಬ್ಬರ (ಹೆಸರು ಉಲ್ಲೇಖಿಸಿಲ್ಲ) ವಿರುದ್ಧ ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಪ್ರತಿಕ್ರಿಯಿಸಿದರು. ಕೊಲೆ ಯತ್ನ ಸೇರಿದಂತೆ ಹಲವು ಪ್ರಕರಣಗಳ ಅಡಿ ಪ್ರಕರಣ ದಾಖಲಾಗಿದೆ.

ಬೆದರಿಕೆ ಹಾಕಿದ್ದರು: 'ಎಬಿವಿಪಿ ಮತ್ತು ಆರ್‌ಎಸ್‌ಎಸ್ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಬಾರದು ಎಂದು ಇವರು ಈ ಮೊದಲಿನಿಂದಲೂ ನಮಗೆ ಬೆದರಿಕೆ ಹಾಕುತ್ತಿದ್ದರು. ನಾವು ರಾಮನವಮಿ ಅಂಗವಾಗಿ ಪೂಜೆ ಸಲ್ಲಿಸಿದ ಕಾರಣಕ್ಕಾಗಿಯೇ ನಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ. ಆಂಧ್ರಪ್ರದೇಶದ ಸಾದಿಕ್ ಎಂಬಿಎ ಓದುತ್ತಿದ್ದು, ರಾಹುಲ್ ಪಿಎಚ್‌.ಡಿ ಸಂಶೋಧನಾ ವಿದ್ಯಾರ್ಥಿಯಾಗಿದ್ದಾರೆ. ಇವರು ನನ್ನನ್ನು ಅಪಹರಿಸಲು ಮತ್ತು ಬ್ಲೇಡ್‌ನಿಂದ ಕುತ್ತಿಗೆ ಕೊಯ್ಯಲು ಯತ್ನಿಸಿದರು. ಇವರನ್ನು ಕಾಲೇಜಿನಿಂದ ವಜಾಗೊಳಿಸಬೇಕು' ಎಂದು ಕಲಬುರಗಿಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿ ವಿಶ್ವನಾಥ ಒತ್ತಾಯಿಸಿದರು.

ತನಿಖಾ ಸಮಿತಿ: 'ವಿಶ್ವವಿದ್ಯಾಲಯದ ಶಿಸ್ತು ಸಮಿತಿಯಿಂದ ತನಿಖೆ ನಡೆಸುತ್ತಿದ್ದೇವೆ. ವರದಿ ಬಂದ ನಂತರ ತಪ್ಪಿತಸ್ಥ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದು ಕುಲಪತಿ ಪ್ರೊ.ಬಿ. ಸತ್ಯನಾರಾಯಣ ಅವರು ಹೇಳಿದರು.

ಮತಾಂಧತೆ: 'ದೆಹಲಿಯ ಜವಾಹರಲಾಲ್ ನೆಹರೂ ವಿ.ವಿಗೆ ಮಾತ್ರ ಸೀಮಿತವಾಗಿದ್ದ ಈ ಮತಾಂಧತೆ ಕಲಬುರಗಿಗೂ ಕಾಲಿಟ್ಟಿರುವುದು ದುರಂತ. ಎಡಪಂಥೀಯ ವಿಚಾರಧಾರೆಯ ಈ ಗುಂಪುಗಳ ಚಟುವಟಿಕೆ ಹತ್ತಿಕ್ಕಬೇಕು. ತಪ್ಪಿತಸ್ಥ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ವಜಾಗೊಳಿಸಿ, ಬಂಧಿಸಬೇಕು' ಎಂದು ಶ್ರೀರಾಮ ಸೇನೆಯ ಅಧ್ಯಕ್ಷ ಆಂದೋಲಾದ ಸಿದ್ದಲಿಂಗ ಸ್ವಾಮೀಜಿ ಆಗ್ರಹಿಸಿದರು.



ನೃತ್ಯದ ಸೊಬಗು

ಅಸ್ಸಾಂನ ಗುವಾಹಟಿಯಲ್ಲಿ ಆಯೋಜಿಸಿದ್ದ ಬಿಹು ನೃತ್ಯದ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶಿಸಿದರು

–ಪಿಟಿಐ ಚಿತ್ರ

ರಿಷಿ ಸುನಕ್ ಆಸ್ತಿ ಘೋಷಣೆಯ ಪರಿಶೀಲನೆಗೆ ಒಪ್ಪಿಗೆ

ಲಂಡನ್ (ರಾಯಿಟರ್ಸ್): ಬ್ರಿಟನ್ ಹಣಕಾಸು ಸಚಿವ ರಿಷಿ ಸುನಕ್ ಅವರ ಕುಟುಂಬದ ಆಸ್ತಿ ಮತ್ತು ಹಣಕಾಸಿಗೆ ಸಂಬಂಧಿಸಿದಂತೆ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ, ತಮ್ಮಿಂದ ಆಸ್ತಿ ಘೋಷಣೆ ನಿಯಮಗಳ ಉಲ್ಲಂಘನೆಯಾಗಿದೆಯೇ, ಇಲ್ಲವೋ ಎಂಬುದನ್ನು ನಿರ್ಧರಿಸಲು ಆಸ್ತಿ ಘೋಷಣೆಯನ್ನು ಪರಿಶೀಲಿಸಬೇಕೆಂದು ರಿಷಿ ಅವರ ಮನವಿಗೆ ಪ್ರಧಾನಿ ಬೋರಿಸ್ ಜಾನ್ಸನ್ ಸಮ್ಮತಿಸಿದ್ದಾರೆ ಎಂದು ಪ್ರಧಾನಿಯ ವಕ್ತಾರರು ತಿಳಿಸಿದ್ದಾರೆ.

ಈ ಬಗ್ಗೆ ಸುನಕ್ ಅವರು ಭಾನುವಾರ ಪ್ರಧಾನಿ ಜಾನ್ಸನ್ ಅವರಿಗೆ ಪತ್ರ ಬರೆದಿದ್ದರು. ಚಾನ್ಸಲರ್ ಮೂಲಕ ಬಂದ ಮನವಿಯನ್ನು ಪ್ರಧಾನಿ ಒಪ್ಪಿದ್ದಾರೆ. ಜಾನ್ಸನ್ ಅವರು ರಿಷಿ ಬಗ್ಗೆ ವಿಶ್ವಾಸ ಹೊಂದಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಫ್ರಾನ್ಸ್: ಹಕ್ಕಿ ಜ್ವರ ಹೆಚ್ಚಳ, 1.3 ಕೋಟಿ ಪಕ್ಷಿಗಳ ಸಂಹಾರ

ಪ್ಯಾರಿಸ್ (ರಾಯಿಟರ್ಸ್): ಫ್ರಾನ್ಸ್‌ನಲ್ಲಿ ವ್ಯಾಪಕವಾಗಿ ಹರಡುತ್ತಿರುವ ಹಕ್ಕಿಜ್ವರದ ತಡೆಗೆ ನವೆಂಬರ್ ಅಂತ್ಯದಿಂದ ಇದುವರೆಗೆ ಸುಮಾರು 1.3 ಕೋಟಿಗೂ ಹೆಚ್ಚು ಕೋಳಿ, ಪಕ್ಷಿಗಳನ್ನು ಕೊಲ್ಲಲಾಗಿದೆ ಎಂದು ಕೃಷಿ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಡು ಹಕ್ಕಿಗಳು ದೇಶಕ್ಕೆ ವಲಸೆ ಬಂದ ನಂತರದಲ್ಲಿ ಪಕ್ಷಿಗಳಲ್ಲಿ ವೈರಸ್ ಹರಡುವ ಪ್ರಮಾಣ ಹೆಚ್ಚಾಗಿದೆ.

ಫ್ರಾನ್ಸ್‌ನ ಅತಿದೊಡ್ಡ ಕೋಳಿ ಉತ್ಪಾದನಾ ಸ್ಥಳದ ಮೇಲೆ ವೈರಸ್ ದಾಳಿ ಇಟ್ಟ ನಂತರ ಸೋಂಕು ಹರಡುವಿಕೆಯನ್ನು ತಡೆಯಲು ಕೋಳಿ, ಪಕ್ಷಿಗಳ ಸಂಹಾರ ಹೆಚ್ಚಾಗಿದೆ.

ವೈರಸ್ ಕಾಣಿಸಿಕೊಂಡ ನವೆಂಬರ್ 26 ರಿಂದ ಏಪ್ರಿಲ್ 8 ರವರೆಗೆ ಕೃಷಿ ಪ್ರದೇಶಗಳಲ್ಲಿ 1,230 ಹಕ್ಕಿಜ್ವರ ಪ್ರಕರಣಗಳು ದಾಖಲಾಗಿವೆ. 8 ದಿನಗಳಲ್ಲಿ ಸೋಂಕಿನ ಪ್ರಮಾಣ ಶೇ 10 ರಷ್ಟು ಹೆಚ್ಚಾಗಿದೆ ಎಂದು ಕೃಷಿ ಸಚಿವಾಲಯ ಹೇಳಿದೆ.

ಕಾಶ್ಮೀರ ವಿಷಯ ಪ್ರಸ್ತಾಪಿಸಿದ ಶಾಹಬಾಝ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಧಾನಿಯಾಗಿ ಸೋಮವಾರ ಆಯ್ಕೆಯಾದ ಶಾಹಬಾಝ್ ಷರೀಫ್ ಅವರು ಮಾಡಿದ ತಮ್ಮ ಮೊದಲ ಭಾಷಣದಲ್ಲಿ ಕಾಶ್ಮೀರದ ವಿಶೇಷಾಧಿಕಾರ ರದ್ದತಿ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಕಾಶ್ಮೀರದ ಜನರಿಗೆ ರಾಜತಾಂತ್ರಿಕ, ನೈತಿಕ ಬೆಂಬಲ ನೀಡುವುದರ ಜೊತೆಗೆ ಎಲ್ಲ ಅಂತರರಾಷ್ಟ್ರೀಯ ವೇದಿಕೆಗಳಿಗೆ ಈ ವಿಚಾರವನ್ನು ಒಯ್ಯುವ ಭರವಸೆ ನೀಡಿದ್ದಾರೆ.

ಭಾರತದ ಜೊತೆ ಉತ್ತಮ ಸಂಬಂಧ ಹೊಂದುವ ಉದ್ದೇಶವಿದೆ ಎಂದಿರುವ ಶಾಹಬಾಝ್, ಕಾಶ್ಮೀರ ವಿಷಯ ಇತ್ಯರ್ಥವಾಗದಿದ್ದರೆ ಇದು ಸಾಧ್ಯವಾಗುವುದಿಲ್ಲ ಎಂದಿದ್ದಾರೆ.

'ನಮ್ಮ ದೇಶದ ಪಕ್ಕದಲ್ಲಿ ಯಾರಿರಬೇಕು ಎಂದು ಆಯ್ಕೆ ಮಾಡಲಾಗದು. ನಾವು ನೆರೆಹೊರೆಯವರಾಗಿ ಇರಬೇಕಷ್ಟೇ. ಆದರೆ, ದೇಶ ಉದಯವಾದ ದಿನದಿಂದಲೂ ಭಾರತದ ಜೊತೆಗೆ ಪಾಕಿಸ್ತಾನದ ಸಂಬಂಧ ಉತ್ತಮವಾಗಿಲ್ಲ. ಇದು ದುರದೃಷ್ಟಕರ ವಿಚಾರ' ಎಂದು ಶಾಹಬಾಝ್ ಹೇಳಿದ್ದಾರೆ.

ಕಾಶ್ಮೀರದ ವಿಶೇಷಾಧಿಕಾರ ರದ್ದುಪಡಿಸಿದ ಭಾರತದ ವಿರುದ್ಧ ಇಮ್ರಾನ್ ಖಾನ್ ಅವರು ಯಾವುದೇ ಗಂಭೀರ ರಾಜತಾಂತ್ರಿಕ ಯತ್ನಗಳನ್ನು ಮಾಡಲಿಲ್ಲ ಎಂದು ನೂತನ ಪ್ರಧಾನಿ ಆರೋಪಿಸಿದರು. 'ಬಲವಂತದ ಅತಿಕ್ರಮಣ ನಡೆದಾಗ ನಮ್ಮಿಂದ ಏನೂ ಮಾಡಲಾಗಲಿಲ್ಲ. ಕಾಶ್ಮೀರದ ಜನರ ರಕ್ತವು ರಸ್ತೆಗಳಲ್ಲಿ ಹರಿಯಿತು. ಕಣಿವೆಯು ರಕ್ತದಿಂದ ಕೆಂಪಾಯಿತು' ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರು ಗಡಿಭಾಗದ ಜನರ ಸಮಸ್ಯೆಗಳ ಇತ್ಯರ್ಥಕ್ಕೆ ಮುಂದಾಗಬೇಕು ಎಂದು ಶಾಹಬಾಝ್ ಕರೆ ನೀಡಿದರು.

ದಿನದ ವಿದ್ಯಮಾನ

- ಬ್ರಿಟನ್‌ನಲ್ಲಿ ಆಶ್ರಯ ಪಡೆದಿರುವ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು ಈದ್ ಹಬ್ಬದ ಬಳಿಕ ಮುಂದಿನ ತಿಂಗಳು ಪಾಕಿಸ್ತಾನಕ್ಕೆ ವಾಪಸಾಗಲಿದ್ದಾರೆ ಎಂದು ಪಿಎಂಎಲ್‌ಎನ್ ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ
- ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಮರಳಿ ಸ್ಥಾಪನೆಯಾಗಿದ್ದು, ಪಕ್ಕದ ದೇಶದ ರಾಜಕೀಯ ಸ್ಥಿರತೆ ಅತಿಮುಖ್ಯ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅಭಿಪ್ರಾಯಪಟ್ಟಿದ್ದಾರೆ
- ಶಾಹಬಾಝ್ ಹಾಗೂ ಅವರ ಪುತ್ರ ಹಂಝಾ ವಿರುದ್ಧದ ಅಕ್ರಮ ಹಣ ವರ್ಗಾವಣೆ ಪ್ರಕರಣದ ವಿಚಾರಣೆಯನ್ನು ಪಾಕಿಸ್ತಾನದ ಕೋರ್ಟ್ ಏ.27ಕ್ಕೆ ಮುಂದೂಡಿದೆ
- ತಮ್ಮ ಪದಚ್ಯುತಿಯಲ್ಲಿ ವಿದೇಶಿ ಸಂಚಿನ ಕೈವಾಡವಿದೆ ಎಂಬ ಇಮ್ರಾನ್ ಖಾನ್ ಆರೋಪ ಒಂದು ನಾಟಕ ಎಂದು ತಿರುಗೇಟು ನೀಡಿದ್ದಾರೆ
- ಸಂಸತ್ತಿನಲ್ಲಿ ಶಾಹಬಾಝ್ ಷರೀಫ್ ಅವರ ಹೆಸರಿನ ಬದಲು ಬಾಯಿತಪ್ಪಿ ನವಾಜ್ ಷರೀಫ್ ಹೆಸರು ಹೇಳಿದ ಸ್ಪೀಕರ್ ಸಿದ್ದಿಕ್; ಬಳಿಕ ಕ್ಷಮೆಯಾಚನೆ
- ಪಾಕಿಸ್ತಾನದಲ್ಲಿ ಆಗಿರುವ ಅಧಿಕಾರ ಬದಲಾವಣೆ ವಿದ್ಯಮಾನವು ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧದ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಚೀನಾ ಹೇಳಿದೆ

ಶಾಂತಿ ಬಯಸುತ್ತೇವೆ: ಮೋದಿ

ನವದೆಹಲಿ: ಪಾಕಿಸ್ತಾನದ ನೂತನ ಪ್ರಧಾನಿ ಶಾಹಬಾಝ್ ಷರೀಫ್ ಅವರಿಗೆ ಅಭಿನಂದನೆ ಸಲ್ಲಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಭಾರತವು ಶಾಂತಿ, ಸ್ಥಿರತೆಯನ್ನು ಬಯಸುತ್ತದೆ. ಇದರಿಂದ ಅಭಿವೃದ್ಧಿ ಸವಾಲುಗಳತ್ತ ಕೇಂದ್ರೀಕರಿಸಬಹುದು. ಅಲ್ಲದೆ ಜನರ ಯೋಗಕ್ಷೇಮ, ಸಮೃದ್ಧಿಯನ್ನು ಖಾತ್ರಿಪಡಿಸಿಕೊಳ್ಳಬಹುದು' ಎಂದಿದ್ದಾರೆ.

'ನಾವು ಭಾರತದೊಂದಿಗೆ ಉತ್ತಮ ಬಾಂಧವ್ಯವನ್ನು ಬಯಸುತ್ತೇವೆ. ಆದರೆ, ಕಾಶ್ಮೀರ ವಿವಾದವನ್ನು ಪರಿಹರಿಸುವವರೆಗೆ ಶಾಂತಿ ಸಾಧ್ಯವಿಲ್ಲ' ಎಂದು ಶಾಹಬಾಝ್ ಷರೀಫ್ ಹೇಳಿದ ಬೆನ್ನಲ್ಲೇ ಮೋದಿ ಈ ಪ್ರತಿಕ್ರಿಯೆ ನೀಡಿದ್ದಾರೆ.

'ಕಾಶ್ಮೀರದ ಜನರಿಗೆ ನೈತಿಕ ಬೆಂಬಲ ನೀಡುತ್ತೇವೆ. ಕಾಶ್ಮೀರದ ಜನರಿಗಾಗಿ ಪ್ರತಿ ವೇದಿಕೆಯಲ್ಲಿ ಧ್ವನಿ ಎತ್ತುತ್ತೇವೆ, ರಾಜತಾಂತ್ರಿಕ ಬೆಂಬಲವನ್ನು ನೀಡಲಾಗುವುದು' ಎಂದು ಹೇಳಿದ್ದಾರೆ.

ಬಾಲಕಿ ಸಾವು: ಟಿಎಂಸಿ ನಾಯಕನ ಮಗನ ಬಂಧನ

ನಾಡಿಯಾ: 'ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯ ಹಂಸಖಾಲಿ ಎಂಬಲ್ಲಿ ಇತ್ತೀಚೆಗೆ ಹುಟ್ಟುಹಬ್ಬ ಸಮಾರಂಭವೊಂದರಲ್ಲಿ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವ ಶಂಕೆಯಿದ್ದು ಸಂತ್ರಸ್ತೆ ಮೃತಪಟ್ಟಿದ್ದಾಳೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಮುಖ ಆರೋಪಿ ತೃಣಮೂಲ ಕಾಂಗ್ರೆಸ್ ಪಕ್ಷದ ಪಂಚಾಯಿತಿ ಸದಸ್ಯನ ಮಗ ಎಂದು ಬಾಲಕಿಯ ಕುಟುಂಬ ಆರೋಪಿಸಿದೆ. ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಘಟನೆ ನಡೆದು ನಾಲ್ಕು ದಿನಗಳ ಬಳಿಕ ಬಾಲಕಿಯ ಪೋಷಕರು ಶನಿವಾರ ಹಂಸಖಾಲಿ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ದೂರು ದಾಖಲಿಸಿದ್ದಾರೆ.

ಜಿಎಸ್‌ಟಿ ಮತ್ತು ಇಂಧನ ದರ ಏರಿಕೆಯ ಪರಿಣಾಮ ● ಏರುಮುಖದಲ್ಲಿರುವ ಪರಿಕರಗಳ ದರ

ಕಬ್ಬಿಣ, ಸಿಮೆಂಟ್ ಮತ್ತಷ್ಟು ದುಬಾರಿ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಬ್ಬಿಣ, ಸಿಮೆಂಟ್, ಸ್ಯಾನಿಟರಿ, ಬಣ್ಣ, ಎಲೆಕ್ಟ್ರಿಕಲ್, ಅಲ್ಯುಮಿನಿಯಂ ಸೇರಿ ಎಲ್ಲ ವಸ್ತುಗಳ ಬೆಲೆ ನಿರ್ಮಾಣ ಕ್ಷೇತ್ರವೇ ಬೆರಗಾಗುವಷ್ಟು ಗಗನಮುಖಿಯಾಗಿದೆ. ಇದು ಸ್ವಂತ ಮನೆ ಕಟ್ಟಿಕೊಳ್ಳುವ ಜನರ ಕನಸಿಗೆ ನುಚ್ಚುನೂರು ಮಾಡಿದ್ದರೆ, ಸರ್ಕಾರಿ ಕಾಮಗಾರಿಗಳ ಮೇಲೂ ಪರಿಣಾಮ ಬೀರಿದೆ.

ಜಿಎಸ್‌ಟಿ ಮತ್ತು ಇಂಧನ ದರ ಏರಿಕೆಯಿಂದ ನಿರ್ಮಾಣ ಪರಿಕರಗಳ ಬೆಲೆಯೂ ಏರುಗತಿಯಲ್ಲೇ ಮುಂದುವರಿದಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಳೆದ ನವೆಂಬರ್ ವೇಳೆಗೆ ಶೇ 40ರಿಂದ ಶೇ 50ರಷ್ಟು ಹೆಚ್ಚಳವಾಗಿದ್ದ ದರ, ಈಗ ಮತ್ತೆ ಶೇ 15ರಿಂದ ಶೇ 20ರಷ್ಟು ಹೆಚ್ಚಾಗಿದೆ.

ಸಾಧಾರಣ ದರ್ಜೆಯ 10 ಚದರ (ಒಂದು ಸಾವಿರ ಚದರ ಅಡಿ) ಮನೆ ನಿರ್ಮಾಣಕ್ಕೆ ಒಂದು ವರ್ಷದ ಹಿಂದೆ ₹15 ಲಕ್ಷ ಇದ್ದ ನಿರ್ಮಾಣ ವೆಚ್ಚ 2021ರ ನವೆಂಬರ್ ವೇಳೆಗೆ ₹20 ಲಕ್ಷ ದಾಟಿತ್ತು. ಈಗ ₹25 ಲಕ್ಷ ಮೀರಿದೆ. ಒಳಾಂಗಣಕ್ಕೆ ಬಳಸುವ ವಸ್ತುಗಳ (ಟೈಲ್ಸ್, ಸ್ಯಾನಿಟರಿ ಸಲಕರಣೆ, ಬಣ್ಣ, ಎಲೆಕ್ಟ್ರಿಕಲ್ ವಸ್ತುಗಳು ಇತ್ಯಾದಿ) ಬೆಲೆಯೂ ಏರಿದೆ. ಅವುಗಳ ಗುಣಮಟ್ಟಕ್ಕೆ ತಕ್ಕಂತೆ ವೆಚ್ಚ ಇನ್ನಷ್ಟು ಹೆಚ್ಚಾಗುತ್ತಿದೆ.

ಒಂದು ತಿಂಗಳ ಹಿಂದೆ ಟನ್‌ಗೆ ₹68 ಸಾವಿರದಿಂದ ₹78 ಸಾವಿರ ಇದ್ದ ಕಬ್ಬಿಣದ ಬೆಲೆ ಈಗ ₹90 ಸಾವಿರದಿಂದ ₹99 ಸಾವಿರ ತನಕ ಏರಿಕೆಯಾಗಿದೆ. ಸಿಮೆಂಟ್ ದರವೂ ಚೀಲಕ್ಕೆ ₹50 ಜಾಸ್ತಿಯಾಗಿದೆ.

ಕಬ್ಬಿಣ ಮತ್ತು ಸಿಮೆಂಟ್ ದರ ಏರಿಕೆ ಮನೆ ನಿರ್ಮಾಣ ಕೆಲಸ ಆರಂಭಿಸಿರುವವರ ಲೆಕ್ಕಾಚಾರವನ್ನೇ ತಲೆಕೆಳಗು ಮಾಡಿದೆ. ಕೂಡಿಟ್ಟ ಹಣ, ಬ್ಯಾಂಕ್ ಸಾಲ, ಕೈ ಸಾಲ ಎಲ್ಲವನ್ನೂ ಸೇರಿಸಿ ಯೋಜನೆ ರೂಪಿಸಿದ್ದರೂ ಕಾಮಗಾರಿ ಪೂರ್ಣವಾಗದೇ ಸ್ಥಗಿತಗೊಳಿಸುವಂತಾಗಿದೆ.

‘₹80 ಲಕ್ಷದಲ್ಲಿ ಮನೆ ನಿರ್ಮಾಣ ಪೂರ್ಣಗೊಳಿಸಲು ಯೋಜನೆ ರೂಪಿಸಿಕೊಂಡಿದ್ದೆವು. ಕಬ್ಬಿಣ, ಸಿಮೆಂಟ್ ದರ ಏರಿಕೆಯಿಂದಾಗಿ ಇನ್ನೂ ಶೇ 30ರಷ್ಟು ಕಾಮಗಾರಿ ಬಾಕಿ ಉಳಿಯುವ ಸಾಧ್ಯತೆ ಇದೆ’ ಎಂದು ಚನ್ನರಾಯಪಟ್ಟಣದಲ್ಲಿ ಮನೆ ನಿರ್ಮಾಣ ಮಾಡುತ್ತಿರುವ ಎನ್.ಆರ್. ಸಂತೋಷ್ ಹೇಳಿದರು.

‘ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿರ್ಮಾಣ ವೆಚ್ಚ ಶೇ 30ರಷ್ಟು ಹೆಚ್ಚಳವಾಗಿದೆ. ಮನೆ ಖರೀದಿಸುವ ಗ್ರಾಹಕರೊಂದಿಗೆ ನಾಲ್ಕೈದು ವರ್ಷಗಳ ಹಿಂದೆಯೇ ಒಪ್ಪಂದ ಮಾಡಿಕೊಳ್ಳಲಾಗಿದೆ. ಚದರ ಅಡಿಗೆ ₹2700 ಇದ್ದ ನಿರ್ಮಾಣ ವೆಚ್ಚ ಈಗ ₹ 3,500 ತನಕ ಹೆಚ್ಚಾಗಿದೆ. ಇಡೀ ಉದ್ಯಮ ಈಗ ಅಡಕತ್ತರಿಯಲ್ಲಿ ಸಿಲುಕಿದೆ’ ಎಂದು ರಿಯಲ್ ಎಸ್ಟೇಟ್ ಉದ್ಯಮಿಗಳು ಅಳಲು ತೋಡಿಕೊಳ್ಳುತ್ತಾರೆ.

ನಿರ್ಮಾಣ ಸಾಮಗ್ರಿಗಳ ಬೆಲೆ ಏರಿಕೆ ಆದಂತೆ ಅದಕ್ಕೆ ಜಿಎಸ್‌ಟಿ ದರ ಕೂಡ ಸೇರಿಕೊಂಡು ನಿರ್ಮಾಣ ವೆಚ್ಚ ದುಬಾರಿಯಾಗುತ್ತಿದೆ. ಉದಾಹರಣೆಗೆ ಒಂದು ಟನ್ ಕಬ್ಬಿಣಕ್ಕೆ ₹44 ಸಾವಿರ ಇದ್ದಾಗ ಶೇ 18ರಷ್ಟು ಅಂದರೆ ₹7,920 ಜಿಎಸ್‌ಟಿ ಸೇರ್ಪಡೆಯಾಗುತ್ತಿತ್ತು. ಸದ್ಯ ಅಷ್ಟೇ ಕಬ್ಬಿಣಕ್ಕೆ ₹90 ಸಾವಿರ ಇದ್ದು, ಅದಕ್ಕೆ ₹16,200 ಜಿಎಸ್‌ಟಿ ಸೇರಿಕೊಳ್ಳುತ್ತಿದೆ.

‘ಈ ಹೊರೆಯನ್ನು ಅನಿವಾರ್ಯವಾಗಿ ನಾವು ಗ್ರಾಹಕರ ಮೇಲೆಯೇ ಹಾಕಬೇಕಾಗುತ್ತದೆ. ಜಿಎಸ್‌ಟಿ ಹೊರೆಯನ್ನಾದರೂ ಸರ್ಕಾರ ಕಡಿಮೆ ಮಾಡಬೇಕು’ ಎಂದು ಕ್ರೆಡಾಯ್ ಬೆಂಗಳೂರು ಘಟಕದ ಭಾಸ್ಕರ್ ಟಿ.ನಾಗೇಂದ್ರಪ್ಪ ಅವರು ಒತ್ತಾಯಿಸಿದರು.

ಎಸ್‌ಆರ್ ದರಕ್ಕಿಂತ ದುಬಾರಿ

ನಿರ್ಮಾಣ ವೆಚ್ಚ ಹೆಚ್ಚಾಗಿರುವುದು ಸರ್ಕಾರಿ ಕಾಮಗಾರಿಗಳ ಮೇಲೂ ಪರಿಣಾಮ ಬೀರಿದೆ. ಕಟ್ಟಡ ನಿರ್ಮಾಣದ ಗುತ್ತಿಗೆ ಪಡೆದುಕೊಂಡಾಗ ಇದ್ದ ಸಿಮೆಂಟ್ ಮತ್ತು ಕಬ್ಬಿಣದ ದರ ಲೆಕ್ಕಾಚಾರ ಈಗ ಉಲ್ಟಾ ಆಗಿದೆ. ಸರ್ಕಾರ ನಿಗದಿಪಡಿಸಿರುವ ಎಸ್‌ಆರ್ ದರಕ್ಕಿಂತ ಬೆಲೆ ಹೆಚ್ಚಾಗಿದ್ದು, ಗುತ್ತಿಗೆದಾರರು ಕೈಚೆಲ್ಲಿ ಕುಳಿತಿದ್ದಾರೆ.

‘ಕೆ.ಜಿ ಕಬ್ಬಿಣಕ್ಕೆ ಎಸ್‌ಆರ್ ದರ ₹76 ಇದ್ದರೆ, ಮಾರುಕಟ್ಟೆಯಲ್ಲಿ ₹99ಕ್ಕೆ ಏರಿಕೆಯಾಗಿದೆ. ಚೀಲ ಸಿಮೆಂಟ್‌ಗೆ ಎಸ್‌ಆರ್ ದರ ₹290 ಇದ್ದರೆ, ಈಗ ಮಾರುಕಟ್ಟೆಯಲ್ಲಿ ₹500 ತನಕ ಇದೆ. ಈಗ ಕಾಮಗಾರಿ ಆರಂಭಿಸಿದರೆ ವೆಚ್ಚ ಜಾಸ್ತಿಯಾಗಿ ನಷ್ಟದಲ್ಲಿ ಸಿಲುಕುತ್ತೇವೆ. ಆದ್ದರಿಂದಲೇ ಕಾರ್ಯಾದೇಶ ದೊರೆತಿದ್ದರೂ, ಸುಮ್ಮನಿದ್ದೇವೆ. ದರ ಕಡಿಮೆಯಾಗದೆ ಕಾಮಗಾರಿ ಆರಂಭಿಸುವುದು ಕಷ್ಟ’ ಎಂದು ಗುತ್ತಿಗೆದಾರ ಪ್ರಮೋದ್ ಹೇಳುತ್ತಾರೆ.

‘ಕಬ್ಬಿಣ ಮತ್ತು ಸಿಮೆಂಟ್ ದರ ಕಡಿಮೆ ಆಗಬಹುದು ಎಂದು ಕಾಯುತ್ತಿದ್ದೇವೆ. ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಕೆಲಸ ನಡೆಯುತ್ತಿದೆ ಎಂದು ತೋರಿಸಲು ಕೆಲವೇ ಕೆಲವು ಕಾರ್ಮಿಕರನ್ನು ಸ್ಥಳದಲ್ಲಿ ಇರಿಸಿಕೊಂಡಿದ್ದೇವೆ. ಬಹುತೇಕ ಕಡೆ ಕಾಮಗಾರಿ ಸ್ಥಗಿತಗೊಳಿಸಿದ್ದೇವೆ’ ಎಂದು ಅವರು ವಿವರಿಸುತ್ತಾರೆ.

‘ಹೊಸದಾಗಿ ಗುತ್ತಿಗೆ ದೊರೆತಿದ್ದರೂ, ಕಾರ್ಯಾದೇಶ ಪಡೆದುಕೊಳ್ಳಲು ಹೋಗಿಲ್ಲ. ಕೆಲವರು ಕಾರ್ಯಾದೇಶ ಪಡೆದಿದ್ದರೂ ಕಾಮಗಾರಿ ಆರಂಭಿಸಿಲ್ಲ. ಈಗಿನ ದರದಲ್ಲಿ ಕಾಮಗಾರಿ ನಿರ್ವಹಿಸಿದರೆ ನಷ್ಟದ ಹೊರೆ ಮೈಮೇಲೆ ಬೀಳುವುದು ಖಚಿತ’ ಎಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ.

ಅಂಕಿ-ಅಂಶಗಳು

₹2,700 ಚದರ ಅಡಿಗೆ ವರ್ಷದ ಹಿಂದೆ ಇದ್ದ ನಿರ್ಮಾಣ ವೆಚ್ಚ

₹3,500 ಚದರ ಅಡಿಗೆ ಸದ್ಯ ಇರುವ ನಿರ್ಮಾಣ ವೆಚ್ಚ

₹76 ಕೆ.ಜಿ ಕಬ್ಬಿಣಕ್ಕೆ ಇರುವ ಎಸ್‌ಆರ್ ದರ

₹82-₹99 ಕೆ.ಜಿ ಕಬ್ಬಿಣಕ್ಕೆ ಇರುವ ಮಾರುಕಟ್ಟೆ ದರ

₹290 ಒಂದು ಚೀಲ ಸಿಮೆಂಟ್‌ಗೆ ಇರುವ ಎಸ್‌ಆರ್ ದರ

₹450-₹ 500 ಒಂದು ಚೀಲ ಸಿಮೆಂಟ್‌ಗೆ ಇರುವ ಮಾರುಕಟ್ಟೆ ದರ

‘ಕಾಂಗ್ರೆಸ್ ಅಧ್ಯಕ್ಷರಾಗಿ ರಾಹುಲ್ ಅಧಿಕಾರ ವಹಿಸಿಕೊಳ್ಳಲಿ’

ರಾಯಪುರ (ಪಿಟಿಐ): ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವಂತೆ ರಾಹುಲ್ ಗಾಂಧಿ ಅವರನ್ನು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಒತ್ತಾಯಿಸಿದ್ದಾರೆ. ಪಕ್ಷವು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅನುಸರಿಸುತ್ತದೆ. ಅಧ್ಯಕ್ಷ ಹುದ್ದೆಗೆ ಯಾರಾದರೂ ಸ್ಪರ್ಧಿಸಬಹುದು ಎಂದೂ ಅವರು ಪ್ರತಿಪಾದಿಸಿದ್ದಾರೆ.

ಸೋನಿಯಾ ಗಾಂಧಿ ಅವರು ಪ್ರಸ್ತುತ ಕಾಂಗ್ರೆಸ್‌ನ ಹಂಗಾಮಿ ಅಧ್ಯಕ್ಷರಾಗಿದ್ದಾರೆ. 2019 ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷವು ಸೋಲನ್ನು ಅನುಭವಿಸಿದ ನಂತರ ರಾಹುಲ್ ಗಾಂಧಿ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅದಾದ ನಂತರ ಸೋನಿಯಾ ಗಾಂಧಿ ಅವರು ಈ ಜವಾಬ್ದಾರಿಯನ್ನು ವಹಿಸಿಕೊಂಡರು.

‘ಕಾಂಗ್ರೆಸ್ ಪಕ್ಷದ ಸಾಂಸ್ಥಿಕ ಚುನಾವಣೆಗೆ ದಿನಾಂಕ ಘೋಷಣೆಯಾಗಿದ್ದು, ಸ್ಪರ್ಧಿಸಲು ಬಯಸುವವರು ನಾಮಪತ್ರ ಸಲ್ಲಿಸಲು ಮುಕ್ತರಾಗಿದ್ದಾರೆ. ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಬೇಕು ಎಂದು ನಾನು ಬಯಸುತ್ತೇನೆ’ ಎಂದು ಬಘೇಲ್ ‘ಪಿಟಿಐ’ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಪಕ್ಷದ ಸಂಘಟನೆಯನ್ನು ಪುನರುಜ್ಜೀವನಗೊಳಿಸಲು ಜಿ–23 (ಪಕ್ಷದ 23 ನಾಯಕರ ಗುಂಪು) ಒತ್ತಾಯ ಪಡಿಸಿರುವ ಹಿನ್ನೆಲೆಯಲ್ಲಿ ಅವರ ಹೇಳಿಕೆ ಬಂದಿದೆ. ಇತ್ತೀಚೆಗಷ್ಟೇ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ಪಕ್ಷದಲ್ಲಿ ಬದಲಾವಣೆ ತರಬೇಕು ಎಂಬ ಬೇಡಿಕೆಗಳು ಹೆಚ್ಚಿವೆ.

ಇತ್ತೀಚಿನ ವಿಧಾನಸಭಾ ಚುನಾವಣೆಯ ಸೋಲಿನ ಬಗ್ಗೆ ಮಾತನಾಡಿದ ಬಘೇಲ್, ‘ಚುನಾವಣೆಗಳು ಬರುತ್ತವೆ ಮತ್ತು ಹೋಗುತ್ತವೆ, ಅದರಿಂದ ನಾವು ನಿರಾಶೆಗೊಳ್ಳುವ ಅವಶ್ಯಕತೆ ಇಲ್ಲ, ಗುರಿಯೊಂದಿಗೆ ಮುನ್ನಡೆಯಬೇಕು’ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಸಾಂಸ್ಥಿಕ ಚುನಾವಣೆಗಳು ನಡೆಯುತ್ತಿರುವುದರಿಂದ, ಈ ವರ್ಷ ಆಗಸ್ಟ್ 21 ಮತ್ತು ಸೆಪ್ಟೆಂಬರ್ 20 ರ ನಡುವೆ ಪಕ್ಷವು ಹೊಸ ಅಧ್ಯಕ್ಷರನ್ನು ಹೊಂದಲಿದೆ. ಅಕ್ಟೋಬರ್‌ನಲ್ಲಿ ಸಿಡಬ್ಲ್ಯುಸಿಗೆ ಚುನಾವಣೆ ನಡೆಯಲಿದೆ.

ಕೆಪಿಎಸ್‌ಸಿ ಸದಸ್ಯರಾಗಿ ಗೀತಾ ನೇಮಕ



ಬಿ.ವಿ. ಗೀತಾ

ಬೆಂಗಳೂರು: ಬೆಳಗಾವಿ ವಿಭಾಗದ ಮಾಹಿತಿ ಆಯುಕ್ತರಾಗಿರುವ ಬಿ.ವಿ. ಗೀತಾ ಅವರು ಕೆಪಿಎಸ್‌ಸಿ ಸದಸ್ಯರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಶಿವಮೊಗ್ಗದವರಾದ ಗೀತಾ ಅವರ ಹೆಸರನ್ನು ಕೆಪಿಎಸ್‌ಸಿ ಸದಸ್ಯರಾಗಿ ನೇಮಿಸಿ ಸರ್ಕಾರ ಮಾಡಿದ್ದ ಶಿಫಾರಸಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮೋದನೆ ನೀಡಿದ್ದರು. ಗೀತಾ ನೇಮಕದ ಮೂಲಕ, ಲಿಂಗಾಯತ ಸಮುದಾಯದಿಂದ ಕೆಪಿಎಸ್‌ಸಿಗೆ ಮೂವರು ನೇಮಕಗೊಂಡಂತಾಗಿದೆ. ಉಳಿದ ಇಬ್ಬರು ಹಾಲಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಮತ್ತು ಸದಸ್ಯ ಡಾ. ನರೇಂದ್ರ ಅವರು.



ಬರಿದಾದ ಕೆರೆ ಸೂರ್ಯನ ಪ್ರಖರ ಶಾಖಕ್ಕೆ ಬರಿದಾಗುತ್ತಿರುವ ಕೆರೆಯೊಂದರಲ್ಲಿ ಉಳಿದಿರುವ ತುಸು ನೀರನ್ನೇ ತನ್ನ ಜಾನುವಾರುಗಳಿಗೆ ಕುಡಿಸಲು ಹೊರಟ ರೈತರೊಬ್ಬರು ಕೊಪ್ಪಳ ತಾಲ್ಲೂಕಿನ ಮೈನಳ್ಳಿ ಗ್ರಾಮದ ಸಮೀಪ ಕಂಡದ್ದು ಹೀಗೆ. ಬಿಸಿಲು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ಕೊಪ್ಪಳ ಜಿಲ್ಲೆಯಲ್ಲಿ ಸೋಮವಾರ 39 ಡಿಗ್ರಿ ತಾಪಮಾನ ದಾಖಲಾಗಿದೆ ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ವಾಯುಮಾಲಿನ್ಯ: ಹೆಚ್ಚಿದ ಅಕಾಲಿಕ ಸಾವು

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ಎಂಟು ಪ್ರಮುಖ ನಗರಗಳಲ್ಲಿ ವಾಯುಮಾಲಿನ್ಯದಿಂದಾಗಿ 2005 ರಿಂದ 2018ರ ಅವಧಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಜನರು ಅಕಾಲಿಕವಾಗಿ ಮೃತಪಟ್ಟಿದ್ದಾರೆ ಎಂದು ಅಧ್ಯಯನವೊಂದು ತಿಳಿಸಿದೆ.

ಬೆಂಗಳೂರು ಹೊರತುಪಡಿಸಿ ಮುಂಬೈ, ಕೋಲ್ಕತ್ತ, ಹೈದರಾಬಾದ್, ಚೆನ್ನೈ, ಸೂರತ್, ಪುಣೆ, ಅಹಮದಾಬಾದ್ ನಗರಗಳಲ್ಲಿ ಈ ಅಕಾಲಿಕ ಸಾವುಗಳು ಸಂಭವಿಸಿವೆ ಎಂದು ವರದಿ ಉಲ್ಲೇಖಿಸಿದೆ. ನಾಸಾ, ಯೂರೋಪಿಯನ್ ಬಾಹ್ಯಾಕಾಶ ಸಂಸ್ಥೆಯ (ಇಎಸ್‌ಎ) ಉಪಗ್ರಹಗಳಿಂದ ಪಡೆದ, ಏಷ್ಯಾ, ಆಫ್ರಿಕಾ, ಮಧ್ಯ ಏಷ್ಯಾದ 46 ನಗರಗಳಿಗೆ ಸಂಬಂಧಿಸಿದ ಅಂಕಿ ಅಂಶ ಆಧರಿಸಿದ ವರದಿ ‘ಸೈನ್ಸ್ ಅಡ್ವಾನ್ಸಸ್’ ನಿಯತಕಾಲಿಕದಲ್ಲಿ ಪ್ರಕಟಗೊಂಡಿದೆ.

ಬಾಂಗ್ಲಾದೇಶದ ಢಾಕಾದಲ್ಲಿ ಉಲ್ಲೇಖಿತ ಅವಧಿಯಲ್ಲಿ 24 ಸಾವಿರ ಅಕಾಲಿಕ ಸಾವುಗಳು ಸಂಭವಿಸಿದ್ದರೆ, ಬೆಂಗಳೂರು ಸೇರಿದಂತೆ ಭಾರತದ ಇತರೆ ನಗರಗಳಲ್ಲಿ ಸುಮಾರು 1 ಲಕ್ಷ ಅಕಾಲಿಕ ಸಾವುಗಳು ಸಂಭವಿಸಿವೆ.

ಆರೋಗ್ಯದ ಮೇಲೆ ನೇರ ಪರಿಣಾಮ ಬೀರಲಿರುವ ನೈಟ್ರೋಜನ್ ಡೈಆಕ್ಸೈಡ್ (ಎನ್‌ಒ2) ಪ್ರಮಾಣ ಶೇ 14ರಷ್ಟು, ವಿಕಿರಣ ಅಂಶಗಳು (ಪಿಎಂ2.5) ಶೇ 8ರಷ್ಟು ಪ್ರತಿ ವಾರ್ಷಿಕ ಸೇರುತ್ತಿವೆ ಎಂದು ಅಧ್ಯಯನ ನಡೆಸಿದ ಸಂಶೋಧಕರು ತಿಳಿಸಿದ್ದಾರೆ. ಅಲ್ಲದೆ, ಅಮೋನಿಯಾ ಪ್ರಮಾಣವು ವಾರ್ಷಿಕ ಶೇ 12ರಷ್ಟು ಹಾಗೂ ಸಾವಯವ ಧಾತುಗಳು ಪ್ರಮಾಣ ಶೇ 11ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

‘ಈ ವರದಿಯ ಫಲಿತಾಂಶಗಳು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಒತ್ತಾಸೆಯಾಗಬಹುದು’ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಕ್ಷಿಪ್ರಗತಿಯ ವಾಯುಮಾಲಿನ್ಯಕ್ಕೆ ಕೈಗಾರೀಕರಣ, ವಾಹನಗಳ ದಟ್ಟಣೆ, ತ್ಯಾಜ್ಯವನ್ನು ಸುಡುವಿಕೆ, ಇದ್ದಿಲು ಮತ್ತು ಉರುವಲುವಿನ ವ್ಯಾಪಕ ಬಳಕೆ, ಕೃಷಿ ತ್ಯಾಜ್ಯಗಳ ಸುಡುವಿಕೆಯು ವಾಯುಮಾಲಿನ್ಯಕ್ಕೆ ಕೊಡುಗೆ ನೀಡುತ್ತಿದೆ ಎಂದಿದ್ದಾರೆ.

ವರ್ಗಾವಣೆ ತಿದ್ದುಪಡಿ ಕಾಯ್ದೆಯ ನಿಯಮಗಳಿಗೆ ಆಕ್ಷೇಪ

ಉಪನ್ಯಾಸಕರ ವರ್ಗಾವಣೆಗೆ ಪಿಯು ‘ಫಲಿತಾಂಶ’ ಪರಿಗಣನೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆ ಸಂದರ್ಭದಲ್ಲಿ ಅವರು ಕರ್ತವ್ಯ ನಿರ್ವಹಿಸುವ ಕಾಲೇಜಿನ ದ್ವಿತೀಯ ಪಿಯುಸಿ ಫಲಿತಾಂಶ ಆಧರಿಸಿ ಹೆಚ್ಚುವರಿ ಅಂಕಗಳನ್ನು ಪರಿಗಣಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಅಂಶ ಅಳವಡಿಸಿ ‘ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಕಾಯ್ದೆ –2022’ಯ ನಿಯಮ ರೂಪಿಸಿ ಇಲಾಖೆ ಅಧಿಸೂಚನೆ ಹೊರಡಿಸಿದೆ. ನಿಯಮಗಳಿಗೆ ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿದೆ.

ಅಲ್ಲದೆ, ಉಪನ್ಯಾಸಕರು ಮತ್ತು ಪ್ರಾಂಶುಪಾಲರ ವರ್ಗಾವಣೆ ಪ್ರಮಾಣವನ್ನು ಶೇ 5ರಿಂದ ಈ ಬಾರಿ ಶೇ 10ಕ್ಕೆ ಹೆಚ್ಚಿಸಲಾಗಿದೆ. ಮಹಿಳೆ ಮತ್ತು ಪುರುಷ ಉದ್ಯೋಗಿಗಳನ್ನು ಸಮಾನವಾಗಿ ಪರಿಗಣಿಸಿ, ಸೇವಾ ಜ್ಯೇಷ್ಠತೆ ಆಧಾರದಲ್ಲಿ ವರ್ಗಾವಣೆ ಮಾಡಲು ನಿರ್ಧರಿಸಲಾಗಿದೆ.

ಕಾಯ್ದೆಗೆ ರೂಪಿಸಿದ ನಿಯಮಗಳ ಪ್ರಕಾರ, ಪ್ರಾಂಶುಪಾಲರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮತ್ತು ಉಪನ್ಯಾಸಕರು ಬೋಧನೆ ಮಾಡುವ ವಿಷಯಗಳಲ್ಲಿ ಹಿಂದಿನ ಮೂರು ವರ್ಷ ಶೇ 80ಕ್ಕಿಂತ ಹೆಚ್ಚು ಫಲಿತಾಂಶ ಬಂದಿದ್ದರೆ, ಅಂತಹ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರಿಗೆ ಹೆಚ್ಚುವರಿಯಾಗಿ 10 ಅಂಕಗಳನ್ನು ನೀಡಲಾಗುತ್ತದೆ. ಕಾಲೇಜು ಶೇ 60ರಿಂದ ಶೇ 80ರಷ್ಟು ಫಲಿತಾಂಶ ಪಡೆದಿದ್ದರೆ 5 ಅಂಕಗಳನ್ನು ನೀಡಲಾಗುತ್ತದೆ.

ಕಾಯ್ದೆಗೆ ತಿದ್ದುಪಡಿಯ ಮೂಲಕ, ಮೊದಲ ಬಾರಿಗೆ ಉಪನ್ಯಾಸಕರು–ವಿದ್ಯಾರ್ಥಿಗಳ ಅನುಪಾತವನ್ನು ನಿಗದಿಪಡಿಸಲಾಗಿದೆ. ಅದರ ಪ್ರಕಾರ, 160 ವಿದ್ಯಾರ್ಥಿಗಳಿಗೆ ಒಬ್ಬ ಉಪನ್ಯಾಸಕರನ್ನು (160:1) ನಿಗದಿಪಡಿಸಲಾಗಿದೆ. ಪ್ರಾಯೋಗಿಕ ವಿಷಯಗಳಿಗೆ ವಿದ್ಯಾರ್ಥಿ–ಶಿಕ್ಷಕರ ಅನುಪಾತ 320:1 ಆಗಿದೆ.

ಮೊದಲ ಬಾರಿಗೆ ಕಾಲೇಜುಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿ, ಕಾಲೇಜುಗಳನ್ನು ‘ಎ’, ‘ಬಿ’, ‘ಸಿ’ ಎಂದು ವಲಯ ವಿಂಗಡಿಸಲಾಗಿದೆ. 100 ವಿದ್ಯಾರ್ಥಿಗಳಿರುವ ಕಾಲೇಜು ‘ಎ’ ವಲಯ, 101ರಿಂದ 500 ವಿದ್ಯಾರ್ಥಿಗಳಿರುವ ಕಾಲೇಜು ‘ಬಿ’, 1,001ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಕಾಲೇಜನ್ನು ‘ಸಿ’ ವಲಯ ಎಂದು ವಿಂಗಡಿಸಲಾಗಿದೆ.

ತಿದ್ದುಪಡಿಗೂ ಮೊದಲಿನ ಕಾಯ್ದೆಯಲ್ಲಿ, ಮಹಾನಗರಪಾಲಿಕೆ ವ್ಯಾಪ್ತಿಯ ಕಾಲೇಜುಗಳನ್ನು ‘ಎ’, ನಗರಪಾಲಿಕೆ, ನಗರಸಭೆ ವ್ಯಾಪ್ತಿಯಲ್ಲಿರುವ ಕಾಲೇಜನ್ನು ‘ಬಿ’, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕಾಲೇಜುಗಳನ್ನು ‘ಸಿ’ ವಲಯಗಳೆಂದು ಗುರುತಿಸಿ, ಸೇವಾ ಜ್ಯೇಷ್ಠತೆಯ ಆಧಾರದಲ್ಲಿ ವರ್ಗಾವಣೆ ಮಾಡಲಾಗುತ್ತಿತ್ತು. ‘ಸಿ’ ವಲಯದಲ್ಲಿ ಕೆಲಸ ಮಾಡುವ ಉಪನ್ಯಾಸಕರಿಗೆ 3 ಹೆಚ್ಚುವರಿ ಅಂಕಗಳನ್ನು ನೀಡಲಾಗುತ್ತಿತ್ತು. ಹೊಸ ನಿಯಮದ ಪ್ರಕಾರ, ಇನ್ನು ಮುಂದೆ 100ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಕಾಲೇಜು ‘ಸಿ’ ವಲಯಕ್ಕೆ ಸೇರುತ್ತದೆ.

‘ಅವೈಜ್ಞಾನಿಕ ನಿಯಮ’

‘ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವರ್ಗಾವಣೆಗೆ ಕಾಲೇಜುಗಳ ದ್ವಿತೀಯ ಪಿಯುಸಿ ಫಲಿತಾಂಶ ಪರಿಗಣಿಸುವ ಪದ್ಧತಿ ಅವೈಜ್ಞಾನಿಕ’ ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ.

ಶಾಂಘೈನಲ್ಲಿ 2ನೇ ವಾರಕ್ಕೆ ಕಾಲಿಟ್ಟ ಕಠಿಣ ಲಾಕ್‌ಡೌನ್

ಕೋವಿಡ್: ಆಹಾರ, ಔಷಧಕ್ಕಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಶಾಂಘೈ(ರಾಯಿಟರ್ಸ್, ಎಪಿ): ಕೋವಿಡ್ ಉಲ್ಬಣದಿಂದಾಗಿ ಲಾಕ್‌ಡೌನ್ ಎರಡನೇ ವಾರಕ್ಕೆ ಕಾಲಿಟ್ಟಿರುವ ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ಜನರು ಹಸಿವಿನಿಂದ ಕಂಗೆಟ್ಟಿದ್ದು, ಆಹಾರ ಪದಾರ್ಥಗಳು, ದಿನಸಿ, ನೀರು ಮತ್ತು ಔಷಧಿ ಸೇರಿದಂತೆ ಅಗತ್ಯ ವಸ್ತುಗಳು ಪೂರೈಕೆಯಾಗದೆ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಹಾರ ಪೂರೈಸುವಂತೆ ಜನರು ಮನೆಯ ಬಾಲ್ಕನಿಗಳಿಂದ ರಕ್ಷಣಾ ಕವಚ ಧರಿಸಿ ಓಡಾಡುತ್ತಿರುವ ಪೊಲೀಸರನ್ನು ಮನೆಯ ಕಿಟಕಿಗಳ ಮೂಲಕ ಕೋರುತ್ತಿದ್ದಾರೆ. ಕೆಲವರು ಹೂವಿನ ಕುಂಡಗಳನ್ನು ಹಾಗೂ ಪಾತ್ರೆಗಳನ್ನು ತೂರಿ ಪ್ರತಿಭಟಿಸಿದ್ದಾರೆ. ಜನರು ಆಕ್ರೋಶದಿಂದ ಕೂಗುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ನಿತ್ಯ ಸರಾಸರಿ 25 ಸಾವಿರ ಪ್ರಕರಣ: ಓಮೈಕ್ರಾನ್ ಕೊರೊನಾ ವೈರಸ್ ಸೋಂಕು ಪ್ರಕರಣಗಳು ಏರಿಕೆಯಾದ ಬೆನ್ನಲ್ಲೇ ಏಪ್ರಿಲ್ ಆರಂಭದಿಂದಲೇ ನಗರದಾದ್ಯಂತ ಲಾಕ್‌ಡೌನ್ ಜಾರಿಯಲ್ಲಿದೆ. ಈ ನಡುವೆ ಸೋಮವಾರ 25,173 ಹೊಸ ಪ್ರಕರಣಗಳು ದಾಖಲಾಗಿವೆ. ಚೀನಾದಲ್ಲಿ ದಿನನಿತ್ಯ ಸರಾಸರಿ 20ರಿಂದ 25 ಸಾವಿರ ಪ್ರಕರಣಗಳುವರದಿಯಾಗುತ್ತಿವೆ.ಆಹಾರಪೂರೈಕೆಯಲ್ಲಿ ಸಮಸ್ಯೆಯಾಗಿದ್ದು, ಮತ್ತಷ್ಟು ಸ್ವಯಂಸೇವಕರನ್ನು ನಿಯೋಜಿಸುವ ಮೂಲಕ ಸರಕು ವಿತರಣೆಗೆ ವ್ಯವಸ್ಥೆ ಮಾಡುವುದಾಗಿ ಶಾಂಘೈನ ಅಧಿಕಾರಿಗಳು ತಿಳಿಸಿರುವುದಾಗಿ ವರದಿ ಆಗಿದೆ.

ಲಾಕ್ ಡೌನ್ ತೆರವಿಗೆ ಚಿಂತನೆ

ಲಾಕ್‌ಡೌನ್‌ಗೆ ಜನರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಶಾಂಘೈನಲ್ಲಿ ಸೋಂಕು ಹೆಚ್ಚಾಗುತ್ತಿರುವ ನಡುವೆಯೂ ಸಹ ಕೆಲ ಪ್ರದೇಶಗಳಲ್ಲಿ ಲಾಕ್‌ಡೌನ್ ತೆರವುಗೊಳಿಸಲು ಚೀನಾ ನಿರ್ಧರಿಸಿದೆ. ಪ್ರತಿ ಜಿಲ್ಲೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಹಂತ ಹಂತವಾಗಿ ಲಾಕ್‌ಡೌನ್ ತೆರವುಗೊಳಿಸಲಾಗುವುದು. ಶೀಘ್ರವೇ ಇದರ ಪಟ್ಟಿ ಪ್ರಕಟಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗ್ವಾಂಗ್‌ಜೌ ನಗರಕ್ಕೆ ಪ್ರವೇಶ ನಿರ್ಬಂಧ: ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಮುಖ ಉತ್ಪಾದನಾ ವಲಯ ಎಂದು ಗುರುತಿಸಿಕೊಂಡಿರುವ ಗ್ವಾಂಗ್‌ಜೌ ನಗರಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಹಾಂಗ್‌ಕಾಂಗ್ ಉತ್ತರಕ್ಕಿರುವ ಈ ಮಹಾನಗರದಲ್ಲಿ 1.8 ಕೋಟಿ ಜನರು ವಾಸವಿದ್ದಾರೆ. ಸೋಮವಾರ ಕೇವಲ 27 ಹೊಸ ಪ್ರಕರಣ ವರದಿಯಾಗಿದ್ದರೂ ಎಚ್ಚರಿಕೆ ವಹಿಸಲಾಗಿದೆ.

ಗಾಜಿಯಾಬಾದ್: ಮೂವರಿಗೆ ಸೋಂಕು

ಗಾಜಿಯಾಬಾದ್: ಇಲ್ಲಿನ ಎರಡು ಖಾಸಗಿ ಶಾಲೆಗಳ ಮೂವರು ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿರುವ ಕಾರಣ ಮುಂಜಾಗ್ರತಾ ಕ್ರಮವಾಗಿ ಇಂದಿರಾಪುರದಲ್ಲಿರುವ ಶಾಲೆಯೊಂದನ್ನು ಮೂರು ದಿನಗಳ ಕಾಲ ಮುಚ್ಚುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಕನ್ನಡ ಕಡ್ಡಾಯಕ್ಕೆ ತಡೆಯಾಜ್ಞೆ: ತೆರವಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪದವಿ ಕಾಲೇಜುಗಳಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಯುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಹಿಂದಿನ ಯಾವುದೇ ಸರ್ಕಾರ ಕನ್ನಡ ಕಡ್ಡಾಯಗೊಳಿಸುವ ಪ್ರಯತ್ನ ಮಾಡಿರಲಿಲ್ಲ. ನಮ್ಮ ಸರ್ಕಾರ ಆ ಕೆಲಸವನ್ನು ಮಾಡಿದೆ. ಸರ್ಕಾರದ ನಿಲುವನ್ನು ಸಮರ್ಥಿಸಲು ನ್ಯಾಯಾಲಯದಲ್ಲಿ ಪ್ರಬಲ ವಾದ ಮಂಡಿಸಲಾಗುವುದು’ ಎಂದರು.

ರಾಮನವಮಿ ಆಚರಣೆ ವೇಳೆ ಹಿಂಸಾಚಾರ

ಜಾರ್ಖಂಡ್‌ನಲ್ಲಿ ವ್ಯಕ್ತಿ ಸಾವು, ಮಧ್ಯಪ್ರದೇಶದಲ್ಲಿ ಕರ್ಫ್ಯೂ, 77 ಬಂಧನ

ಭೋಪಾಲ್/ಅಹಮದಾಬಾದ್/ರಾಂಚಿ (ಪಿಟಿಐ): ದೇಶದ ಕೆಲವೆಡೆ ಭಾನುವಾರದ ರಾಮ ನವಮಿ ಉತ್ಸವದ ವೇಳೆ ಹಿಂಸಾಚಾರ ನಡೆದಿದೆ.

ಜಾರ್ಖಂಡ್‌ನ ಲೋಹಾರ್‌ದಾಗಾದಲ್ಲಿ ನಡೆದ ಗಲಭೆಯಲ್ಲಿ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದು 12 ಜನರು ಗಾಯಗೊಂಡಿದ್ದಾರೆ. ಮಧ್ಯಪ್ರದೇಶದ ಖಾರ್ಗೋನ್ ನಗರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು ಗಲಭೆ ಸಂಬಂಧ 77 ಜನರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ಹೇಳಿದ್ದಾರೆ. ಭಾನುವಾರ ರಾಮ ನವಮಿ ಉತ್ಸವದ ದಿನ ನಡೆದ ಗಲಾಟೆಯಲ್ಲಿ ಆರು ಪೊಲೀಸರು ಸೇರಿ 24 ಜನರಿಗೆ ಗಾಯಗಳಾಗಿವೆ. ಖಾರ್ಗೋನ್‌ನ ಪೊಲೀಸ್ ಅಧೀಕ್ಷಕ ಸಿದ್ಧಾರ್ಥ್ ಚೌಧರಿ ಅವರಿಗೆ ಗುಂಡು ತಗುಲಿದೆ.

ಗುಜರಾತ್‌ನ ಆನಂದ್ ಜಿಲ್ಲೆಯ ಖಂಬತ್ ಪ್ರದೇಶದಲ್ಲಿ ರಾಮ ನವಮಿ ವೇಳೆ ನಡೆದ ಹಿಂಸಾಚಾರ ಮತ್ತು ಕಲ್ಲು ತೂರಾಟ ಸಂಬಂಧ ಒಂಬತ್ತು ಜನರನ್ನು ಬಂಧಿಸಲಾಗಿದೆ. ಇಲ್ಲಿ ಭಾನುವಾರ ಒಬ್ಬ ವ್ಯಕ್ತಿ ಸಾವಿಗೀಡಾಗಿದ್ದರು. ಸಬರ್ಕಾಂತ ಜಿಲ್ಲೆಯ ಹಿಮ್ಮತ್‌ನಗರ ಪಟ್ಟಣದಲ್ಲಿ ಸೆಕ್ಷನ್ 144 ಜಾರಿಗೊಳಿಸಲಾಗಿದೆ.

ಮಧ್ಯಪ್ರದೇಶದ ಬರ್ವಾನಿ ಜಿಲ್ಲೆಯ ಸೆಂಧ್ವ ಪಟ್ಟಣದಲ್ಲಿ ರಾಮನ ಉತ್ಸವ ಆಚರಣೆ ವೇಳೆ ನಡೆದ ಕಲ್ಲು ತೂರಾಟದಲ್ಲಿ ಪೊಲೀಸ್ ಠಾಣಾ ಉಸ್ತುವಾರಿ ಮತ್ತು ಇತರ ಐದು ಜನರು ಗಾಯಗೊಂಡಿದ್ದಾರೆ. ಗಲಭೆ ಈಗ ತಹಬದಿಗೆ ಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಂತಹ ಘಟನೆಗಳು ನಡೆಯದಂತೆ ಎಚ್ಚರವಹಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದೂ ಹೇಳಿದ್ದಾರೆ.

ಲೋಹಾರ್‌ದಾಗಾದಲ್ಲಿಯ ಹಿರ್ಹಿ ಗ್ರಾಮದಲ್ಲಿ ಭಾನುವಾರ ಸಂಜೆ ರಾಮ ನವಮಿ ಆಚರಣೆ ಸಂಬಂಧ ಎರಡು ಸಮುದಾಯಗಳ ನಡುವೆ ಘರ್ಷಣೆ ಉಂಟಾಗಿದೆ. ಈ ವೇಳೆ ನಡೆದ ಕಲ್ಲು ತೂರಾಟದಲ್ಲಿ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದು 12 ಜನರಿಗೆ ಗಾಯಗಳಾಗಿವೆ ಎಂದು ಜಿಲ್ಲೆಯ ಅಧಿಕಾರಿಗಳು ಹೇಳಿದರು.

ಮಧ್ಯಪ್ರದೇಶದ ಖಾರ್ಗೋನ್ ನಗರದಲ್ಲಿ ನಡೆದ ಗಲಭೆ ನಿಯಂತ್ರಣಕ್ಕೆ ಪೊಲೀಸರು ಅಶ್ರುವಾಯು ಸಿಡಿಸಿ ಪರಿಸ್ಥಿತಿ ತಹಬದಿಗೆ ತಂದಿದ್ದಾರೆ. ಗಲಭೆಕೋರರಿಗೆ ಶಿಕ್ಷೆ ವಿಧಿಸಲಾಗುವುದು ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಭರವಸೆ ನೀಡಿದ್ದಾರೆ.

ಹಿಂಸಾಚಾರಕ್ಕೆ ಅಲ್ಪಸಂಖ್ಯಾತ ಸಮುದಾಯದ ಮುಖಂಡರು ಮತ್ತು ಎಡ ಪಂಕ್ತೀಯ ನಾಯಕರು ಜವಾಬ್ದಾರರು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆರೋಪಿಸಿದೆ.

‘8 ದೇಶಗಳ ಪ್ರಯಾಣಿಕರ ಮೇಲೆ ನಿಗಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚೀನಾ, ದಕ್ಷಿಣ ಕೊರಿಯಾ, ಹಾಂಗ್‌ಕಾಂಗ್ ಸೇರಿದಂತೆ ಎಂಟು ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಈ ದೇಶಗಳಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರ ಮೇಲೆ ಹೆಚ್ಚಿನ ನಿಗಾ ಇರಿಸಲು ತೀರ್ಮಾನಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸೋಮವಾರ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ’ಎಂಟು ದೇಶಗಳಲ್ಲಿ ಕೋವಿಡ್ ನಾಲ್ಕನೇ ಅಲೆ ಕಂಡು ಬಂದಿದೆ. ದಕ್ಷಿಣ ಕೊರಿಯಾ, ಹಾಂಗ್‌ಕಾಂಗ್, ಚೀನಾ ದೇಶಗಳಲ್ಲಿ ಸಾಂಕ್ರಾಮಿಕದ ತೀವ್ರತೆ ಹೆಚ್ಚಿದೆ. ಜರ್ಮನಿ, ಬ್ರಿಟನ್‌ನಲ್ಲೂ ಸೋಂಕು ಹೆಚ್ಚಾಗಿದೆ. ಇಲ್ಲಿ 'ಎಕ್ಸ್‌ಇ' ಹಾಗೂ 'ಎಂಇ' ಎನ್ನುವ ಹೊಸ ವೈರಾಣು ತಳಿಗಳು ಕಂಡು ಬಂದಿವೆ' ಎಂದು ವಿವರಿಸಿದರು.

‘ಈ ಎಂಟು ದೇಶಗಳಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರನ್ನು ಥರ್ಮಲ್ ತಪಾಸಣೆ ಮಾಡಲಾಗುವುದು ಮತ್ತು ಅವರು ಮನೆಗೆ ತೆರಳಿದ ಬಳಿಕ ಒಂದು ವಾರ ಅಥವಾ ಹತ್ತು ದಿನ ಟೆಲಿ ಮಾನಿಟರಿಂಗ್ ಮಾಡಲಾಗುವುದು. ದೇಶದಲ್ಲಿ ನವದೆಹಲಿ ಹಾಗೂ ಹರಿಯಾಣದಲ್ಲೂ ಕೋವಿಡ್ ಪ್ರಕರಣಗಳು ಹೆಚ್ಚಾಗಿವೆ’ ಎಂದು ತಿಳಿಸಿದರು.

‘ಲಸಿಕೆ ಪಡೆಯದ ಮಕ್ಕಳ ಮೇಲೆ ವಿಶೇಷ ನಿಗಾ ಇರಿಸಬೇಕು ಮತ್ತು ಸುಮಾರು 5 ಸಾವಿರ ಮಕ್ಕಳ ಪರೀಕ್ಷೆ ಮಾಡಬೇಕು ಎನ್ನುವ ಬಗ್ಗೆ ತಜ್ಞರು ಸಲಹೆ ನೀಡಿದ್ದಾರೆ’ ಎಂದರು.

ಲಸಿಕೆ ಬಗ್ಗೆ ನಿರ್ಲಕ್ಷ್ಯ ಬೇಡ: ‘ಇತ್ತೀಚೆಗೆ ಅನೇಕರು ಮಾಸ್ಕ್ ಬಳಸುತ್ತಿಲ್ಲ. ಜೂನ್-ಜುಲೈ ತಿಂಗಳಲ್ಲಿ ನಾಲ್ಕನೇ ಅಲೆ ಬರಬಹುದು ಎಂದು ಕಾನ್ಪುರ ಐಐಟಿ ತಿಳಿಸಿದೆ. ಆದ್ದರಿಂದ, ಮಾಸ್ಕ್ ಧರಿಸಬೇಕು. ಇದಲ್ಲದೆ, 60 ವರ್ಷ ಮೇಲ್ಪಟ್ಟವರು ಮೂರನೇ ಡೋಸ್ ಪಡೆಯಬೇಕಿದೆ. ಇನ್ನೂ 32 ಲಕ್ಷ ಮಂದಿ ಎರಡನೇ ಡೋಸ್ ಪಡೆಯಬೇಕಿದೆ. ಹೀಗಾಗಿ, ಲಸಿಕೆ ಪಡೆಯಲು ನಿರ್ಲಕ್ಷ್ಯ ಬೇಡ’ ಎಂದರು.

‘ದುಬಾರಿ ಶುಲ್ಕ ವಸೂಲಿಗೆ ಕಡಿವಾಣ’

‘ಕೆಲ ಆಸ್ಪತ್ರೆಗಳಲ್ಲಿ ಮನಸೋ ಇಚ್ಛೆ ದರ ನಿಗದಿ ಮಾಡಿರುವ ಬಗ್ಗೆ ದೂರುಗಳು ಬಂದಿವೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಮಿತಿ ರಚಿಸಲಾಗುವುದು’ ಎಂದು ತಿಳಿಸಿದರು.

‘ಸಿಟಿ ಸ್ಕ್ಯಾನ್, ಎಂಆರ್‌ಐ, ಸ್ಕ್ಯಾನಿಂಗ್ ಮೊದಲಾದವುಗಳ ದರ ಪರಿಷ್ಕರಣೆಯನ್ನು ಮಾಡಲಾಗಿದೆ. ಇದನ್ನು ಕೋವಿಡ್ ಸಂದರ್ಭದಲ್ಲಿ ಮಾತ್ರ ಎಂದು ಪರಿಗಣಿಸದೆ ಹೊಸ ದರವೆಂದು ಪರಿಗಣಿಸಬೇಕೆಂದು ಆಯುಕ್ತರಿಗೆ ಸೂಚಿಸಲಾಗಿದೆ. ಇದಕ್ಕಿಂತ ಹೆಚ್ಚು ದರ ವಸೂಲಿ ಮಾಡುವಂತಿಲ್ಲ. ನಿಯಮ ಉಲ್ಲಂಘಿಸಿದರೆ ಆಸ್ಪತ್ರೆಯ ಪರವಾನಗಿ ರದ್ದು ಮಾಡುವ ಅಧಿಕಾರ ಸರ್ಕಾರಕ್ಕಿದೆ’ ಎಂದು ಎಚ್ಚರಿಕೆ ನೀಡಿದರು.

ಜಾರ್ಖಂಡ್ ತ್ರಿಕೂಟ ಪರ್ವತದಲ್ಲಿ ತಾಂತ್ರಿಕ ದೋಷದಿಂದ ಎರಡು ಕಾರುಗಳ ಡಿಕ್ಕಿ

ರೋಪ್‌ವೇ ಅವಘಡ: ಇಬ್ಬರ ಸಾವು

ದೇವಘರ್ (ಪಿಟಿಐ): ಜಾರ್ಖಂಡ್‌ನ ದೇವಘರ್ ಜಿಲ್ಲೆಯಲ್ಲಿ ತಾಂತ್ರಿಕ ದೋಷದಿಂದಾಗಿ 2 ರೋಪ್ ವೇ ಕಾರುಗಳ ಮಧ್ಯೆ ಸಂಭವಿಸಿದ ಡಿಕ್ಕಿಯಿಂದ ಮಹಿಳೆ ಸೇರಿದಂತೆ ಇಬ್ಬರು ಪ್ರವಾಸಿಗರು ಮೃತಪಟ್ಟಿದ್ದಾರೆ.

ರೋಪ್ ವೇ ಕಾರುಗಳಲ್ಲಿ ಇನ್ನೂ 15 ಮಂದಿ ಸಿಕ್ಕಿದ್ದು, ಒಂದು ರಾತ್ರಿ ಅತಂತ್ರವಾಗಿ ಕಳೆಯುವ ಸ್ಥಿತಿ ನಿರ್ಮಾಣವಾಗಿದೆ. ರಕ್ಷಣಾ ಕಾರ್ಯದ ವೇಳೆ ಹೆಲಿಕಾಪ್ಟರ್‌ನಿಂದ ಬಿದ್ದು ವ್ಯಕ್ತಿಯೊಬ್ಬರು ಮೃತಪಟ್ಟರು. ಬಿದ್ದು ಗಾಯಗೊಂಡಿದ್ದ ಮಹಿಳೆ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

24 ಗಂಟೆಗಿಂತ ಹೆಚ್ಚು ಕಾಲ ಸಾವು-ಬದುಕಿನ ಮಧ್ಯೆ ಹೋರಾಡುತ್ತಿದ್ದ 32 ಜನರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ಮಾಹಿತಿ ನೀಡಿದ್ದಾರೆ. ಉಳಿದವರ ರಕ್ಷಣೆಗಾಗಿ ಕಾರ್ಯಾಚರಣೆಮುಂದುವರಿಸಲಾಗಿದೆ.

ಆದರೆ, ಸ್ಥಳೀಯ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು, ಘಟನೆಯಲ್ಲಿ ಮೂವರು ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ.

ಇಲ್ಲಿನ ಬಾಬಾ ವೈದ್ಯನಾಥ ದೇಗುಲ ಬಳಿಯ ತ್ರಿಕೂಟ ಪರ್ವತದಲ್ಲಿ ಭಾನುವಾರ ಸಂಜೆ ದುರಂತ ಸಂಭವಿಸಿತ್ತು. ರೋಪ್ ವೇನಲ್ಲಿ ಸಿಲುಕಿರುವ ಸುಮಾರು 15ಕ್ಕೂ ಮಂದಿಗೆ, ನೀರು ಪೂರೈಸಲಾಗುತ್ತಿದೆ ಎಂದು ದೇವಘರ್ ಜಿಲ್ಲಾಧಿಕಾರಿ ಮಂಜುನಾಥ್ ಭಜಂತ್ರಿ ತಿಳಿಸಿದರು.

ರೋಪ್‌ವೇ ಅನ್ನು ಖಾಸಗಿ ಕಂಪನಿ ನಿರ್ವಹಿಸುತ್ತಿತ್ತು ಎಂದೂ ಮಾಹಿತಿ ನೀಡಿದ್ದಾರೆ.

ಪ್ರಾಥಮಿಕ ವರದಿಗಳ ಪ್ರಕಾರ ತಾಂತ್ರಿಕ ಸಮಸ್ಯೆ ಘಟನೆಗೆ ಕಾರಣ ಎಂಬುದು ತಿಳಿದುಬಂದಿದೆ. ಸದ್ಯ ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದೆ. ಬಳಿಕ ವಿಸ್ತೃತ ತನಿಖೆ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಕಣಿವೆಯಲ್ಲಿ ಸುಮಾರು 1,500 ಅಡಿ ಎತ್ತರದಲ್ಲಿ ಜೋಲಾಡುತ್ತಿರುವ ಎರಡು ಕೇಬಲ್ ಕಾರ್‌ಗಳಲ್ಲಿ 15 ಜನರು ಸಿಕ್ಕಿಬಿದ್ದಿದ್ದಾರೆ. ಸೂರ್ಯಾಸ್ತದ ನಂತರ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು, ಮಂಗಳವಾರ ಬೆಳಿಗ್ಗೆ ಮುಂದುವರಿಯಲಿದೆ.

ಜಾರ್ಖಂಡ್ ಪ್ರವಾಸೋದ್ಯಮ ಇಲಾಖೆ ಮಾಹಿತಿ ಪ್ರಕಾರ, ತ್ರಿಕೂಟ ರೋಪ್‌ವೇ ಬಾಬಾ ವೈದ್ಯನಾಥ ದೇಗುಲದಿಂದ ಸುಮಾರು 20 ಕಿ.ಮೀ. ದೂರದಲ್ಲಿದ್ದು, 766 ಮೀಟರ್ ಉದ್ದವಿದೆ. ಪರ್ವತವು 392 ಮೀಟರ್ ಎತ್ತರವಿದೆ.

ಈ ಘಟನೆ ಬಗ್ಗೆ ಶೋಕ ವ್ಯಕ್ತಪಡಿಸಿರುವ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು, ಈ ಘಟನೆಯಲ್ಲಿ ಸಿಲುಕಿದವರ ರಕ್ಷಣೆಗಾಗಿ ತ್ವರಿತ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಈ ಘಟನೆ ಬಗ್ಗೆ ರಾಜ್ಯ ಸರ್ಕಾರ ಹೆಚ್ಚಿನ ನಿಗಾ ವಹಿಸಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ರೋಪ್‌ವೇ ಕಾರುಗಳಲ್ಲಿ ಸಿಲುಕಿರುವ 15 ಮಂದಿ
- ಮಂಗಳವಾರ ರಕ್ಷಣಾ ಕಾರ್ಯ ಮುಂದುವರಿಕೆ



ರೋಪ್ ವೇ ಅವಘಡದಲ್ಲಿ ಸಿಲುಕಿದವರ ರಕ್ಷಣೆಗೆ ಕಾರ್ಯಾಚರಣೆ ನಡೆದಿರುವುದು. ಕಾರ್ಯಾಚರಣೆ ವೇಳೆ ರಕ್ಷಣೆಗೆ ಹೆಲಿಕಾಪ್ಟರ್ ಹತ್ತುವ ಯತ್ನದಲ್ಲಿ ವ್ಯಕ್ತಿಯೊಬ್ಬರು ಆಯತಪ್ಪಿ ಬಿದ್ದು ಮೃತಪಟ್ಟರು. –ಪಿಟಿಐ ಚಿತ್ರ

ಮಾರಾಟದ ಒತ್ತಡಕ್ಕೆ ಒಳಗಾದ ಬ್ಯಾಂಕಿಂಗ್ ಷೇರುಗಳು

ಸೆನ್ಸೆಕ್ಸ್ 483 ಅಂಶ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಐ.ಟಿ. ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸೂಚ್ಯಂಕಗಳು ಇಳಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 483 ಅಂಶ ಇಳಿಕೆ ಕಂಡು 58,964 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 109 ಅಂಶ ಇಳಿಕೆಯಾಗಿ 17,675 ಅಂಶಗಳಿಗೆ ತಲುಪಿತು.

'ಯುರೋಪ್‌ನ ಕೇಂದ್ರ ಬ್ಯಾಂಕ್‌ನ ಸಭೆ, ಅಮೆರಿಕದ ಹಣದುಬ್ಬರದ ಮಾಹಿತಿ ಮತ್ತು ದೇಶದಲ್ಲಿ ನಾಲ್ಕನೇ ತ್ರೈಮಾಸಿಕದ ಕಾರ್ಪೊರೇಟ್ ಫಲಿತಾಂಶದ ಬಗ್ಗೆ ಮಾರುಕಟ್ಟೆಯು ಎಚ್ಚರಿಕೆಯಿಂದ ವರ್ತಿಸಿತು. ಕಾರ್ಪೊರೇಟ್ ವಲಯದ ಫಲಿತಾಂಶವು ಇಳಿಮುಖವಾಗಿರುವ ನಿರೀಕ್ಷೆಯಿಂದಾಗಿ ಐ.ಟಿ. ವಲಯದ ಷೇರುಗಳ ಮೌಲ್ಯ ಇಳಿಕೆ ಕಂಡಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅತ್ಯಂತ ತ್ವರಿತಗತಿಯಲ್ಲಿ ಬಡ್ಡಿದರ ಹೆಚ್ಚಿಸುವುದಾಗಿ ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಹೇಳಿದೆ. ಇದರ ಜೊತೆಗೆ ಹಣದುಬ್ಬರ ಏರಿಕೆಯ ಆತಂಕ ಮತ್ತು ಜಾಗತಿಕ ಬಿಕ್ಕಟ್ಟಿನಿಂದಾಗಿ ಜಾಗತಿಕ ಮಾರುಕಟ್ಟೆಗಳ ವಹಿವಾಟು ಇಳಿಕೆ ಕಾಣುವಂತಾಯಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 2.38ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 103.4 ಡಾಲರ್‌ಗಳಿಗೆ ತಲುಪಿತು.

ಟಾಪ್ 10 ಕಂಪನಿಗಳ ಬಂಡವಾಳ ಮೌಲ್ಯ

ಕಂಪನಿ	ಮೌಲ್ಯ (₹ ಲಕ್ಷ ಕೋಟಿಗಳಲ್ಲಿ)
ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್	₹17.65
ಟಿಸಿಎಸ್	₹13.52
ಎಚ್‌ಡಿಎಫ್‌ಸಿ ಬ್ಯಾಂಕ್	₹8.29
ಇನ್ಫೊಸಿಸ್	₹7.43
ಐಸಿಐಸಿಐ ಬ್ಯಾಂಕ್	₹5.27
ಎಚ್‌ಯುಎಲ್	₹5.08
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	₹4.59
ಬಜಾಜ್ ಫೈನಾನ್ಸ್	₹4.44
ಎಚ್‌ಡಿಎಫ್‌ಸಿ	₹4.39
ಅದಾನಿ ಗ್ರೀನ್ ಎನರ್ಜಿ	₹4.22

ಅದಾನಿ ಗ್ರೀನ್: 10ನೇ ಮೌಲ್ಯಯುತ ಕಂಪನಿ

ನವದೆಹಲಿ: ಮಾರುಕಟ್ಟೆ ಬಂಡವಾಳದ ಲೆಕ್ಕಾಚಾರದಲ್ಲಿ ದೇಶದ ಟಾಪ್–10 ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ ಹತ್ತನೆಯ ಸ್ಥಾನವನ್ನು ಅದಾನಿ ಗ್ರೀನ್ ಕಂಪನಿ ಸೋಮವಾರ ಪಡೆದಿದೆ.

ಸೋಮವಾರದ ಕಂಪನಿಯ ಒಟ್ಟಾರೆ ಬಂಡವಾಳ ಮೌಲ್ಯ ₹ 4.22 ಲಕ್ಷ ಕೋಟಿ ದಾಟುವ ಮೂಲಕ ಭಾರ್ತಿ ಏರ್‌ಟೆಲ್ ಅನ್ನು ಹಿಂದಿಕ್ಕಿದೆ. ಭಾರ್ತಿ ಏರ್‌ಟೆಲ್ ಬಂಡವಾಳ ಮೌಲ್ಯವು ₹ 4.16 ಲಕ್ಷ ಕೋಟಿ ಇದೆ.

ಸೋಮವಾರದ ವಹಿವಾಟಿನಲ್ಲಿ ಅದಾನಿ ಗ್ರೀನ್ ಕಂಪನಿಯ ಷೇರು ಮೌಲ್ಯವು ಶೇ 16.25ರಷ್ಟು ಏರಿಕೆ ಕಂಡಿದೆ. ಕಂಪನಿಯ ಷೇರು ಮೌಲ್ಯವು ಈ ವರ್ಷದಲ್ಲಿ ಶೇ 103ರಷ್ಟು ಹೆಚ್ಚಳವಾಗಿದೆ.

ಚಿನ್ನ ದರ ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಹೆಚ್ಚಾಗಿದೆ. 10 ಗ್ರಾಂ ಚಿನ್ನದ ದರ ₹ 304ರಷ್ಟು ಏರಿಕೆ ಕಂಡು ₹ 52,302ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 508ರಷ್ಟು ಹೆಚ್ಚಾಗಿ ₹ 67,407ಕ್ಕೆ ಏರಿಕೆ ಆಯಿತು.

ವಿಆರ್‌ಎಲ್‌ಗೆ 1,300 ವಾಹನ ಮಾರಾಟ: ಟಾಟಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯಿಂದ ವಿಆರ್‌ಎಲ್ ಲಾಜಿಸ್ಟಿಕ್ಸ್ ಕಂಪನಿಯು ಒಟ್ಟು 1,300 ವಾಣಿಜ್ಯ ವಾಹನಗಳನ್ನು ಖರೀದಿಸಲಿದೆ. ಭಾರಿ ಗಾತ್ರದ ವಾಣಿಜ್ಯ ವಾಹನಗಳು, ಮಧ್ಯಮ ಮತ್ತು ಲಘು ಪ್ರಮಾಣದ ವಾಣಿಜ್ಯ ವಾಹನಗಳು ಈ ಖರೀದಿಯ ಭಾಗವಾಗಿರಲಿವೆ ಎಂದು ಟಾಟಾ ಮೋಟರ್ಸ್ ಪ್ರಕಟಣೆ ತಿಳಿಸಿದೆ.

'ನಮ್ಮ ವಾಹನಗಳ ಮಾಲೀಕತ್ವದ ವೆಚ್ಚವು ಅತ್ಯಂತ ಕಡಿಮೆ ಮಟ್ಟದಲ್ಲಿ ಇರುವಂತೆ ಮಾಡಲು ನಾವು ಶ್ರಮಿಸುತ್ತಿರುತ್ತೇವೆ. ನಮ್ಮ ವಿಸ್ತಾರವಾದ ಸೇವಾ ಜಾಲವು ಅತ್ಯುತ್ತಮ ಸೇವೆಗಳನ್ನು ದೇಶದ ಎಲ್ಲ ಕಡೆಗಳಲ್ಲಿಯೂ ಒದಗಿಸುತ್ತದೆ' ಎಂದು ಟಾಟಾ ಮೋಟರ್ಸ್ ಕಂಪನಿಯ ವಾಣಿಜ್ಯ ವಾಹನಗಳ ವಹಿವಾಟು ವಿಭಾಗದ ಉಪಾಧ್ಯಕ್ಷ ರಾಜೇಶ್ ಕೌಲ್ ಹೇಳಿದ್ದಾರೆ.

ಕೇಂದ್ರ ಸರ್ಕಾರದ ಭತ್ತ ಖರೀದಿ ನೀತಿ ವಿರುದ್ಧ ಪ್ರತಿಭಟನೆ

ದೆಹಲಿಯಲ್ಲಿ ಕೆಸಿಆರ್ ಧರಣಿ



ಕೇಂದ್ರದ ಭತ್ತ ಖರೀದಿ ನೀತಿ ವಿರುದ್ಧ ಟಿಆರ್‌ಎಸ್ ಪಕ್ಷದ ಮುಖಂಡರೊಂದಿಗೆ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ದೆಹಲಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಭಾರತೀಯ ಕಿಸಾನ್ ಯುನಿಯನ್ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕೇಂದ್ರದ ಭತ್ತ ಖರೀದಿ ನೀತಿ ವಿರುದ್ಧ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ನೇತೃತ್ವದಲ್ಲಿ ಟಿಆರ್‌ಎಸ್ ಪಕ್ಷದ ಮುಖಂಡರು ದೆಹಲಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ತೆಲಂಗಾಣ ಭವನದಲ್ಲಿ ಟಿಆರ್‌ಎಸ್ ಪಕ್ಷದ ಮುಖಂಡರೊಂದಿಗೆ ಧರಣಿ ನಡೆಸಿದ ಕೆ.ಚಂದ್ರಶೇಖರ ರಾವ್ ಅವರು, ಕೇಂದ್ರ ಸರ್ಕಾರವು ಈ ಸಮಸ್ಯೆಯನ್ನು 24 ಗಂಟೆಗಳೊಳಗೆ ಪರಿಹರಿಸಬೇಕು ಎಂದು ಗಡುವು ವಿಧಿಸಿದರು. ಕೇಂದ್ರ ಸರ್ಕಾರ ಸ್ಪಂದಿಸದಿದ್ದರೆ ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿಯೂ ಅವರು ಎಚ್ಚರಿಸಿದರು.

'ನಮ್ಮ ರೈತರ ಭಾವನೆಗಳೊಂದಿಗೆ ಆಟವಾಡಬೇಡಿ, ಸರ್ಕಾರವನ್ನು ಬೀಳಿಸುವ ಶಕ್ತಿ ಅವರಿಗಿದೆ', ಎಂದ ಅವರು, 'ರೈತರು ಭಿಕ್ಷುಕರಲ್ಲ, ತಮ್ಮ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಪಡೆಯುವ ಹಕ್ಕು ಅವರಿಗಿದೆ' ಎಂದು ಹೇಳಿದರು.

ಭಾರತೀಯ ಕಿಸಾನ್ ಯುನಿಯನ್ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ ಅವರೂ ಪ್ರತಿಭಟನೆಯಲ್ಲಿ ಭಾಗವಹಿಸಿ ಒಗ್ಗಟ್ಟು ಪ್ರದರ್ಶಿಸಿದರು.

ತೆಲಂಗಾಣದಲ್ಲಿ 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ದೆಹಲಿಯಲ್ಲಿ ನಡೆಸಿದ ಮೊದಲ ಪ್ರತಿಭಟನಾ ರ‍್ಯಾಲಿ ಇದಾಗಿದ್ದು, ಪಕ್ಷದ ಸಂಸದರು, ಶಾಸಕರು ಮತ್ತು ತೆಲಂಗಾಣದ ಸಂಪುಟ ಸಚಿವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹೈದರಾಬಾದ್ ವರದಿ: ತೆಲಂಗಾಣದಲ್ಲಿ ಮುಖ್ಯಮಂತ್ರಿ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸಿದೆ. ರೈತರು ಉತ್ಪಾದಿಸಿದ ಭತ್ತವನ್ನು ರಾಜ್ಯ ಸರ್ಕಾರ ಖರೀದಿಸಬೇಕು, ಇಲ್ಲದಿದ್ದರೆ ಮುಖ್ಯಮಂತ್ರಿ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಪ್ರತಿಭಟನನಿರತರು ಆಗ್ರಹಿಸಿದ್ದಾರೆ.

ಸಂಪುಟ ಪುನರ್ ರಚನೆ; ಪ್ರಮಾಣ ವಚನ ಸ್ವೀಕರಿಸಿದ 25 ಸಚಿವರು

ಆಂಧ್ರ: 13 ಹೊಸ ಮುಖಗಳಿಗೆ ಮಣೆ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಸೋಮವಾರ ರಾಜ್ಯ ಸಚಿವ ಸಂಪುಟವನ್ನು ಪುನರ್ ರಚಿಸಿದ್ದು, 13 ಹೊಸ ಮುಖಗಳಿಗೆ ಅವಕಾಶ ನೀಡಿದ್ದಾರೆ. ತಮ್ಮ ಹಿಂದಿನ ಸಂಪುಟದಲ್ಲಿದ್ದ 11 ಮಂದಿಯನ್ನು ಹೊಸ ಸಂಪುಟಕ್ಕೆ ಮತ್ತೆ ಸೇರಿಸಿಕೊಂಡಿದ್ದಾರೆ.

ರಾಜಧಾನಿ ಅಮರಾವತಿಯಲ್ಲಿರುವ ರಾಜ್ಯ ಸಚಿವಾಲಯದ ಬಳಿ ಸೋಮವಾರ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಬಿ. ಭೂಷಣ ಹರಿಚಂದನ್ ಅವರು 25 ಸಚಿವರಿಗೆ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣ ವಚನ ಬೋಧಿಸಿದರು.

ವಿಧಾನ ಪರಿಷತ್ತಿನ ಯಾವ ಸದಸ್ಯರಿಗೂ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ.

ಹೊಸ ಸಂಪುಟದಲ್ಲಿ ಹಿಂದುಳಿದ ವರ್ಗಗಳಿಗೆ ಸಿಂಹ ಪಾಲು, ಅಂದರೆ 10 ಸ್ಥಾನಗಳು ದೊರೆತಿವೆ. ಮುಖ್ಯಮಂತ್ರಿ ಸೇರಿದಂತೆ ಇಬ್ಬರು ಅಲ್ಪಸಂಖ್ಯಾತ ಸಮುದಾಯದವರು, ಐವರು ಪರಿಶಿಷ್ಟ ಜಾತಿ ಮತ್ತು ಒಬ್ಬರು ಪರಿಶಿಷ್ಟ ಪಂಗಡದವರು ಸಂಪುಟದಲ್ಲಿದ್ದಾರೆ. ರೆಡ್ಡಿ ಮತ್ತು ಕಾಪು ಸಮುದಾಯದ ತಲಾ ನಾಲ್ವರು ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.

ಸಂಪುಟದಲ್ಲಿ ನಾಲ್ವರು ಮಹಿಳಾ ಸದಸ್ಯರಿಗೆ ಅವಕಾಶ ನೀಡಲಾಗಿದೆ. ಕಳೆದ ಸಂಪುಟದಲ್ಲಿ ಮೂವರು ಮಹಿಳೆಯರಿದ್ದರು.

ವೈಎಸ್‌ಆರ್‌ಸಿಯಲ್ಲಿ ಬಂಡಾಯದ ಬಾವುಟ

ಅಮರಾವತಿ (ಪಿಟಿಐ): ಆಂಧ್ರ ಪ್ರದೇಶದಲ್ಲಿ ಸಂಪುಟ ಪುನರ್ ರಚನೆಯು ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್‌ನಲ್ಲಿ ಬಂಡಾಯ ಸೃಷ್ಟಿಸಿದ್ದು, ರಾಜ್ಯದ ವಿವಿಧೆಡೆ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಿಂದಿನ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಎಂ. ಸುಚರಿತಾ ಅವರಿಗೆ ಹೊಸ ಸಂಪುಟದಲ್ಲಿ ಅವಕಾಶ ದೊರೆತಿಲ್ಲ. ಇದರಿಂದ ಸಿಟ್ಟಿಗೆದ್ದಿರುವ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ತಮ್ಮ ಕ್ಷೇತ್ರವಾದ ಗುಂಟೂರಿನಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ ಅವರು, 'ವೈಯಕ್ತಿಕ ಕಾರಣಗಳಿಂದ ಶಾಸಕ ಸ್ಥಾನ ತ್ಯಜಿಸಿರುವುದಾಗಿ' ಹೇಳಿದರು.

ಸಂಪುಟದಲ್ಲಿ ಅವಕಾಶ ದೊರೆಯದ ಮತ್ತೊಬ್ಬ ಮಾಜಿ ಸಚಿವ ಬಾಲಿನೇನಿ ಶ್ರೀನಿವಾಸ ರೆಡ್ಡಿ ಅವರೂ ಬಂಡಾಯ ಎದ್ದಿದ್ದು, ತಮ್ಮ ಶಾಸಕ ಸ್ಥಾನದಿಂದ ಇಳಿಯುವುದಾಗಿ ವೈಎಸ್‌ಆರ್‌ಸಿ ನಾಯಕತ್ವಕ್ಕೆ ಸಂದೇಶ ರವಾನಿಸಿದ್ದಾರೆ.

ಪಾಕ್‌ನ ಉಗ್ರ ಸೇರಿ ಇಬ್ಬರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ಎನ್ ಕೌಂಟರ್ ನಲ್ಲಿ ಪಾಕಿಸ್ತಾನದ ಭಯೋತ್ಪಾದಕ ಸೇರಿ ಇಬ್ಬರು ಉಗ್ರರು ಹತ್ಯೆಯಾಗಿದ್ದು, ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ.

'ಕುಲ್ಗಾಂನಲ್ಲಿ ಸ್ಥಳೀಯ ಪೊಲೀಸ್ ಹಾಗೂ ಸೇನೆ ನಡೆಸಿದ ಎನ್ ಕೌಂಟರ್ ನಲ್ಲಿ ಒಬ್ಬ ಪಾಕ್ ಹಾಗೂ ಸ್ಥಳೀಯ ಹೈಬ್ರಿಡ್ ಉಗ್ರ ಹತ್ಯೆಯಾಗಿದ್ದು, ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

'ಕುಲ್ಗಾಂನ ಚಾಕಿಸಮದ್ ಪ್ರದೇಶದಲ್ಲಿ ಕಳೆದ ವಾರ ನಡೆದ ಎನ್ ಕೌಂಟರ್ ಸಂದರ್ಭದಲ್ಲಿ ಭದ್ರತಾ ಪಡೆಗಳ ಕಣ್ತಪ್ಪಿಸಿ ಪರಾರಿಯಾಗಿದ್ದ' ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದರು.

ಸಂಪುಟ ಪುನರ್ ರಚನೆ

'ನ್ಯಾಷನಲ್ ಹೆರಾಲ್ಡ್' ಹಗರಣ: ಇ.ಡಿ.ಯಿಂದ ಖರ್ಗೆ ವಿಚಾರಣೆ

ಪ್ರಜಾವಾಣಿ ವಾರ್ತೆ



ಖರ್ಗೆ

ನವದೆಹಲಿ: ರಾಜ್ಯಸಭೆಯ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಅವರನ್ನು 'ನ್ಯಾಷನಲ್ ಹೆರಾಲ್ಡ್' ಹಗರಣಕ್ಕೆ ಸಂಬಂಧಿಸಿದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಸೋಮವಾರ ವಿಚಾರಣೆಗೆ ಒಳಪಡಿಸಿದರು.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಹೇಳಿಕೆ ದಾಖಲಿಸಿಕೊಳ್ಳಲು ಸಮನ್ಸ್ ಜಾರಿ ಮಾಡಿದ್ದ ಇ.ಡಿ. ಅಧಿಕಾರಿಗಳು, ಬೆಳಿಗ್ಗೆ 10.30ರಿಂದ ಸಂಜೆ 4.15ರವರೆಗೆ ಖರ್ಗೆ ಅವರ ವಿಚಾರಣೆ ನಡೆಸಿದರು.

ಪಕ್ಷದ ಹಿರಿಯ ನಾಯಕ ಮೋತಿಲಾಲ್ ವೋರಾ ಅವರ ನಿಧನದ ಬಳಿಕ ಖರ್ಗೆ ಅವರು ಯಂಗ್ ಇಂಡಿಯನ್ ಲಿಮಿಟೆಡ್ (ವೈಐಎಲ್) ಮತ್ತು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್)ನ ಕಾರ್ಯಕಾರಿ ಸ್ಥಾನಕ್ಕೆ ನೇಮಕವಾಗಿದ್ದರಿಂದ ಅವರ ಹೇಳಿಕೆ ಪಡೆಯಲಾಗಿದೆ ಎಂದು 2016ರಿಂದ ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ. ಮೂಲಗಳು ಹೇಳಿವೆ.

ಗಾಂಧಿ ಕುಟುಂಬಕ್ಕೆ ಹತ್ತಿರವಾಗಿರುವ ಸುಮನ್ ದುಬೆ ಹಾಗೂ ಸ್ಯಾಮ್ ಪಿತ್ರೋಡಾ ಅವರು ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಎಜೆಎಲ್ ಸಂಸ್ಥೆಯನ್ನು, 'ನಷ್ಟದಲ್ಲಿದೆ' ಎಂಬ ಕಾರಣ ಮುಂದಿರಿಸಿ ಖರೀದಿ ಮಾಡಲಾಗಿದೆ ಎಂದು ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ದೂರಿದ್ದರು. ಈ ಖರೀದಿಯ ಹಿಂದೆ ಅಕ್ರಮ ನಡೆದಿದೆ ಎಂದೂ ಆರೋಪಿಸಿದ್ದ ಅವರು ದೆಹಲಿ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರು.

ನಿಧನ ವಾರ್ತೆ

ಬಾಲಿವುಡ್ ಹಿರಿಯ ನಟ ಶಿವ ಸುಬ್ರಹ್ಮಣ್ಯಂ

ಪ್ರಜಾವಾಣಿ ವಾರ್ತೆ

ಮುಂಬೈ: ಬಾಲಿವುಡ್ ಹಿರಿಯ ನಟ, ಚಿತ್ರಕಥೆಗಾರ ಶಿವ ಸುಬ್ರಹ್ಮಣ್ಯಂ ಸೋಮವಾರ ನಿಧನರಾಗಿದ್ದಾರೆ.

ಬಾಲಿವುಡ್ ನಿರ್ಮಾಪಕರಾದ ಹನ್ಸಲ್ ಮೆಹ್ತಾ ಅವರು ಸೋಮವಾರ ಬೆಳಗ್ಗೆ ತಮ್ಮ ಟ್ವಿಟರ್‌ನಲ್ಲಿ ಶಿವ ಸುಬ್ರಹ್ಮಣ್ಯಂ ನಿಧನವನ್ನು ಖಚಿತಪಡಿಸಿದ್ದಾರೆ.

ಬೆಳಗ್ಗೆ 11 ಗಂಟೆ ಸುಮಾರಿಗೆ ಮುಂಬೈನ ಅಂಧೇರಿಯ ಶಿಶಿರಾ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಅವರು ತಿಳಿಸಿದ್ದಾರೆ.

ಶಿವ ಸುಬ್ರಮಣ್ಯಂ 80ರ ದಶಕದಲ್ಲಿ ಬಾಲಿವುಡ್ ಪ್ರವೇಶ ಮಾಡಿದರು. 1989ರಲ್ಲಿ ಹಿಂದಿ ಸಿನಿಮಾ 'ಪರಿಂದಾ'ಗೆ ಚಿತ್ರಕಥೆ ಬರೆದು ಜನಪ್ರಿಯರಾದರು. ನಂತರ ತೆಲುಗು, ತಮಿಳು, ಹಿಂದಿಯ ಹಲವಾರು ಸಿನಿಮಾಗಳಲ್ಲಿ ತೊಡಗಿಸಿಕೊಂಡರು.

'ಹಿಂದಿಯ 'ಚಮೇಲಿ' '1942 ಲವ್ ಸ್ಟೋರಿ' ಸಿನಿಮಾಗಳು ಶಿವ ಸುಬ್ರಹ್ಮಣ್ಯಂ ಅವರಿಗೆ ಹೆಚ್ಚು ಖ್ಯಾತಿ ತಂದುಕೊಟ್ಟಿದ್ದವು.

ಆಲಿಯಾ ಭಟ್ ಅಭಿನಯದ 'ಟು ಸ್ಟೇಟ್ಸ್' ಸಿನಿಮಾದಲ್ಲಿ ಆಲಿಯಾ ತಂದೆಯ ಪಾತ್ರದಲ್ಲಿ ಅಭಿನಯಿಸಿ ಗಮನ ಸೆಳೆದಿದ್ದರು. ಇತ್ತೀಚೆಗೆ ಬಿಡುಗಡೆಯಾಗಿದ್ದ 'ಮೀನಾಕ್ಷಿ ಸುಂದರೇಶ್ವರ' ಚಿತ್ರದಲ್ಲಿ ಶಿವ ಸುಬ್ರಹ್ಮಣ್ಯಂ ನಟಿಸಿದ್ದರು.

ಅದಿರು ರಫ್ತು ನಿಷೇಧ: ಸ್ಪಷ್ಟನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಗಣಿಗಳಿಂದ ಹೊರತೆಗೆಯಲಾದ ಅದಿರಿನ ರಫ್ತಿಗೆ ಹೇರಲಾದ ನಿಷೇಧ ಹಿಂತೆಗೆಯುವಂತೆ ಕೋರಿರುವ ಗಣಿ ಮಾಲೀಕರ ಮನವಿ ಕುರಿತು ಸ್ಪಷ್ಟನೆ ನೀಡುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಈ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳುವ ಅಗತ್ಯವಿದ್ದು, ಉಕ್ಕು ಸಚಿವಾಲಯವು ಪ್ರತಿಕ್ರಿಯೆ ನೀಡಲಿ ಎಂದು ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಮೂಲಕ ಕೇಂದ್ರಕ್ಕೆ ಸೂಚನೆ ನೀಡಿದೆ.

'ದೇಶದ ವಿವಿಧೆಡೆ ಕಬ್ಬಿಣದ ಅದಿರು ರಫ್ತಿಗೆ ಯಾವುದೇ ನಿರ್ಬಂಧವಿಲ್ಲ. ನಾವೂ ಕರ್ನಾಟಕದಲ್ಲಿ ಹೇರಲಾದ ರಫ್ತು ನಿಷೇಧ ಹಿಂತೆಗೆಯಲು ಬಯಸುತ್ತೇವೆ. ನಿಷೇಧ ತೆಗೆದುಹಾಕಿದಲ್ಲಿ ಭಾರಿ ಪ್ರಮಾಣದ ಅದಿರು ಮಾರುಕಟ್ಟೆಗೆ ಲಗ್ಗೆ ಇಡಲಿದೆ. ಆಗ ಪರಿಸ್ಥಿತಿ ಏನಾಗಬಹುದು ಎಂಬುದರ ಬಗ್ಗೆ ಸಂಬಂಧಿಸಿದವರು ಹೇಳಬೇಕು' ಎಂದು ಪೀಠ ತಿಳಿಸಿತು.

ಕೇಂದ್ರವು ಅದಿರು ರಫ್ತಿಗ ಸಮ್ಮತಿ ಸೂಚಿಸಿದ್ದರಿಂದ ಉಕ್ಕು ಸಚಿವಾಲಯದ ಹೇಳಿಕೆಯ ಅಗತ್ಯವಿಲ್ಲ. ವಿದೇಶಿ ವಿನಿಮಯದ ಅಗತ್ಯ ಇರುವುದರಿಂದ ಕರ್ನಾಟಕದ ಗಣಿಗಳಿಂದ ಅದಿರು ರಫ್ತು ನಿಷೇಧಿಸಿರುವ ಆದೇಶವನ್ನು ಮಾರ್ಪಡಿಸಬೇಕು ಎಂದು ಗಣಿ ಮಾಲೀಕರ ಪರ ವಾದ ಮಂಡಿಸಿದ ವಕೀಲ ದುಷ್ಯಂತ್ ದವೆ ಕೋರಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್, ಪರಿಸರ ರಕ್ಷಣೆಯ ಕಾಳಜಿಯೊಂದಿಗೆ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಸಲ್ಲಿಸಿರುವ ವರದಿಯ ಅನ್ವಯ ಅದಿರು ರಫ್ತನ್ನು ನಿಷೇಧಿಸಲಾಗಿದೆ. ಕೆಲವೇ ಕೆಲವು ಗಣಿ ಕಂಪನಿಗಳ ಲಾಭಕ್ಕಾಗಿ ಅಮೂಲ್ಯ ನೈಸರ್ಗಿಕ ಸಂಪನ್ಮೂಲವನ್ನು ಹಾಳುಮಾಡಲು ಬಿಡಬಾರದು ಎಂದರು.

ಸಂಕ್ಷಿಪ್ತ ಸುದ್ದಿ

'ಮುಸ್ಲಿಮರನ್ನು ನಿರ್ಲಕ್ಷಿಸಿದ ಅಖಿಲೇಶ್'

ಲಖನೌ: ಸಮಾಜವಾದಿ ಪಕ್ಷದ (ಎಸ್.ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಜೊತೆಗಿದ್ದವರನ್ನು ಮತ್ತು ಮುಸ್ಲಿಂ ಸಮುದಾಯದವರನ್ನು ನಿರ್ಲಕ್ಷಿಸಿದ್ದಾರೆ ಎಂದು ಸೆರೆವಾಸ ಅನುಭವಿಸುತ್ತಿರುವ ಎಸ್.ಪಿ. ನಾಯಕ ಆಜಂ ಖಾನ್ ಅವರ ವಕ್ತಾರ ಫಸಾಹತ್ ಅಲಿ ಖಾನ್ ಆರೋಪಿಸಿದ್ದಾರೆ.

ಎರಡೂವರೆ ವರ್ಷಗಳಲ್ಲಿ ಅಖಿಲೇಶ್ ಯಾದವ್ ಅವರು ಒಂದು ಬಾರಿ ಮಾತ್ರ ಆಜಂ ಖಾನ್ ಅವರನ್ನು ಜೈಲಿನಲ್ಲಿ ಭೇಟಿಯಾಗಿದ್ದಾರೆ. ಅವರ ಬಿಡುಗಡೆಗೆ ಪಕ್ಷವು ಯಾವುದೇ ಪ್ರಯತ್ನ ಮಾಡಿಲ್ಲ ಎಂದೂ ಆರೋಪ ಮಾಡಿದ್ದಾರೆ.

ರಾಮ್‌ಪುರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪಕ್ಷದ ಕಾರ್ಯಕ್ರಮದಲ್ಲಿ ಫಸಾಹತ್ ಅಲಿ ಖಾನ್ ಅವರು ಈ ಹೇಳಿಕೆ ನೀಡಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ದಾಳಿಕೋರ ಪಾಕ್ ಪ್ರಜೆಗೆ ಉಗ್ರ ಪಟ್ಟ

ನವದೆಹಲಿ(ಪಿಟಿಐ): 2019ರಲ್ಲಿ ಜಮ್ಮು-ಕಾಶ್ಮೀರದಲ್ಲಿ 40 ಸಿಆರ್‌ಪಿಎಫ್ ಯೋಧರನ್ನು ಬಲಿಪಡೆದ ಪುಲ್ವಾಮ ದಾಳಿಯಲ್ಲಿ ಭಾಗಿಯಾಗಿದ್ದ ಪಾಕಿಸ್ತಾನದ ನಾಗರಿಕ ಮೊಹಿವುದ್ದೀನ್ ಔರಂಗಜೇಬ್ ಅಲಂ ಗಿರ್‌ನನ್ನು ಭಯೋತ್ಪಾದಕ ಎಂದು ಭಾರತ ಘೋಷಿಸಿದೆ.

ಈ ಸಂಬಂಧ ಸೋಮವಾರ ಅಧಿಸೂಚನೆ ಹೊರಡಿಸಿರುವ ಕೇಂದ್ರ ಗೃಹ ಇಲಾಖೆ, 2019ರ ಫೆಬ್ರುವರಿ 14ರಂದು ಸಿಆರ್‌ಪಿಎಫ್ ಬೆಂಗಾವಲು ವಾಹನಗಳ ಮೇಲಿನ ದುಷ್ಕೃತ್ಯದಲ್ಲಿ ಅಲಿಂ ಗಿರ್ ಅಲಿಯಾಸ್ ಮಕ್ತಾಬ್ ಅಮೀರ್, ಮುಜಾಹಿದ್ ಭಾಯ್ ಮತ್ತು ಮುಹಮ್ಮದ್ ಭಾಯ್ ಭಾಗಿಯಾಗಿದ್ದ ಎಂದು ಹೇಳಿದೆ. ಅಲ್ಲದೆ ಜೈಷ್-ಎ-ಮೊಹಮ್ಮದ್(ಜೆಇಎಂ) ಉಗ್ರ ಸಂಘಟನೆ ಪರವಾಗಿ ಭಾರತದ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ.

ಸಿಯುಇಟಿ ವಿರುದ್ಧ ನಿರ್ಣಯ

ಚೆನ್ನೈ(ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ಪ್ರವೇಶ ನೀಡಲು ಕೇಂದ್ರ ಸರ್ಕಾರ ಪ್ರಸ್ತಾಪಿಸಿರುವ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ (ಸಿಯುಇಟಿ) ಹಿಂಪಡೆಯಲು ಒತ್ತಾಯಿಸಿ ತಮಿಳುನಾಡು ವಿಧಾನಸಭೆ ಗೊತ್ತುವಳಿ ಅಂಗೀಕರಿಸಿದೆ.

ಸಿಯುಇಟಿಯು ನೀಟ್ ರೀತಿ ಶಾಲಾ ಶಿಕ್ಷಣವನ್ನು ಬದಿಗೊತ್ತಿ, ಒಟ್ಟಾರೆ ಅಭಿವೃದ್ಧಿ ಆಧಾರಿತ ಶಿಕ್ಷಣವನ್ನು ಮೂಲೆಗುಂಪು ಮಾಡುತ್ತದೆ. ಅಲ್ಲದೆ ವಿದ್ಯಾರ್ಥಿಗಳಲ್ಲಿ ಒತ್ತಡವನ್ನು ಹೆಚ್ಚಿಸುತ್ತದೆ ಎಂದು ತಮಿಳುನಾಡು ಸರ್ಕಾರ ಆರೋಪಿಸಿದೆ.

ಜನ ಬಯಸಿದರೆ, ರಾಜಕೀಯ ಪ್ರವೇಶ: ರಾಬರ್ಟ್ ವಾದ್ರಾ

ಇಂದೋರ್(ಪಿಟಿಐ): . 'ಜನರು ಬಯಸಿದ್ದೇ ಆದಲ್ಲಿ ರಾಜಕೀಯಕ್ಕೆ ಬರಲು ಸಿದ್ಧನಿದ್ದೇನೆ. ಜನತೆಗೆ ಸೇವೆ ಸಲ್ಲಿಸಲು ರಾಜಕೀಯ ರಂಗವು ಅವಕಾಶ ಮಾಡಿಕೊಡಲಿದೆ' ಎಂದು ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿ ರಾಬರ್ಟ್ ವಾದ್ರಾ ಅವರು ತಿಳಿಸಿದ್ದಾರೆ.

ಭಾನುವಾರ ಉಜ್ಜೈನಿಯ ಮಹಾಕಾಳೇಶ್ವರ ಮಂದಿರಕ್ಕೆ ಭೇಟಿ ನೀಡಿ ಸ್ಥಳೀಯ ಯೂಟ್ಯೂಬ್ ಚಾನೆಲ್‌ವೊಂದರ ಜತೆ ಮಾತನಾಡಿದ ಅವರು, 'ನನಗೆ ರಾಜಕೀಯ ಅರ್ಥವಾಗುತ್ತದೆ. ಜನರು ತಮ್ಮನ್ನು ನಾನು ಪ್ರತಿನಿಧಿಸಬೇಕು ಎಂದು ಬಯಸಿದಲ್ಲಿ, ನಾನು ಜನರಿಗಾಗಿ ಏನಾದರೂ ಬದಲಾವಣೆ ಮಾಡಲು ಅವಕಾಶವಿದೆ ಎಂದಾದಲ್ಲಿ, ರಾಜಕೀಯಕ್ಕೆ ಪ್ರವೇಶಿಸುತ್ತೇನೆ' ಎಂದು ಹೇಳಿದರು.

ಶಶಿಕಲಾ ಪದಚ್ಯುತಿ ನಿರ್ಣಯ ಎತ್ತಿಹಿಡಿದ ಹಿಡಿದ ಕೋರ್ಟ್

ಚೆನ್ನೈ (ಪಿಟಿಐ): ಎಐಎಡಿಎಂಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ವಿ.ಕೆ.ಶಶಿಕಲಾ ಅವರನ್ನು ಪದಚ್ಯುತಗೊಳಿಸಿ ಪಕ್ಷವು 2017ರ ಸೆಪ್ಟೆಂಬರ್‌ನಲ್ಲಿ ಕೈಗೊಂಡಿದ್ದ ನಿರ್ಣಯವನ್ನು ಕೆಳಹಂತದ ನ್ಯಾಯಾಲಯ ಸೋಮವಾರ ಎತ್ತಿಹಿಡಿದಿದೆ.

ಈ ನಿರ್ಣಯವನ್ನು ಪ್ರಶ್ನಿಸಿ ಶಶಿಕಲಾ ಸಲ್ಲಿಸಿದ್ದ ಅರ್ಜಿಯನ್ನು ಸಿಟಿ ಸಿವಿಲ್ ಕೋರ್ಟ್ 4ರ ಹೆಚ್ಚುವರಿ ನ್ಯಾಯಾಧೀಶರಾದ ಜೆ.ಶ್ರೀದೇವಿ ವಜಾ ಮಾಡಿದರು. ಅಲ್ಲದೆ, ಎಐಎಡಿಎಂಕೆ ಸಂಯೋಜಕರಾಗಿ ಒ.ಪನ್ನೀರ್‌ಸೆಲ್ವಂ, ಜಂಟಿ ಸಂಯೋಜಕರಾಗಿ ಕೆ.ಪಳನಿಸ್ವಾಮಿ ಅವರನ್ನು ನೇಮಿಸಿ ಕೈಗೊಂಡಿದ್ದ ನಿರ್ಣಯವನ್ನು ಕೋರ್ಟ್ ಮಾನ್ಯ ಮಾಡಿದೆ.

ಕಾರ್ಖಾನೆಯಲ್ಲಿ ಸ್ಫೋಟ: 6 ಸಾವು

ಭರೂಚ್: ಗುಜರಾತ್‌ನ ಭರೂಚ್ ಜಿಲ್ಲೆಯ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ಸೋಮವಾರ ಸ್ಫೋಟ ಸಂಭವಿಸಿದ್ದು, ಆರು ಕಾರ್ಮಿಕರು ಮೃತಪಟ್ಟಿದ್ದಾರೆ. ಅಹಮದಾಬಾದ್‌ನಿಂದ 235 ಕಿ. ದೂರದ ದಹೇಜ್ ಕೈಗಾರಿಕಾ ಪ್ರದೇಶದಲ್ಲಿನ ಕಾರ್ಖಾನೆಯಲ್ಲಿ ಮುಂಜಾನೆ 3 ಗಂಟೆ ಸುಮಾರಿನಲ್ಲಿ ಈ ಘಟನೆ ನಡೆದಿದೆ.



ಹಾರ್ದಿಕ್ – ಅಭಿನವ್ ಆಟ ವ್ಯರ್ಥ: ಮಿಂಚಿದ ವಿಲಿಯಮ್ಸನ್, ಅಭಿಷೇಕ್

ಸನ್‌ರೈಸರ್ಸ್‌ಗೆ ಮಣಿದ ಟೈಟನ್ಸ್

ನವಿ ಮುಂಬೈ (ಪಿಟಿಐ): ಅನುಭವಿ ಆಟಗಾರ, ನಾಯಕ ಕೇನ್ ವಿಲಿಯಮ್ಸನ್ ಜೊತೆ ಇನಿಂಗ್ಸ್ ಆರಂಭಿಸಿದ ಯುವ ಆಟಗಾರ ಅಭಿಷೇಕ್ ಶರ್ಮಾ ಮತ್ತೊಮ್ಮೆ ಮಿಂಚಿದರು. ಇವರಿಬ್ಬರ ಸೊಗಸಾದ ಬ್ಯಾಟಿಂಗ್ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡ ಭರ್ಜರಿ ಗೆಲುವು ಸಾಧಿಸಿತು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಸನ್‌ರೈಸರ್ಸ್ ಹೈದರಾಬಾದ್ 8 ವಿಕೆಟ್‌ಗಳ ಗೆಲುವು ಸಾಧಿಸಿತು.

ನಾಯಕ ಹಾರ್ದಿಕ್ ಪಾಂಡ್ಯ ಗಳಿಸಿದ ತಾಳ್ಮೆಯ ಅರ್ಧಶತಕದ ಬಲದಿಂದ ಗುಜರಾತ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 162 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ ಹೈದರಾಬಾದ್ ಐದು ಎಸೆತಗಳು ಬಾಕಿ ಇರುವಾಗ 2 ವಿಕೆಟ್‌ಗಳಿಗೆ 168 ರನ್ ಗಳಿಸಿ ದಡ ಸೇರಿತು.

ಮೊದಲ ವಿಕೆಟ್‌ಗೆ ಅಭಿಷೇಕ್ ಶರ್ಮಾ ಮತ್ತು ಕೇನ್ ವಿಲಿಯಮ್ಸನ್ 64 ರನ್ ಸೇರಿಸಿ ಉತ್ತಮ ತಳಪಾಯ ಹಾಕಿಕೊಟ್ಟರು. ಅರ್ಧಶತಕದತ್ತ ಹೆಜ್ಜೆ ಹಾಕಿದ್ದ ಅಭಿಷೇಕ್ ವಿಕೆಟ್ ಪಡೆದ ರಶೀದ್ ಖಾನ್ ಜೊತೆಯಾಟ ಮುರಿದರು. ಕೇನ್ ಅಮೋಘ ಬ್ಯಾಟಿಂಗ್ ಮುಂದುವರಿಸಿದರು. 4 ಭರ್ಜರಿ ಸಿಕ್ಸರ್‌ಗಳು ಅವರ ಬ್ಯಾಟಿನಿಂದ ಸಿಡಿದವು. ಅವರು ಔಟಾದಾಗ ತಂಡದ ಗೆಲುವಿಗೆ 34 ರನ್ ಬೇಕಾಗಿತ್ತು. ಈ ಸಂದರ್ಭದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ನಿಕೊಲಸ್ ಪೂರನ್ ಸುಲಭ ಜಯ ತಂದುಕೊಟ್ಟರು. 20ನೇ ಓವರ್‌ನ ಮೊದಲ ಎಸೆತವನ್ನು ಅವರು ಸಿಕ್ಸರ್‌ಗೆ ಎತ್ತಿದರು.

ಹಾರ್ದಿಕ್ ಪಾಂಡ್ಯ–ಅಭಿನವ್ ಬಲ: ಟಾಸ್ ಗೆದ್ದ ಸನ್‌ರೈಸರ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿಕೆಟ್‌ಗಳನ್ನು ಕಳೆದುಕೊಂಡು ಪರದಾಡುತ್ತ ಸಾಗಿದ್ದ ಗುಜರಾತ್ ತಂಡಕ್ಕೆ ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಕನ್ನಡಿಗ ಅಭಿನವ್ ಮನೋಹರ್ ಆಸರೆಯಾದರು. ಇವರಿಬ್ಬರ ಉತ್ತಮ ಜೊತೆಯಾಟದ ನೆರವಿನಿಂದ ತಂಡ ಸ್ಪರ್ಧಾತ್ಮಕ ಮೊತ್ತ ಕಲೆ ಹಾಕಿತು.

ಸ್ಫೋಟಕ ಬ್ಯಾಟರ್ ಶುಭಮನ್ ಗಿಲ್ ಕೇವಲ ಏಳು ರನ್ ಗಳಿಸಿ ಔಟಾದರು. ರಾಹುಲ್ ತ್ರಿಪಾಠಿ ಪಡೆದ ಮೋಹಕ ಕ್ಯಾಚ್‌ಗೆ ಅವರು ಬಲಿಯಾದರು. ಭುವನೇಶ್ವರ್ ಕುಮಾರ್ ಹಾಕಿದ ಎಸೆತ ಆಫ್ ಸ್ಟಂಪ್‌ನಿಂದ ಆಚೆ ಹೋಗುತ್ತಿತ್ತು. ಡ್ರೈವ್ ಮಾಡಲು ಪ್ರಯತ್ನಿಸಿದ ಶುಭಮನ್ ಅವರ ಬ್ಯಾಟಿನ ಅಂಚಿಗೆ ಸವರಿದ ಚೆಂಡು ಸ್ಲಿಪ್‌ನತ್ತ ಚಿಮ್ಮಿತು. ತ್ರಿಪಾಠಿ ಎಡಕ್ಕೆ ಜಿಗಿದು ಕ್ಯಾಚ್ ಪಡೆದರು.

ಆರಂಭಿಕ ಬ್ಯಾಟರ್ ಮ್ಯಾಥ್ಯೂ ವೇಡ್ ಜೊತೆಗೂಡಿದ ಸಾಯಿ ಸುದರ್ಶನ್ ಕೂಡ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ. ನಟರಾಜನ್ ಎಸೆತದಲ್ಲಿ ಮಿಡ್‌ಆಫ್‌ನಲ್ಲಿ ವಿಲಿಯಮ್ಸನ್ ಪಡೆದ ಕ್ಯಾಚ್‌ಗೆ ಸುದರ್ಶನ್ ವಿಕೆಟ್ ಕಳೆದುಕೊಂಡಾಗ ತಂಡದ ಮೊತ್ತ 50 ಕೂಡ ಆಗಿರಲಿಲ್ಲ. ಉಮ್ರಾನ್ ಮಲಿಕ್ ಎಸೆತದಲ್ಲಿ ಮ್ಯಾಥ್ಯೂ ವೇಡ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ನಾಯಕ ಹಾರ್ದಿಕ್ ಪಾಂಡ್ಯ ಕ್ರೀಸ್‌ಗೆ ಬಂದ ನಂತರ ತಂಡದ ಮೊತ್ತ ಏರುಗತಿಯಲ್ಲಿ ಸಾಗಿತು. ಅವರೊಂದಿಗೆ ಡೇವಿಡ್ ಮಿಲ್ಲರ್ 40 ರನ್‌ಗಳ ಜೊತೆಯಾಟವಾಡಿದರು. ಮಿಲ್ಲರ್ ಔಟಾದ ನಂತರ ಅಭಿನವ್ ಮನೋಹರ್ ಮಿಂಚಿದರು. ಹಾರ್ದಿಕ್ ಪಾಂಡ್ಯ ಅರ್ಧಶತಕ ಪೂರೈಸಿದರು.



ಕೇನ್ ವಿಲಿಯಮ್ಸನ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 7ಕ್ಕೆ 162 (20 ಓವರ್)

ವೇಡ್ ಎಲ್‌ಬಿಡಬ್ಲ್ಯು ಬಿ ಉಮ್ರಾನ್ 19 (19 ಎ, 4x3), ಶುಭಮನ್ ಸಿ ತ್ರಿಪಾಠಿ ಬಿ ಭುವನೇಶ್ವರ್ 7 (9 ಎ, 4x1), ಸಾಯಿ ಸಿ ವಿಲಿಯಮ್ಸನ್ ಬಿ ನಟರಾಜನ್ 11 (9 ಎ, 4x2), ಹಾರ್ದಿಕ್ ಔಟಾಗದೆ 50 (42 ಎ, 4x4, 6x1), ಡೇವಿಡ್ ಸಿ ಅಭಿಷೇಕ್ ಬಿ ಜಾನ್ಸೆನ್ 12 (15 ಎ), ಅಭಿನವ್ ಸಿ ತ್ರಿಪಾಠಿ ಬಿ ಭುವನೇಶ್ವರ್ 35 (21 ಎ, 4x5, 6x1), ತೇವಟಿಯಾ ರನ್‌ಔಟ್ (ಪೂರನ್/ನಟರಾಜನ್) 6 (4 ಎ, 4x1), ರಶೀದ್ ಬಿ ನಟರಾಜನ್ 0 (1 ಎ)

ಇತರೆ (ಲೆಗ್‌ಬೈ 2, ವೈಡ್ 20) 22

ವಿಕೆಟ್ ಪತನ: 1-24 (ಶುಭಮನ್ ಗಿಲ್, 2.2), 2-47 (ಸಾಯಿ ಸುದರ್ಶನ್, 5.4), 3-64 (ಮ್ಯಾಥ್ಯೂ ವೇಡ್, 7.6), 4-104 (ಡೇವಿಡ್ ಮಿಲ್ಲರ್, 13.3), 5-154 (ಅಭಿನವ್ ಮನೋಹರ್, 18.5), 6-161 (ರಾಹುಲ್ ತೇವಟಿಯಾ, 19.4), 7-162 (ರಶೀದ್ ಖಾನ್, 19.6)

ಬೌಲಿಂಗ್: ಭುವನೇಶ್ವರ್ ಕುಮಾರ್ 4-0-37-2, ಮಾರ್ಕೊ ಜಾನ್ಸೆನ್ 4-0-27-1, ವಾಷಿಂಗ್ಟನ್ ಸುಂದರ್ 3-0-14-0, ಟಿ.ನಟರಾಜನ್ 4-0-34-2, ಉಮ್ರಾನ್ ಮಲಿಕ್ 4-0-39-1, ಏಡನ್ ಮರ್ಕರಮ್ 1-0-9-0

ಸನ್‌ರೈಸರ್ಸ್ ಹೈದರಾಬಾದ್ 2ಕ್ಕೆ 168 (19.1 ಓವರ್)

ಅಭಿಷೇಕ್ ಸಿ ಸಾಯಿ ಬಿ ರಶೀದ್ 42 (32 ಎ, 4x6), ಕೇನ್ ವಿಲಿಯಮ್ಸನ್ ಸಿ ತೇವಟಿಯಾ ಬಿ ಹಾರ್ದಿಕ್ 57 (46 ಎ, 4x2, 6x4), ರಾಹುಲ್ (ಗಾಯಗೊಂಡು ನಿವೃತ್ತಿ) 17 (11 ಎ, 4x1, 6x1), ನಿಕೊಲಸ್ ಔಟಾಗದೆ 34 (18ಎ, 4X2, 6X2), ಮರ್ಕರಮ್ ಔಟಾಗದೆ 12 (8ಎ, 4X1)

ಇತರೆ (ಬೈ 1, ಲೆಗ್‌ಬೈ 2, ವೈಡ್ 3) 6

ವಿಕೆಟ್ ಪತನ: 1-64 (ಅಭಿಷೇಕ್ ಶರ್ಮಾ, 8.5), 1-104* (ರಾಹುಲ್ ತ್ರಿಪಾಠಿ, ಗಾಯಗೊಂಡು ನಿವೃತ್ತಿ), 2-129 (ಕೇನ್ ವಿಲಿಯಮ್ಸನ್, 16.1)

ಬೌಲಿಂಗ್: ಮೊಹಮ್ಮದ್ ಶಮಿ 4-0-32-0, ಹಾರ್ದಿಕ್ ಪಾಂಡ್ಯ 4-0-27-1, ಲಾಕಿ ಫರ್ಗ್ಯುಸನ್ 4-0-46-0, ರಶೀದ್ ಖಾನ್ 4-0-28-1, ದರ್ಶನ್ ನಲ್ಕಂಡೆ 2.1-0-22-0, ರಾಹುಲ್ ತೇವಾಟಿಯಾ 1-0-10-0

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 8 ವಿಕೆಟ್ ಜಯ

ಆರ್‌ಸಿಬಿಗೆ ಸಾಟಿಯಾಗುವುದೇ ಚೆನ್ನೈ?

ಜಡೇಜ–ಫಫ್ ಡು ಪ್ಲೆಸಿ ಮುಖಾಮುಖಿ: ವಿರಾಟ್, ಧೋನಿ ಮೇಲೆ ಕಣ್ಣು

ನವಿ ಮುಂಬೈ (ಪಿಟಿಐ): ಸತತ ಮೂರು ಪಂದ್ಯಗಳಲ್ಲಿ ಗೆದ್ದು ಭರವಸೆಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಒಂದೆಡೆ; ನಾಲ್ಕು ಪಂದ್ಯಗಳಲ್ಲಿ ಸೋತು ನಿರಾಸೆಗೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತೊಂದೆಡೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಈ ಎರಡು ತಂಡಗಳ ಮುಖಾಮುಖಿ ಕುತೂಹಲ ಕೆರಳಿಸಿದೆ. ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ಮಂಗಳವಾರ ಈ ಪಂದ್ಯ ನಡೆಯಲಿದ್ದು ಹಾಲಿ ಚಾಂಪಿಯನ್ ಮುಂಬೈ 15ನೇ ಆವೃತ್ತಿಯಲ್ಲಿ ಮೊದಲ ಜಯದ ಕನಸು ಹೊತ್ತು ಕಣಕ್ಕೆ ಇಳಿಯಲಿದೆ.

ಬೆಂಗಳೂರು ಮತ್ತು ಚೆನ್ನೈ ತಂಡಗಳೆರಡೂ ಹೊಸ ನಾಯಕರ ನೇತೃತ್ವದಲ್ಲಿ ಈ ಬಾರಿ ಆಡುತ್ತಿವೆ. ಹಿಂದಿನ ಆವೃತ್ತಿ ವರೆಗೂ ಚೆನ್ನೈ ತಂಡದಲ್ಲಿದ್ದ ಫಫ್ ಡು ಪ್ಲೆಸಿ ಈಗ ಬೆಂಗಳೂರು ತಂಡದ ನಾಯಕ. ಅವರ ನೇತೃತ್ವದಲ್ಲಿ ಆರಂಭದ ಪಂದ್ಯವನ್ನು ಸೋತಿದ್ದ ತಂಡ ನಂತರ ಚೇತರಿಸಿಕೊಂಡಿದೆ. ಹೀಗಾಗಿ ಹ್ಯಾಟ್ರಿಕ್ ಸಾಧನೆ ಮಾಡಲು ತಂಡಕ್ಕೆ ಸಾಧ್ಯವಾಗಿದೆ.

ರವೀಂದ್ರ ಜಡೇಜ ಮುಂದಾಳತ್ವದ ಚೆನ್ನೈಗೆ ಯಾವ ಪಂದ್ಯದಲ್ಲೂ ನಿರೀಕ್ಷಿತ ಸಾಮರ್ಥ್ಯ ತೋರಲು ಆಗಲಿಲ್ಲ. ಸತತ ಸೋಲಿನಿಂದಾಗಿ ತಂಡದ ಆತ್ಮವಿಶ್ವಾಸ ಕಳೆದುಹೋಗಿದೆ ಎಂದು ಕೋಚ್ ಸ್ಟೀಫನ್ ಫ್ಲೆಮಿಂಗ್ ಅವರೇ ಹೇಳಿಕೊಂಡಿದ್ದಾರೆ. ಆದ್ದರಿಂದ ಭರವಸೆಯಿಂದ ಆಡಲು ತಂಡ ಮುಂದಾಗಬೇಕಿದೆ.


ರವೀಂದ್ರ ಜಡೇಜ ಅವರಿಗೆ ಸ್ವತಃ ಮಿಂಚಲು ಆಗಲಿಲ್ಲ. ತಂಡವನ್ನು ಸಮರ್ಥವಾಗಿ ಮುನ್ನಡೆಸುವುದು ಕೂಡ ಸಾಧ್ಯವಾಗಲಿಲ್ಲ. ಅನುಭವಿ ಆಟಗಾರರಾದ ಮಹೇಂದ್ರ ಸಿಂಗ್ ಧೋನಿ, ರಾಬಿನ್ ಉತ್ತಪ್ಪ, ಅಂಬಟಿ ರಾಯುಡು ಮತ್ತು ಡ್ವೇನ್ ಬ್ರಾವೊ ಕೆಲವು ಪಂದ್ಯಗಳಲ್ಲಿ ಮಿಂಚಿದ್ದರೂ ಗೆಲುವಿನ ಕಾಣಿಕೆ ನೀಡುವಲ್ಲಿ ವಿಫಲರಾಗಿದ್ದಾರೆ. ತಂಡಕ್ಕೆ ಒಂದು ಬಾರಿ ಮಾತ್ರ 200 ರನ್‌ಗಳ ಮೊತ್ತ ದಾಟಲು ಸಾಧ್ಯವಾಗಿದೆ. ಉಳಿದ ಮೂರು ಪಂದ್ಯಗಳಲ್ಲಿ ಕಳಪೆ ಬ್ಯಾಟಿಂಗ್ ಮಾಡಿದೆ.

ಬೆಂಗಳೂರು ತಂಡದ ವಾನಿಂದು ಹಸರಂಗ, ಡೇವಿಡ್ ವಿಲ್ಲಿ ಮತ್ತು ಮೊಹಮ್ಮದ್ ಸಿರಾಜ್ ಅವರ ಬೌಲಿಂಗ್ ಎದುರಿಸುವ ಸವಾಲನ್ನು ಚೆನ್ನೈ ಬ್ಯಾಟರ್‌ಗಳು ಮೀರುವರೇ ಎಂಬುದು ಕುತೂಹಲದ ಪ್ರಶ್ನೆ. ಈ ಹಿನ್ನೆಲೆಯಲ್ಲಿ ಯುವ ಬ್ಯಾಟರ್ ಋತುರಾಜ್ ಗಾಯಕವಾಡ್, ಆಲ್‌ರೌಂಡರ್ ಮೋಯಿನ್ ಅಲಿ ಮತ್ತು ಶಿವಂ ದುಬೆ ಮೇಲೆ ಕಣ್ಣು ನೆಟ್ಟಿದೆ.

ಅನುಜ್, ವಿರಾಟ್ ಮೇಲೆ ನಿರೀಕ್ಷೆ: ಬೆಂಗಳೂರು ತಂಡ ಎಲ್ಲ ವಿಭಾಗಗಳಲ್ಲೂ ಲಯ ಕಂಡುಕೊಂಡಿದೆ. ಆರಂಭಿಕ ಬ್ಯಾಟರ್ ಅನುಜ್ ರಾವತ್ ಮತ್ತು ಲಯಕ್ಕೆ ಮರಳಿರುವ ವಿರಾಟ್ ಕೊಹ್ಲಿ ಮೇಲೆ ತಂಡದ ನಿರೀಕ್ಷೆ ಹೆಚ್ಚಿದೆ.



ಫಫ್ ಡುಪ್ಲೆಸಿ –ಪಿಟಿಐ ಚಿತ್ರ



ರವೀಂದ್ರ ಜಡೇಜ –ಪಿಟಿಐ ಚಿತ್ರ

ಈ ವರೆಗೆ ಉಭಯ ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು
- ಪಂಜಾಬ್ ಕಿಂಗ್ಸ್ ವಿರುದ್ಧ 5 ವಿಕೆಟ್ ಸೋಲು
- ಕೋಲ್ಕತ್ತ ನೈಟ್‌ರೈಡರ್ಸ್ ವಿರುದ್ಧ 3 ವಿಕೆಟ್ ಜಯ
- ರಾಜಸ್ಥಾನ್ ರಾಯಲ್ಸ್ ವಿರುದ್ಧ 4 ವಿಕೆಟ್ ಗೆಲುವು
- ಮುಂಬೈ ಇಂಡಿಯನ್ಸ್ ಎದುರು 7 ವಿಕೆಟ್ ಜಯ

ಚೆನ್ನೈ ಸೂಪರ್ ಕಿಂಗ್ಸ್
- ಕೋಲ್ಕತ್ತ ನೈಟ್‌ರೈಡರ್ಸ್ ವಿರುದ್ಧ 6 ವಿಕೆಟ್ ಸೋಲು
- ಲಖನೌ ಸೂಪರ್ ಜೈಂಟ್ಸ್ ವಿರುದ್ಧ 6 ವಿಕೆಟ್ ಸೋಲು
- ಪಂಜಾಬ್ ಕಿಂಗ್ಸ್ ಎದುರು 54 ರನ್‌ಗಳ ಸೋಲು
- ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 8 ವಿಕೆಟ್ ಸೋಲು

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಈ ಬಾರಿ ಉಭಯ ನಾಯಕರ ಸಾಧನೆ

ಆಟಗಾರ	ತಂಡ	ಪಂದ್ಯ	ರನ್	ಗರಿಷ್ಠ	ಅರ್ಧಶತಕ	ಬೌಂಡರಿ	ಸಿಕ್ಸರ್
ಫಫ್‌ಡುಪ್ಲೆಸಿ	ಬೆಂಗಳೂರು	4	138	88	1	10	7
ರವೀಂದ್ರ ಜಡೇಜ	ಚೆನ್ನೈ	4	66	26*	-	5	2

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	218
ಕ್ವಿಂಟನ್	ಲಖನೌ	188
ಶುಭಮನ್	ಗುಜರಾತ್	187

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	11
ಉಮೇಶ್	ಕೋಲ್ಕತ್ತ	10
ಕುಲದೀಪ್	ಡೆಲ್ಲಿ	10

ಐಪಿಎಲ್: ಅಶ್ವಿನ್ ಮೊದಲ 'ರಿಟೈರ್ಡ್ ಔಟ್' ಆಟಗಾರ

ಮುಂಬೈ (ಪಿಟಿಐ): ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಇತಿಹಾಸದಲ್ಲಿ ರಿಟೈರ್ಡ್ ಔಟ್ ಆದ ಮೊದಲ ಆಟಗಾರ ಎನಿಸಿಕೊಂಡರು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದ 19ನೇ ಓವರ್‌ನಲ್ಲಿ ರಾಜಸ್ಥಾನ್ ರಾಯಲ್ಸ್‌ನ ಅಶ್ವಿನ್ ಕ್ರೀಸ್ ತೊರೆದಿದ್ದರು. ತಂಡದ ರಣನೀತಿಯ ಭಾಗವಾಗಿ ಅವರು ರಿಟೈರ್ಡ್ ಔಟ್ ಆಗಲು ನಿರ್ಧರಿಸಿದ್ದರು.

ಐದನೇ ವಿಕೆಟ್‌ಗೆ ಶಿಮ್ರೊನ್ ಹೆಟ್ಮೆಯರ್ ಜೊತೆ ಅಶ್ವಿನ್ 68 ರನ್‌ಗಳ ಜೊತೆಯಾಟ ಆಡಿದ್ದರು. ಈ ಮೂಲಕ ತಂಡದ ಮೊತ್ತ ಏರಿಸಲು ಸಹಕಾರಿಯಾಗಿದ್ದರು. ತಂಡ 165 ರನ್ ಗಳಿಸಿತ್ತು. ಪಂದ್ಯದಲ್ಲಿ ರಾಜಸ್ಥಾನ್ ಮೂರು ರನ್‌ಗಳಿಂದ ಜಯ ಸಾಧಿಸಿತ್ತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತ್ತು.

19ನೇ ಓವರ್‌ನ ಎರಡನೇ ಎಸೆತದ ನಂತರ ಅಶ್ವಿನ್ ವಾಪಸಾಗಿದ್ದರು. ಎರಡು ಸಿಕ್ಸರ್‌ಗಳ ಬಲದಿಂದ 23 ಎಸೆತಗಳಲ್ಲಿ 28 ರನ್ ಗಳಿಸಿದ್ದರು. ತಮಗಿಂತ ವೇಗವಾಗಿ ರನ್ ಗಳಿಸಬಲ್ಲ ರಿಯಾನ್ ಪರಾಗ್‌ಗಾಗಿ ಅಶ್ವಿನ್ ವಿಕೆಟ್ ಒಪ್ಪಿಸಿದ್ದರು. ಪರಾಗ್ ಒಂದು ಸಿಕ್ಸರ್ ಒಳಗೊಂಡಂತೆ ನಾಲ್ಕು ಎಸೆತಗಳಲ್ಲಿ ಎಂಟು ರನ್ ಗಳಿಸಿದ್ದರು.

ಪಾಯಿಂಟ್ ಪಟ್ಟಿ


ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	4	3	1	0	0	6
ಕೋಲ್ಕತ್ತ	5	3	2	0	0	6
ಬೆಂಗಳೂರು	4	3	1	0	0	6
ಲಖನೌ	5	3	2	0	0	6
ಗುಜರಾತ್	4	3	1	0	0	6
ಡೆಲ್ಲಿ	4	2	2	0	0	4
ಪಂಜಾಬ್	4	2	2	0	0	4
ಹೈದರಾಬಾದ್	4	2	2	0	0	4
ಮುಂಬೈ	4	0	4	0	0	0
ಚೆನ್ನೈ	4	0	4	0	0	0

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಷೇರುಪೇಟೆ ವಹಿವಾಟು

482



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,784
ಇಂದಿನ ಅಂತ್ಯ	17,675
▼	109
ದಿನದ ಕನಿಷ್ಠ	17,650

ವಿನಿಮಯ ದರ

$ ಡಾಲರ್	75.94
£ ಪೌಂಡ್	99.14
€ ಯುರೊ	82.99
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹452

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1515 (1520)
ಸೂರ್ಯಕಾಂತಿ (ರಿಫೈನ್ಡ್)	₹1725 (1680)
ಪಾಮೋಲಿನ್	₹1470 (1465)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹900-1100
ಮಧ್ಯಮ	₹600-900
ಸಣ್ಣ	₹300-600

ಆಹಾರ ವಸ್ತುಗಳ ದರ ಏರಿಕೆ ಪರಿಣಾಮ

16 ತಿಂಗಳ ಗರಿಷ್ಠ ಮಟ್ಟಕ್ಕೆ ಚಿಲ್ಲರೆ ಹಣದುಬ್ಬರ?

ಬೆಂಗಳೂರು (ರಾಯಿಟರ್ಸ್): ಆಹಾರ ವಸ್ತುಗಳ ದರವು ನಿರಂತರವಾಗಿ ಹೆಚ್ಚಾಗುತ್ತಿದೆ. ಹೀಗಾಗಿ ಭಾರತದ ಚಿಲ್ಲರೆ ಹಣದುಬ್ಬರ ಪ್ರಮಾಣವು ಮಾರ್ಚ್‌ನಲ್ಲಿ ಶೇ 6.35ಕ್ಕೆ ಏರಿಕೆ ಆಗಿರುವ ಸಾಧ್ಯತೆ ಇದೆ. ಇದು 16 ತಿಂಗಳ ಗರಿಷ್ಠ ಮಟ್ಟವಾಗಿರಲಿದೆ.

ರಾಯಿಟರ್ಸ್ ಸುದ್ದಿಸಂಸ್ಥೆಯು ಏಪ್ರಿಲ್ 4ರಿಂದ 8ರವರೆಗೆ 48 ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಸಂಗ್ರಹಿಸಿ ಈ ವರದಿ ನೀಡಿದೆ.

ಆರ್‌ಬಿಐ, ಚಿಲ್ಲರೆ ಹಣದುಬ್ಬರದ ಗರಿಷ್ಠ ಮಿತಿಯನ್ನು ಶೇ 6ಕ್ಕೆ ನಿಗದಿ ಪಡಿಸಿದೆ. ಆದರೆ, ಆಹಾರ ವಸ್ತುಗಳ ದರ ಏರಿಕೆಯಿಂದಾಗಿ ಜನವರಿ, ಫೆಬ್ರುವರಿಯಲ್ಲಿ ಚಿಲ್ಲರೆ ಹಣದುಬ್ಬರವು ಈ ಮಟ್ಟವನ್ನು ಮೀರಿದೆ.

ಫೆಬ್ರುವರಿ ಅಂತ್ಯದ ವೇಳೆಗೆ ರಷ್ಯಾ–ಉಕ್ರೇನ್ ಸಂಘರ್ಷ ಆರಂಭ ಆಯಿತು. ಅದರಿಂದಾಗಿ ಕಚ್ಚಾ ತೈಲ ದರ ಏರಿಕೆ ಆಯಿತು. ಆದರೆ, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್, ಡೀಸೆಲ್ ದರ ಏರಿಕೆಯನ್ನು ತಡೆ ಹಿಡಿದಿದ್ದವು. ಮಾರ್ಚ್ 22ರಿಂದ ಇಂಧನ ದರ ಏರಿಕೆ ಆರಂಭ ಆಯಿತು. ಹೀಗಾಗಿ ಗ್ರಾಹಕ ಬಳಕೆ ವಸ್ತುಗಳ ದರ ಏರಿಕೆಯು ಏಪ್ರಿಲ್ ತಿಂಗಳವರೆಗೂ ಕಂಡುಬಂದಿರಲಿಲ್ಲ.

ಚಿಲ್ಲರೆ ಹಣದುಬ್ಬರದ ಅಧಿಕೃತ ಅಂಕಿ–ಅಂಶಗಳು ಮಂಗಳವಾರ ಬಹಿರಂಗವಾಗಲಿವೆ. ಶೇ 6.06ರಿಂದ ಶೇ 6.50ರ ಮಟ್ಟದಲ್ಲಿ ಅದು ಇರುವ ಅಂದಾಜು ಮಾಡಲಾಗಿದೆ. ಶೇ 6 ಕ್ಕಿಂತಲೂ ಕೆಳಕ್ಕೆ ಇಳಿಯುವ ನಿರೀಕ್ಷೆ ಇಲ್ಲ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಜಾಗತಿಕ ಮಟ್ಟದಲ್ಲಿ ಅಡುಗೆ ಎಣ್ಣೆ, ರಸಗೊಬ್ಬರ ಮತ್ತು ಧಾನ್ಯಗಳ ಪೂರೈಕೆಗೆ ಅಡ್ಡಿ ಉಂಟಾಗಿದೆ. ಇದರಿಂದಾಗಿ ಆಹಾರ ವಸ್ತುಗಳ ಬೆಲೆಯು ಏರುಮುಖವಾಗಿಯೇ ಇರುವ ನಿರೀಕ್ಷೆ ಮಾಡಲಾಗಿದೆ.

ಮುಖ್ಯಾಂಶಗಳು

- ಚಿಲ್ಲರೆ ಹಣದುಬ್ಬರ ಶೇ 6.35ಕ್ಕೆ ಏರಿಕೆ ಸಾಧ್ಯತೆ
- ಜಾಗತಿಕ ಬಿಕ್ಕಟ್ಟು: ಪೂರೈಕೆ ವ್ಯವಸ್ಥೆಗೆ ಅಡ್ಡಿ



ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹168.50
ಆರ್‌ಎಸ್‌ಎಸ್-5	₹163
ಗುಡ್ ಲಾಟ್	₹159

(ಪ್ರತಿ ಕೆ.ಜಿಗೆ)

ಭಾರತದಲ್ಲೇ 'ಐಫೋನ್ 13' ತಯಾರಿಕೆ ಆರಂಭ

ನವದೆಹಲಿ (ರಾಯಿಟರ್ಸ್): ಆ್ಯಪಲ್ ಕಂಪನಿಯು ಭಾರತದಲ್ಲಿ ಐಫೋನ್ 13 ಸ್ಮಾರ್ಟ್‌ಫೋನ್ ಅನ್ನು ಭಾರತದಲ್ಲಿಯೇ ತಯಾರು ಮಾಡಲು ಆರಂಭಿಸಿದೆ.

ಚೀನಾದ ಪೂರೈಕೆ ವ್ಯವಸ್ಥೆಯ ಮೇಲಿನ ಅವಲಂಬನೆಯನ್ನು ತಗ್ಗಿಸುವ ಪ್ರಯತ್ನದ ಭಾಗವಾಗಿ ಕಂಪನಿಯು ಈ ನಿರ್ಧಾರಕ್ಕೆ ಬಂದಿದೆ.

ದೇಶದಲ್ಲಿ ಆ್ಯಪಲ್ ಫೋನ್‌ಗಳನ್ನು ತಯಾರಿಸುತ್ತಿರುವ ತೈವಾನ್ ಮೂಲದ ಫಾಕ್ಸ್‌ಕಾನ್ ಕಂಪನಿಯು ತಮಿಳುನಾಡಿನ ಶ್ರೀಪೆರಂಬದೂರು ಘಟಕದಲ್ಲಿಯೇ ಐಫೋನ್ 13 ಸಹ ತಯಾರಾಗಲಿದೆ ಎಂದು ಮೂಲಗಳು ಹೇಳಿವೆ.

ಕಂಪನಿಯು ಭಾರತವನ್ನೂ ಒಳಗೊಂಡು ಇತರೆ ಮಾರುಕಟ್ಟೆಗಳಿಗೆ ತನ್ನ ಐಫೋನ್ ತಯಾರಿಕೆಯನ್ನು ಹಸ್ತಾಂತರಿಸುತ್ತಿದೆ. ಐಪ್ಯಾಡ್ ಟ್ಯಾಬ್ಲೆಟ್‌ಗಳನ್ನು ಸಹ ಭಾರತದಲ್ಲಿಯೇ ತಯಾರಿಸುವ ಆಲೋಚನೆಯನ್ನೂ ಹೊಂದಿದೆ.

ಕಂಪನಿಯು 2017ರಲ್ಲಿ 'ಐಫೋನ್ ಎಸ್‌ಇ' ಮೂಲಕ ಭಾರತದಲ್ಲಿ ತಯಾರಿಕೆ ಆರಂಭಿಸಿತು. ಆ ಬಳಿಕ ತಯಾರಾಗುತ್ತಿರುವ ನಾಲ್ಕನೇ ಮಾದರಿ 'ಐಫೋನ್ 13' ಆಗಿದೆ.



ಸಾಂದರ್ಭಿಕ ಚಿತ್ರ

ಮುಂಬೈ ಧಾರಣೆ

ಶೇಂಗಾ

11-4-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1475 (1465)
ಪಾಮ್ ವಾರದ ಡೆಲಿವರಿ	1468 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1600)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,350 (52,000)
ಬೆಳ್ಳಿ ಕೆ.ಜಿ 66,700 (66,950)

ಆವರಣದಲ್ಲಿ ಶನಿವಾರದ ಧಾರಣೆ

₹50 ಸಾವಿರ ಕೋಟಿ ದಾಟಿದ ಟಿಸಿಎಸ್ ತ್ರೈಮಾಸಿಕ ಆದಾಯ

ಕಂಪನಿಯ ನಿವ್ವಳ ಲಾಭ ₹ 9,926 ಕೋಟಿಗೆ ಏರಿಕೆ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಸಾಫ್ಟ್‌ವೇರ್ ಸೇವಾ ಕಂಪನಿಯಾಗಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ಇದೇ ಮೊದಲ ಬಾರಿಗೆ ತ್ರೈಮಾಸಿಕವೊಂದರಲ್ಲಿ ₹ 50 ಸಾವಿರ ಕೋಟಿಗಿಂತ ಹೆಚ್ಚು ಆದಾಯ ಗಳಿಸಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭದ ಪ್ರಮಾಣವು ಶೇಕಡ 7.4ರಷ್ಟು ಹೆಚ್ಚಾಗಿದ್ದು ₹ 9,926 ಕೋಟಿಗೆ ಏರಿಕೆ ಆಗಿದೆ.

ದೇಶದಲ್ಲಿ ಅತಿಹೆಚ್ಚಿನ ಜನರಿಗೆ (5.92 ಲಕ್ಷ) ಉದ್ಯೋಗ ನೀಡಿರುವ ಖಾಸಗಿ ಕಂಪನಿ ಟಿಸಿಎಸ್. ಇದರ ಉದ್ಯೋಗಿಗಳು 46 ದೇಶಗಳಲ್ಲಿ ಇದ್ದಾರೆ. ಮಾರ್ಚ್ ತ್ರೈಮಾಸಿಕದಲ್ಲಿನ ಆದಾಯ ₹ 50 ಸಾವಿರ ಕೋಟಿ ದಾಟಿದ ಕಾರಣದಿಂದಾಗಿ ಕಂಪನಿಗೆ ಇಡೀ ಆರ್ಥಿಕ ವರ್ಷದಲ್ಲಿ ಇದೇ ಮೊದಲ ಬಾರಿಗೆ 25 ಬಿಲಿಯನ್ ಡಾಲರ್ (₹ 1.89 ಲಕ್ಷ ಕೋಟಿ) ಆದಾಯದ ಗಡಿ ದಾಟಲು ಸಾಧ್ಯವಾಗಿದೆ.

ಇಡೀ ಆರ್ಥಿಕ ವರ್ಷದಲ್ಲಿ ಕಂಪನಿಯ ನಿವ್ವಳ ಲಾಭವು ಶೇ 14.8ರಷ್ಟು ಏರಿಕೆ ಆಗಿ ₹ 38,327 ಕೋಟಿಗೆ ತಲುಪಿದೆ. ಮಾರ್ಚ್‌ಗೆ ಕೊನೆಗೊಂಡ ವರ್ಷದಲ್ಲಿ ಕಂಪನಿಯು ಹೊಸದಾಗಿ 1.03 ಲಕ್ಷ ಜನರನ್ನು ನೇಮಕ ಮಾಡಿಕೊಂಡಿದೆ. ಒಟ್ಟು 153 ದೇಶಗಳ ಜನ ಟಿಸಿಎಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಕಂಪನಿ ಮಾಹಿತಿ ನೀಡಿದೆ. ಒಟ್ಟು ಉದ್ಯೋಗಿಗಳ ಪೈಕಿ ಶೇ 35.6ರಷ್ಟು ಮಂದಿ ಮಹಿಳೆಯರು.

ಮಾರ್ಚ್ ತ್ರೈಮಾಸಿಕದಲ್ಲಿಯೇ ಒಟ್ಟು 35,209 ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದು ತ್ರೈಮಾಸಿಕವೊಂದರಲ್ಲಿ ಆಗಿರುವ ಅತಿಹೆಚ್ಚಿನ ನೇಮಕ. ಕಂಪನಿಯನ್ನು ತೊರೆದ ನೌಕರರ ಪ್ರಮಾಣವು ಶೇ 17.4ರಷ್ಟು ಇದೆ. ಷೇರುದಾರರಿಗೆ ಪ್ರತಿ ಷೇರಿಗೆ ಅಂತಿಮ ಲಾಭಾಂಶವಾಗಿ ₹ 22 ಸಿಗಲಿದೆ ಎಂದು ಕಂಪನಿ ಪ್ರಕಟಿಸಿದೆ.

ಮುಖ್ಯಾಂಶಗಳು

- ಹೊಸದಾಗಿ 1.03 ಲಕ್ಷ ಜನರ ನೇಮಕ
- ಪ್ರತಿ ಷೇರಿಗೆ ₹ 22 ಅಂತಿಮ ಲಾಭಾಂಶ
- ವಾರ್ಷಿಕ ನಿವ್ವಳ ಲಾಭ ಶೇ 14ರಷ್ಟು ಏರಿಕೆ

5ಜಿ ತರಂಗಾಂತರ: ಮೀಸಲು ಬೆಲೆ ಇಳಿಕೆಗೆ ಶಿಫಾರಸು

ನವದೆಹಲಿ (ಪಿಟಿಐ): ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) 3300–3670 ಮೆಗಾ ಹರ್ಟ್ಸ್‌ನ 5ಜಿ ತರಂಗಾಂತರ ಬ್ಯಾಂಡ್‌ನ ಮೀಸಲು ಬೆಲೆಯನ್ನು ಶೇಕಡ 35ರಷ್ಟು ಕಡಿಮೆ ಮಾಡಿ, ಪ್ರತಿ ಮೆಗಾ ಹರ್ಟ್ಸ್‌ಗೆ ₹ 317 ಕೋಟಿ ನಿಗದಿ ಮಾಡಲು ಶಿಫಾರಸು ಮಾಡಿದೆ.

ಒಟ್ಟಾರೆಯಾಗಿ, ಬೇರೆ ಬೇರೆ ಬ್ಯಾಂಡ್‌ಗಳಲ್ಲಿ ಮೀಸಲು ಬೆಲೆಯು ಈ ಹಿಂದೆ ಸೂಚಿಸಿದ್ದಕ್ಕಿಂತ ಶೇ 39ರಷ್ಟು ಕಡಿಮೆ ಇರಲಿದೆ ಎಂದು ಮೂಲಗಳು ತಿಳಿಸಿವೆ. 3300–3670 ಮೆಗಾ ಹರ್ಟ್ಸ್ ಬ್ಯಾಂಡ್‌ಗೆ ₹ 492 ಕೋಟಿ ಮೀಸಲು ಬೆಲೆ ನಿಗದಿ ಮಾಡಬೇಕು ಎಂದು ಟ್ರಾಯ್ ಈ ಹಿಂದೆ ಸಲಹೆ ಮಾಡಿತ್ತು.

700 ಮೆಗಾ ಹರ್ಟ್ಸ್ ಬ್ಯಾಂಡ್‌ಗೆ ಮೀಸಲು ಬೆಲೆಯು ₹ 3,927 ಕೋಟಿ ಆಗಿರಲಿದೆ. ಇದು ಹಿಂದಿನ ಬಾರಿ ಸೂಚಿಸಿದ್ದ ಶೇ 40ರಷ್ಟು ಕಡಿಮೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	38000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	27190-30699
ಕೋಕ	16590-29319
ಫ್ಯಾಕ್ಟರಿ	7779-21299
ಹಳೆಚಾಲಿ	47819-51009
ಹೊಸಚಾಲಿ	35919-40209
ಸಾಗರ	
ಬಿಳಿಗೋಟು	20179-29699
ಚಾಲಿ	36099-39099
ಕೋಕ	8269-33609
ಕೆಂಪುಗೋಟು	8969-38999
ರಾಶಿ	33100-48759
ಸಿಪ್ಪೆಗೋಟು	7459-22859
ಶಿವಮೊಗ್ಗ	
ಬೆಟ್ಟೆ	47619-50600
ಗೊರಬಲು	17100-34350
ರಾಶಿ	43029-48458
ಸರಕು	53100-74899
ಸಿದ್ದಾಪುರ	
ಬಿಳಿಗೋಟು	24619-37099
ಕೋಕ	22299-31100
ಹೊಸಚಾಲಿ	37099-40599
ಕೆಂಪುಗೋಟು	27089-30869
ರಾಶಿ	44099-47899
ತಟ್ಟಿಬೆಟ್ಟೆ	34399-46599
ಶಿರಸಿ	
ಬೆಟ್ಟೆ	36077-45181
ಬಿಳಿಗೋಟು	18099-33488
ಚಾಲಿ	29999-41099
ರಾಶಿ	39739-48109
ಯಲ್ಲಾಪುರ	
ಬಿಳಿಗೋಟು	26899-32899
ಚಾಲಿ	35399-41169
ಕೋಕ	18899-30899
ಕೆಂಪುಗೋಟು	32460-34969
ರಾಶಿ	47565-53479
ತಟ್ಟಿಬೆಟ್ಟೆ	38800-46899
ರಾಮನಗರ ರೇಷ್ಮೆಗೂಡು	
ಮಿಶ್ರ ತಳಿ	220-685
ದ್ವಿತಳಿ	255-802

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15900	15950	231.65 ಸೆಂಟ್ಸ್
ಎಸಿ	---	8000	8500	
ಆರ್‌ಪಿ	---	9000	9200	ಲಂಡನ್
ಆರ್‌ಸಿ	---	4000	4175	2091ಡಾಲರ್ಸ್

ಬೆಂಗಳೂರಿನಲ್ಲಿ 24ರಿಂದ ಕ್ರೀಡಾಕೂಟ: 4,529 ಕ್ರೀಡಾಪಟುಗಳ ನೋಂದಣಿ

ಕೆಐಯುಜಿಯಲ್ಲಿ ಮಲ್ಲಕಂಬ, ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲಕಂಬ ಮತ್ತು ಯೋಗಾಸನವನ್ನು ಈ ಬಾರಿಯ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ (ಕೆಐಯುಜಿ) ಸೇರಿಸಲಾಗಿದೆ. ಇದರೊಂದಿಗೆ ಕೂಟದ ಎರಡನೇ ಆವೃತ್ತಿ 20 ವಿಭಾಗಗಳ ಸ್ಪರ್ಧೆಗೆ ವೇದಿಕೆಯಾಗಲಿದೆ.

ಇದೇ 24ರಿಂದ ಮೇ 3ರ ವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಕೂಟಕ್ಕೆ ಈಗಾಗಲೇ 189 ವಿಶ್ವವಿದ್ಯಾಲಯಗಳಿಂದ 4,529 ಕ್ರೀಡಾಪಟುಗಳು ಹೆಸರು ನೊಂದಾಯಿಸಿಕೊಂಡಿದ್ದಾರೆ ಎಂದು ಕೇಂದ್ರದ ಕ್ರೀಡಾ ಇಲಾಖೆಯ ಕಾರ್ಯದರ್ಶಿ ಸುಜಾತಾ ಚತುರ್ವೇದಿ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ನಡೆದ ಆಯೋಜನಾ ಸಮಿತಿಯ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ಜೈನ್ ವಿಶ್ವವಿದ್ಯಾಲಯದ ಪ್ರಾಯೋಜಕತ್ವದಲ್ಲಿ ಆಯೋಜಿಸಿರುವ ಕ್ರೀಡಾಕೂಟ ಕಳೆದ ವರ್ಷ ನಡೆಯಬೇಕಾಗಿತ್ತು. ಆದರೆ ಕೋವಿಡ್–19ರಿಂದಾಗಿ ಮುಂದೂಡಲಾಗಿತ್ತು' ಎಂದರು.



ಸುಜಾತಾ ಚತುರ್ವೇದಿ

'ಈ ಬಾರಿ ಒಟ್ಟು 275 ಚಿನ್ನದ ಪದಕಗಳಿಗಾಗಿ ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ. ಕಳೆದ ಬಾರಿಗೆ ಹೋಲಿಸಿದರೆ ಪಾಲ್ಗೊಳ್ಳುವವರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. ಒಡಿಶಾದಲ್ಲಿ ನಡೆದ ಮೊದಲ ಆವೃತ್ತಿಯಲ್ಲಿ 3150 ಮಂದಿ ಭಾಗವಹಿಸಿದ್ದರು' ಎಂದು ವಿವರಿಸಿದರು. 'ಕುಸ್ತಿ, ವೇಟ್‌ಲಿಫ್ಟಿಂಗ್, ಜೂಡೊ, ಕಬಡ್ಡಿ, ವಾಲಿಬಾಲ್, ಈಜು, ಮಲ್ಲಕಂಬ, ಯೋಗಾಸನ, ಆರ್ಚರಿ, ಫೆನ್ಸಿಂಗ್, ಕರಾಟೆ, ಬಾಕ್ಸಿಂಗ್ ಮತ್ತು ಫುಟ್‌ಬಾಲ್ ಸ್ಪರ್ಧೆಗಳು ಕನಕಪುರ ರಸ್ತೆಯಲ್ಲಿರುವ ಜೈನ್ ವಿವಿ ಆವರಣದಲ್ಲಿ ನಡೆಯಲಿವೆ. ಫುಟ್‌ಬಾಲ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್ ಮತ್ತು ಟೆನ್ನಿಸ್ ಸ್ಪರ್ಧೆಗಳು ಜೈನ್ ಸ್ಪೋರ್ಟ್ಸ್ ಸ್ಕೂಲ್‌ನಲ್ಲಿ ನಡೆಯಲಿವೆ. ಅಥ್ಲೆಟಿಕ್ಸ್ ಹಾಗೂ ಬ್ಯಾಸ್ಕೆಟ್‌ಬಾಲ್ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದ್ದು ಶೂಟಿಂಗ್ ಭಾರತ ಕ್ರೀಡಾ ಪ್ರಾಧಿಕಾರದ ನೇತಾಜಿ ಸುಭಾಷ್‌ಚಂದ್ರ ಬೋಸ್ ಶೂಟಿಂಗ್ ರೇಂಜ್‌ನಲ್ಲಿ ನಡೆಯಲಿದೆ' ಎಂದರು.

ರಾಜ್ಯ ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಕೆ.ಸಿ ನಾರಾ ಯಣ ಗೌಡ, ಆಯುಕ್ತ ಎಚ್.ಎನ್.ಗೋಪಾಲಕೃಷ್ಣ, ಭಾರತ ಕ್ರೀಡಾ ಪ್ರಾಧಿಕಾರದ ಮಹಾನಿರ್ದೇಶಕ ಸಂದೀಪ್ ಪ್ರಧಾನ್, ಕಾರ್ಯದರ್ಶಿ ರೋಹಿತ್ ಭಾರದ್ವಾಜ್, ಭಾರತ ವಿಶ್ವವಿದ್ಯಾಲಯಗಳ ಸಂಘದ ಜಂಟಿ ಕಾರ್ಯದರ್ಶಿ ಬಲ್ಜೀತ್ ಸಿಂಗ್ ಮತ್ತಿತರರು ಇದ್ದರು.

ಡೋಪಿಂಗ್ ತಡೆಗೆ ಕಟ್ಟುನಿಟ್ಟಿನ ಕ್ರಮ


ಕೆಐಯುಜಿಯಲ್ಲಿ ಡೋಪಿಂಗ್ ತಡೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಡೋಪಿಂಗ್ ವಿರುದ್ಧ ಜಾಗೃತಿ ಮೂಡಿಸುವುದಕ್ಕೂ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಆಯೋಜನಾ ಸಮಿತಿಯ ಅಧ್ಯಕ್ಷರೂ ಆಗಿರುವ ಸುಜಾತಾ ಚತುರ್ವೇದಿ ವಿವರಿಸಿದರು. ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆಗೆ ಸಂಬಂಧಿಸಿದ ಪರೀಕ್ಷೆಗೆ ಒಳಗಾಗುವುದು ಕಡ್ಡಾಯ. ಇದಕ್ಕಾಗಿ ಎಲ್ಲ ಕಡೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಅವರು ತಿಳಿಸಿದರು.

ಈ ಬಾರಿ ಹಸಿರು ಕ್ರೀಡಾಕೂಟ ಘೋಷಣೆಯಡಿ ಸ್ಪರ್ಧೆಗಳು ನಡೆಯುವ ಸ್ಥಳಗಳನ್ನು ಪ್ಲಾಸ್ಟಿಕ್ ಮುಕ್ತ ಮತ್ತು ಕಸಮುಕ್ತ ಮಾಡಲಾಗುವುದು. ಓಡಾಡಲು ವಿದ್ಯುತ್ ಚಾಲಿತ ವಾಹನಗಳನ್ನು ಬಳಸಲಾಗುವುದು ಎಂದರು.

ಗಾಲ್ಫ್: ಶೆಫ್ಲರ್‌ಗೆ ಅಗ್ರಸ್ಥಾನ

ಆಗಸ್ಟಾ, ಅಮೆರಿಕ (ಎಪಿ): ಟೈಗರ್ ವುಡ್ಸ್ ಅವರಂಥ ಪ್ರತಿಭಾವಂತರಿದ್ದ ಕಣದಲ್ಲಿ ಮಿಂಚಿದ ಅಮೆರಿಕ ಆಟಗಾರ ಸ್ಕಾಟಿ ಶೆಫ್ಲರ್ ಅವರು ಆಗಸ್ಟಾ ಮಾಸ್ಟರ್ಸ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಈ ಮೂಲಕ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದರು.

ಭಾನುವಾರ ರಾತ್ರಿ ಮುಕ್ತಾಯಗೊಂಡ ಚಾಂಪಿಯನ್‌ಷಿಪ್‌ನ ಆರಂಭದಿಂದಲೇ ಅವರು ಅಮೋಘ ಸಾಧನೆ ಮಾಡಿದ್ದರು. ಆದರೆ ಕೊನೆಯ ದಿನ ಒತ್ತಡಕ್ಕೆ ಸಿಲುಕಿದ್ದರು. 'ಸಣ್ಣ ಮಗುವಿನಂತೆ ಬೆಳಿಗ್ಗೆ ಅತ್ತಿದ್ದೆ. ಅಷ್ಟು ಮಾನಸಿಕ ತುಮುಲ ನನ್ನನ್ನು ಕಾಡಿತ್ತು. ಏನು ಮಾಡಬೇಕೆಂದೇ ತಿಳಿಯುತ್ತಿರಲಿಲ್ಲ. ಕೊನೆಗೆ ಪತ್ನಿ ಮೆರೆಡಿತ್ ಹತ್ತಿರ ಕುಳಿತುಕೊಂಡೆ. ಇನ್ನು ಮುಂದುವರಿಯಲು ಸಾಧ್ಯ ಎಂದು ನನಗೆ ಅನಿಸುತ್ತಿಲ್ಲ ಎಂದು ಹೇಳಿದೆ' ಎಂದು ಪಂದ್ಯ ಮುಗಿದ ನಂತರ ಶೆಫ್ಲರ್ ಹೇಳಿದರು.



ಪ್ರಶಸ್ತಿಯೊಂದಿಗೆ ಸ್ಕಾಟಿ ಶೆಫ್ಲರ್ –ಎಪಿ ಚಿತ್ರ

ಆಜಂ ಐಸಿಸಿ ತಿಂಗಳ ಆಟಗಾರ

ದುಬೈ (ಪಿಟಿಐ): ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನೀಡುವ 'ತಿಂಗಳ ಆಟಗಾರ' ಗೌರವಕ್ಕೆ ಭಾಜನರಾಗಿದ್ದಾರೆ. ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ರಚೆಲ್ ಹೇಯ್ನ್ಸ್ ಮಹಿಳೆಯರ ವಿಭಾಗದಲ್ಲಿ ಈ ಶ್ರೇಯ ಗಳಿಸಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧ ಇತ್ತೀಚೆಗೆ ಕೊನೆಗೊಂಡ ಟೆಸ್ಟ್ ಸರಣಿಯಲ್ಲಿ ಬಾಬರ್ ಒಟ್ಟು 390 ರನ್ ಗಳಿಸಿದ್ದರು. ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಅಮೋಘ ಸಾಮರ್ಥ್ಯ ತೋರಿದ್ದಕ್ಕಾಗಿ ರಚೆಲ್ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ದೂರವಾಣಿ ಕ್ರಿಕೆಟರ್ಸ್‌ಗೆ ಪ್ರಶಸ್ತಿ

ಬೆಂಗಳೂರು: ದೂರವಾಣಿ ಕ್ರಿಕೆಟರ್ಸ್ (1) ತಂಡವು ಕೆಎಸ್‌ಸಿಎ ಗುಂಪು ಒಂದರಿಂದ ಮೂರನೇ ಡಿವಿಷನ್ 14 ವರ್ಷದೊಳಗಿನವರ ಅಂತರ್‌ಕ್ಲಬ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದೆ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ ಒಂದು ವಿಕೆಟ್‌ನಿಂದ ಸರ್ ಸಯ್ಯದ್ ಕ್ರಿಕೆಟರ್ಸ್ ತಂಡಕ್ಕೆ ಸೋಲುಣಿಸಿತು.

ಸಂಕ್ಷಿಪ್ತ ಸ್ಕೋರು: ಸರ್ ಸಯ್ಯದ್ ಕ್ರಿಕೆಟರ್ಸ್: 50 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 184 (ವಿವೇಕ್ ಎನ್.ಪಿ. 28, ಪಟೇಲ 26, ಬಾನೇಶ್ ಎಸ್.ಪಿ. 38, ಉದಿತ್ ನಂದನ್ 25; ಹರ್ಷಿತ್ ಪೈ 35ಕ್ಕೆ 2). ದೂರವಾಣಿ ಕ್ರಿಕೆಟರ್ಸ್ (1): 49.3 ಓವರ್‌ಗಳಲ್ಲಿ 9ಕ್ಕೆ 185 (ಶಿವು ಎಂ. 28, ವಿಶ್ವ ಎಚ್. 45, ಕುಶಾಲ್ ಪಾಸುಪಲೇಟಿ 25, ಗಗನಸಾಯಿ ಕೆ. 27, ಬಾನೇಶ್ ಎಸ್.ಪಿ. 24ಕ್ಕೆ2). ಫಲಿತಾಂಶ: ದೂರವಾಣಿ ಕ್ರಿಕೆಟರ್ಸ್ (1) ತಂಡಕ್ಕೆ ಒಂದು ವಿಕೆಟ್ ಜಯ.



ಪ್ರಶಸ್ತಿ ವಿಜೇತ ದೂರವಾಣಿ ಕ್ರಿಕೆಟರ್ಸ್ ತಂಡ: ಎಡದಿಂದ (ನಿಂತವರು)– ಹರ್ಷಿತ್ ಪೈ, ಜತಿನ್ ಗೌಡ, ಶಶಾಂಕ್ ಎಂ.ಪಿ., ಗಗನಸಾಯಿ ಕೆ., ಸದ್ಯುತ್ ಕಾಪ್ಸೆ, ಸಿ. ತಿಪ್ಪೇಶ್, ಮೋಹಿತ್ ಪಿಳ್ಳಪ್ಪ. ಟಿ. (ಕುಳಿತವರು): ಸೌಭಾಗ್ಯ ಮಲ್ಲ (ಸಹಾಯಕ ಕೋಚ್), ಶಿವು. ಎಂ, ಮರಿಯಪ್ಪ (ಕಾರ್ಯದರ್ಶಿ), ಹರ್ಷ ಬಿ. (ಮುಖ್ಯ ಕೋಚ್). (ಮಂಡಿಯೂರಿದವರು) ಪ್ರಣೀತ್ ಆರ್.ಎಸ್, ಕುಶಾಲ್ ಪಸುಪಲೇಟಿ, ಮದನ್ ಪಾಟೀಲ ಸಿ, ಆದಿತ್ಯ ಮಯೂರ್, ವಿಶ್ವ ಎಚ್, ಎಚ್.ಆರ್. ಗುಣೇಶ್ವರ, ಕಶೀಶ್ ಬಹುಗುಣ.

ಕಂಬಳ: ಗೊಂದಲದಲ್ಲಿ ನಿಶಾಂತ್ 'ದಾಖಲೆ'

ಮಂಗಳೂರು: ಬೆಳ್ತಂಗಡಿ ತಾಲ್ಲೂಕಿನ ವೇಣೂರು–ಪೆರ್ಮುಡದಲ್ಲಿ ಭಾನುವಾರ ನಡೆದ ಸೂರ್ಯ– ಚಂದ್ರ ಜೋಡುಕರೆ ಕಂಬಳದಲ್ಲಿ ಬಜಗೋಳಿ ಜೋಗಿಬೆಟ್ಟು ನಿಶಾಂತ್ ಶೆಟ್ಟಿ ಹೊಸ ದಾಖಲೆ ಬರೆದಿದ್ದಾರೆ. ಆದರೆ, ಸೆನ್ಸರ್‌ನಲ್ಲಿ ತಾಂತ್ರಿಕ ದೋಷ ಇದ್ದುದರಿಂದ ಇದನ್ನು ದಾಖಲೆಯೆಂದು ಪರಿಗಣಿಸಬೇಕೋ ಬೇಡವೋ ಎಂಬ ಗೊಂದಲ ನಿರ್ಮಾಣವಾಗಿದೆ.

ಹಗ್ಗ ಹಿರಿಯ ವಿಭಾಗದ ಓಟದಲ್ಲಿ ನಿಶಾಂತ್ 125 ಮೀಟರ್ ದೂರವನ್ನು 10.44 ಸೆಕೆಂಡ್‌ನಲ್ಲಿ ಕ್ರಮಿಸಿದ್ದಾರೆ. ಇದನ್ನು 100 ಮೀಟರ್‌ಗೆ ಲೆಕ್ಕ ಹಾಕಿದಾಗ 8.36 ಸೆಕೆಂಡ್ ಸಮಯ ತೆಗೆದುಕೊಂಡಂತಾಗುತ್ತದೆ. ಪದವು ಕಾನಡ್ಕ ಫ್ಲೇವಿ ಡಿಸೋಜ ಅವರ ಕೋಣಗಳನ್ನು ನಿಶಾಂತ್ ಓಡಿಸಿದ್ದರು.



ನಿಶಾಂತ್ ಶೆಟ್ಟಿ

'ಮಳೆಯಿಂದಾಗಿ ಸೆನ್ಸರ್‌ನಲ್ಲಿ ತಾಂತ್ರಿಕ ದೋಷ ಕಂಡು ಬಂದಿತ್ತು. ಆಗ ನಿಶಾಂತ್ ಶೆಟ್ಟಿ ತೆಗೆದುಕೊಂಡ ಅವಧಿ 10.44 ಸೆಕೆಂಡ್ ದಾಖಲಾಗಿದೆ. ಇದನ್ನು ದಾಖಲೆಗೆ ಮಾನ್ಯ ಮಾಡಲಾಗುವುದಿಲ್ಲ ಎಂದು ಸ್ಥಳದಲ್ಲೇ ತಿಳಿಸಲಾಗಿತ್ತು' ಎಂದು ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ಎರ್ಮಾಳ್ ರೋಹಿತ್ ಹೆಗ್ಡೆ ತಿಳಿಸಿದ್ದಾರೆ.

ಒಲಿಂಪಿಯನ್ ಸೇಲರ್ ಎಯಾ ಸಾವು

ನ್ಯೂಯಾರ್ಕ್ (ರಾಯಿಟರ್ಸ್): ಒಲಿಂಪಿಯನ್ ಸೇಲರ್ ಟ್ಯುನೀಷಿಯಾದ ಎಯಾ ಗ್ವೆಜ್‌ಗ್ವೆಜ್ ಅವರು ದೋಣಿ ಅಪಘಾತದಲ್ಲಿ ಸೋಮವಾರ ಸಾವಿಗೀಡಾಗಿದ್ದಾರೆ. 17 ವರ್ಷದ ಎಯಾ ಅವಳಿ ಸಹೋದರಿ ಸಾರಾ ಜೊತೆ ಸಮುದ್ರದಲ್ಲಿ ಅಭ್ಯಾಸ ಮಾಡುತ್ತಿದ್ದಾಗ ದುರಂತ ಸಂಭವಿಸಿದೆ. ದೋಣಿ ಮಗುಚಿ ಅವರು ಪ್ರಾಣ ಕಳೆದುಕೊಂಡಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನ ಮಹಿಳಾ ವಿಭಾಗದ ಸೇಲಿಂಗ್‌ನಲ್ಲಿ ಎಯಾ, ಸ್ಪರ್ಧಿಸಿದ್ದರು.

ಬಾಕ್ಸಿಂಗ್: ನೀರಜ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಸಂಸ್ಥೆಯ ಎಂಐಟಿ ಕ್ವಾಡ್ರಂಗಲ್ ಅಂಗಳದಲ್ಲಿ ಭಾನುವಾರ ನಡೆದ ಫೈಟ್‌ನೈಟ್ ಮೆಗಾ ಬಾಕ್ಸಿಂಗ್ ಟೂರ್ನಿಯಲ್ಲಿ ಮೂರು ಬಾರಿಯ ಡಬ್ಲ್ಯುಬಿಸಿ ಪ್ರಶಸ್ತಿ ವಿಜೇತ ನೀರಜ್ ಗೋಯಟ್ ಉತ್ತಮ ಪ್ರದರ್ಶನ ನೀಡಿದರು.

ಸುರೇಶ್ ಪಾಶಮ್ ವಿರುದ್ಧ ನೀರಜ್ ಜಯ ಸಾಧಿಸಿದರು. ಸೂಪರ್ ಫೆದರ್ ವೇಟ್ ಸುತ್ತಿನಲ್ಲಿ ವಿಕಾಸ್ ಫಂಫಾಲ್ ವಿರುದ್ಧ ಸಾಗರ್ ಚಾಂದ್, ಸೂಪರ್ ಮಿಡಲ್ ವೇಟ್ ಸುತ್ತಿನಲ್ಲಿ ಜಸ್‌ಪ್ರೀತ್ ವಿರುದ್ಧ ಹರ್‌ಪಲ್ ಸಿಂಗ್ ಗೆದ್ದರು. ಲೈಟ್ ಹೆವಿವೇಯ್ಟ್ ಸುತ್ತಿನಲ್ಲಿ ಮ್ಯಾಕ್ಸ್ ವಿರುದ್ಧ ಮನ್‌ದೀಪ್ ಜಯ ಸಾಧಿಸಿದರು.

ಹಾಕಿ: 15, 16ರಂದು ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಮಹಿಳಾ ಮತ್ತು ಪುರುಷರ ಸಬ್‌ಜೂನಿಯರ್ ಹಾಕಿ ಚಾಂಪಿಯನ್‌ಷಿಪ್‌ಗಾಗಿ ರಾಜ್ಯ ತಂಡಗಳ ಆಯ್ಕೆ ಟ್ರಯಲ್ಸ್ ಇದೇ 15 ಮತ್ತು 16ರಂದು ನಡೆಯಲಿದೆ.

ಕೊಡಗು ಜಿಲ್ಲೆಯ ಪೊನ್ನಂಪೇಟೆಯ ಮಿನಿ ಕ್ರೀಡಾಂಗಣದಲ್ಲಿ ಟ್ರಯಲ್ಸ್ ನಿಗದಿಯಾಗಿದೆ ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಬ್‌ಜೂನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಗೋವಾದಲ್ಲಿ ಮೇ 4ರಿಂದ, ಮಹಿಳೆಯರ ಚಾಂಪಿಯನ್‌ಷಿಪ್ ಮೇ 11ರಿಂದ ಮಣಿಪುರದಲ್ಲಿ ನಡೆಯಲಿದೆ.

ಬೋಷಿಯಾ ಕ್ರೀಡೆಯಲ್ಲಿ ಸಾಧನೆ ಮಾಡುತ್ತಿರುವ ಉದ್ಯಾನ ನಗರಿಯ ಕ್ರೀಡಾಪಟು

ಅನ್ನಪೂರ್ಣಾ ಛಲದೆದುರು ಮಣಿದ ವೈಕಲ್ಯ

• ಬಸವರಾಜ ದಳವಾಯಿ

ಬೆಂಗಳೂರು: ಅನ್ನಪೂರ್ಣಾ ಅವರ ಛಲದ ಮನೋಭಾವದ ಮುಂದೆ ವಿಧಿಯೊಡ್ಡಿದ ಕೊರತೆಗಳೆಲ್ಲ ಕುಬ್ಜವಾದವು. ಅವರ ಸಾಧನೆ ಮುಗಿಲಮುಖಿಯಾಯಿತು.

ತಮ್ಮ ಐದನೇ ವಯಸ್ಸಿನಲ್ಲಿ ಕಾಡಿದ ಜ್ವರದ ಶಮನಕ್ಕಾಗಿ ವೈದ್ಯರು ನೀಡಿದ್ದ ಚುಚ್ಚುಮದ್ದು ಕೈಕಾಲುಗಳ ಶಕ್ತಿಯನ್ನೇ ಮುರುಟಿಹಾಕಿತು. ಒಂದೆಡೆ ಬಡತನ ಮತ್ತೊಂದೆಡೆ ಅಂಗವೈಕಲ್ಯವನ್ನು ಎದುರಿಸುತ್ತಲೇ ಬೆಳೆದಿರುವ ಅನ್ನಪೂರ್ಣಾ, ಅಂಗವಿಕಲರ ವಿಭಾಗದ ಬೋಷಿಯಾ ಕ್ರೀಡೆಯಲ್ಲಿ ಅಂತರರಾಷ್ಟ್ರೀಯ ಸಾಧಕಿಯಾಗಿದ್ದಾರೆ. ಪುಟ್ಟ ಕೈಕಾಲು, ವಾಮನಸ್ವರೂಪಿ ಶರೀರವಿದ್ದರೂ ಅವರ ಛಲದ ಮನೋಭಾವ ದೊಡ್ಡದು. ಉದ್ಯಾನನಗರಿಯ ವಿಕಾಸಸೌಧದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ 42 ವರ್ಷದ ಅನ್ನಪೂರ್ಣಾ ಅವರಿಗೆ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಕನಸಿದೆ.

'ವೈದ್ಯರು ಕೊಟ್ಟ ಚುಚ್ಚುಮದ್ದಿನ ಅಡ್ಡಪರಿಣಾಮದಿಂದ ಐದನೇ ವಯಸ್ಸಿಗೆ ಅಂಗವೈಕಲ್ಯ ಕಾಡಿತು. ಆಗ ಆರೆಂಟು–ತಿಂಗಳು ಪ್ರಜ್ಞೆಯೇ ಇರಲಿಲ್ಲ. ಚಿಕಿತ್ಸೆಗೆ ₹ 10 ಸಾವಿರ ಖರ್ಚಾಗುತ್ತದೆ ಎಂದು ವೈದ್ಯರು ಹೇಳಿದರು. ತರಕಾರಿ ವ್ಯಾಪಾರ ಮಾಡಿ ಜೀವನ ನಿರ್ವಹಿಸುತ್ತಿದ್ದ ತಾಯಿಗೆ ಈ ಮೊತ್ತ ಭರಿಸಲು ಸಾಧ್ಯವಾಗಲಿಲ್ಲ. ಬಳಿಕ ಕೆಲವು ಸಣ್ಣಪುಟ್ಟ ದೈಹಿಕ ಚಟುವಟಿಕೆಗಳ ಮೂಲಕ ಕೈಕಾಲುಗಳನ್ನು ಆಡಿಸಲು ಸಾಧ್ಯವಾಯಿತು' ಎಂದು ತಮ್ಮ ಬಾಲ್ಯದ ಘಟನೆಯನ್ನು ಹಂಚಿಕೊಳ್ಳುತ್ತಾರೆ ಅನ್ನಪೂರ್ಣಾ.



ಬೋಷಿಯಾ ಆಟಗಾರ್ತಿ ಅನ್ನಪೂರ್ಣಾ (ಎಡದಿಂದ ಎರಡನೆಯವರು) ಸಹ ಆಟಗಾರರು ಹಾಗೂ ಆಟಗಾರ್ತಿಯರೊಂದಿಗೆ ಕಂಠೀರವ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸುತ್ತಿರುವುದು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಅನ್ನಪೂರ್ಣಾ ಅವರಿಗೆ 'ಟಾರ್ಗೆಟ್ ಗೇಮ್' ಗಳೆಂದರೆ ಬಾಲ್ಯದಿಂದಲೂ ಹೆಚ್ಚಿನ ಆಸಕ್ತಿ. ಮೊದಲು ಕ್ಲಬ್ ಥ್ರೊ ಆಡುತ್ತಿದ್ದ ಅವರು ನಾಲ್ಕು ವರ್ಷಗಳ ಹಿಂದಷ್ಟೇ ಬೋಷಿಯಾ ಕ್ರೀಡೆಯತ್ತ ಹೊರಳಿದವರು. ರಮೇಶ್ ಎಂಬುವವರು ತನ್ನನ್ನು ಈ ಆಟಕ್ಕೆ ಕರೆತಂದರು ಎಂದು ಅವರು ಹೇಳುತ್ತಾರೆ. ವಿಕಾಸಸೌಧದಲ್ಲಿ ಮಧ್ಯಾಹ್ನದ ಭೋಜನ ವಿರಾಮದ ವೇಳೆಯಲ್ಲೇ ಒಂದಷ್ಟು ಹೊತ್ತು ಅಭ್ಯಾಸಕ್ಕೆ ಮೀಸಲಿಡುತ್ತಾರೆ. ರಜಾದಿನಗಳಲ್ಲಿ ಗಾಲಿಖುರ್ಚಿಯೊಂದಿಗೆ ಕಂಠೀರವ ಕ್ರೀಡಾಂಗಣಕ್ಕೆ ಹಾಜರಾಗುತ್ತಾರೆ. ಈ ವರ್ಷ ಮಾರ್ಚ್‌ನಲ್ಲಿ ಪಟಿಯಾಲದಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಬಿಸಿ–4 ಕೆಟಗರಿಯ ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ, ಮಿಶ್ರ ತಂಡ ವಿಭಾಗದಲ್ಲಿ ಕಂಚು ಸೇರಿದಂತೆ ಹಲವು ಪದಕಗಳು ಅವರ ಕೊರಳನ್ನು ಅಲಂಕರಿಸಿವೆ. ನಾಲ್ಕು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಪಾಲ್ಗೊಂಡಿದ್ದಾರೆ. ಹೋದ ವರ್ಷ ನಡೆದ ದುಬೈ ಚಾಂಪಿಯನ್‌ಷಿಪ್‌ಗೆ ಏಕಾಂಗಿಯಾಗಿ ಹೋಗಿ ಬಂದಿದ್ದಾರೆ.

ಬೋಷಿಯಾ ಕ್ರೀಡೆಯ ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ಅನ್ನಪೂರ್ಣಾ ಅವರಿಗೆ ಅಕ್ಟೋಬರ್‌ನಲ್ಲಿ ನಡೆಯುವ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸುವುದು ಈಗ ಮುಂದಿರುವ ಗುರಿ. ಆಯ್ಕೆಯಾಗುವ ವಿಶ್ವಾಸವೂ ಅವರಿಗಿದೆ.

'ಬೇಕು ಸರ್ಕಾರದ ನೆರವು'

ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ನುರಿತ ಕೋಚ್‌ಗಳ ನೆರವೂ ಸೇರಿದಂತೆ ಆರ್ಥಿಕ ಬಲ ಬೇಕಾಗಿದೆ ಎಂದು ಅನ್ನಪೂರ್ಣಾ ಹೇಳುತ್ತಾರೆ. ದುಬೈ ಚಾಂಪಿಯನ್‌ಷಿಪ್‌ಗೆ ರಾಜ್ಯ ಕ್ರೀಡಾ ಇಲಾಖೆಯ ಹೆಚ್ಚುವರಿ ಆಯುಕ್ತೆ ಶಾಲಿನಿ ರಜನೀಶ್ ಅವರು ₹ 50 ಸಾವಿರ ನೆರವು ಮಂಜೂರು ಮಾಡಿಸಿದ್ದರು. ಅದನ್ನು ಹೊರತುಪಡಿಸಿ ಯಾವುದೇ ನೆರವು ತನಗೆ ಲಭಿಸಿಲ್ಲ. ಟೂರ್ನಿಗಳಿಗೆ ತೆರಳಲು ಜೊತೆಗೆ ಒಬ್ಬ ಸಹಾಯಕರೂ ಬೇಕಾಗುತ್ತಾರೆ. ಅಭ್ಯಾಸಕ್ಕೆ ಸೂಕ್ತ ಕ್ರೀಡಾ ಪರಿಕರಗಳನ್ನು ಒದಗಿಸಬೇಕೆಂಬುದು ಅವರ ಬೇಡಿಕೆ.

ಯಾವ ರೀತಿಯ ಆಟ?

ತೀವ್ರ ದೈಹಿಕ ಅಸಾಮರ್ಥ್ಯವುಳ್ಳವರಿಗಾಗಿ ಇರುವ ಕ್ರೀಡೆ ಬೋಷಿಯಾ. ಲೆದರ್‌ಬಾಲ್‌ನಿಂದ ಆಡಲಾಗುವ ಈ ಕ್ರೀಡೆಯನ್ನು ವೈಯಕ್ತಿಕ ಮತ್ತು ತಂಡ ವಿಭಾಗದಲ್ಲಿ ಒಳಾಂಗಣ ಮತ್ತು ಹೊರಾಂಗಣದಲ್ಲೂ ಆಡಲಾಗುತ್ತದೆ. ಸುಮಾರು ಎರಡು ಮೀಟರ್‌ಗಳಷ್ಟು ದೂರ ಇರುವ ಚೆಂಡುಗಳಿಗೆ ಗುರಿಯಿಡಬೇಕಾಗುತ್ತದೆ. ತಾವು ಗುರಿಯಿಟ್ಟ ನಿರ್ದಿಷ್ಟ ಚೆಂಡಿಗೆ ಎಸೆಯುವ ಚೆಂಡು ತಾಗಿದರೆ ಪಾಯಿಂಟ್ ನೀಡಲಾಗುತ್ತದೆ. ಪಾಯಿಂಟ್ಸ್ ಗಳಿಕೆಯ ಆಧಾರದ ಮೇಲೆ ಅಥ್ಲೀಟ್‌ಗಳು ಆಟದಲ್ಲಿ ಸೆಮಿಫೈನಲ್, ಫೈನಲ್ ಹಂತಗಳಿಗೆ ಮುಂದುವರಿಯುತ್ತಾರೆ.

ಜಯದ ವಿಶ್ವಾಸದಲ್ಲಿ ರಿಯಲ್ ಮ್ಯಾಡ್ರಿಡ್

ಲಂಡನ್ (ಎಎಫ್‌ಪಿ): ರಿಯಲ್ ಮ್ಯಾಡ್ರಿಡ್ ತಂಡವು ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಚೆಲ್ಸಿ ತಂಡವನ್ನು ಎದುರಿಸಲಿದೆ.

ಕ್ವಾರ್ಟರ್‌ಫೈನಲ್‌ನ ಎರಡನೇ ಲೆಗ್‌ನ ಈ ಪಂದ್ಯದಲ್ಲಿ ಗೆದ್ದು ಸೆಮಿಫೈನಲ್ ತಲುಪುವ ವಿಶ್ವಾಸದಲ್ಲಿ ರಿಯಲ್ ಮ್ಯಾಡ್ರಿಡ್ ತಂಡ ಇದೆ. ಹಾಲಿ ಚಾಂಪಿಯನ್ ಚೆಲ್ಸಿ ಕಳೆದ ವಾರ ರಿಯಲ್ ಮ್ಯಾಡ್ರಿಡ್‌ಗೆ 1–3ರಿಂದ ಸೋತಿತ್ತು. ಈ ಬಾರಿ ತಿರುಗೇಟು ನೀಡುವ ವಿಶ್ವಾಸದಲ್ಲಿದೆ.

ಮತ್ತೊಂದು ಪಂದ್ಯದಲ್ಲಿ ಬಾಯರ್ನ್ ಮ್ಯೂನಿಕ್ ಮತ್ತು ವಿಲ್ಲಾರೆಲ್ ತಂಡಗಳು ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 12.30

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ದಕ್ಷಿಣ ಆಫ್ರಿಕಾಕ್ಕೆ ಸರಣಿ

ಪೋರ್ಟ್ ಎಲಿಜಬೆತ್, ದಕ್ಷಿಣ ಆಫ್ರಿಕಾ (ಎಪಿ): ಬಾಂಗ್ಲಾದೇಶ ತಂಡವನ್ನು 80 ರನ್‌ಗಳಿಗೆ ಉರುಳಿಸಿದ ದಕ್ಷಿಣ ಆಫ್ರಿಕಾ ತಂಡ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯವನ್ನು ನಾಲ್ಕನೇ ದಿನವಾದ ಸೋಮವಾರ 332 ರನ್‌ಗಳ ಅಂತರದಿಂದ ಗೆದ್ದುಕೊಂಡಿತು. ಆ ಮೂಲಕ ಸರಣಿಯನ್ನು 2–0ಯಿಂದ ಗೆದ್ದುಕೊಂಡಿತು.

ಸೇಂಟ್ ಜಾರ್ಜಸ್ ಪಾರ್ಕ್‌ನಲ್ಲಿ ಈ ಪಂದ್ಯ ನಡೆದಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 136.2 ಓವರ್‌ಗಳಲ್ಲಿ 453; ಬಾಂಗ್ಲಾದೇಶ: 74.2 ಓವರ್‌ಗಳಲ್ಲಿ 217; ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 39.5 ಓವರ್‌ಗಳಲ್ಲಿ 6ಕ್ಕೆ 176 ಡಿಕ್ಲೇರ್ಡ್; ಬಾಂಗ್ಲಾದೇಶ: 23.3 ಓವರ್‌ಗಳಲ್ಲಿ 80 (ಲಿಟನ್ ದಾಸ್ 27; ಕೇಶವ್ ಮಹಾರಾಜ್ 40ಕ್ಕೆ7, ಸೈಮನ್ ಹಾರ್ಮರ್ 34ಕ್ಕೆ3). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 332 ರನ್‌ಗಳ ಜಯ

ಮೊದಲ 'ಕೋವಿಡ್ ಸಬ್‌ಸ್ಟಿಟ್ಯೂಟ್'

ಕೊರೊನಾ ಹಿನ್ನೆಲೆಯಲ್ಲಿ ಬದಲಿ ಆಟಗಾರ ಕಣಕ್ಕಿಳಿದ ಮೊದಲ ಪ್ರಕರಣ ಈ ಪಂದ್ಯದಲ್ಲಿ ನಡೆಯಿತು. ದಕ್ಷಿಣ ಆಫ್ರಿಕಾದ ಸರೆಲ್ ಎರ್ವಿ ಮತ್ತು ವಿಯಾನ್ ಮುಲ್ದರ್ ಅವರಿಗೆ ಸೋಂಕು ತಗುಲಿದ ಕಾರಣ ಖಯಾ ಜೊಂಡೊ ಮತ್ತು ಗ್ಲೆಂಟನ್ ಸ್ಟುರ್ಮಾನ್ ಸ್ಥಾನ ಗಳಿಸಿದರು.